ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಟಿ20 ವಿಶ್ವಕಪ್: ಭಾರತ-ಕಿವೀಸ್ ಫೈನಲ್ ಇಂದು

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಟಿ20 ವಿಶ್ವಕಪ್ ಪ್ರಶಸ್ತಿ ಸುತ್ತು

ಬ್ಯಾಟಿಂಗ್ ಪಿಚ್‌ನಲ್ಲಿ ಮಿಂಚಿದವರೇ ಚಾಂಪಿಯನ್ಸ್

ಸಂಜೆ 7ಕ್ಕೆ ಪಂದ್ಯ

ಭಾರತಕ್ಕೆ ಮೂರನೇ ಕಪ್ ಗೆಲ್ಲುವ ಭರವಸೆ

ಸತತ 2ನೇ ಬಾರಿ ಫೈನಲ್ ಆಡುತ್ತಿರುವ ಭಾರತ

ಮೊದಲ ಟ್ರೋಫಿಗಾಗಿ ನ್ಯೂಜಿಲೆಂಡ್ ಫೈಟ್

• ವಿವರ ಪುಟ ೮

ಹುಬ್ಬಳ್ಳಿ
ಭಾನುವಾರ, 8 ಮಾರ್ಚ್ 2026
ಸಂಪುಟ 15, ಸಂಚಿಕೆ 349, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ : ಪಂಚಮಿ, ನಕ್ಷತ್ರ: ಸ್ವಾತಿ

ದಿನದ ಮಾತು

ಜ್ಞಾನವೇ ಶಕ್ತಿ. ಶಕ್ತಿಯೇ ಜೀವನ, ಅಜ್ಞಾನವೇ ದೌರ್ಬಲ್ಯ, ದೌರ್ಬಲ್ಯವೇ ಮರಣ.

▲ ರಾಮಕೃಷ್ಣ ಪರಮಹಂಸ

ಹೀಗೊಂದು ಕಿಟ್ಟಿ ಪಾರ್ಟಿ ಅನುಭವ

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬



ಕಿರುಸುದ್ದಿ

ಎಲ್‌ಪಿಜಿ ದರ 60 ರೂ. ಏರಿಕೆ, ಹೊಸ ಬೆಲೆ ಜಾರಿ

• **ಹೊಸದಿಲ್ಲಿ:** ಇರಾನ್ ಯುದ್ಧದ ನಡುವೆ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ದೇಶಾದ್ಯಂತ 60 ರೂ. ಏರಿಕೆಯಾಗಿದ್ದು, ಶನಿವಾರವೇ ಹೊಸ ದರವನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. 14.2 ಕೆ.ಜಿ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ 60 ರೂ. ಹೆಚ್ಚಿಸಲಾಗಿದೆ. ಅದೇ ರೀತಿ 19 ಕೆ.ಜಿ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆ 115 ರೂ. ಹೆಚ್ಚಿಸಲಾಗಿದೆ.

• ಪುಟ ೭

ಮಾನವೀಯ ದೃಷ್ಟಿಯಿಂದ ಲವಣ್ ಲಂಗರಿಗೆ ಅವಕಾಶ

• ಪುಟ ೭

ಡೇರಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಖುಲಾಸೆ

• ಪುಟ ೭

ಭಾರತದ ವಿದೇಶಿ ಕರೆನ್ಸಿ ಸಂಪತ್ತು ಹೆಚ್ಚಳ

• ಪುಟ ೭

ಮುಂದಿನ ವರ್ಷಾಂತ್ಯಕ್ಕೆ ಏಡ್ಸ್ ನಿಯಂತ್ರಣ ಗುರಿ

• ಪುಟ ೭

ಇಸ್ರೇಲ್‌ಗೆ 12,000 ಬಾಂಬ್ ಮಾರಾಟಕ್ಕೆ ಅಮೆರಿಕ ಒಪ್ಪಿಗೆ

• ಪುಟ ೭

ಒಳ ಮೀಸಲಾತಿ ಕಾಯ್ದೆ ಅನೂರ್ಜಿತ: ಛಲವಾದಿ

• ಪುಟ ೫

ಕೇಂದ್ರ ಸರ್ಕಾರ ವಿದೇಶಾಂಗ ನೀತಿ ಉಲ್ಲಂಘನೆ

• ಪುಟ ೫

ಟೆಹ್ರಾನ್, ದುಬೈನಲ್ಲಿ ಹತ್ತಾರು ಸ್ಫೋಟ | ದಿನೇದಿನೆ ಉಲ್ಬಣ

ಹೆಚ್ಚಿದ ಯುದ್ಧೋನ್ಮಾದ

• **ವಾಷಿಂಗ್ಟನ್:** ಕಳೆದ 9 ದಿನಗಳಿಂದ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ದಿನೇದಿನೇ ಉಲ್ಬಣಗೊಳ್ಳುತ್ತಲೇ ಇದ್ದು, ಯುದ್ಧ ಅಂತ್ಯದ ಯಾವ ಲಕ್ಷಣವೂ ಕಾಣುತ್ತಿಲ್ಲ. ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿ ಶನಿವಾರ ಭಾರೀ ಸ್ಫೋಟಗಳು ಸಂಭವಿಸಿವೆ. ಟೆಹ್ರಾನ್‌ನ ಪ್ರಮುಖ ವಿಮಾನ



ನಿಲ್ದಾಣವಾದ ಮೆಹ್ರಾಬಾದ್ ವಿಮಾನ ನಿಲ್ದಾಣದ ಮೇಲೂ ದಾಳಿಯಾಗಿದ್ದು, ಕೆಲವು ವಿಮಾನಗಳಿಗೆ ಹಾನಿಯಾಗಿದೆ. ಇದಕ್ಕೆ ಪ್ರತಿದಾಳಿಯೆಂಬಂತೆ ಇರಾನ್ ಕೂಡ ಇಸ್ರೇಲ್ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ಮುಂದುವರಿಸಿದೆ.

ದುಬೈ ಮೇಲೂ ದಾಳಿ: ಶನಿವಾರ ಬೆಳಿಗ್ಗೆ ದುಬೈ ಮೇಲೆ ದಾಳಿ ಮಾಡಿರುವ ಇರಾನ್, ವಿವಿಧೆಡೆ ಹಲವು ಸ್ಫೋಟಗಳನ್ನುಂಟುಮಾಡಿದೆ. ತನ್ನ ವಾಯುರಕ್ಷಣಾ ವ್ಯವಸ್ಥೆ ಸಕ್ರಿಯವಾಗಿ ದಾಳಿಗಳನ್ನು ಎದುರಿಸಿದೆ ಎಂದು ದುಬೈ ಸರಕಾರ ಹೇಳಿದೆ. ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ವಿಮಾನಗಳಿಗಾಗಿ ಕಾಯುತ್ತಿದ್ದು, ಎಚ್ಚರಿಕೆ ಸೈರನ್ ಮೊಳಗಿದ ವೇಳೆ ಇವರೆಲ್ಲ ರೈಲ್ವೆ ಸುರಂಗಗಳೊಳಗೆ ಆಶ್ರಯ ಪಡೆದರು.

ಇರಾನ್ ಮೇಲೆ ಮಾರಕ ದಾಳಿ: ಡೊನಾಲ್ಡ್ ಟ್ರಂಪ್ ಎಚ್ಚರಿಕೆ

ಇಸ್ರೇಲ್ ಮತ್ತು ಅಮೆರಿಕದೊಂದಿಗಿನ ತನ್ನ ಯುದ್ಧದ ವೇಳೆ ನೆರೆಯ ದೇಶಗಳ ಮೇಲೆ ದಾಳಿ ನಡೆಸಿರುವ ಬಗ್ಗೆ ಇದೀಗ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಕ್ಷಮೆಯಾಚಿಸಿದ ಬಳಿಕ, ಇರಾನ್ 'ಮಧ್ಯಪ್ರಾಚ್ಯದ ಸೋತ ಪಕ್ಷ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವ್ಯಂಗ್ಯವಾಡಿದ್ದಾರೆ. ಇರಾನ್ ವಿರುದ್ಧ ಅತ್ಯಂತ ಕಠಿಣ ಹೊಡೆತ ನೀಡುವುದಾಗಿಯೂ ಅವರು ಎಚ್ಚರಿಸಿದ್ದಾರೆ.ತನ್ನ 'ಟ್ರೂತ್ ಸೋಷಿಯಲ್ 'ಸಾಮಾಜಿಕ ಜಾಲ ತಾಣದಲ್ಲಿ ಮಾಡಿದ ಪೋಸ್ಟ್‌ನಲ್ಲಿ, ನರಕಕ್ಕೆ ತಳ್ಳಲ್ಪಟ್ಟಿರುವ ಇರಾನ್, ಇನ್ನು ಮುಂದೆ ನಿಮ್ಮ ಮೇಲೆ ದಾಳಿ ಮಾಡುವುದಿಲ್ಲ ಎಂಬುದಾಗಿ ನೆರೆಯ ಕೊಲ್ಲಿ ದೇಶಗಳಿಗೆ ಭರವಸೆ ನೀಡಿರುವ ಇರಾನ್ ಕ್ಷಮೆಯಾಚಿಸಿ ಕೊನೆಗೂ ಶರಣಾಗಿದೆ. ➡ ಪುಟ ೪



ಇರಾನ್‌ಗೆ ಕಾದಿದೆ ಅತಿ ದೊಡ್ಡ ದಾಳಿ: ಯುಎಸ್

ಯುದ್ಧದಲ್ಲಿ ಅತಿದೊಡ್ಡ ಬಾಂಬ್ ದಾಳಿ ಇನ್ನಷ್ಟೇ ನಡೆಯಬೇಕಾಗಿದೆ ಎಂದು ಅಮೆರಿಕದ ವಿತ್ತ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಟಿವಿ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ಈಗಾಗಲೇ ಇರಾನ್‌ನ ಸೇನಾ ಸಾಮರ್ಥ್ಯಗಳು, ನಾಯಕತ್ವ ಹಾಗೂ ಪರಮಾಣು ಕಾರ್ಯಕ್ರಮಗಳ ಮೇಲೆ ದಾಳಿ ನಡೆಸಿದ್ದು, ಇರಾನ್ ಜರ್ಝರಿತಗೊಂಡಿದೆ. ➡ ಪುಟ ೪

ಇರಾನ್‌ಗೆ ರಷ್ಯಾ ಮಾಹಿತಿ!

ಅಮೆರಿಕದ ಯುದ್ಧನೌಕೆಗಳು, ವಿಮಾನಗಳು ಮತ್ತು ಇತರ ಮಿಲಿಟರಿ ಆಸ್ತಿಗಳನ್ನು ಗುರಿಯಾಗಿಸಲು ಇರಾನ್‌ಗೆ ನೆರವಾಗಬಲ್ಲ ಗುಪ್ತಚರ ಮಾಹಿತಿಯನ್ನು ರಷ್ಯಾ ಒದಗಿಸಿದೆ ಎಂದು ಗುಪ್ತಚರ ವರದಿಗಳನ್ನು ಆಧರಿಸಿ ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

ಮಾಹಿತಿ ಹಂಚಿಕೆ ಆರೋಪ: ಅಮೆರಿಕದ ಮಿಲಿಟರಿ ಗುರಿಗಳನ್ನು ಗುರುತಿಸಲು ಇರಾನ್‌ಗೆ ಸಹಾಯ ಮಾಡುವ ಮಾಹಿತಿಯನ್ನು ಮಾಸ್ಕೋ ರವಾನಿಸಿದೆ ಎಂದು ಇಬ್ಬರು ಅಧಿಕಾರಿಗಳು ಹೇಳಿದ್ದಾರೆ. ಆದರೆ, ಇರಾನ್‌ನ ಮಿಲಿಟರಿ ಕ್ರಮಗಳನ್ನು ರಷ್ಯಾ ನಿರ್ದೇಶಿಸುತ್ತಿದೆ ಅಥವಾ ಈ ಮಾಹಿತಿಯನ್ನು ಹೇಗೆ ಬಳಸಬೇಕೆಂದು ಸೂಚನೆ ನೀಡುತ್ತಿದೆ ಎಂಬುದಕ್ಕೆ ಯಾವುದೇ ಪುರಾವೆಗಳು ಲಭ್ಯವಾಗಿಲ್ಲ, ಎನ್ನಲಾಗಿದೆ.ಮಾಹಿತಿ ಹಂಚಿಕೆ ಅಮೆರಿಕದ ಪ್ರಸ್ತುತ ಮಿಲಿಟರಿ ಕಾರ್ಯಾಚರಣೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ವೈಟ್ ಹೌಸ್ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಹೇಳಿದ್ದಾರೆ. ➡ ಪುಟ ೪

16 ವಿಮಾನ ನಾಶ: ಹೇಡಿತನದ ಕೃತ್ಯ

ಟೆಹ್ರಾನ್‌ನ ಮೆಹ್ರಾಬಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಇಸ್ರೇಲಿ ದಾಳಿಗಳು ಗುರಿಯಾಗಿಸಿಕೊಂಡಿವೆ ಎಂದು ವರದಿಯಾದ ನಂತರ ಬಲದಿಂದ ಪ್ರತಿಕ್ರಿಯಿಸುವುದಾಗಿ ಇರಾನ್ ಎಚ್ಚರಿಸಿದೆ. ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಈ ದಾಳಿಯನ್ನು ಖಂಡಿಸಿದ್ದು, ನಾಗರಿಕ ವಿಮಾನಯಾನ ಸೌಲಭ್ಯಗಳನ್ನು ಗುರಿಯಾಗಿಸುವುದು ಸ್ವೀಕಾರಾರ್ಹವಲ್ಲ ಎಂದು ಹೇಳಿದ್ದಾರೆ. ನಮ್ಮ ವಿಮಾನ ನಿಲ್ದಾಣಗಳನ್ನು ಗುರಿಯಾಗಿಸುವುದು ಹೇಡಿತನದ ಕೃತ್ಯವಾಗಿದೆ. ನಾವು ಅದಕ್ಕೆ ಬಲವಾಗಿ ಪ್ರತಿಕ್ರಿಯಿಸುತ್ತೇವೆ ಎಂದು ಇರಾನಿನ ಮಾಧ್ಯಮಗಳು ವರದಿ ಮಾಡಿದ ಹೇಳಿಕೆಯಲ್ಲಿ ಅರಾಘ್ಚಿ ತಿಳಿಸಿದ್ದಾರೆ. ಮೆಹ್ರಾಬಾದ್ ವಿಮಾನ ನಿಲ್ದಾಣದಲ್ಲಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಕುಡ್ಸ್ ಫೋರ್ಸ್ ಸೇರಿದ 16 ವಿಮಾನಗಳನ್ನು ನಾಶಪಡಿಸಿವೆ ಎಂದು ಒಪ್ಪಿಕೊಂಡಿವೆ.

ಅಧಿಕಾರ ಬಿಡಿ ಎಂದರೆ ಬಿಡುತ್ತೇನೆ

ವರಿಷ್ಠರ ಮಾತಿನಂತೆ ನಡೆಯುವೆ: ಸಿಎಂ

• **ಮೈಸೂರು:** ಪಕ್ಷದ ಹೈಕಮಾಂಡ್ ಅಧಿಕಾರ ಬಿಡಿ ಎಂದು ಹೇಳಿದರೆ ಬಿಡುತ್ತೇನೆ. ಅಧಿಕಾರದಲ್ಲಿ ಮುಂದುವರಿಯಿರಿ ಎಂದರೆ ಮುಂದುವರಿಯುತ್ತೇನೆ. ಹಾಗಾಗಿ ನಾನು ಅಧಿಕಾರದಲ್ಲಿ ಮುಂದುವರಿಯಬೇಕೋ, ಬೇಡವೋ ಎಂಬುದರ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರು ತಾಲೂಕಿನ ವರುಣ ಕ್ಷೇತ್ರದ ಪಿಳ್ಳಹಳ್ಳಿ ಹೆಲಿಪ್ಯಾಡ್‌ನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಹಣಕಾಸು ಸಚಿವನಾಗಿಯೂ ಈಗ 17ನೇ ಬಜೆಟ್ ಮಂಡಿಸಿದ್ದೇನೆ. ಕರ್ನಾಟಕದಲ್ಲಿ ಹೆಚ್ಚು ಬಜೆಟ್ ಮಂಡಿಸಿರುವುದು ನಾನೇ. ಹೈಕಮಾಂಡ್ ಅವಕಾಶ ಕೊಟ್ಟರೆ ಇನ್ನು ಮುಂದೆಯೂ ಎರಡು ಬಜೆಟ್ ಮಂಡಿಸುತ್ತೇನೆ. ಹೈಕಮಾಂಡ್ ಸಿಎಂ ಸ್ಥಾನದ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ, ಅದಕ್ಕೆ ನಾನು ಬದ್ಧನಾಗಿದ್ದೇನೆ. ಹೈಕಮಾಂಡ್ ಮೇಲೆ ನನಗೆ ವಿಶ್ವಾಸವಿದೆ. ಅವರ ಮೇಲೆ ವಿಶ್ವಾಸ ಇರಲೇಬೇಕು ಎಂದರು.

ರೆಕಾರ್ಡ್ ಮುಖ್ಯವಲ್ಲ: ಬಜೆಟ್ ಮಂಡನೆ ಮೂಲಕ ದಾಖಲೆ ಮುರಿಯುವುದು ಮುಖ್ಯವಲ್ಲ, ಜನರು ಅವಕಾಶ ಕೊಟ್ಟರೆ ಮುಂದೆಯೂ ಬಜೆಟ್ ಮಂಡಿಸುತ್ತೇನೆ. ನಾನು ವಾಸ್ತವ ಬಿಟ್ಟು ಮಾತನಾಡುವುದಿಲ್ಲ, ಇಡೀ ರಾಜ್ಯದ ಜನರಿಗೆ ಆಸೆ ಇದೆ. ಯಾರು ಏನೇ ಹೇಳಿದರೂ ಕೊನೆಯದಾಗಿ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಸ್ಪಷ್ಟಪಡಿಸಿದರು.

ನಾನು ಒಂದು ವರ್ಗಕ್ಕೆ ಸೀಮಿತವಾಗಿಲ್ಲ: ಬಜೆಟ್ ಒಂದು ವರ್ಗಕ್ಕೆ ಸೀಮಿತ ಎಂದು ಬಿಜೆಪಿ ನಾಯಕರ ಟೀಕೆಗೆ ಉತ್ತರಿಸಿ, ಸಿದ್ದರಾಮಯ್ಯ ಬಜೆಟ್ ಒಂದು ವರ್ಗಕ್ಕೆ ಸೀಮಿತವಾಗಿಲ್ಲ, ಸಾಮಾಜಿಕ ನ್ಯಾಯದಲ್ಲಿ ಬಜೆಟ್ ಮಂಡನೆ ಮಾಡಿದ್ದೇವೆ. ಬಜೆಟ್ ಇಡೀ ರಾಜ್ಯದ ಅಭಿವೃದ್ಧಿಯ ಬಜೆಟ್ ಆಗಿದೆ. ➡ ಪುಟ ೪



ಸಾಲಕ್ಕೆ ಸಿಎಂ ಸಮರ್ಥನೆ

ಸಾಲ ಮಾಡಿ ಬಜೆಟ್ ಮಂಡಿಸಿದ್ದಾರೆ ಎಂಬ ಬಿಜೆಪಿ ಟೀಕೆಗೆ ಪ್ರತಿಕ್ರಿಯಿಸಿ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಎಷ್ಟು ಸಾಲ ಮಾಡಿದ್ದಾರೆ ಎಂಬುದು ಗೊತ್ತೇ? ಸಾಲ ಮಾಡದೆ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ನಮ್ಮ ಸಾಲ ಕೂಡ ಫೈನಾನ್ಸ್ ಮಿತಿಯಲ್ಲಿದೆ. ಸಾಲ ಯಾವಾಗಲೂ ಶೇ.25ರ ಒಳಗೆ ಇರಬೇಕು. ನಾವು ಶೇ.24ರಷ್ಟು ಸಾಲ ಮಾಡಿದ್ದೇವೆ ಎಂದು ಸಮರ್ಥಿಸಿಕೊಂಡರು. ಕೇಂದ್ರ ಸರ್ಕಾರ ಎಷ್ಟು ಸಾಲ ಮಾಡಿದೆ ಎಂಬುದು ವಿಪಕ್ಷ ನಾಯಕ ಆರ್. ಅಶೋಕ್ ಅವರಿಗೆ ಗೊತ್ತಾ? ಪ್ರಧಾನಿ ಮೋದಿ ಅವರು ಬಂದ ಮೇಲೆ 11 ವರ್ಷಗಳಲ್ಲಿ 165 ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ. ಶೇ.55.6ರಷ್ಟು ಸಾಲ ಮೋದಿ ಮಾಡಿದ್ದಾರೆ. ಆದರೆ ನಾವು ಆರ್ಥಿಕ ಶಿಸ್ತಿನ ಮಿತಿಯಲ್ಲಿ ಸಾಲ ಮಾಡಿ, ಅಭಿವೃದ್ಧಿಗೆ ಹಣ ಕೊಡುತ್ತಿದ್ದೇವೆ. ಆದರೆ ಬಿಜೆಪಿ ಅವರ ಮಿತಿ ಆರ್ಥಿಕ ಸ್ಥಿತಿಗಿಂತ ಹೆಚ್ಚಾಗಿದೆ. ನಾವು ಮಾಡಿರುವ ಸಾಲ ಆರ್ಥಿಕ ಮಿತಿ ಒಳಗಿದೆ ಎಂದು ಸಿಎಂ ಹೇಳಿದರು.

ಪಂಪ್ಡ್ ಸ್ಟೋರೇಜ್‌ಗೆ ಒಪ್ಪಿಗೆ ಹಿನ್ನೆಲೆ | ಪಿಐಎಲ್ ವಿಚಾರಣೆ

ಶರಾವತಿ: ಸರ್ಕಾರಕ್ಕೆ ಹೈ ನೋಟಿಸ್

• **ಬೆಂಗಳೂರು:** ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ 10 ಸಾವಿರ ಕೋಟಿ ರೂ.ವೆಚ್ಚದ ಶರಾವತಿ ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಯೋಜನೆಗೆ ರಾಜ್ಯ ವನ್ಯಜೀವಿ ಮಂಡಳಿ ನೀಡಿರುವ ಅನುಮೋದನೆ ಮತ್ತು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ನೀಡಿರುವ ತಾತ್ವಿಕ ಅನುಮೋದನೆಯ ಕಾನೂನು ಬದ್ಧತೆ ಪ್ರಶ್ನಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಸಾಗರದ ಅಖಿಲೇಶ್ ಚಿಪ್ಲಿ, ಉಡುಪಿಯ ಡಾ.ರವೀಂದ್ರನಾಥ ಶಾನಬಾಗ್ ಮತ್ತು ಶಿವಮೊಗ್ಗದ ಸಿ.ಬಿ. ಮನೋಹರ ಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಕೀಲೆ ಬಿ.ವಿ. ವಿದ್ಯುಲ್ಲತಾ ಅವರ ವಾದ



ಆಲಿಸಿದ ಪೀಠವು, ಪ್ರತಿವಾದಿಗಳಾದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಕಾರ್ಯದರ್ಶಿ ಹಾಗೂ ರಾಜ್ಯ ಅರಣ್ಯ, ಪರಿಸರ ಮತ್ತು ಪರಿಸರ ವಿಜ್ಞಾನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.ಉದ್ದೇಶಿತ ಯೋಜನೆಯು ವನ್ಯಜೀವಿಗಳಿಗೆ ಸಂಪೂರ್ಣ ಹಾನಿ ಉಂಟು ಮಾಡಲಿದೆ. ➡ ಪುಟ ೪

ಗೂಗಲ್, ಕೊಲಂಬೋ ಟೆಲಿಗ್ರಾಫ್, ಲಂಕಾ ನ್ಯೂಸ್‌ಗೆ ನೋಟಿಸ್

ಶ್ರೀಲಂಕಾ ಜಡ್ಜ್ ಅರ್ಜಿ ವಿಚಾರಣೆ

• **ಬೆಂಗಳೂರು:** ತಮ್ಮ ವಿರುದ್ಧ ಆನ್‌ಲೈನ್‌ನಲ್ಲಿ ಪ್ರಕಟವಾಗಿರುವ ಮಾನಹಾನಿಕರ ಲೇಖನಗಳನ್ನು ತೆರವುಗೊಳಿಸುವಂತೆ ನಿರ್ದೇಶಿಸಬೇಕು ಎಂದು ಕೋರಿ ಶ್ರೀಲಂಕಾ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆ, ಗೂಗಲ್ ಇಂಡಿಯಾ, ಗೂಗಲ್ ಇಂಕ್, ಕೊಲಂಬೋ ಟೆಲಿಗ್ರಾಫ್ ಹಾಗೂ ಲಂಕಾ ಇ-ನ್ಯೂಸ್‌ಗೆ ನೋಟಿಸ್ ಜಾರಿ ಮಾಡಿದೆ.



ಶ್ರೀಲಂಕಾ ಸುಪ್ರೀಂನಲ್ಲಿ ನ್ಯಾಯಮೂರ್ತಿ ಯಾಗಿರುವ ಎಎಚ್‌ಎಂಡಿ ನವಾಜ್ ಅವರು ಆನ್‌ಲೈನ್‌ನಲ್ಲಿ ಪ್ರಕಟವಾಗಿರುವ ಮಾನಹಾನಿ ಲೇಖನಗಳನ್ನು ತೆರವುಗೊಳಿಸುವಂತೆ ರಾಜ್ಯ ಹೈಕೋರ್ಟ್‌ಗೆ ಅರ್ಜಿ ಅಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಸಚಿನ್ ಶಂಕರ್ ಮಗದುಮ್ ಅವರಿದ್ದ ಪೀಠವು ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆ ಸೇರಿದಂತೆ ಗೂಗಲ್ ಇಂಡಿಯಾ, ಗೂಗಲ್ ಇಂಕ್, ಕೊಲಂಬೋ ಟೆಲಿಗ್ರಾಫ್ ಹಾಗೂ ಲಂಕಾ ಇ-ನ್ಯೂಸ್‌ಗೆ ನೋಟಿಸ್ ಜಾರಿ ಮಾಡಿ ವಿಚಾರಣೆಯನ್ನು ಮುಂದೂಡಿದೆ. ➡ ಪುಟ ೪

ನೋಟಿಸ್ ನೀಡಿದರೂ ಸ್ಪಂದಿಸದ ಗೂಗಲ್

ಈಗಾಗಲೇ ಈ ಸಂಬಂಧ ಗೂಗಲ್ ಸಂಸ್ಥೆಗೆ ನೋಟಿಸ್ ನೀಡಿದ್ದರೂ, ಆಕ್ಷೇಪಾರ್ಹ ಹಾಗೂ ಅವಹೇಳನಕಾರಿ ಸುದ್ದಿಗಳನ್ನು ಆನ್‌ಲೈನ್‌ನಿಂದ ತೆಗೆದುಹಾಕಲಾಗಿಲ್ಲ ಎಂದು ನ್ಯಾ. ನವಾಜ್ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ಹೀಗಾಗಿ ನ್ಯಾಯಾಲಯವು ಮಧ್ಯಪ್ರವೇಶಿಸಿ ಅಂತಹ ಮಾನಹಾನಿಕರ ವಿಷಯಗಳನ್ನು ತಕ್ಷಣವೇ ತೆರವುಗೊಳಿಸಲು ಸಂಬಂಧಪಟ್ಟ ಸಂಸ್ಥೆಗಳಿಗೆ ನಿರ್ದೇಶನ ನೀಡಬೇಕೆಂದು ಅವರು ಕೋರಿದ್ದಾರೆ.

ನಿಶಾಂತ್ ಇಂದು ರಾಜಕೀಯಕ್ಕೆ



ಮುಖ್ಯಮಂತ್ರಿ ರಾಜೀನಾಮೆ ಬೆನ್ನಲ್ಲೇ ಮುನ್ನೆಲೆಗೆ ಬಂದ ಪುತ್ರ ನಿಶಾಂತ್

• **ಹೊಸದಿಲ್ಲಿ:** ರಾಜ್ಯ ಸಭೆಗೆ ನಾಮನಿರ್ದೇಶನಗೊಂಡ ನಿತೀಶ್ ಕುಮಾರ್ ಬಿಹಾರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಪುತ್ರ ನಿಶಾಂತ್ ಕುಮಾರ್ ಭಾನುವಾರ ಸಕ್ರಿಯ ರಾಜಕಾರಣ ಪ್ರವೇಶಿಸಲಿದ್ದಾರೆ. ಹೊಸ ತಲೆಮಾರಿನ ನಾಯಕ ನಿಶಾಂತ್ ರಾಜಕೀಯ ಪ್ರವೇಶದೊಂದಿಗೆ ಪಕ್ಷದಲ್ಲಿ ನಾಯಕತ್ವದ ಚರ್ಚೆಗಳು ನಡೆಯುತ್ತಿವೆ. ಪಕ್ಷದ ನಾಯಕರೆಲ್ಲರೂ ತಾಳ್ಮೆ ಮತ್ತು ಒಗ್ಗಟ್ಟಿನಿಂದ ಇರಬೇಕೆಂದು ಹಿರಿಯ ನಾಯಕರು ಮನವಿ ಮಾಡಿದ್ದಾರೆ. ಭಾನುವಾರ ನಿಶಾಂತ್ ರಾಜ್ಯ ರಾಜಕೀಯಕ್ಕೆ ಪದಾರ್ಪಣೆ ಮಾಡಲಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವ, ಜೆಡಿ(ಯು) ಮುಖಂಡ ಶ್ರವಣ್ ಕುಮಾರ್, ನಿತೀಶ್ ಅವರ ಪುತ್ರ ಎಂಬ ಕಾರಣಕ್ಕೆ ನಿಶಾಂತ್ ಅವರನ್ನು ಕರೆತರಲಾಗುತ್ತಿಲ್ಲ. ➡ ಪುಟ ೪

ರಾಷ್ಟ್ರಪತಿ ಕಾರ್ಯಕ್ರಮಕ್ಕೆ ಅನುಮತಿ ನೀಡದೆ ಅಪಮಾನ

ನನ್ಮೇಲೆ ದೀದಿಗೇಕೆ ಕೋಪ?

• **ಹೊಸದಿಲ್ಲಿ:** ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇದೇ ಮೊದಲ ಬಾರಿಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಸಾರ್ವಜನಿಕವಾಗಿ ಸಭ್ಯ ಭಾಷೆಯಲ್ಲೇ ಛೀಮಾರಿ ಹಾಕಿದ್ದಾರೆ. ನಾನೂ ಬಂಗಾಳದ ಮಗಳು, ಮಮತಾ ನನ್ನ ಕಿರಿಯ ಸಹೋದರಿ ಇದ್ದಂತೆ. ನನಗೇನೂ ಅವರ ಮೇಲೆ ದ್ವೇಷವಿಲ್ಲ. ಆದರೆ ನನಗೆ ಅಸಮಾಧಾನವಾಗಿದೆ. ನನ್ನ ಮೇಲೆ ಅವರಿಗೇಕೆ ಇಷ್ಟು ಕೋಪ ಎಂದು ಮುರ್ಮು ಪ್ರಶ್ನಿಸಿದ್ದಾರೆ.

ಶನಿವಾರ ಉತ್ತರ ಬಂಗಾಳದ ನಡೆದ 9ನೇ ಅಂತಾರಾಷ್ಟ್ರೀಯ ಆದಿವಾಸಿ (ಸಂತಾಲ್) ಸಮ್ಮೇಳನಕ್ಕೆ ಅನುಮತಿ ನೀಡದೆ ಸ್ಥಳ ಬದಲಾಯಿಸಿದ್ದಲ್ಲದೆ, ರಾಷ್ಟ್ರಪತಿಗೆ ಸೂಕ್ತ ಭದ್ರತೆಯನ್ನೂ ನೀಡದೆ ಮುರ್ಮು ಅವರನ್ನು ಮುಖ್ಯಮಂತ್ರಿ ಮಮತಾ ಅಪಮಾನಿಸಿದ್ದಾರೆ. ಘಟನೆಯನ್ನು ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಖಂಡಿಸಿದ್ದಾರೆ.

ಉತ್ತರ ಬಂಗಾಳದ ಸಿಲಿಗುರಿಯ ಬಿಧಾನ್‌ನಗರದಲ್ಲಿ 9ನೇ ಅಂತಾರಾಷ್ಟ್ರೀಯ ಆದಿವಾಸಿ (ಸಂತಾಲ್) ಸಮ್ಮೇಳನವನ್ನು ಆಯೋಜಿಸಲು ಮೊದಲೇ ನಿರ್ಧರಿಸಲಾಗಿದ್ದು, ರಾಷ್ಟ್ರಪತಿ ಮುರ್ಮು ಅವರನ್ನು ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಲಾಗಿತ್ತು. ➡ ಪುಟ ೪



ರಾಷ್ಟ್ರಪತಿಗೆ ಅಪಮಾನ ನಾಚಿಕೆಗೇಡು: ಪ್ರಧಾನಿ

ರಾಷ್ಟ್ರಪತಿ ಮುರ್ಮು ಅವರನ್ನು ಅಪಮಾನಿಸಿದ್ದು ನಾಚಿಕೆಗೇಡು ಮತ್ತು ನಡೆಯಬಾರದ ಘಟನೆ. ಪ್ರಜಾಪ್ರಭುತ್ವ ಮತ್ತು ಆದಿವಾಸಿ ಸಮುದಾಯಗಳ ಸಬಲೀಕರಣವನ್ನು ನಂಬುವ ಪ್ರತಿಯೊಬ್ಬರಿಗೂ ನೋವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಖಂಡಿಸಿದ್ದಾರೆ.

ಜನರ ಬಳಕೆಗೆ ಡೀಮ್ಡ್ ಅರಣ್ಯ ಪ್ರದೇಶ: ಜಾರ್ಜ್

ವನ್ಯಜೀವಿ-ಮಾನವ ಸಂಘರ್ಷ ತಡೆಗೆ ಬಜೆಟ್‌ನಲ್ಲಿ ಹಣ ಮೀಸಲು

• **ಮೂಡಿಗೆರೆ:** ಕೊಡಗು-ಚಿಕ್ಕಮಗಳೂರು ಸೇರಿದಂತೆ ಪಶ್ಚಿಮಘಟ್ಟ ಪ್ರದೇಶದಲ್ಲಿ ವನ್ಯಜೀವಿ ಮಾನವ ಸಂಘರ್ಷ ತಡೆಗೆ ಈ ಬಾರಿ ಬಜೆಟ್‌ನಲ್ಲಿ ಸಾಕಷ್ಟು ಹಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮೀಸಲಿಟ್ಟಿದ್ದಾರೆ ಎಂದು ಇಂಧನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.ಅವರು ಶನಿವಾರ ಪಟ್ಟಣದ ಅಡ್ಯಂತಾಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನಗಳ ಹಕ್ಕುಪತ್ರ, ಕಂದಾಯ ಗ್ರಾಮಗಳ ಹಕ್ಕುಪತ್ರ ಹಾಗೂ ಇತರೇ ಸವಲತ್ತುಗಳ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ➡ ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,85,000** (2,85,000) ಅಪರಂಜಿ ಚಿನ್ನ: **1,63,640** (1,61,130) ಆಭರಣ ಚಿನ್ನ: **1,50,000** (1,47,700) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹91.93

ಕಿರುಸುದ್ದಿ

ಸಾಧಕರಿಗೆ ಸನ್ಮಾನ ಇಂದು

ಕಲಘಟಗಿ: ತಾಲೂಕಿನ ಬಮ್ಮಿಗಟ್ಟಿ ಗ್ರಾಮದಲ್ಲಿ ಸಮಾನ ಮನಸ್ಕರ ಗೆಳೆಯರ ಬಳಗದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಾ.8ರಂದು ಬೆಳಗ್ಗೆ 10 ಗಂಟೆಗೆ ಮುಕ್ಕಣ್ಣವರ ಮನೆಯ ಎದುರು ನಡೆಯುವ ಸಭಾ ಕಾರ್ಯಕ್ರಮದಲ್ಲಿ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ. ಕಲಘಟಗಿ ಹನ್ನೆರಡು ಮಠದ ರೇವಣಸಿದ್ಧೇಶ್ವರ ಸ್ವಾಮೀಜಿ, ಮುಂಡಗೋಡ ರುದ್ರಮುನಿ ಸ್ವಾಮೀಜಿ, ಮುಳ್ಳಳ್ಳಿ- ಬೊಮ್ಮನಹಳ್ಳಿಯ ಶಿವಯೋಗೇಶ್ವರ ಸ್ವಾಮೀಜಿ, ಹರಿಹರ ಪುಣ್ಯಕೋಟಿ ಮಠದ ಜಗದೀಶ್ವರ ಸ್ವಾಮೀಜಿ, ಶಿರಸಂಗಿಯ ಬಸವಮಹಾಂತ ಸ್ವಾಮೀಜಿ, ಕುಂದಗೊಳ ಕಲ್ಯಾಣಪುರ ಮಠದ ಬಸವಣ್ಣಜ್ಜನವರು, ಮಂಟೂರು- ಬಮ್ಮಿಗಟ್ಟಿ ಅಡವಿ ಸಿದ್ದೇಶ್ವರ ಮಠದ ಉತ್ತರಾಧಿಕಾರಿ ಇಂದುಧರ ದೇವರು ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹಿಂದೂ ಶಕ್ತಿ ಸಮ್ಮೇಳನ ಇಂದು

ಧಾರವಾಡ: ಕುಮಾರೇಶ್ವರ ನಗರದ ಹಿಂದೂ ಸಮ್ಮೇಳನ ಸಮಿತಿ ವತಿಯಿಂದ ಹಿಂದೂ ಶಕ್ತಿ ಸಮ್ಮೇಳನ ಮಾ.8ರಂದು ಸಂಜೆ 5.30ಕ್ಕೆ ಈಶ್ವರ ದೇವಸ್ಥಾನದ ಆವರಣದ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಜಿ.ಜಿ.ಹಿರೇಮಠ ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಹಾನಗಲ್ ಕುಮಾರಸ್ವಾಮೀಜಿ ಅವರ ಬೃಹತ್ ವೇದಿಕೆಯಲ್ಲಿ ನಡೆಯುವ ಸಮ್ಮೇಳನದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖ ಹನುಮಂತ ಮಳಲಿ ಭಾಷಣ ಮಾಡಲಿದ್ದಾರೆ. ದ್ವಾರಪುರದ ಪರಮಾತ್ಮ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಇದಕ್ಕೂ ಮೊದಲು ಮಧ್ಯಾಹ್ನ 4 ಗಂಟೆಗೆ ಹೊಸ ಬಸ್ ನಿಲ್ದಾಣದ ಸಿದ್ಧಿವಿನಾಯಕ ದೇವಸ್ಥಾನದಿಂದ ಈಶ್ವರ ದೇವಸ್ಥಾನವರೆಗೆ ಭವ್ಯ ಶೋಭಾಯಾತ್ರೆ ಜರುಗಲಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಕಾರ್ಯದರ್ಶಿ ಬಾಳೇಶ ಹುಣಶ್ಯಾಳ, ಸಂತೋಷ ದೇವರಡ್ಡಿ, ವಿಠ್ಠಲ ಅಂಕುಶಕರ, ಶ್ರೀನಿವಾಸ ಕುಲಕರ್ಣಿ ಇದ್ದರು.

ಆರ್ಥಿಕ ಹೊರೆ: ಮುನೇನಕೊಪ್ಪ



ನವಲಗುಂದ: ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್ ಕೇವಲ ಅಂಕಿ-ಅಂಶಗಳ ಮಾಯಾಜಾಲವಾಗಿದೆಯೇ ಹೊರತು, ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿಲ್ಲ ಎಂದು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಕಿಡಿಕಾರಿದ್ದಾರೆ. ಬಜೆಟ್ ಕುರಿತು ತಮ್ಮ ಪ್ರತಿಕ್ರಿಯೆ ನೀಡಿರುವ ಅವರು, ಸಾಲ ಮನ್ನಾದಂತಹ ಯಾವುದೇ ಕ್ರಾಂತಿಕಾರಿ ಘೋಷಣೆಗಳಿಲ್ಲ. ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿಲ್ಲ. ಬೆಂಗಳೂರಿಗೆ ನೀಡಿದಷ್ಟು ಆದ್ಯತೆ ಉತ್ತರ ಕರ್ನಾಟಕಕ್ಕೆ ನೀಡಿಲ್ಲ, ಕಿತ್ತೂರು ಕರ್ನಾಟಕ ಭಾಗದ ನೀರಾವರಿ ಯೋಜನೆಗಳಿಗೆ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಈ ಸರ್ಕಾರ ಸಂಪೂರ್ಣವಾಗಿ ಬೆನ್ನು ಮಾಡಿದೆ. ರಾಜ್ಯದ ಇತಿಹಾಸದಲ್ಲೇ ಹಿಂದೆಂದೂ ಕಾಣದಷ್ಟು ಕಂದಾಯ ಕೊರತೆ ಮತ್ತು ಸಾಲದ ಪ್ರಮಾಣ ಹೆಚ್ಚುತ್ತಿದೆ. ಇದು ಮುಂದಿನ ಪೀಳಿಗೆಯ ಮೇಲೆ ದೊಡ್ಡ ಆರ್ಥಿಕ ಹೊರೆಯನ್ನು ಹೊರಿಸುವ ಬಜೆಟ್ ಆಗಿದೆ ಎಂದು ಆರೋಪಿಸಿದ್ದಾರೆ.

ಜನಪರ ಯೋಜನೆ ಘೋಷಣೆ



ಅಳ್ನಾವರ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್‌ನಲ್ಲಿ ಅನೇಕ ಜನಪರ ಯೋಜನೆಗಳನ್ನು ಘೋಷಿಸಿದ್ದಾರೆ. ಶಾಲೆಗಳನ್ನು ಮೇಲ್ದರ್ಜೆಗೇರಿಸುವುದು, ಅಲ್ಪಸಂಖ್ಯಾತ ಶಿಕ್ಷಣ ವ್ಯವಸ್ಥೆಗೆ ಮತ್ತು ಕೃಷಿ ಹಾಗೂ ನೀರಾವರಿ ಯೋಜನೆಗಳಿಗೆ ಹಣವನ್ನು ಒದಗಿಸಿದ್ದಾರೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ನಿರ್ಧರಿಸಿರುವುದು ನಿರುದ್ಯೋಗಿಗಳಿಗೆ ಆಶಾಕಿರಣವಾಗಿದೆ ಎಂದು ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಹಸನಲಿ ಶೇಖ ಅಳ್ನಾವರ ಹೇಳಿದ್ದಾರೆ.

ಬೃಹತ್ ಗಾತ್ರಕ್ಕಷ್ಟೇ ಸೀಮಿತ



ನವಲಗುಂದ: ಮುಖ್ಯಮಂತ್ರಿಗಳು ಮಂಡಿಸಿದ 17ನೇ ಬಜೆಟ್ 4.48 ಲಕ್ಷ ಕೋಟಿ ಬೃಹತ್ ಗಾತ್ರದ ಹೆಗ್ಗಳಿಕೆಗಷ್ಟೇ ಸೀಮಿತ. ಅಭಿವೃದ್ಧಿ ಯೋಜನೆಗಳಿಗೆ ಹಣ ಮೀಸಲಿಡುವ ಬದಲು ಸಾಲದ ಬಲೆಗೆ ರಾಜ್ಯವನ್ನು ತಳ್ಳುತ್ತಿರುವ ಬಜೆಟ್ ಇದಾಗಿದೆ ಎಂದು ಗ್ರಾಮಾಂತರ ಸಾಮಾಜಿಕ ಜಾಲತಾಣ ಜಿಲ್ಲಾ ಸಂಚಾಲಕ ಪವನ್ ಪಾಟೀಲ್ ಆರೋಪಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಓಲೈಕೆ ರಾಜಕಾರಣವನ್ನೇ ಗುರಿಯಾಗಿಸಿಕೊಂಡಿರುವ ಕರ್ನಾಟಕ ಸರ್ಕಾರ ವೋಟ್ ಬ್ಯಾಂಕ್ ಉಳಿಸಿಕೊಳ್ಳಲು ರಾಜ್ಯದ ಬೊಕ್ಕಸದ ಬಹುಪಾಲನ್ನೇ ಮೀಸಲಿಟ್ಟಿರುವುದು ಸರಿಯಲ್ಲ ಎಂದಿದ್ದಾರೆ.

ಸುದರ್ಶನ ಕಾಮತ ನಿಧನ



ಹುಬ್ಬಳ್ಳಿ: ಇಲ್ಲಿಯ ಭವಾನಿನಗರದ ನಿವಾಸಿ ಸುದರ್ಶನ ಕಾಮತ (63) ಅವರು ಶುಕ್ರವಾರ ಆಕಸ್ಮಿಕವಾಗಿ ನಿಧನರಾದರು. ಜಿ.ಎಸ್.ಬಿ. ಸಮಾಜದ ಸಕ್ರಿಯ ಕಾರ್ಯಕರ್ತರಾಗಿದ್ದ ಅವರು ಸಮಾಜದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಎಲ್ಲರ ಪ್ರೀತಿಗೂ ಗೌರವಕ್ಕೂ ಪಾತ್ರರಾಗಿದ್ದರು. ಮೃತರು ಪತ್ನಿ ಹಾಗೂ ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ.



ಧಾರವಾಡ: ರೋಟರಿ ಕ್ಲಬ್ ಸೆಂಟ್ರಲ್ ಧಾರವಾಡ ಇಲ್ಲಿನ ವನಿತಾ ಪ್ರೌಢ ಶಾಲೆಗೆ ನೀಡಿದ ಶುದ್ಧ ಕುಡಿಯುವ ನೀರಿನ ಸಂಸ್ಕರಣ ಘಟಕ ರೋಟರಿ ಕ್ಲಬ್ ಗವರ್ನರ್ ಅರುಣ್ ಭಂಡಾರೆ ಉದ್ಘಾಟಿಸಿದರು. ಕ್ಲಬ್ ಅಧ್ಯಕ್ಷ ನಾಗರಾಜ ತಾಯಣ್ಣವರ, ವನಿತಾ ಸೇವಾ ಸಮಾಜದ ಅಧ್ಯಕ್ಷ ಟಿ.ಎಲ್.ಪಾಟೀಲ, ಖಜಾಂಚಿ ರವಿ ಯಲಿಗಾರ, ನಿರ್ದೇಶಕ ದಾನಪ್ಪ ಕಬ್ಬೇರ, ಡಾ.ಗೌರಿ ತಾವರಗೇರಿ, ಸುಮಾ ರಜಪೂತ ಇದ್ದರು.

ವಿಶಿಷ್ಟಚೇತನ ಮಕ್ಕಳಿಗೂ ಸ್ಥಾನಮಾನ ನೀಡಿ

ಧಾರವಾಡ: ರಾಮಕೃಷ್ಣ ವಿವೇಕಾನಂದ ಜ್ಞಾನ ವಿಕಾಸ ಶಿಕ್ಷಣ ಸಂಸ್ಥೆ ತಡಕೋಡ ವತಿಯಿಂದ ನಗರದ ಗ್ರಾಮೀಣ ಬಿಆರ್‌ಸಿ ಸಭಾಂಗಣದಲ್ಲಿ ತಾಲೂಕು ಮಟ್ಟದ ವಿಶಿಷ್ಟಚೇತನ ಮಕ್ಕಳಿಗಾಗಿ ಶೈಕ್ಷಣಿಕ ಸಾಮಗ್ರಿಗಳ ವಿತರಣಾ ಕಾರ್ಯಕ್ರಮ ಜರುಗಿತು.

ಉದ್ಘಾಟಿಸಿದ ಗ್ರಾಮೀಣ ಬಿಇಒ ಆರ್.ಆರ್.ಸದಲಗಿ ಮಾತನಾಡಿ, ಸಮಾಜದಲ್ಲಿ ಸಾಮಾನ್ಯರಿಗೆ ಸಿಗುವ ಸ್ಥಾನಮಾನ ವಿಶೇಷಚೇತನ ಮಕ್ಕಳಿಗೂ ಸಿಗಬೇಕು. ಈ ನಿಟ್ಟಿನಲ್ಲಿ ಸಮಾಜಮುಖಿ ಸಂಘ-ಸಂಸ್ಥೆಗಳ ಹೆಚ್ಚೆಚ್ಚು ಶ್ರಮಿಸಬೇಕು ಎಂದರು.

ವಿಶಿಷ್ಟಚೇತನ ಮಕ್ಕಳ ಸೇವೆ ದೇವರ ಸೇವೆ ಮಾಡಿದಂತೆ. ಇಂತಹ ಮಕ್ಕಳಿಗೆ ರಾಮಕೃಷ್ಣ ವಿವೇಕಾನಂದ ಜ್ಞಾನ ವಿಕಾಸ ಶಿಕ್ಷಣ ಸಂಸ್ಥೆ ಕಲಿಕಾ ಸಾಮಗ್ರಿಗಳ ವಿತರಣೆ ಕಾರ್ಯ ಶ್ಲಾಘನೀಯ. ಇಂತಹ ಕಾರ್ಯಗಳು ಹೆಚ್ಚೆಚ್ಚು ನಡೆಯಲಿ ಎಂದರು.

ಕ್ಷೇತ್ರ ಸಮನ್ವಯಾಧಿಕಾರಿ ಕುಮಾರ್ ಕೆ.ಎಫ್. ಮಾತನಾಡಿ, ವಿಶಿಷ್ಟಚೇತನರ ಕಲ್ಯಾಣದ ದೃಷ್ಟಿಯಿಂದ ಸಮಾಜದ ಮೇಲೆ ದೊಡ್ಡ ಜವಾಬ್ದಾರಿಯಿದೆ. ವಿಶೇಷ ಚೇತನ ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಸ್ವಾವಲಂಬಿ ಮಾಡಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜ್ಞಾನ ವಿಕಾಸ ಸಂಸ್ಥೆಯ ಕಾರ್ಯಕ್ರಮದಲ್ಲಿ ರಾಹುಲ್ ಆಚಾರಿ, ಶಾರದಾ ಶಾಲೆ ಮುಖ್ಯೋಧ್ಯಾಪಕಿ ಲಕ್ಷ್ಮೀ ಮರಿಗೌಡರ, ಲಲಿತಾ ಹೊನ್ನವಾಡ, ಪ್ರಭಾವತಿ ಕವಳಿ, ಪುಷ್ಪಾ ಮಾನೆ, ಗೋಪಾಲ್ ಸೊನ್ನಹಳ್ಳಿ, ಅಕ್ಷತಾ ಪೂಜಾರ ಇದ್ದರು.



ಧಾರವಾಡ: ರಾಮಕೃಷ್ಣ ವಿವೇಕಾನಂದ ಜ್ಞಾನ ವಿಕಾಸ ಶಿಕ್ಷಣ ಸಂಸ್ಥೆ ತಡಕೋಡ ವತಿಯಿಂದ ನಗರದ ಗ್ರಾಮೀಣ ಬಿಆರ್‌ಸಿ ಸಭಾಂಗಣದಲ್ಲಿ ತಾಲೂಕು ಮಟ್ಟದ ವಿಶಿಷ್ಟಚೇತನ ಮಕ್ಕಳಿಗಾಗಿ ಶೈಕ್ಷಣಿಕ ಸಾಮಗ್ರಿಗಳ ವಿತರಣಾ ಕಾರ್ಯಕ್ರಮ ಜರುಗಿತು. ಗ್ರಾಮೀಣ ಬಿಇಒ ಆರ್.ಆರ್.ಸದಲಗಿ ಉದ್ಘಾಟಿಸಿದರು.

ಕಾಮಗಾರಿಗೆ ಚಾಲನೆ | ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ ಸುಧಾಕರ್ ಭರವಸೆ

941 ಉಪನ್ಯಾಸಕರ ಹುದ್ದೆ ನೇಮಕ



ಕುಂದಗೋಳ: ರಾಜ್ಯದ ಉನ್ನತ ಶಿಕ್ಷಣಕ್ಕೆ 2000 ಉಪನ್ಯಾಸಕರ ನೇಮಕದಲ್ಲಿ ಪಾಲಿಟೆಕ್ನಿಕ್ ಕಾಲೇಜು ಉಪನ್ಯಾಸಕರ ಕೊರತೆ ನೀಗಿಸಲು 941 ಹುದ್ದೆ ನೇಮಕ ಮಾಡಿಕೊಡಲಾಗುವುದೆಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ ಸುಧಾಕರ್ ಹೇಳಿದರು.

ಅವರು ತಾಲೂಕಿನ ಕಮಡೊಳ್ಳಿ ಗ್ರಾಮದ ಆರ್. ಎಫ್. ಪಾಟೀಲ್ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಹೆಚ್ಚುವರಿ ಕೊಠಡಿಗಳು ಹಾಗೂ ಕಾರ್ಯಾಗಾರ ಕಟ್ಟಡಕ್ಕೆ ಎಸ್.ಡಿ.ಪಿ ಯೋಜನೆಯಡಿ 4.5 ಕೋಟಿ ಅನುದಾನದ ಕಾಮಗಾರಿಗೆ ಶನಿವಾರ ಚಾಲನೆ ನೀಡಿ ಮಾತನಾಡಿದರು. ದಿ.ಸಿ.ಎಸ್.ಶಿವಳ್ಳಿ ಅವರ ಈ ಕಾಲೇಜು ಆರಂಭಿಸಿರುವುದನ್ನು ಸ್ಮರಿಸಿ, ಗ್ರಾಮದ ಶಿಕ್ಷಣ ಪ್ರೇಮಿಗಳಾದ ಹನುಮಂತಗೌಡ ವೆಂಕನಗೌಡ್ರ ಪಾಟೀಲ ನಾಲ್ಕು ಎಕರೆ ಭೂ ದಾನ ನೀಡಿದಕ್ಕೆ ಅಭಿನಂದಿಸಿದರು.

ಸಚಿವ, ಶಾಸಕ, ಭೂದಾನಿಗಳಿಗೆ ಹಾಗೂ ಗಣ್ಯರಿಗೆ ಕಾಲೇಜು ಆಡಳಿತದಿಂದ ಸನ್ಮಾನಿಸಲಾಯಿತು. ಪ್ರಾಸವಿಕವಾಗಿ ಕಾಲೇಜಿನ ಪ್ರಾಚಾರ್ಯ ಅಶೋಕ ಕಬ್ಬೇರ ಮಾತನಾಡಿದರು. ಮುಖಂಡರಾದ ಅನಿಲ ಕುಮಾರ ಪಾಟೀಲ, ಚಂದ್ರಶೇಖರ್ ಜುಟ್ಟಲ್, ರವಿಗೌಡ ಪಾಟೀಲ, ವಿರನಗೌಡ್ರ ಪಾಟೀಲ, ಸತೀಶ ಕೊಬ್ಬಯ್ಯನವರ್, ಮಾಂತೇಶ ಶ್ಯಾಗೋಟಿ, ದೃತಿ ಸಾಲ್ಮನಿ, ಹಜರತಅಲಿ ಜೋಡಮನಿ, ಅಪ್ಪಣ್ಣ ಹಿರೇಗೌಡ್ರ, ಫಕೀರಗೌಡ ಪಾಟೀಲ, ನಾಗನಗೌಡ ಸಾತ್ಮಾರ, ರಂಗನಗೌಡ ಪಾಟೀಲ, ಶಿವಮೂರ್ತಿ ತೋಟದ, ಅರ್ಜುನ ಪಾಟೀಲ, ಕಲಂದರ್ ಕಾಳಾ, ತಹಶೀಲ್ದಾರ್ ರಾಜು ಮಾವರ್ಕರ, ತಾಂತ್ರಿಕ ಶಿಕ್ಷಣ ಹೆಚ್ಚುವರಿ ನಿರ್ದೇಶಕ ಕೆ.ಸಿ. ನಾಗಭೂಷಣ ಸೇರಿದಂತೆ ಇಲಾಖೆ ಅಧಿಕಾರಿಗಳು, ಗಣ್ಯರು ಇದ್ದರು.

ವಸತಿ ನಿಲಯ ಆರಂಭಿಸಲು ಆಗ್ರಹ

ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಇಂತಹ ಕಾಲೇಜುಗಳು ನೆರವಾಗಿದ್ದು, ಸಾರಿಗೆ ಸೌಲಭ್ಯ ಕೊರತೆಯಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗುತ್ತಿದೆ. ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಗ್ರಾಮದಲ್ಲಿ ಉನ್ನತ ಶಿಕ್ಷಣ ಪಡೆಯುವವರಿಗೆ ವಸತಿ ನಿಲಯ ಆರಂಭಿಸಬೇಕೆಂದು ಅಧ್ಯಕ್ಷತೆ ವಹಿಸಿದ್ದ ಶಾಸಕ ಎಂ.ಆರ್. ಪಾಟೀಲ್ ಅವರು ಸಚಿವರಲ್ಲಿ ಮನವಿ ಮಾಡಿದರು.

> ನೇಮಕಾತಿಯಲ್ಲಿ ಅತಿಥಿ ಉಪನ್ಯಾಸಕರಿಗೆ 5 ವರ್ಷ ಸಡಿಲಿಕೆ ಮತ್ತು ಕೃಪಾಂಕ ನೀಡಲು ತೀರ್ಮಾನಿಸಲಾಗಿದೆ. ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ 7500 ಜನರಿಗೆ ಪದೋನ್ನತಿ ನೀಡಲಾಗಿದೆ.
> ■ ಡಾ. ಎಂ.ಸಿ ಸುಧಾಕರ್, ಉನ್ನತ ಶಿಕ್ಷಣ ಸಚಿವ

ಸುಧಾರಣೆಗೆ ಕ್ರಮ

ಸರ್ಕಾರಿ ತಾಂತ್ರಿಕ ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯ ಕೊರತೆಯಿಂದಾಗಿ ಹಾಜರಾತಿ ಕುಗ್ಗುತ್ತಿದ್ದು, ರಾಜ್ಯದ ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಕ್ಕಾಗಿ 2500 ಕೋಟಿ ರೂ. ಸುಧಾರಣೆಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನುಮತಿ ನೀಡಿದ್ದು, ಖಾಸಗಿ ಕಾಲೇಜುಗಳಂತೆ ವಿದ್ಯಾರ್ಥಿಗಳಿಗೆ ಸೌಲಭ್ಯ ನೀಡಲಾಗುವುದು. ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಕ್ಯಾಂಪಸ್ ಸಂದರ್ಶನ ಮೂಲಕ ಖಾಸಗಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗ ದೊರೆಯುತ್ತಿದೆ. ಖಾಸಗಿ ಕಾಲೇಜುಗಳಂತೆ ನಮ್ಮ ಕಾಲೇಜುಗಳಲ್ಲಿ ನಮ್ಮ ಸರ್ಕಾರವು ಸುಧಾರಣೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ ಸುಧಾಕರ್ ಹೇಳಿದರು.

ಯಮನೂರ ದೇವಸ್ಥಾನಕ್ಕೆ ಅಸೂಟಿ ಭೇಟಿ

ನವಲಗುಂದ: ತಾಲೂಕಿನ ಯಮನೂರ ಗ್ರಾಮದ ಚಾಂಗದೇವ ಉರ್ಫ್ ರಾಜಾಬಾಗಸವಾರರ ಯಮನೂರ ಜಾತ್ರಾ ಮಹೋತ್ಸವದ ಅಂಗವಾಗಿ ಕೆಪಿಸಿಸಿ ಸದಸ್ಯ ವಿನೋದ ಅಸೂಟಿ ಅವರು ದೇವಸ್ಥಾನಕ್ಕೆ ಭೇಟಿ ನೀಡಿ ದೇವರಿಗೆ ಮಾಲಾರ್ಪಣೆ ಸಲ್ಲಿಸಿ ತಾಲೂಕಿನ ಜನರ ಸಮೃದ್ಧಿ ಹಾಗೂ ಒಳಿತಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಜಾತ್ರಾ ಮಹೋತ್ಸವದ ಅಂಗವಾಗಿ ನಡೆಯುವ ಚಾಂಗದೇವರ ಗಂಧಾಭಿಷೇಕ ಕಾರ್ಯಕ್ರಮವು ಪ್ರತಿ ವರ್ಷದಂತೆ ಈ ವರ್ಷವೂ ಯಮನೂರಿನ ಬೆಣ್ಣೆಹಳ್ಳದ ದಡದಲ್ಲಿ ಭಕ್ತಿ ಭಾವದಿಂದ ನೆರವೇರಿತು.

ಈ ಸಂದರ್ಭದಲ್ಲಿ ಚಾಂಗದೇವರ ದರ್ಶನಕ್ಕಾಗಿ ಆಗಮಿಸಿದ ಭಕ್ತ ಸಮೂಹಕ್ಕೆ ಸರ್ವಧರ್ಮ ವೇದಿಕೆ ಹಾಗೂ ವಿನೋದ ಅಸೂಟಿ ಅಭಿಮಾನಿ ಬಳಗದ ವತಿಯಿಂದ ಅನ್ನಪ್ರಸಾದ ಸೇವೆ ಏರ್ಪಡಿಸಲಾಗಿತ್ತು.

- ವಿನೋದ ಅಸೂಟಿ ಅವರು ರಂಜಾನ್ ಉಪವಾಸವಿದ್ದು, ನವಲಗುಂದದಲ್ಲಿ ಸರ್ವಧರ್ಮ ವೇದಿಕೆ ಹಾಗೂ ವಿನೋದ ಅಸೂಟಿ ಗೆಳೆಯರ ಬಳಗದ ವತಿಯಿಂದ ಪಟ್ಟಣದ ಎಲ್ಲ ಮಸೀದಿಗಳಲ್ಲಿ ಇಫ್ತಾರ ಕೂಟ ಏರ್ಪಡಿಸಿದರು
- ಪಟ್ಟಣದ ಬಿಲಾಲ್ ಮಸೀದಿಯಲ್ಲಿ ನಮಾಜ ಮಾಡಿ, ಉಪವಾಸ ನಿರತರ ಜೊತೆ ಊಟ ಮಾಡಿ, ಹಬ್ಬದ ಶುಭಾಶಯ ಕೋರಿ, ಮೌಲಾನಾ ಹಾಗೂ ಮೌಜನ್ ಗಳಿಗೆ ಬಟ್ಟೆ ವಿತರಣೆ ಮಾಡಿ ಗೌರವ ಸಮರ್ಪಿಸಿದರು
- ಯಮನೂರ ಜಾತ್ರೆಯಲ್ಲಿ ದ್ವಿಚಕ್ರ ವಾಹನದಲ್ಲಿ ತಿರುಗಾಡಿ ಅಭಿಮಾನಿಯ ಅಭಿಮಾನ ಮರೆದ ವಿನೋದ ಅಸೂಟಿ



ಹೋಳಿ ಹಬ್ಬ ಆಚರಿಸಿದ ಮಹೇಶ ಟೆಂಗಿನಕಾಯಿ



ಹುಬ್ಬಳ್ಳಿ: ಗೋಕುಲ್ ರಸ್ತೆ ಬಸವೇಶ್ವರ ನಗರದ ನಿವಾಸದಲ್ಲಿ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಹೋಳಿ ಹಬ್ಬ ಆಚರಿಸಿ ಸಂಭ್ರಮಿಸಿದರು. ಕ್ಷೇತ್ರದ ಜನರೊಂದಿಗೆ ಇಂದು ಅವರ ಗೃಹ ಕಚೇರಿ ಎದುರು ಹೋಳಿ ಆಡಿ ಸಂಭ್ರಮಿಸಿದರು. ಇದೇ ಸಂದರ್ಭದಲ್ಲಿ ಪುಟ್ಟ ಬಾಲಕನೊಬ್ಬ ಶಾಸಕರಿಗೆ ಬಣ್ಣವನ್ನು ಹಚ್ಚಿ ಖುಷಿ ಪಟ್ಟರು. ಶಾಸಕರು ಮನೆಗೆ ಬಂದ ಜನರಿಗೆ ಬಣ್ಣವನ್ನು ಎರಚಿ ಸಂಭ್ರಮವನ್ನು ಪಟ್ಟರು. ಪ್ರಶಾಂತ ಯಾದವ್, ಸಾಯಿನಾಥ ದಲಬಂಜನ್, ವಿಶಾಲ ಜಾದವ ಇತರರಿದ್ದರು.

ಮಾ.23ಕ್ಕೆ ಜಾತ್ರೆ: ಪುರಾಣ ಪ್ರವಚನ ಉದ್ಘಾಟನೆ ಇಂದು

ಉಪ್ಪಿನಬೆಟಗೇರಿ: ಅಮ್ಮಿನಬಾವಿ ಶ್ರೀಸಂಸ್ಥಾನ ಪಂಚಗೃಹ ಹಿರೇಮಠದ ಕರ್ತೃ ಗುರುಶಾಂತಲಿಂಗ ಶಿವಯೋಗಿಗಳ ವಾರ್ಷಿಕ ಜಾತ್ರಾ ಮಹೋತ್ಸವ ಮಾ.23ರಂದು ಜರುಗಲಿದೆ. ಜಾತ್ರೆಯ ಅಂಗವಾಗಿ ಮಾ.8ರಿಂದ 22ರವರೆಗೆ ಸವದತ್ತಿ ಮೂಲಿಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಕಲಬುರ್ಗಿ ಶರಣಬಸವೇಶ್ವರ ಪುರಾಣ ಪ್ರವಚನ ನೀಡಲಿದ್ದು, ಮಾ.8 ರಂದು ಸಂಜೆ 6.30ಕ್ಕೆ ಜಮಖಂಡಿ ಶಾಸಕ ಜಗದೀಶ ಗುಡಗುಂಟಿಮಠ ಪುರಾಣ ಪ್ರವಚನ ಉದ್ಘಾಟಿಸುವರು. ಹಾವೇರಿ ಜಿಲ್ಲೆ ನೆಗಳೂರಿನ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮೀಜಿ ಹಾಗೂ ಬಳ್ಳಾರಿ ಕಲ್ಯಾಣಮಠದ ಕಲ್ಯಾಣ ಸ್ವಾಮೀಜಿ ಉಪದೇಶಾಮೃತ ನೀಡುವರು.

ಮಾ.20ರಂದು ಸಂಜೆ 6.30ಕ್ಕೆ ಬಾಳೆಹೊನ್ನೂರಿನ ರಂಭಾಪುರಿ ಪೀಠದ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಸಾನ್ನಿಧ್ಯದಲ್ಲಿ ನಡೆಯುವ ಧರ್ಮ ಜಾಗೃತಿ ಸಮಾವೇಶವನ್ನು ಮಾಜಿ ಶಾಸಕ ಅಮೃತ ದೇಸಾಯಿ ಉದ್ಘಾಟಿಸಲಿದ್ದಾರೆ. ಸುಳ್ಳದ ಶಿವಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಶಿರಕೋಳದ ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ, ಇನಾಂಹೊಂಗಲದ ಅಭಿನವ ಸಿದ್ದಲಿಂಗ ಸ್ವಾಮೀಜಿ, ಚಿಕ್ಕಮಗಳೂರು ಜಿಲ್ಲೆ ಬೇರುಗಂಡಿಯ ರೇಣುಕ ಮಹಾಂತ ಶಿವಾಚಾರ್ಯ ಸ್ವಾಮೀಜಿ, ಮೊರಬದ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ, ಸತ್ತಿಗೇರಿಯ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಪಾಲ್ಗೊಳ್ಳುವರು. ಮಾ.22 ರಂದು ಸಂಜೆ 6.30ಕ್ಕೆ ತಿಪಟೂರು ನೊಣವಿನಕೆರೆ ಸೋಮೇಕಟ್ಟೆ ಕಾಡಸಿದ್ಧೇಶ್ವರಮಠದ ಅಭಿನವ ಕಾಡಸಿದ್ಧೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಧರ್ಮ ಸಂಗಮ ಸಮಾವೇಶವನ್ನು ಶಾಸಕ ವಿನಯ ಕುಲಕರ್ಣಿ ಉದ್ಘಾಟಿಸುವರು. ಮುರುಘಾಮಠದ ಡಾ. ಮಲ್ಲಿಕಾರ್ಜುನ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದು, ನಗರ ನೀರು ಸರಬರಾಜು-ಒಳಚರಂಡಿ ಮಂಡಳಿ ಅಧ್ಯಕ್ಷೆ ಶಿವಲೀಲಾ ಕುಲಕರ್ಣಿ ಆಗಮಿಸುವರು. ಮಾ.22ರಂದು ವೀರಭದ್ರದೇವರ ಸಾಮೂಹಿಕ ಗುಗ್ಗಳ ಮಹೋತ್ಸವ ನಡೆಯಲಿದೆ. ಮಾ.23 ರಂದು ಸಂಜೆ 5 ಗಂಟೆಗೆ ಗುರುಶಾಂತಲಿಂಗ ಶಿವಯೋಗಿಗಳ ರಥೋತ್ಸವ ನಡೆಯಲಿದ್ದು, ವೀರಶೈವ ಜಂಗಮ ವಟುಗಳಿಗೆ ಅಯ್ಯಾಚಾರ-ಶಿವದೀಕ್ಷೆ ಜರುಗಲಿದೆ. ಜಾತ್ರೆಯ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಸಹ ನಡೆಯಲಿದೆ ಎಂದು ತಿಳಿಸಲಾಗಿದೆ.

ಮಕ್ಕಳಿಗೆ ಸಂಸ್ಕಾರ ನೀಡುವುದು ಅವಶ್ಯ: ಮಾಧವಿ ಕುಲಕರ್ಣಿ



ಹುಬ್ಬಳ್ಳಿ: ಇಲ್ಲಿನ ಲ್ಯಾಮಿಂಗ್ಟನ್ ಪ್ರಾಥಮಿಕ ಶಾಲೆಯಲ್ಲಿ ಯುಕೆಜಿ ಮಕ್ಕಳಿಗಾಗಿ ಗ್ರಾಜುಯೇಷನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಚೈತನ್ಯ ಎಜುಕೇಶನ್ ಟ್ರಸ್ಟ್ ಪ್ರಾಂಶುಪಾಲೆ ಮಾಧವಿ ಕುಲಕರ್ಣಿ ಮಾತನಾಡಿ, ಮಕ್ಕಳಿಗೆ ಪರೀಕ್ಷೆಯಲ್ಲಿನ ಅಂಕಗಳು ಮಾತ್ರ ಮುಖ್ಯವಲ್ಲ, ಅವರಿಗೆ ಸಂಸ್ಕಾರವನ್ನೂ ನೀಡಬೇಕಾಗಿದ್ದು ನಮ್ಮ ಆದ್ಯ ಕರ್ತವ್ಯ. ಅದಕ್ಕೆ ತಾಯಿಯಾದವಳು ಮಗುವಿಗೆ ಪ್ರೀತಿಯಿಂದ ಬೆಳೆಸುವುದು ಅಗತ್ಯವಾಗಿದೆ. ಇಂತಹ ವಾತ್ಸಲ್ಯವನ್ನು ಕೊಡುವಂತಹ ಶಾಲೆ ಲ್ಯಾಮಿಂಗ್ಟನ್ ಪ್ರಾಥಮಿಕ ಶಾಲೆ ಎಂದರು.

ಶಾಲೆಯ ಮುಖ್ಯೋಪಾಧ್ಯಾಯಿನಿ ಸೌಮ್ಯ ಪ್ರಭು ಮಾತನಾಡಿ, ನಿಮ್ಮ ಮಕ್ಕಳನ್ನು ಉತ್ತಮ ಪ್ರಜೆಯಾಗಿ ಬೆಳೆಸುವ ಜವಾಬ್ದಾರಿ ನಮ್ಮ ಶಾಲೆಯ ಶಿಕ್ಷಕಿಯರದ್ದು, ನಾವು ಇದನ್ನು ಮಾಡಲು ಸಿದ್ಧರಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಕಾರ್ಯದರ್ಶಿ ಶಶಿ ಸಾಲಿ ಮಾತನಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಅವರಿಗೆ ಚಿಕ್ಕ ಮಕ್ಕಳಿರುವಾಗ ಅವರ ಜವಾಬ್ದಾರಿ ಚಿಕ್ಕ-ಪುಟ್ಟ ಕೆಲಸಗಳನ್ನು ಹೇಳಿಕೊಡುವುದು ತಾಯಿಯೇ ಮನೆಯಲ್ಲಿ ಕಲಿಸಬೇಕು ಎಂದರು. ಖಜಾಂಚಿ ಪ್ರಭಾಕರ ಬಿಲ್ಲೆ ಮಾತನಾಡಿ, ಇಂತಹ ಒಂದು ಕಾರ್ಯಕ್ರಮ ಆಗುತ್ತಿರುವುದು ಈ ಮಕ್ಕಳು ಭಾಗ್ಯವಂತರು. ನಾವೆಲ್ಲ 25 ವರ್ಷಗಳ ನಂತರ ಈ ರೀತಿಯಾಗಿ ಗ್ರಾಜುಯೇಷನ್ ಸರ್ಟಿಫಿಕೇಟ್ ತೆಗೆದುಕೊಳ್ಳುತ್ತಿದ್ದೆವು. ಆದರೆ ಇವರು ಯುಕೆಜಿಯಲ್ಲಿಯೇ ಗ್ರಾಜುಯೇಷನ್ ಆಗಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕಿ ವಿದ್ಯಾ, ವಿಜಯಲಕ್ಷ್ಮೀ, ಸಾರಿಕಾ, ಪ್ರಿಯಾಂಕಾ, ಸುಜಾತಾ ಉಪಸ್ಥಿತರಿದ್ದರು. ಮಕ್ಕಳಿಗೆ ಸರ್ಟಿಫಿಕೇಟ್ ವಿತರಣೆ ಮಾಡಲಾಯಿತು. ಪಾಲಕರು ಭಾಗವಹಿಸಿ ಸಂತಸಪಟ್ಟರು.

ಪೋಷಕರ-ಶಿಕ್ಷಕರ 3ನೇ ಸಭೆ: ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಸಮಾರಂಭ



ಉಪ್ಪಿನಬೆಟಗೇರಿ: ಕೊಟಬಾಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಧಾರವಾಡ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರ, ತಡಕೋಡ ಸಮೂಹ ಸಂಪನ್ಮೂಲ ಸಂಯುಕ್ತ ಆಶ್ರಯದಲ್ಲಿ ಶನಿವಾರ ಪೋಷಕರ-ಶಿಕ್ಷಕರ 3ನೇ ಸಭೆ ಹಾಗೂ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಸಮಾರಂಭ ಜರುಗಿತು.

ಧಾರವಾಡ ವಕೀಲರ ಸಂಘದ ಅಧ್ಯಕ್ಷ ಹೈಕೋರ್ಟ್ ಪೀಠದ ಹಿರಿಯ ನ್ಯಾಯವಾದಿ ಬಿ.ಡಿ ಹಿರೇಮಠ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ದೇಶ ಸದೃಢವಾಗಬೇಕಾದರೆ ಕಷ್ಟ ಪಟ್ಟು ನಾಡಿಗೆ ಅನ್ನ ನೀಡುವ ರೈತರು ಮಾತ್ರ. ವಿದ್ಯಾರ್ಥಿಗಳು ಮಾಡಿದ ಕಲೆ ಅಲ್ಲಾ ಅದು ಜ್ಞಾನದ ಬಂಢಾರವಾಗಿದೆ. ನಗರ ಜೀವನ ಕೇವಲ ಆಕರ್ಷಕ ಮಾತ್ರ ಆದರೆ ನಿಜವಾದ ಜೀವನ ಗ್ರಾಮೀಣದಲ್ಲಿ ಇರುತ್ತದೆ ಎಂದರು.

ವಿದ್ಯಾರ್ಥಿಗಳಿಂದ ಜ್ಞಾನ ಬಲದಿಂದ ಕಲೆ ವಿಜ್ಞಾನ ಪ್ರದರ್ಶನ ನಡೆಯಿತು. ಶಿಕ್ಷಕಿ ರತ್ನಾ ಬೆಂಗಳೂರು ಪ್ರಾಸ್ತಾವಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಮುತ್ತಯ್ಯ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಗ್ರಾಮೀಣ ಸಮನ್ವಯಾಧಿಕಾರಿ ಕೆ.ಎಫ್. ಕುಮಾರ, ಡೈಟ್ ಹಿರಿಯ ಉಪನ್ಯಾಸಕ ಎಫ್.ವಿ.ಮಂಜಣ್ಣವರ, ಇ ಸಿ ಒ.ಎ.ಎಚ್ ನದಾಫ, ಬಿ ಆರ್ ಪಿ ಎಸ್.ಎ ಸಂತಿ, ತಡಕೋಡ ಸಿಆರ್‌ಪಿ ಕೆ.ಜಿ ಚಂದ್ರಪ್ಪ, ಪಿಡಿಒ ಶಶಿರೇಖಾ ಚಕ್ರಸಾಲಿ, ರಾಜಗುರು ತಳವಾರ, ಶಾಲಾ ಎಸ್‌ಡಿಎಂಸಿ ಸದಸ್ಯ ರುದ್ರಪ್ಪ ಕಟ್ಟೇಕರ, ಶಿವಪ್ಪ ಪಾಗಾದ, ಮಹೇಶ ಪಾಟೀಲ, ಮೃತ್ಯುಂಜಯ ಹಿರೇಮಠ, ಜೀವನ ಪತ್ತಾರ, ಕಲ್ಲಪ್ಪ ಗಾಮನಗಟ್ಟಿ, ಸುಧೀರ ಕುರಕುರಿ, ಮಲ್ಲಿಕಾರ್ಜುನ ನಾಗನಗೌಡ್ರ, ಬಸಯ್ಯ ಹೊಸಮನಿ, ಸೇರಿದಂತೆ ಇತರರಿದ್ದರು. ಶಿಕ್ಷಕ ಎಂ.ಪಿ. ಅಣ್ಣಿಗೇರಿ ಸ್ವಾಗತಿಸಿದರು. ಸಂಜಯ ಕೊಡಿ ಕಾರ್ಯಕ್ರಮ ನಿರ್ವಹಿಸಿದರು. ಶಿಕ್ಷಕಿ ಎನ್.ಜಿ. ಕಟ್ಟಿ ವಂದಿಸಿದರು.

ಮಹಿಳೆಯರಿಗೆ ಆರೋಗ್ಯ ಮುಖ್ಯ



ಹುಬ್ಬಳ್ಳಿ: ಇಲ್ಲಿಯ ನವನಗರದ ಎಬಿಬಿ ಫಿಟ್ನೆಸ್ ಜಿಮ್‌ನಲ್ಲಿ ಶನಿವಾರ ವಿಶ್ವ ಮಹಿಳಾ ದಿನಚಾರಣೆ ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಹಿಳಾ ಜಿಮ್ ತರಬೇತುದಾರರಾದ ಲಾರೆನ್ ಮಾತನಾಡಿ, ಪ್ರಸ್ತುತ ಒತ್ತಡದ ಜೀವನದಲ್ಲಿ ಮಹಿಳೆಯರಿಗೆ ಫಿಟ್ನೆಸ್ ಹಾಗೂ ಆರೋಗ್ಯ ಬಹಳ ಮಹತ್ವದಾಗಿದೆ. ಮಹಿಳೆಯರು ಆರೋಗ್ಯ ಹಾಗೂ ಆತ್ಮವಿಶ್ವಾಸದಿಂದ ಇರಲು ವ್ಯಾಯಾಮ ಹಾಗೂ ಫಿಟ್ನೆಸ್ ಅವಶ್ಯಕ ಎಂದರು.

ಮಹಿಳೆಯರು ಕುಟುಂಬ ನಿರ್ವಹಣೆ, ಉದ್ಯೋಗ, ವಿದ್ಯಾರ್ಥಿನಿಯ ಕಾಲೇಜ್ ಹಾಗೂ ದೈನಂದಿನ ಕೆಲಸಗಳ ಜೊತೆಗೆ ಆರೋಗ್ಯದ ಬಗ್ಗೆ ಗಮನ ಹರಿಸಬೇಕಿದೆ. ನೀವು ಬಲಿಷ್ಠವಾಗಿದ್ದರೆ ಯಾವ ಕೆಲಸವನ್ನಾದರೂ ಮಾಡಬಹುದು ಎಂದರು.

ಮಹಿಳಾ ದಿನಚಾರಣೆ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿಜೇತರಿಗೆ ಪ್ರಶಸ್ತಿ ವಿತರಿಸಲಾಯಿತು. ಜಿಮ್ ತರಬೇತುದಾರರಾದ ಸುನೀಲ್ ಜಂಗಾನಿ, ಆಕಾಶ, ಲ್ಯೂಕ್, ಸಾವಿತ್ರಿ ಜಂಗಾನಿ ಸೇರಿದಂತೆ ಅನೇಕರಿದ್ದರು.

ಉಚಿತ ಕಾರ್ಯಾಗಾರ ನಾಳೆ: ಪಾಟೀಲ್

ಹುಬ್ಬಳ್ಳಿ: ಉತ್ತರ ಕರ್ನಾಟಕ ಸಣ್ಣ ಕೈಗಾರಿಕಾ ಸಂಘದಿಂದ ಭಾರತ ಸರ್ಕಾರದ ಎಂಎಸ್ ಎಂಇ ಸಹಯೋಗದಲ್ಲಿ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಪ್ರಯೋಜನಕ್ಕಾಗಿ ಉತ್ಪಾದನಾ ನಿರ್ವಹಣೆ ಕುರಿತು ಉಚಿತ ಕಾರ್ಯಾಗಾರ ಇಲ್ಲಿಯ ಗೋಕುಲ ರಸ್ತೆ ಕೈಗಾರಿಕಾ ಪ್ರದೇಶದಲ್ಲಿರುವ ಎನ್‌ಕೆಎಸ್‌ಎಸ್‌ಎ ಸಭಾಂಗಣದಲ್ಲಿ ಮಾ.9 ರಿಂದ 13 ರ ವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ರಮೇಶ ಪಾಟೀಲ್ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ ಸರ್ಕಾರದ ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಉನ್ನತ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಲಿದ್ದಾರೆ. 39ಕ್ಕೂ ಹೆಚ್ಚು ವಿಷಯಗಳ ಮೇಲೆ ಕಾರ್ಯಾಗಾರ ನಡೆಯಲಿದೆ. ಪಾಲ್ಗೊಳ್ಳುವ ಅಭ್ಯರ್ಥಿಗಳಿಗೆ ಕೊನೆಯಲ್ಲಿ ಪ್ರಮಾಣಪತ್ರ ವಿತರಣೆ ಮಾಡಲಾಗುವುದು ಎಂದರು. ಆಸಕ್ತ ಉದ್ಯಮಿಗಳು ಮಾ. 7 ರೊಳಗೆ ಸಂಕ್ಷಿಪ್ತ ಸ್ವವಿವರದೊಂದಿಗೆ nkssia@gmail.com ಮೇಲ್ ಹಾಗೂ nkssia ಕಚೇರಿಗೆ ಭೇಟಿ ನೀಡಿ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ 9901055218 ಗೆ ಸಂಪರ್ಕಿಸಬಹುದು ಎಂದರು. ಸಂಘದ ಕಾರ್ಯದರ್ಶಿ ಶ್ರೀಪತಿ ಭಟ್, ನಾಗೇಶ ರಿತ್ತಿ, ಪ್ರಶಾಂತ ಆಚಲ್ಕರ್, ಸಂದೀಪ್ ಬಿಡಸಾರಿಯಾ, ಮೈಕಲ್ ಮಡಕಟ್ಟಿ ಇದ್ದರು.



ಆರೋಗ್ಯ ತಪಾಸಣೆ ಉಚಿತ ಶಿಬಿರ



ಧಾರವಾಡ: ರೋಟರಿ ಕ್ಲಬ್ ಆಫ್ ಸೆವೆನ್ ಹಿಲ್ಸ್ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಹಾಗೂ ಐದನೂರು ಮೆನ್ಸ್ಟ್ರುವಲ್ ಕಪ್‌ಗಳ ವಿತರಣೆ ಸಮಾರಂಭ ಮಾ.8ರಂದು ಬೆಳಗ್ಗೆ 8.30ಕ್ಕೆ ನಗರದ ಆಲೂರು ವೆಂಕಟರಾವ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರೋಟರಿ ಕ್ಲಬ್ ಸೆವೆನ್ ಹಿಲ್ಸ್ ಅಧ್ಯಕ್ಷೆ ಡಾ.ಮಾಧುರಿ ಬಿರಾದಾರ, ಅಂತಾರಾಷ್ಟ್ರೀಯ ಮಹಿಳಾ ದಿನದ ಪ್ರಯುಕ್ತ ನಡೆಯುವ ಕಾರ್ಯಕ್ರಮ ಮೇಯರ್ ಜ್ಯೋತಿ ಪಾಟೀಲ ಉದ್ಘಾಟಿಸಲಿದ್ದಾರೆ.

ಜಿಪಂ ಸಿಇಒ ಭುವನೇಶ ಪಾಟೀಲ, ಪೊಲೀಸ್ ಆಯುಕ್ತ ಎನ್.ಶಶಿಕುಮಾರ, ರೋಟರಿ ಡಿಸ್ಟ್ರಿಕ್ ಗವರ್ನರ್ ಅರುಣ್ ಭಂಡಾರೆ, ಟಾಟಾ ಹಿಟ್ಯಾಚ್ ಡೆಪ್ಯುಟಿ ಮುಖ್ಯಸ್ಥ ಪ್ರಶಾಂತ ದೀಕ್ಷತ್, ರೋಟರಿ ಕ್ಲಬ್ ಸದಸ್ಯರು ಪಾಲ್ಗೊಳ್ಳುವುದಾಗಿ ತಿಳಿಸಿದರು. ಸಮಾರಂಭದಲ್ಲಿ ಮಹಿಳೆಯರಿಗೆ ಆರೋಗ್ಯ ತಪಾಸಣೆ ಉಚಿತ ಶಿಬಿರ ನಡೆಸಲಿದ್ದು, 350 ಸಂಜೀವಿನ ಒಕ್ಕೂಟದ ಮಹಿಳೆಯರಿಗೆ ಹಾಗೂ 150 ಮಹಿಳಾ ಪೊಲೀಸ್ ಸಿಬ್ಬಂದಿ ಸೇರಿ 500 ಜನರಿಗೆ ಮೆನ್ಸ್ಟ್ರುವಲ್ ಕಪ್ ವಿತರಿಸುವುದಾಗಿ ಹೇಳಿದರು. ಕೆಲಸದ ನಿಮಿತ್ಯ ಮನೆಯಿಂದ ಹೊರಗಿರುವ ಮಹಿಳೆಯರು ಋತುಚಕ್ರದ ವೇಳೆ ಅನೇಕ ತೊಂದರೆ ಹಾಗೂ ಮಾನಸಿಕ ಹಿಂಸೆ ಅನುಭವಿಸುವುದು ಸಹಜ. ಈ ಕುರಿತು ಡಾ.ನಿಶಾ ಗಲಗಲಿ ಮುಟ್ಟಿನ ಕುರಿತು ಜಾಗೃತಿ ಉಪನ್ಯಾಸ ನೀಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ. ದೃಷ್ಟಿ ದೇಶಪಾಂಡೆ, ಡಾ.ನಾಗರತ್ನಾ ಬಿರಾದಾರ, ಗೌರಿ ಮಾಧಲಬಾವಿ ಇದ್ದರು.

ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ನವಲಗುಂದ: ಪಟ್ಟಣದ ನವಲಗುಂದ ಲಿಬರಲ್ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ ನಿ., ನವಲಗುಂದ ಸಂಸ್ಥೆಯ ಆಡಳಿತ ಮಂಡಳಿ ಚುನಾವಣೆಯು ನಿಗದಿತ ವೇಳಾಪಟ್ಟಿಯಂತೆ ಶಾಂತಿಯುತವಾಗಿ ನಡೆಯಿತು.

ಚುನಾವಣೆಯ ನಂತರ ಸಂಸ್ಥೆಯ ಅಧ್ಯಕ್ಷರಾಗಿ ಡಾ. ಶಿವಕುಮಾರ ಚವಡಿ ಹಾಗೂ ಉಪಾಧ್ಯಕ್ಷರಾಗಿ ಮೈಲಾರಪ್ಪ ಕಮತರ ಅವಿರೋಧವಾಗಿ ಆಯ್ಕೆಯಾದರು. ಜೊತೆಗೆ ಬಸವಣ್ಣೆಪ್ಪ ಅಕ್ಕಿ, ಚಂಬಪ್ಪ ಕೊಪ್ಪದ, ವೀರಣ್ಣ ಚವಡಿ, ರುದ್ರಪ್ಪ ಸವದತ್ತಿ, ನಿಜಗುಣ ಹಿರೇಮಠ, ವೀರಪ್ಪ ಚುಳಕಿ, ತುಕಾರಾಮ ಜಾಧವ, ಮಡಿವಾಳಪ್ಪ ಜಡಿ, ದೀಪಾ ಅಕ್ಕಿ ಹಾಗೂ ಗಿರಿಜಾ ಮತ್ತೂರ ಸೇರಿದಂತೆ ಒಟ್ಟು 12 ಮಂದಿ ಆಡಳಿತ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ನೂತನ ಪದಾಧಿಕಾರಿಗಳಿಗೆ ಸಂಸ್ಥೆಯ ಸದಸ್ಯರು ಹಾಗೂ ಸಾರ್ವಜನಿಕರು ಅಭಿನಂದನೆ ಸಲ್ಲಿಸಿದರು. ಚುನಾವಣಾ ಪ್ರಕ್ರಿಯೆಯನ್ನು ರಿಟರ್ನಿಂಗ್ ಅಧಿಕಾರಿ ಶ್ರೀದೇವಿ ಟಿ. ಕುಲಕರ್ಣಿ ಅವರ ಮಾರ್ಗದರ್ಶನದಲ್ಲಿ ನಡೆಸಲಾಯಿತು.



ಕಿರುಸುದ್ದಿ

ಖಮೇನಿ ಭಾವಚಿತ್ರ ತೆರವುಗೊಳಿಸಿ: ಮುತಾಲಿಕ್

ಬೆಳಗಾವಿ: ಭಾರತ ವಿರೋಧಿ ಅಯತೊಲ್ಲಾ ಅಲಿ ಖಮೇನಿ ಭಾವಚಿತ್ರಗಳನ್ನು ಬೆಳಗಾವಿಯ ಗಲ್ಲಿಗಳಲ್ಲಿ ಅಳವಡಿಸಿರುವುದು ಅಕ್ಷಮ್ಯ. ಇದು ದೇಶದ್ರೋಹದ ಕೃತ್ಯ. ಕೂಡಲೇ ಈ ಪೋಸ್ಟರ್‌ಗಳನ್ನು ತೆರವುಗೊಳಿಸಿ, ಅಳವಡಿಸಿದವರ ವಿರುದ್ಧ ಕ್ರಮ ಕೈಗೊಳ್ಳಿ. ಇಲ್ಲದಿದ್ದರೆ ನಾವೇ ತೆರವುಗೊಳಿಸುತ್ತೇವೆ ಎಂದು ಪೊಲೀಸ್ ಆಯುಕ್ತರಿಗೆ ಶ್ರೀರಾಮ ಸೇನಾ ಸಂಸ್ಥಾಪಕ, ಅಧ್ಯಕ್ಷ ಪ್ರಮೋದ ಮುತಾಲಿಕ್ ಎಚ್ಚರಿಕೆ ನೀಡಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಗರದಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ಅಳವಡಿಸಲಾಗಿರುವ ಕೆಲವು ಬ್ಯಾನರ್‌ಗಳು ಇದೀಗ ತೀವ್ರ ವಿವಾದಕ್ಕೆ ಕಾರಣವಾಗಿವೆ. ಇರಾನ್‌ನ ಧಾರ್ಮಿಕ ಮುಖಂಡ ಅಯತೊಲ್ಲಾ ಖಮೇನಿ ಅವರ ಭಾವಚಿತ್ರಗಳನ್ನು ತೆರವುಗೊಳಿಸುವಂತೆ ನಗರ ಪೊಲೀಸ್ ಆಯುಕ್ತರಿಗೆ ಮನವಿ ಮಾಡಿಕೊಂಡಿದ್ದಾರೆ. ಆಯತುಲ್ಲಾ ಖಮೇನಿ ಹತ್ಯೆಯನ್ನು ಖಂಡಿಸಿ ದೇಶದ ಮುಸ್ಲಿಂಮರು ಪ್ರತಿಭಟಿಸಿದ್ದಾರೆ. ಅಲ್ಲದೇ, ಬೆಳಗಾವಿಯ ಗಾಂಧಿ ನಗರ, ಕೊತ್ವಾಲ್ ಗಲ್ಲಿ, ಶಾಹೂನಗರ, ಕಾಮತ್ ಗಲ್ಲಿ ಇನ್ನುಳಿದ ಕಡೆ ಖಮೇನಿ ಕಟೌಟ್ ಹಾಕಲಾಗಿದೆ. ದೇಶದ್ರೋಹಿ, ಮಹಿಳಾ ವಿರೋಧಿಯಾಗಿರುವ ಖಮೇನಿ ಭಾವಚಿತ್ರ ನಮ್ಮ ದೇಶದಲ್ಲೇ ಏಕೆ? ಇಂತಹ ವ್ಯಕ್ತಿಯನ್ನು ವೈಭವೀಕರಿಸುವುದನ್ನು ಖಂಡಿಸುತ್ತಿದ್ದು ಕೂಡಲೇ ಅವುಗಳನ್ನು ತೆರವುಗೊಳಿಸಬೇಕು. ಛತ್ರಪತಿ ಶಿವಾಜೀ ಮಹಾರಾಜರು ಅಫ್ಜಲ್ ಖಾನ್‌ನ್ನು ವಧಿಸಿದ್ದು ಇತಿಹಾಸವಿದೆ. ಇದರ ಭಾವಚಿತ್ರ ಅಳವಡಿಸಿದರೇ ಕೂಡಲೇ ತೆರವುಗೊಳಿಸಲಾಗುತ್ತದೆ. ಈಗ ಖಮೇನಿ ಭಾವಚಿತ್ರಗಳನ್ನು ಅಳವಡಿಸಿದವರ ವಿರುದ್ಧ ದೇಶದ್ರೋಹಿ ಕಾನೂನು ಕ್ರಮಕ್ಕೆಗೊಂಡು ಬಂಧಿಸಬೇಕು ಎಂದು ಪೊಲೀಸ್ ಇಲಾಖೆಗೆ ಎಚ್ಚರಿಕೆ ನೀಡಿದರು.

ಈ ವೇಳೆ ಶ್ರೀರಾಮಸೇನೆ ಜಿಲ್ಲಾಧ್ಯಕ್ಷ ರವಿಕುಮಾರ್ ಕೋಕಿತ್ಕರ್, ಉಪಾಧ್ಯಕ್ಷ ವಿನಯ ಅಂಗೋಳ್ಳಿ ಸೇರಿದಂತೆ ಸಂಘಟನೆಯ ಇತರರು ಇದ್ದರು.

ಮಾನಸಿಕ ಅಸ್ವಸ್ಥ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಆರೋಪ: ಆರೋಪಿ ಪರಾರಿ

ಕಲಬುರಗಿ: ಮಾನಸಿಕ ಅಸ್ವಸ್ಥ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಕ್ಕೆ ಸಂಬಂಧಿಸಿದ ಘಟನೆ ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಆಂದೋಲಾ ಗ್ರಾಮದಲ್ಲಿ ಬೆಳಕಿಗೆ ಬಂದಿದೆ. ಯಾದಗಿರಿ ಜಿಲ್ಲೆಯ ಮೂಲದ ಮಾನಸಿಕ ಅಸ್ವಸ್ಥ ಮಹಿಳೆ ಆಂದೋಲಾ ಗ್ರಾಮದ ಮಠದಲ್ಲಿ ವಾಸವಿದ್ದು ಚಿಕಿತ್ಸೆ ಪಡೆಯುತ್ತಿದ್ದಳು. ಇದೇ ವೇಳೆ ಆಂದೋಲಾ ಗ್ರಾಮದ ಚಿನ್ನು ಜಮಾದಾರ್ ಎಂಬಾತ ಮಹಿಳೆಯನ್ನು ಹೊಲಕ್ಕೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂಬ ಆರೋಪ ಕೇಳಿಬಂದಿದೆ. ಮಹಿಳೆಯನ್ನು ಕರೆದೊಯ್ಯಲಾಗಿರುವ ಮಾಹಿತಿ ತಿಳಿದ ಹಿಂದು ಯುವಕರು ಹೊಲದ ಕಡೆ ತೆರಳಿ ಪರಿಶೀಲನೆ ನಡೆಸಿದಾಗ, ಆರೋಪಿತನು ಅಲ್ಲಿದ್ದಾನೆ ಎಂದು ಹೇಳಲಾಗುತ್ತಿದೆ. ಈ ವೇಳೆ ಯುವಕರು ವಿಡಿಯೋ ಮಾಡುತ್ತಿದ್ದಾಗ ತಪ್ಪಾಗಿದೆ. ಇದೊಂದು ಬಾರಿ ಬಿಟ್ಟು ಬಿಡಿ ಎಂದು ಆರೋಪಿ ಮನವಿ ಮಾಡಿದ್ದಾನೆ ಎನ್ನಲಾಗಿದೆ. ಈ ಘಟನೆಗೆ ಸಂಬಂಧಿಸಿದ ವಿಡಿಯೋವನ್ನು ಹಿಂದು ಯುವಕ ಹುಲ್ಲೇಶ್ ಕಾಸರಭೋಸಗ ಎಂಬಾತ ತನ್ನ ಫೇಸ್‌ಬುಕ್ ಪೇಜ್‌ನಲ್ಲಿ ಅಪ್ಲೋಡ್ ಮಾಡಿದ್ದು, ಬಳಿಕ ವಿಷಯ ಬಹಿರಂಗಗೊಂಡಿದೆ. ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದಂತೆ ಆರೋಪಿ ಚಿನ್ನು ಜಮಾದಾರ್ ಗ್ರಾಮದಿಂದ ಪರಾರಿಯಾಗಿರುವುದಾಗಿ ತಿಳಿದುಬಂದಿದೆ. ಈ ಕುರಿತು ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಬಂಧಿಸಲು ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ವ್ಯಕ್ತಿ ಆತ್ಮಹತ್ಯೆ

ಯಲ್ಲಾಪುರ: ತಾಲೂಕಿನ ಪ್ರವಾಸಿ ತಾಣ ಜೇನುಕಲ್ಲು ಗುಡ್ಡದ ಮೇಲಿನಿಂದ ಜಿಗಿದು ಧಾರವಾಡ ವ್ಯಕ್ತಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.

ಧಾರವಾಡದ ಹೊಸಯಲ್ಲಾಪುರ ದ ನಿವಾಸಿ ಶ್ರೀನಿಧಿ ಕಡಕೋಳ (23) ಎಂಬ ಯುವಕ ಮನೆಯಲ್ಲಿ ಸ್ಕೂಟಿಯಲ್ಲಿ ಗೋಕರ್ಣಕ್ಕೆ ಹೋಗುವದಾಗಿ ಹೇಳಿ ಹೋಗಿದ್ದನು. ಆದರೆ ಯಾವದೇ ವಿಷಯ ಮನಸ್ಸಿಗೆ ಹಚ್ಚಿಕೊಂಡು ಯಲ್ಲಾಪುರದ ಜೇನುಕಲ್ಲು ಗುಡ್ಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಅವನ ಸಾವಿನಲ್ಲಿ ಯಾವದೇ ಸಂಶಯ ಇಲ್ಲ ಎಂದು ಮೃತನ ತಂದೆ ಕೃಷ್ಣ ಕಡಕೋಳ ಪೊಲೀಸ್ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಿಸಿದ್ದಾರೆ. ಪಿಎಸ್‌ಐ ಸಿದ್ದಪ್ಪ ಗುಡಿ ಪ್ರಕರಣ ದಾಖಲಿಸಿ ಶವವನ್ನು ಮೇಲಕ್ಕೆ ತರುವ ಕಾರ್ಯ ಮಾಡಿದ್ದಾರೆ.

ಸಚಿವ ಎನ್.ಎಸ್.ಬೋಸರಾಜು ಹೇಳಿಕೆ

ಅಂತರ್ಜಲ ವೃದ್ಧಿಗೆ ಸರ್ಕಾರ ಬದ್ಧ

ಕಲಬರುಗಿ: ರಾಜ್ಯದ ಕೃಷಿ ವಲಯದ ಏಳಿಗೆಗಾಗಿ ಅಂತರ್ಜಲ ಮರುಪೂರಣ ಮತ್ತು ನೀರಾವರಿ ಯೋಜನೆಗಳಿಗೆ ಸರ್ಕಾರ ಆದ್ಯತೆ ನೀಡುತ್ತಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು ತಿಳಿಸಿದರು.

ಶನಿವಾರ ಜಿಲ್ಲೆಯ ಆಳಂದ ತಾಲೂಕಿನ ಖಂಡಾಳದಿಂದ ಮಟಕಿ, ನಿರಗುಡಿದಿಂದ ಪಡಸಾವಳಿ, ಬಸವಂತವಾಡಿದಿಂದ ನಿಂಬರ್ಗಾ, ಹಳ್ಳಿಸಲಗರದಿಂದ ಕೊಡಲಹಂಗರಗಾ, ಮತ್ತು ಬಂಗರಗಾ-ಚಿತಲಿ-ಸಾಲೆಗಾಂವದಿಂದ ಹೆಬಳಿ ನಾಲಾಕ್ಕೆ ಅಡ್ಡಲಾಗಿ ಅಣೆಕಟ್ಟು/ಬಿಸಿಬಿಗಳ ನಿರ್ಮಾಣ ಮತ್ತು ನಾಲಾ ಅಗೆತ ಕಾಮಗಾರಿಗಳ (ಅಂದಾಜು ಮೊತ್ತ; 47.50 ಕೋಟಿ ರೂ) ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಆಳಂದ ಕ್ಷೇತ್ರದ ವಿವಿಧ ನದಿ ಹಾಗೂ ನಾಲೆಗಳಿಗೆ ಅಣೆಕಟ್ಟು ಮತ್ತು ಬ್ರಿಡ್ಜ್ ಕಮ್ ಬ್ಯಾರೇಜ್‌ಗಳನ್ನು ನಿರ್ಮಿಸಲು ಸುಮಾರು 50 ಕೋಟಿ ರೂಪಾಯಿ ಅನುದಾನ ವಿನಿಯೋಗಿಸಲಾಗುತ್ತಿದೆ ಎಂದರು.

ರಾಜ್ಯದಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿರುವ ಸವಾಲನ್ನು ಎದುರಿಸಲು ಮಹಾರಾಷ್ಟ್ರದ ಯಶಸ್ವಿ ಶಿರ್ಪುರ್ ಮಾದರಿಯನ್ನು ಕಲ್ಯಾಣ ಕರ್ನಾಟಕ ಭಾಗದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಅಂಕಿಅಂಶ: ರಾಜ್ಯವು ಅಂತರ್ಜಲ ಬಳಕೆಯಲ್ಲಿ ದೇಶದಲ್ಲೇ 9ನೇ ಸ್ಥಾನದಲ್ಲಿದ್ದು, ಸುಮಾರು 37 ಲಕ್ಷಕ್ಕೂ ಅಧಿಕ ಬೋರವೆಲ್‌ಗಳು ಅಂತರ್ಜಲವನ್ನು ಅವಲಂಬಿಸಿವೆ.ಕೆರೆಗಳ ಪುನಶ್ಚೇತನ: ರಾಜ್ಯದ ಒಟ್ಟು 41,849 ಕೆರೆಗಳ ಪೈಕಿ, ಸಣ್ಣ ನೀರಾವರಿ ಇಲಾಖೆಯು 428 ಲಿಫ್ಟ್ ಇರಿಗೇಶನ್ ಯೋಜನೆಗಳ ಮೂಲಕ ಕೆರೆ ತುಂಬಿಸುವ ಕಾರ್ಯವನ್ನು ಚುರುಕುಗೊಳಿಸಿದೆ.



> ತಾಲೂಕಿನ ಒಟ್ಟು 500 ಕಿ.ಮೀ ಉದ್ದದ ಹಳ್ಳಗಳ ಅಭಿವೃದ್ಧಿಗೆ ಕನಿಷ್ಠ 100 ಕೋಟಿ ರೂಪಾಯಿಗಳ ಅವಶ್ಯಕತೆಯಿದೆ. ಈ ಯೋಜನೆಯು ಯಶಸ್ವಿಯಾದಲ್ಲಿ ಆಳಂದ ತಾಲೂಕಿನ ಆರ್ಥಿಕ ಸ್ಥಿತಿ ಸುಧಾರಿಸುವುದಲ್ಲದೆ, ಉದ್ಯೋಗಕ್ಕಾಗಿ ಹೊರಹೋದ ಜನರು ಪುನಃ ತಮ್ಮ ಗ್ರಾಮಗಳಿಗೆ ಮರಳಿ ಸ್ವಾಭಿಮಾನದ ಬದುಕು ನಡೆಸಲು ಸಾಧ್ಯವಾಗುತ್ತದೆ.ಈ ವಿಶಿಷ್ಟ ಜಲ ಸಂರಕ್ಷಣಾ ಮಾದರಿಯನ್ನು ಆಳಂದ ಮಾದರಿ ನೀರು ಉಳಿಸುವ ಯೋಜನೆ ಎಂದು ಹೆಸರಿಸಿ, ರಾಜ್ಯದಾದ್ಯಂತ ವಿಸ್ತರಿಸಬೇಕು ಎಂಬ ಬೇಡಿಕೆ ಈಗ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.
> ■ ಬಿ.ಆರ್.ಪಾಟೀಲ್, ಶಾಸಕ, ಆಳಂದ

> ಇತ್ತೀಚಿನ ಸಮೀಕ್ಷೆಯ ಪ್ರಕಾರ, ಆಳಂದ ತಾಲೂಕಿನಲ್ಲಿ ಕೃಷಿ ಹಿನ್ನಡೆ ಮತ್ತು ತೀವ್ರ ಜಲಕ್ಷಾಮದಿಂದಾಗಿ ಜನರು ಉದ್ಯೋಗ ಅರಸಿ ಪುಣೆ, ಮುಂಬೈ, ಬೆಂಗಳೂರಿನಂತಹ ಮಹಾನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಅಂತರ್ಜಲ ಮಟ್ಟವು 100 ಅಡಿಗಳಿಂದ 1000 ಅಡಿಗಳಿಗಿಂತಲೂ ಕೆಳಕ್ಕೆ ಕುಸಿದಿರುವುದು ಈ ಸಾಮಾಜಿಕ ಮತ್ತು ಆರ್ಥಿಕ ಬಿಕ್ಕಟ್ಟಿಗೆ ಮೂಲ ಕಾರಣವಾಗಿದೆ.
> ■ ಅಭಿನವ ಶಿವಲಿಂಗ ಮಹಾಸ್ವಾಮಿ ವಿರಕ್ತ ಮಠ, ಮಾದನ ಹಿಪ್ಪರಗಿ

ವೇದಿಕೆ ಮೇಲೆ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಸರ್ಕಾರದ ಕಾರ್ಯದರ್ಶಿ ಬಿ.ಕೆ. ಪವಿತ್ರಾ, ಹೆಚ್.ಎಲ್.ವೆಂಕಟೇಶ್,ಸಣ್ಣ ನೀರಾವರಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಶಾಂತಪ್ಪ ಎಸ್. ಜಾಧವ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅನುಮತಿ ನೀಡಿದ ತಕ್ಷಣ ಮಹದಾಯಿ ಕಾಮಗಾರಿ ಆರಂಭ: ಕೋನರಡ್ಡಿ

ಹುಬ್ಬಳ್ಳಿ : ಉತ್ತರ ಕರ್ನಾಟಕದ ಪ್ರಮುಖ ಬೇಡಿಕೆಯಾದ ಮಹದಾಯಿ ಕಳಸಾ-ಬಂಡೂರಿ ಜಾರಿಗೆ ಯೋಜನೆ ರಾಜ್ಯ ಸರ್ಕಾರ ಈಗಾಗಲೇ ಕಾಮಗಾರಿಗೆ ಟೆಂಡರ್ ಕರೆದು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದು ಕೇಂದ್ರ ಸರ್ಕಾರ ಅನುಮತಿ ನೀಡಿದ

ತಕ್ಷಣ ಕಾಮಗಾರಿಯನ್ನು ಪ್ರಾರಂಭಿಸುತ್ತೇವೆ ಹಾಗೂ ನವಲಗುಂದ ಕ್ಷೇತ್ರಕ್ಕೆ ಕಾರ್ಮಿಕ ಶ್ರಮಿಕ ವಸತಿ ಶಾಲೆ ಹಾಗೂ ಅಣ್ಣಿಗೇರಿ ನಗರಕ್ಕೆ ಒಳಚರಂಡಿ ಯೋಜನೆಗೆ 124 ಕೋಟಿ, ಕಿತ್ತೂರು ಕೆರೆ ಅಭಿವೃದ್ಧಿ ಪಡೆಸಲು 10 ಕೋಟಿ ಅನುದಾನ ಘೋಷಣೆ ಮಾಡಿದ್ದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನವಲಗುಂದ ವಿಧಾನಸಭಾ ಕ್ಷೇತ್ರದ ಶಾಸಕ ಎನ್.ಎಚ್. ಕೋನರಡ್ಡಿ ಅಭಿನಂದಿಸಿದರು.

ಅವರು ಇಂದು 2026-27 ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಕಾಮಗಾರಿಗಳಿಗೆ ಅನುದಾನ ಘೋಷಿಸಿದಬಗ್ಗೆಪತ್ರಿಕಾಪ್ರಕಟಣೆಯಲ್ಲಿ ತಿಳಿಸಿದ ಅವರು, ಬಹುದಿನದ ಬೇಡಿಕೆಯಾದ ಮಹದಾಯಿ ಕಣಿವೆಯ ಕಳಸಾ-ಬಂಡೂರಿ ನಾಲಾ ಯೋಜನೆಯಡಿ ಅರಣ್ಯ ತಿಳುವಳಿ ಪಡೆಯಲು ರಾಜ್ಯ ಸರ್ಕಾರವು ಕೇಂದ್ರ ಪರಿಸರ ಸಚಿವಾಲಯದ ಮತ್ತು ರಾಷ್ಟ್ರೀಯ ವನ್ಯಜೀವಿ ಮಂಡಳಿಯಲ್ಲಿ 2 ವರ್ಷಗಳಿಂದ ನಿರಂತರ ಪ್ರಯತ್ನಿಸಿದ್ದರೂ ಈವರೆಗೆ ತಿರುವಳಿ ಅನುಮತಿ ಲಭಿಸಿರುವದಿಲ್ಲ. ಈ ಯೋಜನೆಗಳಿಗೆ ರಾಜ್ಯ ಸರ್ಕಾರ ಈಗಾಗಲೇ ಗುತ್ತಿಗೆ ವಹಿಸಲಾಗಿದ್ದು ಕೇಂದ್ರ ಸರ್ಕಾರ ತಿರುವಳಿ

ಅನುಮತಿ ದೊರೆತಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲು ರಾಜ್ಯ ಸರ್ಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಹೇಳಿದರು ಹುಬ್ಬಳ್ಳಿಯಲ್ಲಿ ಕಟ್ಟಡ ಮತ್ತು ಇತರೆ ಕಾರ್ಮಿಕರ ಮಕ್ಕಳಿಗೆ ವೃತ್ತಿ ಬುನಾದಿ ಹಾಗೂ ಉನ್ನತಿ ಕೌಶಲ್ಯ ತರಬೇತಿಯನ್ನು ನೀಡಲು ಅಕಾಡೆಮಿಯನ್ನು 200 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಧಾರವಾಡ

ವಿದ್ಯಾವರ್ಧಕ ಸಂಘಕ್ಕೆ 2 ಕೋಟಿ ಅನುದಾನ, ಹುಬ್ಬಳ್ಳಿಯಲ್ಲಿ ಹಜ್ ಭವನ, ರೈತರಿಗೆ ಹೊಸ ಯೋಜನೆಗಳು, ಆರೋಗ್ಯ, ಶಿಕ್ಷಣ, ರಸ್ತೆ ಅಭಿವೃದ್ಧಿ, ವಿವಿಧ ಕಡೆ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳು ಎಲ್ಲ ಇಲಾಖಾಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆಯೋಗದಲ್ಲಿ ಘೋಷಿಸಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ 17ನೇ ಬಜೆಟ್ ಮಂಡಿಸುವ ಮೂಲಕ ಇತಿಹಾಸದಲ್ಲಿ ಉಳಿಯುವಂತೆ 2026-27 ನೇ ಆಯವ್ಯಯವು ಸರ್ವರಿಗೂ ಸಮಬಾಳು ಸಮಪಾಲು ನೀಡಿದ್ದಾರೆ ಎಂದು ಕೋನರಡ್ಡಿ ಸ್ವಾಗತಿಸಿದ್ದಾರೆ.

ಯುಪಿಎಸ್ಸಿ ಪರೀಕ್ಷೆ: ಸಮುತ್ಕರ್ಷದ 13 ಅಭ್ಯರ್ಥಿಗಳು ತೇರ್ಗಡೆ

ಹುಬ್ಬಳ್ಳಿ: ಸಮುತ್ಕರ್ಷ ಐಎಎಸ್ ಅಕಾಡೆಮಿ ಕರ್ನಾಟಕ ಮತ್ತು ದೆಹಲಿಯ ಸಂಕಲ್ಪ ಐಎಎಸ್ ಅಕಾಡೆಮಿ ಸಹಯೋಗದೊಂದಿಗೆ 2025-26ರ ಸಾಲಿನ ಯುಪಿಎಸ್ಸಿ ಪರೀಕ್ಷೆಯಲ್ಲಿ ಸಮುತ್ಕರ್ಷದ 13 ಜನ ಅಭ್ಯರ್ಥಿಗಳು ತೇರ್ಗಡೆಯಾಗಿದ್ದಾರೆ.

ಜನವರಿನಲ್ಲಿ ನಡೆದ ಸಮುತ್ಕರ್ಷದ ಮಾದರಿ ಸಂದರ್ಶನ ಕಾರ್ಯಕ್ರಮದಲ್ಲಿ 22ಕ್ಕೂ ಹೆಚ್ಚು ಜನ ಅಭ್ಯರ್ಥಿಗಳು ಸಂದರ್ಶನದಲ್ಲಿ ಪಾಲ್ಗೊಂಡಿದ್ದರು. ಅದರಲ್ಲಿ 13 ಜನ ಅಭ್ಯರ್ಥಿಗಳುತೇರ್ಗಡೆಯಾಗಿರುವದುಸಂತಸದ ಸಂಗತಿ. ಹಿರಿಯ ಅಧಿಕಾರಿಗಳನ್ನೊಳಗೊಂಡ ತಂಡದಿಂದ ಮಾದರಿ ಸಂದರ್ಶನ ಆಯೋಜಿಸಲಾಗಿತ್ತು.

ಕಿರಣ ಕಾಮತೆ(ಎಐಆರ್-53), ಸಂದೀಪ್ ಬಾಡದ(ಎಐಆರ್-82), ಮನೋಜ ಜಿ.(ಎಐಆರ್ 389), ವರುಣ ಗೌಡ (ಎಐಆರ್ -462), ವಿಶಾಖಾ ಕದಮ್ (ಎಐಆರ್-504), ಮುತ್ತೇಶ್ ಗೌಡ ಎ ಎಸ್ (ಎಐಆರ್- 622), ಸಾಗರ ಎ(ಎಐಆರ್--641), ಚಂದನ ವೈ (ಎಐಆರ್-661),ಬಸವರಾಜ ಜವಳಿ (ಎಐಆರ್-664), ಸೌರಭ ಕುಮಾರ್ (ಎಐಆರ್- 689) ಪ್ರವೀಣ ಎಚ್ ಟಿ(ಎಐಆರ್ -720),ಬಸವರಾಜ ಎಂ ಪಾಟೀಲ (ಎಐಆರ್ -739) ಚಂದ್ರಶೇಖರ್(ಎಐಆರ್-880) ರ್‍ಯಾಂಕ್ ಪಡೆದು ಸಾಧನೆ ಮಾಡಿದ್ದಾರೆ.

ಎಲ್ಲ ಸಾಧಕರಿಗೆ ಟ್ರಸ್ಟ್‌ನ ಅಧ್ಯಕ್ಷ ಅಶೋಕ ಪಾಟೀಲ ಆತ್ನೂರ , ಎಲ್ಲ ಪದಾಧಿಕಾರಿಗಳು ಶುಭಾಶಯಗಳನ್ನು ಕೋರಿದ್ದಾರೆ ಎಂದು ಟ್ರಸ್ಟ್‌ನ ಕಾರ್ಯದರ್ಶಿ ಅನ್ನಪೂರ್ಣ ಹಂಪಿಹೊಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಜೆಟ್‌ನಲ್ಲಿ ಮಾಲಗಾರ ಸಮಾಜ ನಿರ್ಲಕ್ಷ್ಯ: ಆಕ್ರೋಶ

ಮುಗಳಖೋಡ: ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಮಾಳಿ-ಮಾಲಗಾರ ಸಮಾಜದ ನಿಗಮಘೋಷಣೆಮಾಡಿತ್ತು. ಆದರೆ, ಸಮರ್ಪಕ ಅನುದಾನ ನೀಡಿರಲಿಲ್ಲ. ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಸೇರಿದಂತೆ ಎಲ್ಲ ಶಾಸಕರು, ಸಚಿವರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಕೂಡ ಬಜೆಟ್‌ನಲ್ಲಿ ನಿಗಮ ಸ್ಥಾಪನೆಯಾಗಿಲ್ಲ ಎಂದು ಮಾಳಿ-ಮಾಲಗಾರ ಸಮಾಜ ನಿಯೋಗದ ಅಧ್ಯಕ್ಷ ಡಾ.ಸಿ.ಬಿ.ಕುಲಿಗೋಡ ಹಾಗೂ ಸಮಾಜದ ಅಧ್ಯಕ್ಷ ಕಾಡು ಮಾಳಿ





ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಅವರು ಚನ್ನಬಸವೇಶ್ವರ ವಿದ್ಯಾವರ್ಧಕ ಸಂಘದ ಸಾಯಿ ಮಂದಿರದ ಆವರಣದಲ್ಲಿ ನಡೆದ ಮಾಳಿ ಮಾಲಗಾರ ಸಮಾಜದ ಸಭೆಯಲ್ಲಿ ಮಾತನಾಡಿ, ಶೇ.80ರಷ್ಟು ಮಾಳಿ-ಮಾಲಗಾರ ಸಮಾಜದ ಜನ ಉತ್ತರ ಕರ್ನಾಟಕದ ಭಾಗದಲ್ಲಿದ್ದು ಅವರು ಶ್ರೀಮಂತರಲ್ಲ. ಜೀವನೋಪಾಯಕ್ಕಾಗಿ ವಿವಿಧ ಹಣ್ಣು ಹಂಪಲು ತರಕಾರಿಗಳನ್ನು ಮಾರಿಕೊಂಡು ಸಣ್ಣ ಪುಟ್ಟ ಉದ್ಯೋಗಳನ್ನು ಮಾಡಿ ತಮ್ಮ ಜೀವನ ನಡೆಸುತ್ತಿರುವ ಇಂತಹ ಸಮಾಜಕ್ಕೆ ಸಿದ್ದರಾಮಯ್ಯನವರ ಸರ್ಕಾರ ಅನ್ಯಾಯ ಮಾಡಿದೆ ಎಂದರು.

ಈ ಹಿಂದಿನ ಬಜೆಟ್‌ನಲ್ಲಿ ಮಾಳಿ ಸಮಾಜಕ್ಕಿಂತ ಸಣ್ಣ ಹಾಗೂ ದೊಡ್ಡ ಸಮಾಜಕ್ಕೆ ನಿಗಮ ಘೋಷಣೆ ಮಾಡುವುದಲ್ಲದೆ, ಸರ್ಕಾರದಲ್ಲಿ ಶಾಸಕರು ಸಚಿವರಿದ್ದ ಸಮಾಜಕ್ಕೆ ಎಲ್ಲ ರೀತಿಯ ಬೇಡಿಕೆಗಳನ್ನು ಈಡೇರಿಸಿರುವ ಈ ಸರ್ಕಾರ ನಮ್ಮ ಸಮಾಜದ ಸದಸ್ಯರು ಇಲ್ಲವೆಂಬ ಕಾರಣಕ್ಕಾಗಿ ನಮ್ಮನ್ನು ನಿರ್ಲಕ್ಷಿಸುತ್ತಿದ್ದಿರಾ? ನಮ್ಮದು ಕೂಡಾ ದೊಡ್ಡ ಪ್ರಮಾಣದ ಸಮಾಜ ಇದೇ ಬರುವ ದಿನಗಳಲ್ಲಿ ಸಮಾಜದ ಒಗ್ಗಟ್ಟು ಪ್ರದರ್ಶಿಸುತ್ತೇವೆ ಎಂದು ಕಿಡಿಕಾರಿದರು.

ನಮ್ಮ ಬೇಡಿಕೆ ಈಡೇರಿಸಿ ನಿಗಮ ಸ್ಥಾಪನೆ ಮಾಡಬೇಕು. ಇಲ್ಲದಿದ್ದರೆ ಮಾಳಿ ಮಾಲಗಾರ ಸಮಾಜ ಬರುವ ದಿನಗಳಲ್ಲಿ ಉಗ್ರವಾದ ಹೋರಾಟ ಕೈಗೊಳ್ಳುವುದು. ಅಲ್ಲದೆ, ಬರುವ ಸ್ಥಳೀಯ ಚುನಾವಣೆಯಲ್ಲಿ ತಕ್ಕಪಾಠ ಕಲಿಸಲಾಗುವುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಸಮಾಜದ ಅನೇಕ ಮುಖಂಡರು ಹಿರಿಯರು ಇದ್ದರು.

ಯೋಜನೆ ಶಾಶ್ವತವಾಗಿ ಕೈಬಿಡಲು ಶ್ರೀಗಳ ಮನವಿ

ಬಂಗಾರಮಕ್ಕಿ: 10 ಸಾವಿರ ಕೋಟಿ ವೆಚ್ಚದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಪ್ರಸ್ತಾವನೆ ತಾಂತ್ರಿಕ ಅರ್ಹತೆ, ಪರಿಸರ ಸುಸ್ಥಿರತೆ ಹಾಗೂ ಸಾರ್ವಜನಿಕ ಹಿತಾಸಕ್ತಿ ಹೊಂದಿಲ್ಲ ಎಂಬ ಕಾರಣ ನೀಡಿ ಕೇಂದ್ರದ ಅರಣ್ಯ ಹಾಗೂ ಪರಿಸರ ಸಚಿವಾಲಯದ ತಜ್ಞರ ತಂಡ ಯೋಜನೆಗೆ ಅನುಮತಿ ನೀಡದಂತೆ ಶಿಫಾರಸು ಮಾಡಿರುವುದು ನಿಜಕ್ಕೂ ಶ್ಲಾಘನೀಯ ಬೆಳವಣಿಗೆ ಎಂದು ಬಂಗಾರಮಕ್ಕಿ ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಮಾರುತಿ ಗುರೂಜಿ ಹೇಳಿದ್ದಾರೆ.

> ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಸ್ಥಗಿತಗೊಳಿಸಲು ಶಿಫಾರಸು

ಈ ಯೋಜನೆಯ ವಿರುದ್ಧ ಸ್ಥಳೀಯರು, ಪರಿಸರವಾದಿಗಳು ನಡೆಸಿದ ಹೋರಾಟಕ್ಕೆ ಜಯ ಸಿಕ್ಕಿದೆ. ಪಶ್ಚಿಮ ಘಟ್ಟದ ಹಸಿರು ಮತ್ತು ಜೀವವೈವಿಧ್ಯವನ್ನು ಉಳಿಸಿಕೊಳ್ಳಲು ನಡೆಸಿದ ಹೋರಾಟಕ್ಕೆ ಸರ್ಕಾರ ಮಣಿದಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಈ ಯೋಜನೆಯನ್ನು ನಿಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೆವು. ಕೇಂದ್ರ ಸಚಿವರಾದ ಭೂಪೇಂದ್ರ ಯಾದವ್ ತಜ್ಞರ ತಂಡವನ್ನು ನೇಮಿಸಿದ್ದರು. ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸದಸ್ಯರಾದ ಡಾ.ಎಚ್.ಎಸ್.ಸಿಂಗ್, ಪ್ರೊ.ರಾಮನ್ ಸುಕುಮಾರನ್ ಹಾಗೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಹಾನಿರ್ದೇಶಕ ಶಿವಕುಮಾರ್ ಅವರನ್ನು ಒಳಗೊಂಡ ತಜ್ಞರ ತಂಡ ಮೂರು ದಿನಗಳ ಕಾಲ ಗೇರುಸೊಪ್ಪ, ಜೋಗದ ವ್ಯಾಪ್ತಿಯಲ್ಲಿ ಸ್ಥಳ ಪರಿಶೀಲನೆ ಮಾಡಿ, ಮಾಹಿತಿ ಸಂಗ್ರಹಿಸಿ, ವರದಿ ಸಲ್ಲಿಸಿದ್ದರು. ಈ ವರದಿ ನಮ್ಮ ಪರಿಸರವನ್ನ ಉಳಿಸುವುದಕ್ಕೆ ಕಾರಣವಾಗಿದೆ ಎಂದ ತಪ್ಪಾಗದು ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನದಿಗಳ ಅವನತಿ, ವನ್ಯಜೀವಿಗಳಿಗೆ ನಿರಂತರವಾಗಿ ಆಗುವ ತೊಂದರೆ, ಕಾಡಿನ ನಾಶ ಸೇರಿದಂತೆ 14 ಅಂಶಗಳನ್ನು ವರದಿಯಲ್ಲಿ ವಿವರಿಸಿ, ಯೋಜನೆಯನ್ನು ನಿಲ್ಲಿಸುವುದಕ್ಕೆ ಶಿಫಾರಸು ಮಾಡಿದ್ದಾರೆ. ಇದನ್ನು ರಾಜ್ಯ ಸರ್ಕಾರ ಈ ಯೋಜನೆಯನ್ನು ಶಾಶ್ವತವಾಗಿ ಕೈಬಿಡಬೇಕು ಎಂದು ಮನವಿ ಮಾಡುವುದರ ಜೊತೆಗೆ, ತಜ್ಞರ ಸಮಿತಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

ಬಟ್ಟೆ ಅಂಗಡಿಗೆ ಬೆಂಕಿ: ಸೀರೆಗಳು ಬೆಂಕಿಗಾಹುತಿ

ಕಲಬುರಗಿ: ನಗರದಲ್ಲಿನ ಸೂಪರ್ ಮಾರ್ಕೆಟ್ ಪ್ರದೇಶದಲ್ಲಿರುವ ಬಟ್ಟೆ ಅಂಗಡಿಗೆ ತಡರಾತ್ರಿ ಬೆಂಕಿ ಕಾಣಿಸಿಕೊಂಡು ಅಪಾರ ಪ್ರಮಾಣದ ಸೀರೆಗಳು ಸೇರಿದಂತೆ ವಿವಿಧ ಬಟ್ಟೆಗಳು ಬೆಂಕಿಗಾಹುತಿಯಾಗಿರುವ ಘಟನೆ ನಡೆದಿದೆ.

ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿರಬಹುದೆಂಬ ಶಂಕೆ ವ್ಯಕ್ತವಾಗಿದ್ದು, ಕ್ಷಣಾರ್ಧದಲ್ಲಿ ಇಡೀ ಅಂಗಡಿಯನ್ನು ಬೆಂಕಿ ಆವರಿಸಿತ್ತು. ಸ್ಥಳೀಯರು ಗಮನಿಸಿದ ತಕ್ಷಣ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದರು.

ಮಾಹಿತಿ ತಿಳಿದ ಕೂಡಲೇ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಹರಸಾಹಸ ಪಟ್ಟು ಕೊನೆಗೆ ಬೆಂಕಿಯನ್ನು ನಿಯಂತ್ರಣಕ್ಕೆ ತಂದರು. ಘಟನೆಯಲ್ಲಿ ಅಂಗಡಿಗೆ ದೊಡ್ಡ ಪ್ರಮಾಣದ ನಷ್ಟ ಸಂಭವಿಸಿರುವುದಾಗಿ ತಿಳಿದುಬಂದಿದೆ. ಈ ಘಟನೆ ಬ್ರಹ್ಮಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ.

ಸಿಂಗಲ್ಸ್ ವಿಭಾಗದಲ್ಲಿ ಅಡ್ಕರ್, ರೈನಾ ಫೈನಲ್ ಪ್ರವೇಶ

ಕಲಬುರಗಿ: ಐಟಿಎಫ್ ಡಬ್ಲ್ಯು 35 ಮಹಿಳಾ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಪಂದ್ಯದಲ್ಲಿ ಶನಿವಾರ ಭಾರತದ 2ನೇ ಶ್ರೇಯಾಂಕಿತ ವೈಷ್ಣವಿ ಅಡ್ಕರ್, ಅಂಕಿತಾ ರೈನಾ ಜೋಡಿ ಭರ್ಜರಿ ಆಟವಾಡಿ, ಐಟಿಎಫ್ ಡಬ್ಲ್ಯೂ 35 ಮಹಿಳಾ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್‌ನ ಫೈನಲ್ ಪಂದ್ಯದಲ್ಲಿ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡಿದ್ದಾರೆ.



ನಗರದ ಚಂದ್ರಶೇಖರ್ ಪಾಟೀಲ್ ಕ್ರೀಡಾಂಗಣದಲ್ಲಿ ಶನಿವಾರ 2ನೇ ಶ್ರೇಯಾಂಕಿತ ವೈಷ್ಣವಿ ಅಡ್ಕರ್, ಮತ್ತು ಅಂಕಿತಾ ರೈನಾ ಜೋಡಿ ಡಬಲ್ಸ್ ಫೈನಲ್‌ನಲ್ಲಿ ಭಾರತೀಯ ಇನ್ನೊಂದು ಜೋಡಿ ಆಕಾಂಕ್ಷಾ ದಿಲೀಪ್ ನಿಟ್ಟೂರ ಮತ್ತು ಸೋಹಾ ಸಾದಿಕ್ ಅವರನ್ನು 6-2, 6-2 ಸೆಟ್‌ಗಳಿಂದ ಸೋಲಿಸಿ ಟ್ರೋಫಿಗೆ ಮುತ್ತಿಟ್ಟರು. ಜೊತೆಗೆ 35ಡಬ್ಲ್ಯುಟಿಎ ಶ್ರೇಯಾಂಕ ಅಂಕಗಳು ಮತ್ತು 1,762 ಡಾಲರ್ ಮೊತ್ತ ತಮ್ಮದಾಗಿಸಿಕೊಂಡರು. ರನ್ನರ್ ಅಪ್ ಆಕಾಂಕ್ಷಾ ದಿಲೀಪ್ ನಿಟ್ಟೂರ ಮತ್ತು ಸಾದಿಕ್ 23 ಅಂಕ ಮತ್ತು 895 ಡಾಲರ್ ಮೊತ್ತಕ್ಕೆ ಸೀಮಿತರಾದರು.

ಇದಕ್ಕೂ ಮೊದಲು ಕೋರ್ಟ್ 2 ರಲ್ಲಿ ನಡೆದ ವೈಷ್ಣವಿ ಅಡ್ಕರ್ ನೆದರ್ಲ್ಯಾಂಡ್ಸ್ ಅಗ್ರ ಶ್ರೇಯಾಂಕಿತ ಜಾಸ್ಮಿನ್ ಗಿಂಬ್ರೆರೆ ಅವರನ್ನು 6-3, 6-2 ಸೆಟ್ ಗಳಿಂದ ಮಣಿಸಿ ಸಿಂಗಲ್ಸ್ ಫೈನಲ್ ಪ್ರವೇಶಿಸಿದರು. ಆರಂಭದಲ್ಲಿ ಇಬ್ಬರೂ ಆಟಗಾರರು ಆರಾಮವಾಗಿ ಆಟವಾಡಿದ ನಂತರ ಗಿಂಬ್ರೆರೆ ಅವರ ಒಂದೆರಡು ಬಲವಂತದ ದೋಷಗಳು ಅಡ್ಕರ್ ಗಮನಿಸಿ ಸೆಟ್ ಬಿಗಿಯಾಗಿ ಉಳಿಸಿಕೊಂಡು, ಸಿಂಗಲ್ಸ್ ಫೈನಲ್‌ಗೆ ಲಗ್ಗೆಯಿಟ್ಟರು.

ಕೋರ್ಟ್ 2ರಲ್ಲಿ ನಡೆದ 2ನೇ ಸೆಮಿಫೈನಲ್‌ನಲ್ಲಿ 8ನೇ ಶ್ರೇಯಾಂಕಿತ ಅಂಕಿತಾ ರೈನಾ 4-6, 6-4, 6-2 ಸೆಟ್ ಗಳಿಂದ ಥಾಯ್ಲೆಂಡಿನ ಆಟಗಾರ್ತಿ ಥಾಸಪೋರ್ನ್ ನಾಕ್ಲೋಗೆ ಮಣಿಸಿ ಫೈನಲ್ ಪ್ರವೇಶಿಸಿದರು. ಅಂತಿಮ ಹಂತಗಳಲ್ಲಿ ಆಕ್ರಮಣಕಾರಿ ನೆಟ್ ವಿಧಾನ ಮತ್ತು ಬಲವಾದ ಫಿನಿಶಿಂಗ್ ಬಳಸಿ, ಬೇಸ್ ಲೈನ್ ಆಟದೊಂದಿಗೆ ತಮ್ಮ ಬಿಗಿಯಾದ ಹೋರಾಟದಿಂದ ಪಂದ್ಯವನ್ನು ಗೆಲ್ಲುವ ಮೂಲಕ ಫೈನಲ್ ಪ್ರವೇಶ ಮಾಡಿದರು.

ಡಬಲ್ಸ್ ಫೈನಲ್ ಪ್ರಶಸ್ತಿ ಸಮಾರಂಭದಲ್ಲಿ ಸಚಿವ, ಕೆಎಸ್‌ಎಲ್ಟಿ ಉಪಾಧ್ಯಕ್ಷ ಪ್ರಿಯಾಂಕ್ ಖರ್ಗೆ ಸೇರಿದಂತೆ ಗಣ್ಯರು ವಿನ್ನರ್ ಹಾಗೂ ರನ್ನರ್ ಅಪ್ ಆಟಗಾರ್ತಿಯರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಕೆಎಸ್‌ಎಲ್‌ಟಿಯ ಜಂಟಿ ಕಾರ್ಯದರ್ಶಿ ಸುನೀಲ್ ಯಜಮಾನ, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್,ಸಿಇಒ ಭಂವರ ಸಿಂಗ್ ಮೀನಾ,ನಗರ ಕಮಿಷನರ್ ಡಾ.ಶರಣಪ್ಪ ಎಸ್ ಡಿ,ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸುಲು, ಪಾಲಿಕೆ ಆಯುಕ್ತ ಅವಿನಾಶ್ ಶಿಂಧೆ, ಪಾಲಿಕೆ ಮೇಯರ್ ವರ್ಷಾ ರಾಜೀವ್ ಜಾನೆ,ಸಮದ್ ಪಟೇಲ್, ಸುರೇಂದ್ರ ಕುಮಾರ್, ಅಂಪೈರ್ ಸಂತೋಷ ವೆಂಕಟರಮಣ, ಅಬ್ದುಲ್ ಅಜೀಂ, ಸಂಗಮೇಶ ಎಡಿ, ಪ್ರವೀಣ್ ಪುಣೆ ಸೇರಿದಂತೆ ಗ್ರೌಂಡ್ ಬಾಯ್ಸ್ ಇದ್ದರು.

ಪ್ರೇಕ್ಷಕರತ್ತ ಸೈನ್ ಬಾಲ್

ವೈಷ್ಣವಿ ಅಡ್ಕರ್-ಅಂಕಿತಾ ರೈನಾ ಆಟೋಗ್ರಾಫ್ ಹೊಂದಿರುವ ಚೆಂಡುಗಳನ್ನು ಪ್ರೇಕ್ಷಕರತ್ತ ಬಿಸಾಡಿದರು. ಸಾಕಷ್ಟು ಜನರು ಚೆಂಡುಗಳನ್ನು ಕ್ಯಾಚ್ ಹಿಡಿದು ಖುಷಿ ಪಟ್ಟರು. ಯುವತಿಯೊಬ್ಬಳು ಅಂಕಿತಾ ರೈನಾಗೆ ಸ್ಥಳದಲ್ಲೇ ಕೈಯಿಂದ ಬಿಡಿಸಿದ ಪೇಟಿಂಗ್ ನೀಡಿ ಖುಷಿ ಹಂಚಿಕೊಂಡರು. ಪ್ರಶಸ್ತಿಯ ಬಳಿಕ ವಿನ್ನರ್ ತಂಡದೊಂದಿಗೆ ಹಲವರು ಫೋಟೋ ತೆಗೆಸಿಕೊಂಡ ಸಂತಸಪಟ್ಟರು.

ಬೆಳಗಾವಿ ವಿಮಾನ ನಿಲ್ದಾಣ ರೆಡ್ ಝೋನ್ ಘೋಷಣೆ

ಬೆಳಗಾವಿ: ಇಸ್ರೇಲ್, ಇರಾನ್, ಅಮೆರಿಕ ಯುದ್ಧದಿಂದಾಗಿ ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣವನ್ನು 'ರೆಡ್ ಝೋನ್' ಎಂದು ಘೋಷಿಸಲಾಗಿದೆ.

ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದ ಮಾರ್ಗಸೂಚಿಯಂತೆ ಈ ಕ್ರಮ ಕೈಗೊಳ್ಳಲಾಗಿದೆ. ಸಾಂಬ್ರಾ ವಿಮಾನ ನಿಲ್ದಾಣದ ಸುತ್ತಮುತ್ತ 8 ಕಿಲೋಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಡ್ರೋನ್ ಹಾಗೂ ಅನ್ಮ್ಯಾನ್ಸ್ ಏರಿಯಲ್ ವಾಹನಗಳ ಹಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ರೆಡ್ ಝೋನ್ ಮತ್ತು ಯೆಲ್ಲೋ ಝೋನ್ ವ್ಯಾಪ್ತಿಯಲ್ಲಿ ಅನುಮತಿ ಇಲ್ಲದೆ ಡ್ರೋನ್ ಹಾರಾಟ ನಡೆಸುವುದು ಕಾನೂನುಬಾಹಿರ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.



ಇದಕ್ಕೆ ಸಂಬಂಧ ಬೆಳಗಾವಿ ಪೊಲೀಸ್ ಕಮಿಷನರ್ ಭೂಷಣ್ ಬೊರಸೆ ಪತ್ರಿಕಾ ಪ್ರಕಟಣೆ ಹೊರಡಿಸಿ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದಾರೆ. ವಿಮಾನ ನಿಲ್ದಾಣದ ಭದ್ರತೆ ದೃಷ್ಟಿಯಿಂದ ಈ ಕ್ರಮ ಅತ್ಯಾವಶ್ಯಕವಾಗಿದ್ದು, ಆದೇಶ ಉಲ್ಲಂಘನೆ ಮಾಡುವವರ ವಿರುದ್ಧ ಕಾನೂನು ಕಠಿಣ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಪ್ರಸ್ತುತ ಜಾಗತಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಾಗಿದ್ದು, ಸಾರ್ವಜನಿಕರು ಸಹಕರಿಸುವಂತೆ ಪೊಲೀಸ್ ಇಲಾಖೆ ಮನವಿ ಮಾಡಿದೆ.

ಉತ್ತರ ಪ್ರದೇಶದ ಶಿಕ್ಷಣ ಪದ್ಧತಿ ದೇಶಕ್ಕೆ ಮಾದರಿ

ಲಖ್ನೋ: ಉತ್ತರ ಪ್ರದೇಶದಲ್ಲಿ ಕಳೆದ ಏಳು ವರ್ಷಗಳಲ್ಲಿ ಶಿಕ್ಷಣ, ಉನ್ನತ ಶಿಕ್ಷಣ, ಅಂಗನವಾಡಿ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಮಹತ್ವದ ಪರಿವರ್ತನೆ ಕಂಡುಬಂದಿದ್ದು, ಸಮಗ್ರ ದೃಷ್ಟಿಯೊಂದಿಗೆ ರೂಪಿಸಿದ ಆಡಳಿತ ಕ್ರಮಗಳು ರಾಜ್ಯವನ್ನು ರಾಷ್ಟ್ರಮಟ್ಟದಲ್ಲಿ ಗಮನಾರ್ಹ ಸ್ಥಾನಕ್ಕೆ ಕೊಂಡೊಯ್ದಿವೆ ಎಂದು ರಾಜ್ಯಪಾಲರಾದ ಆನಂದಿ ಬೆನ್ ಪಟೇಲ್ ಅವರು ಹೇಳಿದರು.

ಕರ್ನಾಟಕ ಮತ್ತು ತ್ರಿಪುರ ಪತ್ರಕರ್ತರ ನಿಯೋಗಗಳು ಉತ್ತರ ಪ್ರದೇಶದ ಜನಭವನಕ್ಕೆ ಭೇಟಿ ನೀಡಿ ರಾಜ್ಯಪಾಲರೊಂದಿಗೆ ನಡೆಸಿದ ಸಂವಾದದಲ್ಲಿ, ಶಿಕ್ಷಣ ಕ್ಷೇತ್ರದ ಸುಧಾರಣೆಗಳು, ವಿಶ್ವವಿದ್ಯಾಲಯಗಳ ಗುಣಮಟ್ಟ ಹೆಚ್ಚಿಸುವ ಕ್ರಮಗಳು, ಮಹಿಳಾ ಸಬಲೀಕರಣ, ಅಂಗನವಾಡಿ ಅಭಿವೃದ್ಧಿ, ಆರೋಗ್ಯ ಅಭಿಯಾನಗಳು ಹಾಗೂ ಸಾಮಾಜಿಕ ಪಾಲ್ಗೊಳ್ಳುವಿಕೆ ಕುರಿತು ರಾಜ್ಯಪಾಲರು ಹಾಗೂ ಅಧಿಕಾರಿಗಳು ವಿವರಿಸಿದರು. ಈ ವೇಳೆ ಮಾತನಾಡಿದ ರಾಜ್ಯಪಾಲರಾದ ಆನಂದಿ ಬೆನ್ ಪಟೇಲ್, ಶಿಕ್ಷಣ ವ್ಯವಸ್ಥೆಯನ್ನು 'ಕೆಜಿಯಿಂದ ಪಿಜಿವರೆಗೆ' ಒಂದೇ ನಿರಂತರ ಪ್ರಕ್ರಿಯೆಯಾಗಿ ನೋಡಬೇಕು ಎಂದು ಹೇಳಿದರು.

ಅಂಗನವಾಡಿಗೆ ಬರುವ ಮೂರು ವರ್ಷದ ಮಗು ಭವಿಷ್ಯದಲ್ಲಿ ವಿಶ್ವವಿದ್ಯಾಲಯ ತಲುಪುವವರೆಗೂ ಅದರ ಶಿಕ್ಷಣದ ಪಥವನ್ನು ಸಮಗ್ರವಾಗಿ ರೂಪಿಸಬೇಕು ಎಂಬುದು ಈ ಮಾದರಿಯ ಮೂಲಭೂತ ಚಿಂತನೆ ಎಂದು ವಿವರಿಸಿದರು. ಗ್ರಾಮಮಟ್ಟದಲ್ಲಿ ಸಮೀಕ್ಷೆ ನಡೆಸಿ, ಮೂರು ವರ್ಷದ ಮಕ್ಕಳನ್ನು ಅಂಗನವಾಡಿಗೆ ಹಾಗೂ ಆರು ವರ್ಷ ಮೇಲ್ಪಟ್ಟ ಮಕ್ಕಳನ್ನು ಶಾಲೆಗೆ ಸೇರಿಸುವ ಕಾರ್ಯ ನಡೆಯುತ್ತಿದೆ. ಉಚಿತ ಪಠ್ಯಪುಸ್ತಕಗಳು, ಸಮವಸ್ತ್ರ ವಿತರಣೆ, ಗ್ರಂಥಾಲಯ ನಿರ್ಮಾಣ ಹಾಗೂ ಸಮುದಾಯದ ಪಾಲ್ಗೊಳ್ಳುವಿಕೆಯಿಂದ ಶಾಲಾ ಬಿಡುವಿಕೆ ಪ್ರಮಾಣವನ್ನು ಬಹುತೇಕ ಶೂನ್ಯಕ್ಕೆ ಇಳಿಸಲಾಗಿದೆ ಎಂದು ತಿಳಿಸಿದರು.

ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 2019ರಿಂದ ಗುಣಮಟ್ಟ ಹೆಚ್ಚಿಸುವ ಕ್ರಮಗಳನ್ನು ಕೈಗೊಂಡಿದ್ದು, ವಿಶ್ವವಿದ್ಯಾಲಯಗಳ ಸ್ವಾಟ್ ವಿಶ್ಲೇಷಣೆ, ಮೂಲಸೌಕರ್ಯ ಅಭಿವೃದ್ಧಿ, ಶಿಕ್ಷಕರ ನೇಮಕಾತಿ ಸುಧಾರಣೆ ಹಾಗೂ ಸಂಶೋಧನೆಗೆ ಉತ್ತೇಜನ ನೀಡಲಾಗಿದೆ. ಕೋವಿಡ್ ಅವಧಿಯಲ್ಲೂ ಆನ್‌ಲೈನ್ ಸಭೆಗಳ ಮೂಲಕ ವಿಶ್ವವಿದ್ಯಾಲಯಗಳ ಕಾರ್ಯವನ್ನು ನಿರಂತರವಾಗಿ ಪರಿಶೀಲಿಸಲಾಗಿದೆ.



ಉನ್ನತ ಶಿಕ್ಷಣ ಸಾಧನೆ

- ಒಟ್ಟು ವಿಶ್ವವಿದ್ಯಾಲಯಗಳು: 38
- ನ್ಯಾಕ್ ಎ++ : 9
- ನ್ಯಾಕ್ ಎ+ : 4
- ನ್ಯಾಕ್ ಎ : 5
- ಎನ್‌ಐಆರ್‌ಎಫ್ ಪಟ್ಟಿಯಲ್ಲಿ 11 ಸ್ಥಾನ
- ಪಾರದರ್ಶಕ ನೇಮಕಾತಿ: 1500ಕ್ಕೂ ಹೆಚ್ಚು

ಆರೋಗ್ಯ ಕ್ಷೇತ್ರದಲ್ಲಿ ಕ್ರಮ

ರಾಜ್ಯದಲ್ಲಿ 50 ಸಾವಿರಕ್ಕೂ ಹೆಚ್ಚು ಅಂಗನವಾಡಿ ಕೇಂದ್ರಗಳಿಗೆ ಮಕ್ಕಳ ಕುರ್ಚಿ, ಮೇಜು, ಕಲಿಕಾ ಸಾಮಗ್ರಿ ಒಳಗೊಂಡ ಕಿಟ್‌ಗಳನ್ನು ಸಿಎಸ್‌ಆರ್ ನೆರವಿನಿಂದ ಒದಗಿಸಲಾಗಿದೆ. ಇದರ ಪರಿಣಾಮವಾಗಿ ಅಂಗನವಾಡಿಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಾಗಿದೆ. ಟಿಬಿ ರೋಗಿಗಳನ್ನು ದತ್ತು ಪಡೆಯುವ ನಿಕ್ಷಯ್ ಮಿತ್ರ ಯೋಜನೆ ಹಾಗೂ ಬಾಲಕಿಯರ ಆರೋಗ್ಯಕ್ಕಾಗಿ ಎಚ್‌ಪಿವಿ ಲಸಿಕೆ ಅಭಿಯಾನ ಕೂಡ ರಾಜ್ಯದಲ್ಲಿ ವ್ಯಾಪಕವಾಗಿ ಜಾರಿಯಲ್ಲಿವೆ.

ಮಹಿಳಾ ಸಬಲೀಕರಣಕ್ಕೆ ಒತ್ತು

ಮಹಿಳೆಯರು ಕೃಷಿ, ಪಶುಸಂಗೋಪನೆ, ಹಾಲು ಉತ್ಪಾದನೆ, ಸಣ್ಣ ಉದ್ಯಮಗಳಲ್ಲಿ ಭಾಗವಹಿಸಲು ಪ್ರತ್ಯೇಕ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಮಹಿಳಾ ಸ್ವಸಹಾಯ ಗುಂಪುಗಳಿಗೆ ಕಾರ್ಯಾಗಾರ ಸ್ಥಳ, ಆರ್ಥಿಕ ನೆರವು ಮತ್ತು ಮಾರುಕಟ್ಟೆ ಸಂಪರ್ಕ ಕಲ್ಪಿಸುವ ಮೂಲಕ ಅವರ ಆದಾಯವನ್ನು ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಎಷ್ಟೇ ಆಧುನಿಕತೆ ಬಂದರೂ ಆಧ್ಯಾತ್ಮಿಕತೆ ಮತ್ತು ಸಂಸ್ಕೃತಿಯನ್ನು ಭಾರತೀಯರು ಮರೆಯದೆ ಮುಂದುವರಿಸುತ್ತಿದ್ದಾರೆ ಎನ್ನುವುದಕ್ಕೆ ಈ ಬ್ರಹ್ಮಕಲಶೋತ್ಸವವೇ ಸಾಕ್ಷಿ
-ಉಜಿರೆ ಜನಾರ್ದನ ದೇವಸ್ಥಾನದಲ್ಲಿ ದಿನೇಶ್ ಗುಂಡೂರಾವ್
-ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ಎಂಬ ಡಿವಿಜಿ ಕಗ್ಗ ನೆನೆಪಾಗುತ್ತೆ.

ದಿನ ಭವಿಷ್ಯ

ಮೇಷ ಅಶಾಂತ ಮನಸ್ಥಿತಿ. ವೃತ್ತಿ ಕ್ಷೇತ್ರದ ಕೆಲವು ಬೆಳವಣಿಗೆಯಿಂದ ಅಸಮಾಧಾನ. ಮನೆ ಸದಸ್ಯರ ಸಂಗದಲ್ಲಿ ನೆಮ್ಮದಿ. ಧನಪ್ರಾಪ್ತಿ.

ವೃಷಭ ಸಣ್ಣ ವಿಷಯಕ್ಕೂ ರೇಗುವ ಸನ್ನಿವೇಶ ಉಂಟಾದೀತು. ತಾಳ್ಮೆ ವಹಿಸಿ. ನಿಮ್ಮ ಕೆಲಸದಲ್ಲಿ ಬೇಕೆಂದೇ ಕೆಲವರು ತಪ್ಪು ಹುಡುಕುವರು.

ಮಿಥುನ ಸಂಗಾತಿಯ ವರ್ತನೆ ಅಸಮಾಧಾನ ಉಂಟು ಮಾಡಬಹುದು. ವಾಗ್ವಾದ ಸಂಭವ. ನಿಮ್ಮಿಂದ ತಾಳ್ಮೆಯ ನಡೆ ಅವಶ್ಯ. ಖರ್ಚು ಹೆಚ್ಚಲಿದೆ.

ಕಟಕ ಸಮಯಕ್ಕೆ ತಕ್ಕಂತೆ ಸೂಕ್ತ ನಿರ್ಧಾರ ತಾಳಿ. ಹಳೆಯ ನಿರ್ಧಾರಕ್ಕೇ ಅಂಟಿಕೊಂಡು ಕೂರದಿರಿ. ಆಪ್ತರಿಂದ ಶುಭ ಸುದ್ದಿ ಕೇಳಿಬಂದೀತು.

ಸಿಂಹ ಅಗತ್ಯಕ್ಕಿಂತ ಹೆಚ್ಚು ಹಣ ಖರ್ಚು ಚಿಂತೆ ತಂದೀತು. ನಿಮ್ಮ ಹಿತೈಷಿಗಳನ್ನು ಅವಗಣನೆ ಮಾಡಬೇಡಿ. ಪ್ರೀತಿಯಲ್ಲಿ ಯಶಸ್ಸು ಸಿಗಲಿದೆ.

ಕನ್ಯಾ ಕೆಲವು ಬೆಳವಣಿಗೆ ನಿರಾಶೆ ತರುವುದು. ಬಂಧುವಿನ ಜತೆ ವಿರಸ. ಯಶಸ್ಸಿನ ದಾರಿಯಲ್ಲಿ ವಿಘ್ನ ತಲೆದೋರಲಿದೆ. ಸಂಯಮವಿರಲಿ.

ತುಲಾ ಸಂಬಂಧಪಡದ ವಿಚಾರದಲ್ಲಿ ನೀವು ಸಿಲುಕುವಿರಿ. ನೆಮ್ಮದಿ ಹಾಳಾದೀತು. ಕೌಟುಂಬಿಕ ಸಹಕಾರ ಪಡೆಯಿರಿ. ಮಕ್ಕಳ ಸಾಧನೆ ತೃಪ್ತಿ.

ವೃಶ್ಚಿಕ ಇತ್ತೀಚಿನ ಕೆಲವು ಬೆಳವಣಿಗೆಗಳ ಕಾರಣದಿಂದ ಧಾರ್ಮಿಕ ಭಾವ ಹೆಚ್ಚಬಹುದು. ಕಷ್ಟ ಮರೆಯಲು ದೇವರ ಮೊರೆ ಹೋಗುವಿರಿ.

ಧನು ನಿಮ್ಮ ಸಾಧನೆಯ ಶ್ರೇಯಸ್ಸು ಇತರರು ಕಸಿದುಕೊಂಡಾರು. ಎಚ್ಚರದಿಂದಿರಿ. ಕೌಟುಂಬಿಕ ಬಿಕ್ಕಟ್ಟು. ಅತಿರೇಕದ ಪ್ರತಿಕ್ರಿಯೆ ತೋರದಿರಿ.

ಮಕರ ವ್ಯವಹಾರದ ಒತ್ತಡ ಮಧ್ಯೆಯೂ ಖುಷಿ ಪಡುವ ಪ್ರಸಂಗ ಉಂಟಾಗಲಿದೆ. ಆರ್ಥಿಕ ಉನ್ನತಿ. ವೈವಾಹಿಕ ಸಂಬಂಧ ಕೂಡಿಬಂದೀತು. ಆರೋಗ್ಯ ವೃದ್ಧಿ.

ಕುಂಭ ಇತರರ ಒಳ್ಳೆಯ ಕೆಲಸ ಶ್ಲಾಘಿಸಿರಿ. ನಿಮ್ಮ ವರ್ತನೆಯಿಂದ ಇತರರ ಮೆಚ್ಚುಗೆ ಗಳಿಸುವಿರಿ. ಕೌಟುಂಬಿಕ ಸಂತೋಷ. ಬಂಧುಗಳ ಭೇಟಿ.

ಮೀನ ಎಲ್ಲರನ್ನು ಕುರುಡಾಗಿ ನಂಬದಿರಿ. ನಿಮ್ಮನ್ನು ವಂಚಿಸಲು ಯತ್ನ ನಡೆಯುತ್ತದೆ. ಪ್ರೀತಿಯ ಅಭಿವ್ಯಕ್ತಿ ಪ್ರತಿಕೂಲ ಫಲಿತಾಂಶ ತಂದೀತು.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 2,9,4,1

ಯುವಜನತೆಗೆ ಸಂಪಾದಕ ಮಹಾಬಲ ಸೀತಾಳಬಾವಿ ಕಿವಿಮಾತು

ಸ್ಪರ್ಧೆ ಸಮಾಜಕ್ಕೆ ಅವಶ್ಯ

ಬೆಂಗಳೂರು: ರಾಷ್ಟ್ರೋತ್ಥಾನದ ಪ್ರಬಂಧ ಸ್ಪರ್ಧೆಗಳು ಅದರದ್ದೇ ಆದ ಮೌಲ್ಯಗಳನು ಒಳಗೊಂಡಿದೆ. ಯುವ ಜನರಿಗಾಗಿ ಏರ್ಪಡಿಸುವ ಈ ರೀತಿಯ ಪ್ರಬಂಧ ಸ್ಪರ್ಧೆಗಳು ಇಂದಿನ ಸಮಾಜಕ್ಕೆ ತುಂಬಾ ಅವಶ್ಯವಾಗಿದೆ ಎಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಸಂಪಾದಕ ಮಹಾಬಲ ಸೀತಾಳಬಾವಿ ಅಭಿಪ್ರಾಯಪಟ್ಟರು.

ಕೆಂಪೇಗೌಡ ನಗರದ ರಾಷ್ಟ್ರೋತ್ಥಾನ ಪರಿಷತ್‌ನ ಕೇಶವಶಿಲ್ಪ ಸಭಾಂಗಣದಲ್ಲಿ ಉತ್ಥಾನ ಮಾಸಪತ್ರಿಕೆಯಿಂದ ಶತಮಾನ ಪೂರೈಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘ : ವಿಚಾರ, ವಿಶೇಷತೆ ಮತ್ತು ಕೊಡುಗೆಗಳು ವಿಷಯದ ಕುರಿತು ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ 2025ರ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉತ್ಥಾನ ಮಾಸಪತ್ರಿಕೆ ಮಾಧ್ಯಮವಲಯದಲ್ಲೂ ಮೌಲ್ಯಕ್ಕಾಗಿ ಹೆಸರುವಾಸಿ. ಯುವಕರಿಗಾಗಿ ಆಯೋಜಿಸಿದ ಪ್ರಬಂಧ ಸ್ಪರ್ಧೆಯ ಮೂಲಕ ಮೌಲ್ಯಗಳನ್ನು ಉಳಿಸುವ ಅವಕಾಶವನ್ನು ಕಲ್ಪಿಸಿದೆ. ಸಮಾಜದಲ್ಲಿ ಮರೆಯಾಗುತ್ತಿರುವ ಮೌಲ್ಯಗಳನ್ನು ತಿಳಿಸಲು ಈ ರೀತಿಯ ಪ್ರಭಂದ ಸ್ಪರ್ಧೆಗಳು ಅವಶ್ಯಕ. ಈ ಕೆಲಸವನ್ನು ಉತ್ಥಾನ ಮಾಸಪತ್ರಿಕೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಎಲ್ಲಾ ಪತ್ರಿಕೆಗಳು ಇಂದು ಮಾರುಕಟ್ಟೆಯ ಮಾರ್ಗದಲ್ಲಿ ನಡೆಯುತ್ತಿವೆ. ಆದರೆ 60 ವರ್ಷಕ್ಕೂ ಹೆಚ್ಚಿನ ಕಾಲ ಉತ್ಥಾನ ಪತ್ರಿಕೆ ತನ್ನ ಮಾರ್ಗವನ್ನು ಬದಲಾಯಿಸಿಲ್ಲ, ಯಾವ ಆಶಯಕ್ಕೆ ಆರಂಭವಾಯಿತೋ ಅದೇ ಆಶಯವನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದೆ. ಸಾಮಾಜಿಕ ಮೌಲ್ಯ, ದೇಶ ಪ್ರೇಮ ಹಾಗೂ ಜೀವನದ ಆದರ್ಶಗಳನ್ನು ಉತ್ಥಾನ ಜನರಿಗೆ ತಲುಪಿಸುತ್ತಿದೆ. ಸಂಸ್ಕೃತಿಯ ತತ್ವ ವನ್ನು ಇನ್ನೂ ಉಳಿಸಿಕೊಂಡಿದೆ. ಆದರೆ ಇದೇ ಸಮಯವನ್ನು ದಾಟಿದ ಹಲವು ಪತ್ರಿಕೆಗಳು ತಮ್ಮ ತತ್ವಗಳನ್ನು ಮರೆಯುತ್ತಿರುವುದು ದುರದೃಷ್ಟಕರ ಎಂದು ವಿಷಾದ ವ್ಯಕ್ತಪಡಿಸಿದರು. ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್ ಮಾತನಾಡಿ, ನಮ್ಮಲ್ಲಿ ಇರುವ ಬರವಣಿಗೆಯ ಪ್ರತಿಭೆಯನ್ನು ಇನ್ನಷ್ಟು ವಿಸ್ತಾರಗೊಳಿಸುವುದು ಪ್ರಬಂಧ ಸ್ಪರ್ಧೆಯ ಮುಖ್ಯ ಉದ್ದೇಶವಾಗಿದೆ ಎಂದರು.



ಹಿಂದು ಎನ್ನುವುದು ಜೀವ ಪದ್ಧತಿ: ರಾಜೇಶ್ ಪದ್ಮಾರ್

ಯಾವ ದೇವರನ್ನು ಪೂಜಿಸಲಾಗುತ್ತದೆ ಎನ್ನುವುದರ ಮೇಲೆ ಹಿಂದುತ್ವ ನಿಂತಿಲ್ಲ. ಭಾರತ ದೇಶದಲ್ಲಿ ಇರುವವರು ಎಲ್ಲರೂ ಹಿಂದೂಗಳೇ. ಹಿಂದೂ ಎನ್ನುವುದು ಒಂದು ಜೀವನದ ದೃಷ್ಟಿಯಾಗಿದೆ, ಜೀವನ ಪದ್ಧತಿಯಾಗಿದೆ. ಜೀವನವನ್ನು ಹೀಗೆ ನಡೆಸುತ್ತೇವೆ ಎನ್ನುವುದೇ ಹಿಂದುತ್ವವಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಾಗದೆ ಸರ್ವವ್ಯಾಪ್ತಿ ಮತ್ತು ಸರ್ವ ಸ್ಪರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಅಖಿಲ ಭಾರತೀಯ ದೃಷ್ಟಿಕೋನವನ್ನು ಸಂಘ ಒಳಗೊಂಡಿದೆ ಎಂದು ರಾಜೇಶ್ ಪದ್ಮಾರ್ ವ್ಯಾಖ್ಯಾನಿಸಿದರು.

ವಿಜೇತರಿಗೆ ಬಹುಮಾನ ವಿತರಣೆ

ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪೂಜಾ ಮಹಾದೇವ ಸಾರವಾಡ ಪ್ರಥಮ ಸ್ಥಾನ, ಬೆಂಗಳೂರಿನ ಮನೋವಿಜ್ಞಾನ ಜ್ಯೋತಿ ನಿವಾಸ ಕಾಲೇಜಿನ ಸಹನಾ ಎಂ ದ್ವಿತೀಯ ಸ್ಥಾನ, ಬೆಳಗಾವಿಯ ಸುಂದರಬಾಯಿ ಬಿ. ಪಾಟೀಲ್ ವುಮೆನ್ಸ್ ಕಾಲೇಜ್ ಆಫ್ ಎಜುಕೇಷನ್‌ನ ಕಾವೇರಿ ಎಂ. ಹೆಗಡೆ ತೃತೀಯ ಸ್ಥಾನ ಪಡೆದಿದ್ದಾಳೆ. ಇದರೊಂದಿಗೆ ಹತ್ತು ಜನ ವಿದ್ಯಾರ್ಥಿಗಳಿಗೆ ಸಮಾದಾನಕರ ಬಹುಮಾನ ನೀಡಲಾಗಿದೆ. ಕಾರ್ಯಕ್ರಮದಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಖಜಾಂಚಿ ಕೆ. ಎಸ್. ನಾರಾಯಣ್ ಉಪಸ್ಥಿತರಿದ್ದರು.

ಇರಾನ್ ಮೇಲೆ ಮಾರಕ ದಾಳಿ: ಡೊನಾಲ್ಡ್ ಟ್ರಂಪ್ ಎಚ್ಚರಿಕೆ

ಪುಟ ೧ ➜ ಅಮೆರಿಕ ಮತ್ತು ಇಸ್ರೇಲ್‌ನ ಭಾರೀ ದಾಳಿಯ ಕಾರಣದಿಂದಲೇ ಇರಾನ್ ಈ ಭರವಸೆ ನೀಡುವಂತಾಗಿದೆ ಎಂದಿದ್ದಾರೆ.

ಇರಾನ್ ಮಧ್ಯಪ್ರಾಚ್ಯದ ಮೇಲೆ ಹಿಡಿತ ಸಾಧಿಸಿ ಅದನ್ನೇ ಆಳಲು ಮುಂದಾಗಿತ್ತು. ಆದರೆ ಇನ್ನು ಅದು ಮಧ್ಯಪೂರ್ವ ದೇಶಗಳನ್ನು ಗೂಂಡಾಗಳಂತೆ ಬೆದರಿಸಲು ಸಾಧ್ಯವಾಗದು. ಇದರ ಬದಲಿಗೆ ಅದೀಗ ಮಧ್ಯಪೂರ್ವದ ಸೋತ ದೇಶವಾಗಿದ್ದು, ಅದು ಶರಣಾಗುವವರೆಗೆ ಅಥವಾ ಸಂಪೂರ್ಣ ಕುಸಿತ ಕಾಣುವವರೆಗೆ ಅನೇಕ ದಶಕಗಳ ಕಾಲ ಹೀಗಿರಬೇಕಾಗುವುದು ಎಂದು ಅಮೆರಿಕದ ರಿಪಬ್ಲಿಕನ್ ಪಕ್ಷದ ನಾಯಕನೂ ಆಗಿರುವ ಟ್ರಂಪ್ ಹೇಳಿದ್ದಾರೆ.

ಷರತ್ತಿಲ್ಲದೆ ಶರಣಾಗಲು ಒತ್ತಾಯ: ಇರಾನ್ ಬೇಷರತ್ತಾಗಿ ಶರಣಾಗಬೇಕೆಂದು ಟ್ರಂಪ್ ಒತ್ತಾಯಿಸಿದ್ದು, ಇದೊಂದೇ ಸಂಘರ್ಷವನ್ನು ಕೊನೆಗೊಳಿಸಲು ಇರುವ ಸ್ವೀಕಾರಾರ್ಹ ದಾರಿ. ಹೊಸ ನಾಯಕತ್ವ ಸ್ಥಾಪನೆಗೆ ಇರಾನ್ ಅವಕಾಶ ಮಾಡಿಕೊಟ್ಟಲ್ಲಿ ಆ ದೇಶದ ಆರ್ಥಿಕತೆ ಅಭಿವೃದ್ಧಿಗೆ ನೆರವಾಗುವುದಾಗಿ ಭರವಸೆ ನೀಡಿದ್ದಾರೆ. ಇರಾನಿನ ಇಸ್ಲಾಮಿಕ್ ರಿಪಬ್ಲಿಕ್ ಶರಣಾದಲ್ಲಿ, ಅಮೆರಿಕ ಮತ್ತು ಅದರ ಮಿತ್ರ ದೇಶಗಳು ಇರಾನನ್ನು ವಿನಾಶದಿಂದ ಮೇಲೆತ್ತಿ ಆರ್ಥಿಕವಾಗಿ ಹಿಂದೆಂದಿಗಿಂತ ಉತ್ತಮ, ಸಶಕ್ತ ದೇಶವನ್ನಾಗಿಸಲು ನೆರವಾಗಲಿವೆ ಎಂದಿದ್ದಾರೆ.

ಇರಾನ್‌ಗೆ ರಷ್ಯಾ ಮಾಹಿತಿ!

ಪುಟ ೧ ➜ ಅಮೆರಿಕದ ಅಧಿಕಾರಿಗಳು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ ಮತ್ತು ಇಂತಹ ಬೆಳವಣಿಗೆಗಳನ್ನು ತಮ್ಮ ಕಾರ್ಯಾಚರಣೆಯ ಯೋಜನೆಗಳಲ್ಲಿ ಪರಿಗಣಿಸುತ್ತಿದ್ದಾರೆ ಎಂದು ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ತಿಳಿಸಿದ್ದಾರೆ.

ರಷ್ಯಾ-ಇರಾನ್ ಸಂಬಂಧ: ಇರಾನ್‌ಗೆ ಗುಪ್ತಚರ ಅಥವಾ ಮಿಲಿಟರಿ ನೆರವು ನೀಡಲಾಗಿದೆಯೇ ಎಂಬ ಬಗ್ಗೆ ಪ್ರತಿಕ್ರಿಯಿಸಲು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ನಿರಾಕರಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ರಷ್ಯಾ ಮತ್ತು ಇರಾನ್ ತಮ್ಮ ಸಂಬಂಧಗಳನ್ನು ಬಲಪಡಿಸಿಕೊಂಡಿವೆ. ಉಕ್ರೇನ್‌ನಲ್ಲಿನ ರಷ್ಯಾದ ಯುದ್ಧಕ್ಕೆ ಬೆಂಬಲವಾಗಿ ಟೆಹ್ರಾನ್ ಡ್ರೋನ್ ಮತ್ತು ಇತರ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ.

ಇರಾನ್‌ಗೆ ಕಾದಿದೆ ದೊಡ್ಡ ದಾಳಿ: ಯುಎಸ್

ಪುಟ ೧ ➜ ಇರಾನಿನ ನೌಕಾ ಪಡೆ ತೀವ್ರ ಹಾನಿಗೀಡಾಗಿದ್ದು, ಜತೆಗೆ ಇರಾನಿನ ಅನೇಕ ನಾಯಕರು, ಸೇನಾಧಿಕಾರಿಗಳು ಕೂಡ ಹತರಾಗಿದ್ದಾರೆ. ಇದೀಗ ಅಮೆರಿಕ ಇರಾನಿನ ಕ್ಷಿಪಣಿ ನೆಲೆಗಳ ಮೇಲೆ ದಾಳಿಗಳನ್ನು ನಡೆಸಲು ಮುಂದಾಗಿದೆ. ಇರಾನಿನ ಜಾವಾ ಕ್ಷಿಪಣಿ ನೆಲೆ ಈಗಾಗಲೇ ಭಾರೀ ಹಾನಿಗೆ ತುತ್ತಾಗಿದೆ. ಇರಾನಿನಲ್ಲಿ ಈಗಾಗಲೇ 1230ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದರೆ, ಲೆಬನಾನ್‌ನಲ್ಲಿ 200 ಮತ್ತು ಇಸ್ರೇಲ್‌ನಲ್ಲಿ 11 ಮಂದಿ ಬಲಿಯಾಗಿದ್ದಾರೆ.

ವರಿಷ್ಠರ ಮಾತಿನಂತೆ ನಡೆಯುವೆ: ಸಿಎಂ



ಪುಟ ೧ ➜ ಕೇಂದ್ರ ಸರ್ಕಾರ ನಮಗೆ ಕೊಡುವ ದುಡ್ಡು ಕೊಟ್ಟಿಲ್ಲ, ಅದರಿಂದ ನಮಗೆ ಹೊರೆ ಆಗಿದೆ. ಕೇಂದ್ರದಿಂದ ರಾಜ್ಯಕ್ಕೆ ಹೊರೆ ಹೆಚ್ಚುತ್ತಿದೆ. ಕೇಂದ್ರದ ಮನರೆಗಾದಿಂ ದಲೂ ರಾಜ್ಯಕ್ಕೆ ಹೊರೆಯಾಗುತ್ತಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಅಡುಗೆ ಅನಿಲ ದರ ಏರಿಕೆಗೆ ಕಿಡಿ: ಗ್ಯಾಸ್ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿದ ಸಿದ್ದರಾಮಯ್ಯ, ನರೇಂದ್ರ ಮೋದಿ ಬರುವುದಕ್ಕಿಂತ ಮುನ್ನ ಎಷ್ಟಿತ್ತು? ಅವರು ಬಂದು ಅದನ್ನು ಜಾಸ್ತಿ ಮಾಡಿದರು. ಅದರಿಂದ ಯಾರಿಗೆ ತೊಂದರೆ ಆಯ್ತು? ಜನರು, ಬಳಕೆದಾರರಿಗೆ ತೊಂದರೆ ಆಗಿದೆ ಎಂದು ದೂರಿದರು.

ಶ್ರೀಲಂಕಾ ಜಡ್ಜ್ ಅರ್ಜಿ ವಿಚಾರಣೆ

ಪುಟ ೧ ➜ **ಹಿತಾಸಕ್ತಿ ಸಂಘರ್ಷ ತಪ್ಪಿಸಲು ಭಾರತದಲ್ಲಿ ಅರ್ಜಿ:** ತಮ್ಮ ವಿರುದ್ಧ 2015 ಮತ್ತು 2020ರಲ್ಲಿ ಸುಳ್ಳು ಹಾಗೂ ಆಧಾರರಹಿತವಾದ ಮಾನಹಾನಿಕರ ಸುದ್ದಿಗಳನ್ನು ಪ್ರಕಟಿಸಲಾಗಿದೆ ಎಂದು ನ್ಯಾ. ನವಾಜ್ ಆರೋಪಿಸಿದ್ದಾರೆ. ಪ್ರಸ್ತುತ ತಾವು ಶ್ರೀಲಂಕಾದ ಸುಪ್ರೀಂಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸುತ್ತಿರುವುದರಿಂದ ಅಲ್ಲಿನ ನ್ಯಾಯಾಲಯದಲ್ಲೇ ಅರ್ಜಿ ಸಲ್ಲಿಸಿದರೆ ಹಿತಾಸಕ್ತಿ ಸಂಘರ್ಷದ ಪ್ರಶ್ನೆ ಉದ್ಭವಿಸಬಹುದು ಎಂದು ಅವರು ಅರ್ಜಿಯಲ್ಲಿ ತಿಳಿಸಿದ್ದಾರೆ. ಯಾರೂ ಕೂಡ ತನ್ನ ಅಹವಾಲಿಗೆ ತಾನೇ ತೀರ್ಪುಗಾರನಾಗಬಾರದು ಎಂಬ ನೈಸರ್ಗಿಕ ನ್ಯಾಯದ ತತ್ವದ ಹಿನ್ನೆಲೆಯಲ್ಲಿ ತಾವು ಭಾರತದ ನ್ಯಾಯಾಲಯದ ಮೊರೆಹೋಗಿರುವುದಾಗಿ ಅವರು ಸ್ಪಷ್ಟಪಡಿಸಿದ್ದಾರೆ.

ಶ್ರೀಲಂಕಾ ಕೋರ್ಟ್ ಆಫ್ ಅಪೀಲ್‌ನ ಮುಖ್ಯಸ್ಥರಾಗಿದ್ದ ಅವಧಿಯಲ್ಲಿ ತಾವು ನೀಡಿದ್ದ ಕಾನೂನು ಅಭಿಪ್ರಾಯವನ್ನು ಕೆಲವು ಆನ್‌ಲೈನ್ ಸುದ್ದಿ ತಾಣಗಳಲ್ಲಿ ದುರುದ್ದೇಶಪೂರಿತವಾಗಿ ತಪ್ಪಾಗಿ ಉಲ್ಲೇಖಿಸಿವೆ ಮತ್ತು ಇದರಿಂದ ತಮ್ಮ ಘನತೆಗೆ ಕುಂದುಂಟಾಗಿದೆ ಎಂದು ಅವರು ದೂರಿದ್ದಾರೆ. ಭಾರತದ ಸಂವಿಧಾನವು ಘನತೆಯಿಂದ ಬದುಕುವ ಹಕ್ಕನ್ನು ಕೇವಲ ಭಾರತೀಯರಿಗೆ ಮಾತ್ರವಲ್ಲದೆ ವಿದೇಶಿಯರಿಗೂ ವಿಸ್ತರಿಸಿರುವುದರಿಂದ, ಈ ಅರ್ಜಿ ಪರಿಗಣಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಜನರ ಬಳಕೆಗೆ ಡೀಮ್ಡ್ ಅರಣ್ಯ ಪ್ರದೇಶ: ಜಾರ್ಜ್

ಪುಟ ೧ ➜ ಡೀಮ್ಡ್ ಫಾರೆಸ್ಟ್ ಪ್ರದೇಶ ಸಾರ್ವಜನಿಕ ಉಪಯೋಗಕ್ಕೆ ಬಳಸಲು ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು ನಿರ್ಧರಿಸಿದ್ದಾರೆ. ಅದರಂತೆ ಜಂಟಿ ಸರ್ವೆ ಕಾರ್ಯ ನಡೆಯುತ್ತಿದ್ದು, ಈಗಾಗಲೇ 50 ಸಾವಿರ ಎಕರೆ ಭೂಮಿ ಸಾರ್ವಜನಿಕ ಉಪಯೋಗಕ್ಕೆ ಕೊಡುವ ಪ್ರಯತ್ನ ನಡೆದಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ 56 ಸಾವಿರ ಉದ್ಯೋಗ ಯುವಜನರಿಗೆ ನೀಡಲು ತೀರ್ಮಾನಿಸಲಾಗಿದೆ. ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು ಸುಲಭದ ಮಾತಲ್ಲ, ಆದರೂ ರಾಜ್ಯ ಸರ್ಕಾರ ಜನಪರವಾದ ಯೋಜನೆಗಳು ಜಾರಿ ಮಾಡುವ ಮೂಲಕ ಇತರೆ ರಾಜ್ಯಗಳಿಗಿಂತ ಉತ್ತಮ ಆಡಳಿತ ನಮ್ಮ ಸರಕಾರ ನೀಡುತ್ತಿದೆ ಎಂದರು.

1990ರಲ್ಲಿ ಬಂಗಾರಪ್ಪ ಮುಖ್ಯಮಂತ್ರಿಯಾದಾಗ ಆಶ್ರಯ ನಿವೇಶನ ನೀಡಲಾಗುತ್ತಿತ್ತು. ಆ ಸಂದರ್ಭದಲ್ಲೂ ಸರ್ಕಾರಿ ಜಾಗ ಇರಲಿಲ್ಲ, ಆಗ ಖಾಸಗಿ ಜಾಗವನ್ನು ಖರೀದಿಸಿ ಜನರ ಉಪಯೋಗಕ್ಕೆ ನೀಡಲಾಗಿತ್ತು. ಈಗಲೂ ಅದೇ ಸಂದರ್ಭ ಎಲ್ಲೆಡೆ ಸೃಷ್ಟಿಯಾಗಿದೆ. ಜನಪರವಾದ ಕಾರ್ಯಕ್ರಮ ಮಾಡುವ ಸಿಎಂ ನಮ್ಮ ಜತೆ ಇದ್ದಾರೆ. ಗ್ಯಾರಂಟಿ ಯೋಜನೆಯಿಂದ ರಾಜ್ಯದ ಜನರಿಗೆ ಅನುಕೂಲವಾಗಿದ್ದು, ಆರ್ಥಿಕವಾಗಿ ಮುಂದೆ ಸಾಗಲು ಸಹಕಾರಿಯಾಗಿದೆ. ಜಿಲ್ಲೆಯ ಸಮಸ್ಯೆ ಬಗೆಹರಿಸಲು ಸಾಕಷ್ಟು ಶ್ರಮಿಸಿದ್ದೇನೆ. ಆದರೆ ಜಿಲ್ಲೆಯಲ್ಲಿರುವ ಸ್ಥಳೀಯರೇ ಉಸ್ತುವಾರಿ ಮಂತ್ರಿಗಳಾದರೆ ಅಭಿವೃದ್ಧಿ ಇನ್ನಷ್ಟು ಸುಲಭವಾಗುವ ದೃಷ್ಟಿಯಿಂದ ಜಿಲ್ಲೆಗೆ ಮಂತ್ರಿ ಸ್ಥಾನ ಕೊಡುವ ಬಗ್ಗೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇನೆಂದು ಹೇಳಿದರು. ಕ್ಷೇತ್ರದ ಶಾಸಕಿ ನಯನಾ ಮೋಟಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, 1 ವರ್ಷದ ಹಿಂದೆ ಚಂದ್ರಲೋಕದಲ್ಲಿ ನಿವೇಶನ ಕೊಡ್ತಾರಾ ಎಂಬ ಟೀಕೆ ಬಂದಿತ್ತು. ಆದರೆ ಈಗ ಹೆಮ್ಮೆಯಿಂದ ಹೇಳುತ್ತೇನೆ. ಚಂದ್ರಲೋಕದಲ್ಲಿ ಅಲ್ಲ, ತಮ ಕ್ಷೇತ್ರದ ದಾರದಹಳ್ಳಿ ನಂದೀಪುರ, ತ್ರಿಪುರ, ಹಂತೂರು, ಜಾವಳಿ, ಬಿ.ಹೊಸಳ್ಳಿ, ತಳಿಹಳ್ಳಿ, ಬಸ್ಕಲ್, ಈ 8 ಗ್ರಾ.ಪಂ. ವ್ಯಾಪ್ತಿಯಲ್ಲಿ 242 ಫಲಾನುಭವಿಗಳಿಗೆ ನಿವೇಶನದ ಹಕ್ಕುಪತ್ರ ಕೊಡಲು ಮುಂದಾಗಿದ್ದೇವೆ. ಮಲೆಮನೆ ಮತ್ತು ಮದುಗುಂಡಿ ನಿರಾಶ್ರಿತರಿಗೆ ಭೂಮಿ ಕೊಡುವ ಕಾರ್ಯ ಮುಗಿಸಿದರೆ ತನಗೆ ತೃಪ್ತಿ ಸಿಗುತ್ತದೆ ಎಂದರು.

ಕುದುರೆಮುಖ ಲೇಬರ್ ಕಾಲೋನಿಯಲ್ಲಿರುವ ಸುಮಾರು 40 ಕುಟುಂಬಕ್ಕೆ ನಿವೇಶನ ಕೊಡುವ ಚಿಂತನೆ ಮಾಡಿರುವುದಾಗಿ ಹೇಳಿದರು.

ಮಾಜಿ ಸಚಿವೆ ಮೋಟಮ್ಮ, ಭದ್ರಾ ಕಾಡಾ ಅಧ್ಯಕ್ಷ ಡಾ.ಕೆ.ಪಿ. ಅಂಶುಮಂತ್, ರಾಜ್ಯ ಪರಿಸರ ಮೌಲ್ಯಮಾಪನ ಪ್ರಾಧಿಕಾರದ ಅಧ್ಯಕ್ಷ ಎ.ಎನ್.ಮಹೇಶ್ ಮಾತನಾಡಿದರು. ಜಿಲ್ಲಾಧಿಕಾರಿ ಎನ್.ಎಂ. ನಾಗರಾಜ್, ಜಿ.ಪಂ.ಸಿಇಒ ಎಚ್.ಎಸ್. ಕೀರ್ತನಾ, ಬಿ.ಎಸ್. ಜಯರಾಂಗೌಡ, ಕೆ.ವೆಂಕಟೇಶ್, ರಮೇಶ್ ಹೊಸ್ಕೆರೆ, ಜಿತೇಂದ್ರಕುಮಾರ್, ನಟೇಶ್, ವಿಜಯಕುಮಾರ್, ತಹಶೀಲ್ದಾರ್ ಎಸ್. ಅಶ್ವಿನಿ ಮುತ್ತಿತರರಿದ್ದರು.

ಲೋಕಾಯುಕ್ತ ದಾಳಿ: 6.82 ಕೋಟಿ ಮೌಲ್ಯದ ಆಸ್ತಿ ಪತ್ತೆ

ಹಾಸನ: ಮಹಾನಗರಪಾಲಿಕೆಯ ಇಂಜಿನಿಯರ್ ಸತ್ಯನಾರಾಯಣ ಅವರ ಮನೆ ಸೇರಿದಂತೆ ವಿವಿಧ ಕಡೆಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ನಡೆಸಿದ ದಾಳಿಯಲ್ಲಿ ಸುಮಾರು 6 ಕೋಟಿ 82 ಲಕ್ಷ 54 ಸಾವಿರ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ. ಪಾಲಿಕೆ ಇಂಜಿನಿಯರ್ ಸತ್ಯನಾರಾಯಣ ಅವರಿಗೆ ಸಂಬಂಧಿಸಿದಂತೆ 7 ಕಡೆಗಳಲ್ಲಿ ಲೋಕಾಯುಕ್ತ ತಂಡ ದಾಳಿ ನಡೆಸಿ ಪರಿಶೀಲನೆ ನಡೆಸಿದೆ. ಪ್ರಾಥಮಿಕ ತನಿಖೆಯಲ್ಲಿ ಅವರ ಆದಾಯಕ್ಕಿಂತ ಶೇಕಡಾ 200.74 ರಷ್ಟು ಹೆಚ್ಚುವರಿ ಆಸ್ತಿ ಹೊಂದಿರುವ ಮಾಹಿತಿ ಲಭ್ಯವಾಗಿದೆ. ದಾಳಿಯ ವೇಳೆ 52 ಲಕ್ಷ ಮೌಲ್ಯದ 7 ನಿವೇಶನಗಳು, 5 ಕೋಟಿ 30 ಲಕ್ಷ ಮೌಲ್ಯದ 3 ಮನೆಗಳು ಹಾಗೂ 3 ಎಕರೆ 33 ಗುಂಟೆ ಕೃಷಿ ಜಮೀನು ಸೇರಿದಂತೆ ಒಟ್ಟು 5 ಕೋಟಿ 98 ಲಕ್ಷ 35 ಸಾವಿರ ರೂ. ಮೌಲ್ಯದ ಸ್ಥಿರಾಸ್ತಿ ಪತ್ತೆಯಾಗಿದೆ.

ನಿಶಾಂತ್ ಇಂದು ರಾಜಕೀಯಕ್ಕೆ

ಪುಟ ೧ ➜ ನಿಶಾಂತ್ ರಾಜಕೀಯ ಪ್ರವೇಶ ಪಕ್ಷದ ಕಾರ್ಯಕರ್ತರ ಇಚ್ಛೆಯಾಗಿದೆ ಎಂದು ತಿಳಿಸಿದ್ದಾರೆ.



ಹೊಸ ಪೀಳಿಗೆ ನೇತೃತ್ವದ ನಿರೀಕ್ಷೆ: ಮುಂದಿನ ಪೀಳಿಗೆಯ ನಾಯಕನಿಗೆ ಪಕ್ಷ ನಡೆಸುವ ಜವಾಬ್ದಾರಿ ವಹಿಸುವ ಉದ್ದೇಶದಿಂದ ನಿಶಾಂತ್ ಅವರನ್ನು ಕರೆತರಲಾಗುತ್ತಿದೆ ಎಂದು ರಾಜಕೀಯ ಪಂಡಿತರು ಲೆಕ್ಕಾಚಾರ ಹಾಕುತ್ತಿದ್ದಾರೆ. ನಿಶಾಂತ್ ಆಗಮನದಿಂದ ಪಕ್ಷದಲ್ಲಿ ಏನೆಲ್ಲಾ ಬದಲಾವಣೆ ಆಗಲಿದೆಯೆಂಬ ಕುತೂಹಲ ಸೃಷ್ಟಿಯಾಗಿದೆ.

ತಾಳ್ಮೆ ವಹಿಸಲು ನಿತೀಶ್ ಮನವಿ

ಮುಖ್ಯಮಂತ್ರಿ ನಿರ್ದೇಶನದ ಮೇರೆಗೆ ಶುಕ್ರವಾರ ಪಕ್ಷದ ಶಾಸಕಾಂಗ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಮುಖ್ಯಮಂತ್ರಿ ವಿಷಯ ತಿಳಿಸಿದ್ದು, ಪಕ್ಷದ ನಾಯಕರು, ಕಾರ್ಯಕರ್ತರು, ಶಾಸಕರು, ಸಂಸದರು ಮತ್ತು ಸಚಿವರು ತಾಳ್ಮೆಯಿಂದ ಇರಬೇಕೆಂದು ಮನವಿ ಮಾಡಿದ್ದರು. ತಾವು ಪಕ್ಷ ಬಿಟ್ಟು ಹೋಗುತ್ತಿಲ್ಲ, ಎಲ್ಲರ ಜತೆಗಿದ್ದು ಕೆಲಸ, ಪಕ್ಷದ ಸದಸ್ಯರ ಜತೆಗಿದ್ದು ಮಾರ್ಗದರ್ಶನ ಮಾಡುವುದಾಗಿ ನಿತೀಶ್ ಭರವಸೆ ನೀಡಿದ್ದಾರೆ. ಅವರ ಮಾತುಗಳನ್ನು ಆಲಿಸಿದ ಬಳಿಕ ನಿರ್ಧಾರವನ್ನು ಗೌರವಿಸಿದ್ದೇವೆ. ಆದರೆ ರಾಜ್ಯದ ಜನರಿಗೆ ಸಂತಸವಾಗಿಲ್ಲ ಎಂದು ಸಚಿವ ಶ್ರವಣ್ ಕುಮಾರ್ ತಿಳಿಸಿದ್ದಾರೆ.

ಶರಾವತಿ: ಸರ್ಕಾರಕ್ಕೆ ಹೈ ನೋಟಿಸ್

ಪುಟ ೧ ➜ ಈ ಯೋಜನೆಗೆ ಒಟ್ಟು 142.763 ಹೆಕ್ಟೇರ್ ಭೂಮಿಯ ಅಗತ್ಯವಿದೆ. ಆದರಲ್ಲಿ 102 ಹೆಕ್ಟೇರ್ ಪ್ರದೇಶವು ಭೌಗೋಳಿಕವಾಗಿ ಅಭಯಾರಣ್ಯದೊಳಗೆ ಮತ್ತು 39.715 ಹೆಕ್ಟೇರ್ ಪರಿಸರ ಸೂಕ್ಷ್ಮ ವಲಯದಲ್ಲಿದೆ. ಇಂತಹ ಬೃಹತ್ ಅಭಯಾರಣ್ಯ ಮತ್ತು ಪರಿಸರ ಸೂಕ್ಷ್ಮ ವಲಯದೊಳಗೆ ಜಲವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಅನುಮೋದನೆ ನೀಡುವುದರಿಂದ ಬೃಹತ್ ಕಂಬ ನೆಡುವುದು, ಕಂಬಗಳ ನಡುವೆ ಹೆಚ್ಚಿನ ವೋಲ್ಟೇಜ್ ತಂತಿ ಎಳೆಯುವುದೂ ಸೇರಿದಂತೆ ಉತ್ಪಾದಿಸುವ ಜಲವಿದ್ಯುತ್ ರವಾನಿಸಲು ಪ್ರಸರಣ ಮಾರ್ಗಗಳ ನಿರ್ಮಾಣದಿಂದ ಅಮೂಲ್ಯ ವೃಕ್ಷ ಸಂಪತ್ತು ನಾಶವಾಗಲಿದೆ. ವನ್ಯಜೀವಿಗಳ ಆವಾಸಸ್ಥಾನಕ್ಕೆ ಧಕ್ಕೆಯಾಗಲಿದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ. ವನ್ಯಜೀವಿಗಳ ಪ್ರಯೋಜನಕ್ಕಾಗಿ ಮತ್ತು ಬೇಡದ ಉದ್ದೇಶಗಳಿಗಾಗಿ ವನ್ಯಜೀವಿ ಅಭಯಾರಣ್ಯ ಪ್ರದೇಶ ಬಳಕೆಗೆ ಅನುಮೋದನೆ ನೀಡುವ ಅಧಿಕಾರ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಗೆ ಇಲ್ಲ, ಈ ನಿಟ್ಟಿನಲ್ಲಿ, ವನ್ಯಜೀವಿ ರಕ್ಷಣಾ ಕಾಯಿದೆ-1972ರ ಸೆಕ್ಷನ್ 29ರ ಅಡಿಯಲ್ಲಿ ವಿಧಿಸಲಾದ ನಿರ್ಬಂಧವನ್ನು ಗಮನದಲ್ಲಿ ಶರಾವತಿ ಕಣಿವೆಯ ಅಭಯಾರಣ್ಯ ಮತ್ತು ಅದರ ಪರಿಸರ ಸೂಕ್ಷ್ಮ ವಲಯದಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ ಯೋಜನೆಗೆ ಯಾವುದೇ ಅನುಮೋದನೆ ನೀಡಬಾರದು ಎಂದು ಕೋರಲಾಗಿದೆ.

ನನ್ನೇಲೆ ದೀದಿಗೇಕೆ ಕೋಪ?



ಪುಟ ೧ ➜ ಆದರೆ ಕೊನೆಯ ಕ್ಷಣದಲ್ಲಿ ಬಿಧಾನ್ ನಗರದಲ್ಲಿ ಸಮ್ಮೇಳನ ನಡೆಸಲು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸರ್ಕಾರ ಅನುಮತಿ ನಿರಾಕರಿಸಿದೆ. ಬಿಧಾನ್‌ನಗರ ಬದಲಿಗೆ ಬಾಗ್ಡೋಗ್ರಾ ವಿಮಾನ ನಿಲ್ದಾಣ ಸಮೀಪದ ಗೋಶಾಯ್‌ಪುರ ಎಂಬ ಇನ್ನಷ್ಟು ನಿರ್ಬಂಧಿತ ಸ್ಥಳದಲ್ಲಿ ಸಮ್ಮೇಳನ ಆಯೋಜಿಸಲು ಆದೇಶಿಸಿದೆ.

ಭಾರೀ ವಿರೋಧ: ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿಗೇ ಗೌರವವಿಲ್ಲವೆಂದಾದರೆ ಸಾಮಾನ್ಯ ನಾಗರಿಕರ ಕಥೆಯೇನು ಎಂಬ ಪ್ರಶ್ನೆ ಜನಮಾನಸದಲ್ಲಿ ಉದ್ಭವಿಸಿದ್ದು, ಮಮತಾ ಅರಾಜಕತೆಗೆ ಭಾರೀ ವಿರೋಧ ವ್ಯಕ್ತವಾಗುತ್ತಿದೆ.

ಐದು ಲಕ್ಷ ಜನ ಸೇರಬಹುದು: ರಾಷ್ಟ್ರಪತಿ ಮುರ್ಮು

ಗೋಶಾಯ್‌ಪುರದಲ್ಲಿನ ಕಾರ್ಯಕ್ರಮದ ಬಳಿಕ ಸಿಲಿಗುರಿಯ ಬಿಧಾನನಗರಕ್ಕೆ ರಾಷ್ಟ್ರಪತಿ ಭೇಟಿ ನೀಡಿದ ಸಂತಾಲ್ ಸಮುದಾಯದ ಜನರು ಮತ್ತು ಸ್ಥಳೀಯರ ಜತೆ ಸಂವಹನ ನಡೆಸಿದರು. ಬಿಧಾನನಗರದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ರಾಷ್ಟ್ರಪತಿ ಮುರ್ಮು ಮಾತನಾಡಿದ್ದು, ಇಲ್ಲಿ 5 ಲಕ್ಷಕ್ಕೂ ಹೆಚ್ಚು ಜನ ಸೇರಲು ವ್ಯವಸ್ಥೆ ಮಾಡಬಹುದು. ಆದರೆ ಇಲ್ಲಿ ಸಮ್ಮೇಳನ ನಡೆಸಿದರೆ ಜನ ಕಿಕ್ಕಿರಿದು ಸೇರುತ್ತಾರೆಂದು ಸ್ಥಳೀಯ ಆಡಳಿತ ಅನುಮತಿ ನೀಡಿಲ್ಲ ಎಂದು ಮುರ್ಮು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಸಂತಾಲ್ ಜನರ ಅಭಿವೃದ್ಧಿ ನಡೆದಿದೆಯೇ?

ಪ್ರದೇಶದಲ್ಲಿ ಸಂತಾಲ್ ಬುಡಕಟ್ಟು ಜನಾಂಗದವರ ಅಭಿವೃದ್ಧಿ ನಡೆಯುತ್ತಿದೆಯೋ ಇಲ್ಲವೋ? ಸಮುದಾಯದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಸಂತಾಲ್ ಜನರಿಲ್ಲದೆ ಕುರ್ಚಿಗಳು ಖಾಲಿ ಖಾಲಿ ಇರುವುದನ್ನು ನೋಡಿದರೆ ಬಂಗಾಳದಲ್ಲಿ ಸಂತಾಲ್ ಸಮುದಾಯಕ್ಕೆ ಸರ್ಕಾರಿ ಸವಲತ್ತುಗಳೆಲ್ಲಾ ಸಿಗುತ್ತಿವೆಯೋ ಇಲ್ಲವೋ ಎಂಬ ಸಂಶಯ ನನಗೆ ಕಾಡುತ್ತಿದೆ ಎಂದು ಮುರ್ಮು ಕಿಡಿಕಾರಿದ್ದಾರೆ.

ಆಯೋಜಕರಿಗೆ ಹತಾಶೆ

ಕೊನೆಯ ಕ್ಷಣ ಹಲವು ಬದಲಾವಣೆಗಳಾಗಿದ್ದು, ಕನಿಷ್ಠ ಶೌಚಾಲಯ ವ್ಯವಸ್ಥೆ ಕಲ್ಪಿಸಲೂ ಆಯೋಜಕರಿಗೆ ಸಾಧ್ಯವಾಗಿಲ್ಲ. ಇದರಿಂದ ಸಮ್ಮೇಳನ ಆಯೋಜಕರೂ ಟಿಎಂಸಿ ಸರ್ಕಾರದ ವಿರುದ್ಧ ಹತಾಶೆ ವ್ಯಕ್ತಪಡಿಸಿದ್ದಾರೆ. ಸ್ವತಃ ಆದಿವಾಸಿ ಸಮುದಾಯ ಪ್ರತಿನಿಧಿಸುವ ರಾಷ್ಟ್ರಪತಿಗಳು ವ್ಯಕ್ತಪಡಿಸಿದ ನೋವು ಮತ್ತು ವ್ಯಥೆ ದೇಶದ ಜನರ ಮನಸ್ಸಿಗೆ ದುಃಖ ಉಂಟುಮಾಡಿದೆ. ಟಿಎಂಸಿ ಸರ್ಕಾರ ಮಿತಿಮೀರಿದ ದುರ್ವರ್ತನೆ ತೋರಿದ್ದು, ರಾಷ್ಟ್ರಪತಿಗಾದ ಅಪಮಾನಕ್ಕೆ ಅವರ ಆಡಳಿತವೇ ನೇರ ಹೊಣೆ. ಇದರ ಜತೆ ಸಂತಾಲ್ ಸಂಸ್ಕೃತಿಯಂತಹ ಮಹತ್ವದ ವಿಚಾರವನ್ನು ಬಂಗಾಳ ಸರ್ಕಾರ ಕಡೆಗಣಿಸಿದ್ದು ದುರದೃಷ್ಟಕರ ಎಂದಿದ್ದಾರೆ. ರಾಷ್ಟ್ರಪತಿ ಪದವಿ ರಾಜಕೀಯಕ್ಕಿಂತ ಮೇಲಿನದ್ದು. ಆ ಹುದ್ದೆಯ ಪಾವಿತ್ರ್ಯವನ್ನು ಎಂದಿಗೂ ಗೌರವಿಸಬೇಕು. ಟಿಎಂಸಿ ಮತ್ತು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಒಳ್ಳೆಯ ಬುದ್ಧಿ ಬರಲೆಂದು ಆಶಿಸುವುದಾಗಿ ಮೋದಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಿರಣ್ ಕಮತೆ ರಾಜ್ಯಕ್ಕೆ ಪ್ರಥಮ

ಬೆಳಗಾವಿ: ಚಿಕ್ಕೋಡಿ ತಾಲೂಕಿನ ಹತ್ತರವಾಟ ಗ್ರಾಮದ ಕಿರಣ್ ಸಣ್ಣಪ್ಪ ಕಮತೆ ಅವರು ಯುಪಿಎಸ್ಸಿ ಪರೀಕ್ಷೆಯಲ್ಲಿ ದೇಶಕ್ಕೆ 53ನೇ ರ್‍ಯಾಂಕ್ ಮತ್ತು ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆಯುವ ಮೂಲಕ ಮಹತ್ವದ ಸಾಧನೆ ಮೆರೆದಿದ್ದಾರೆ.



ಯುಪಿಎಸ್ಸಿ ಪರೀಕ್ಷೆಯಲ್ಲಿ ದೇಶಕ್ಕೆ 53ನೇ ರ್‍ಯಾಂಕ್

ಬೆಳಗಾವಿಯ ಗೋಗಟೆ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಿಇ ಸಿವಿಲ್ ಪದವಿ ಪಡೆದಿರುವ ಕಿರಣ್ ಕಮತೆ, ಸದ್ಯ ಬೆಂಗಳೂರಿನ ಲೋಕೋಪಯೋಗಿ ಇಲಾಖೆ ಮುಖ್ಯ ಕಚೇರಿಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಿರಣ್ ಅವರ ತಂದೆ ಡಾ. ಸಣ್ಣಪ್ಪ ಕಮತೆ ನಿಡಸೋಸಿಯ ಹೀರಾ ಶುಗರ್ಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಾಯಿ ರುಕ್ಮಿಣಿ ಗೃಹಿಣಿಯಾಗಿಯಾಗಿದ್ದಾರೆ. ಕಿರಣ್ ಅವರ ವಿದ್ಯಾಭ್ಯಾಸದ ಹಾದಿ ವೈವಿಧ್ಯಮಯವಾಗಿದೆ. ಅವರು 1 ಮತ್ತು 2ನೇ ತರಗತಿಯನ್ನು ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಅಂಬೆಜೋಗಾಯಿಯ ಮರಾಠಿ ಪ್ರಾಥಮಿಕ ಶಾಲೆಯಲ್ಲಿ ಮುಗಿಸಿದ್ದಾರೆ. 3ರಿಂದ 8ನೇ ತರಗತಿಯನ್ನು ಹುಬ್ಬಳ್ಳಿಯ ಎಂ.ಆರ್. ಸಾಖರೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಲಿತಿದ್ದಾರೆ.

9 ಮತ್ತು 10ನೇ ತರಗತಿಯನ್ನು ಗದಗದ ಕೆಎಲ್ಇ ಸಂಸ್ಥೆಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಿಪ್ಪಾಣಿಯ ಜಿ.ಐ.ಬಾಗೇವಾಡಿ ಕಾಲೇಜಿನಲ್ಲಿ ಪಿಯುಸಿ ಸೈನ್ಸ್ ಮುಗಿಸಿದ್ದಾರೆ. ಗೋಗಟೆ ಕಾಲೇಜಿನಲ್ಲಿ ಬಿಇ ಸಿವಿಲ್ ಪದವಿ ಪಡೆದ ಅವರು 2023ರಲ್ಲಿ ಪಿಡಬ್ಲುಡಿಯಲ್ಲಿ ಸಹಾಯಕ ಎಂಜಿನಿಯರ್ ಆಗಿ ನೇಮಕಾತಿ ಹೊಂದಿದ್ದರು. ಇದು ನನ್ನ ಕೊನೆಯ ಅವಕಾಶವಾಗಿತ್ತು. ಕೆಲಸ ಮಾಡುತ್ತಲೇ ದಿನಕ್ಕೆ ಐದಾರು ಗಂಟೆ ಓದುತ್ತಿದ್ದೆ. ಏನಾದರೂ ಆಗಲಿ ಈ ಸಲ ಪಾಸ್ ಆಗಲೇಬೇಕು ಎಂದುಕೊಂಡು ಪರೀಕ್ಷೆ ಬರೆದಿದ್ದೆ. 250 ರ್‍ಯಾಂಕ್ ಒಳಗೆ ಬರುವ ನಿರೀಕ್ಷೆ ಇತ್ತು. ಆದರೆ 53ನೇ ರ್‍ಯಾಂಕ್ ಬಂದಿರುವುದು ಹಾಗೂ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಸಿಕ್ಕಿರುವುದಕ್ಕೆ ಬಹಳಷ್ಟು ಖುಷಿಯಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.



ರಂಗ ಪಂಚಮಿ ಅಂಗವಾಗಿ ಹುಬ್ಬಳ್ಳಿ ನಗರದ ವಿವಿಧೆಡೆ ಶನಿವಾರ ಹೋಳಿ ಹಬ್ಬವನ್ನು ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು.

ವಿದೇಶಾಂಗ ನೀತಿ ಉಲ್ಲಂಘನೆ

ಕಲಬುರಗಿ: ಕೇಂದ್ರ ಸರ್ಕಾರ ದೇಶದ ವಿದೇಶಾಂಗ ನೀತಿಯನ್ನು ಅಡವಿಟ್ಟಿದ್ದು, ಇದರ ಪರಿಣಾಮವಾಗಿ ಭಾರತದ ಗೌರವಕ್ಕೆ ಧಕ್ಕೆ ಉಂಟಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.



ನಗರದ ಐವನ್ ಶಾಹಿ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಮೆರಿಕದ ಉಪ ಕಾರ್ಯದರ್ಶಿ ದೆಹಲಿಗೆ ಬಂದು ಭಾರತವನ್ನು ಚೀನಾದಷ್ಟು ಬೆಳೆಯಲು ಬಿಡುವುದಿಲ್ಲ ಎಂದು ಹೇಳುತ್ತಾರೆ. ಮತ್ತೊಬ್ಬರು ರಷ್ಯಾದಿಂದ ತೈಲ ಖರೀದಿ ಮಾಡಲು ನಾವೇ ಸೂಚಿಸಿದ್ದೇವೆ ಎಂದು ಹೇಳುತ್ತಾರೆ. ಈ ಹೇಳಿಕೆಗಳಿಗೆ ಒಬ್ಬರೂ ಕೇಂದ್ರ ಸಚಿವರು ವಿರೋಧ ವ್ಯಕ್ತಪಡಿಸಿಲ್ಲ ಎಂದು ಪ್ರಶ್ನಿಸಿದರು. ಇದು ನೇರವಾಗಿ ದೇಶದ ವಿದೇಶಾಂಗ ನೀತಿಯನ್ನು ಅಡವಿಟ್ಟಂತಾಗಿದೆ. ಇದರ ಪರಿಣಾಮವಾಗಿ ಪ್ರಧಾನಿ ನರೇಂದ್ರ ಮೋದಿಯವರ ಹಾಗೂ ದೇಶದ ಗೌರವಕ್ಕೂ ಧಕ್ಕೆಯಾಗಿದೆ ಎಂದು ಅವರು ಟೀಕಿಸಿದರು.

ಆರ್‌ಎಸ್‌ಎಸ್ ನಾಯಕರು ಎಲ್ಲಿದ್ದಾರೆ ಎಂದು ಪ್ರಶ್ನಿಸಿದ ಅವರು, ಅಮೆರಿಕದಲ್ಲಿ ಬಹಿರಂಗವಾಗುತ್ತಿರುವ ಎಕ್‌ಸ್ಟೀನ್ ಫೈಲ್‌ಗಳ ಬಗ್ಗೆ ಕೂಡ ಉಲ್ಲೇಖಿಸಿದರು. ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದಲ್ಲಿ ಮೋದಿಯವರ ರಾಜಕೀಯವನ್ನು ನಾಶ ಮಾಡುತ್ತೇವೆ ಎಂದು ಹೇಳಿರುವುದಾಗಿ ಆರೋಪಿಸಿದರು. ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆ ವಿಚಾರಕ್ಕೂ ಪ್ರತಿಕ್ರಿಯಿಸಿದ ಅವರು, ಇದಕ್ಕೆ ಉತ್ತರವನ್ನು ಬಿಜೆಪಿ ನಾಯಕರು ನೀಡಬೇಕು ಎಂದು ಹೇಳಿದರು. ನಟ ವಿಜಯ್ ಮತ್ತು ನಟಿ ರಶ್ಮಿಕಾ ಮಂದಣ್ಣ ಅವರನ್ನು ಭೇಟಿ ಮಾಡಲು ಪ್ರಧಾನಿಗೆ ಸಮಯವಿದ್ದರೆ, ಜನರ ಸಮಸ್ಯೆಗಳನ್ನು ಪರಿಹರಿಸಲು ಸಮಯ ಯಾಕಿಲ್ಲ ಎಂದು ಪ್ರಶ್ನಿಸಿದರು. ಕ್ರಿಕೆಟ್ ವಿಚಾರ ಪ್ರಸ್ತಾಪಿಸಿದ ಅವರು, ಪ್ರಧಾನಮಂತ್ರಿ ಸೆಮಿಫೈನಲ್ ಪಂದ್ಯಕ್ಕೆ ಶುಭಾಶಯ ಕೋರಿದ್ದಾರೆ. ನಾಳೆ ಫೈನಲ್ ಪಂದ್ಯಕ್ಕೂ ಹೋಗಬಹುದು ಎಂದು ಹೇಳಿದರು. ಮೋದಿಯವರು ಪಂದ್ಯ ನೋಡಲು ಹೋಗದಿದ್ದರೆ ಭಾರತ ಗೆಲ್ಲಬಹುದು ಎಂದು ಹಾಸ್ಯಾತ್ಮಕವಾಗಿ ಹೇಳಿದ ಅವರು, ಇದನ್ನು ನಾನು ಸುಮ್ಮನೆ ಹೇಳುತ್ತಿಲ್ಲ, ಹಿಂದೆ ಉದಾಹರಣೆಗಳಿವೆ ಎಂದು ಹೇಳಿದರು.

ಕಿರುಸುದ್ದಿ

ಮಹಿಳಾ ಸಮಾವೇಶ ಇಂದು

ಬೆಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿ ಮಹಿಳಾ ಜಾಗೃತಿ ಮೂಡಿಸುವ ದೃಷ್ಟಿಯಿಂದ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ವತಿಯಿಂದ ಎಬಿಜಿಪಿ ಬೆಂಗಳೂರು ಮಹಿಳಾ ಸಮಾವೇಶವು ಮಾ.8ರಂದು ಬೆಳಗ್ಗೆ 10.30ಕ್ಕೆ ಶೇಷಾದ್ರಿಪುರಂನ ಯಾದವಸ್ಮೃತಿಯಲ್ಲಿ ಜರುಗಲಿದೆ. ಈ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಜಾಹೀರಾತುಗಳಲ್ಲಿ ಮಹಿಳೆಯರ ಪಾತ್ರ ಹಾಗೂ ಅವರ ಅಸ್ಮಿತೆ ಹಾಗೂ ಘನತೆ. ಅದರಿಂದ ಸಮಾಜದಲ್ಲಿ ಆಗುತ್ತಿರುವ ಪರಿಣಾಮಗಳು ಈ ವಿಚಾರವಾಗಿ ಗೋಷ್ಠಿ ನಡೆಯಲಿದ್ದು, ಚರ್ಚಾಗೋಷ್ಠಿಯು ಇರಲಿದೆ. ಹಿರಿಯ ಪತ್ರಕರ್ತೆ ಕೆ.ಎಚ್. ಸಾವಿತ್ರಿ ಸುರೇಶ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಎಬಿಜಿಪಿ ಕರ್ನಾಟಕ ಪ್ರಾಂತ ಅಧ್ಯಕ್ಷ ಡಾ. ನರಸಿಂಹ ನಕ್ಷತ್ರಿ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಕಾನೂನು ತಜ್ಞೆ ಮೀರಾ ಬಾಯಿ ಫಡಕೆ ಮತ್ತು ಎಬಿಜಿಪಿ ಕರ್ನಾಟಕ ಪ್ರಾಂತದ ಉಪಾಧ್ಯಕ್ಷೆ ಡಾ. ವಿಜಯ ವಿಷ್ಣು ಭಟ್ ವಕ್ತಾರರಾಗಿ ಪಾಲ್ಗೊಳ್ಳಲಿದ್ದಾರೆ.

ಸಿಲಿಂಡರ್ ದರ ಏರಿಕೆಗೆ ಸಿಎಂ ವಿರೋಧ

ಬೆಂಗಳೂರು: ಗೃಹ ಬಳಕೆಯ ಸಿಲಿಂಡರ್ ಬೆಲೆ ಏರಿಕೆಯನ್ನು ವಿರೋಧಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದ್ದು, ಭಾರತದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಹಣದುಬ್ಬರ ಮತ್ತು ಬೆಲೆ ಏರಿಕೆಯಿಂದ ತತ್ತರಿಸಿಹೋಗಿರುವ ಸಮಯದಲ್ಲಿಯೇ ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಿಸಿರುವುದು ನೆಲಕ್ಕೆ ಬಿದ್ದವನಿಗೆ ಒದ್ದಂತಾಗಿದೆ ಎಂದಿದ್ದಾರೆ. ಎಕ್ಸ್ ಖಾತೆಯಲ್ಲಿ ಕೇಂದ್ರ ಸರ್ಕಾರದ ನೀತಿಯನ್ನು ಟೀಕಿಸಿರುವ ಅವರು, ಗೃಹ ಬಳಕೆಯ ಸಿಲಿಂಡರ್‌ಗಳ ಬೆಲೆಯನ್ನು ಸುಮಾರು 60 ರೂ. ರಷ್ಟು ಹೆಚ್ಚಿಸಿರುವುದರಿಂದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಜೀವನ ನಿರ್ವಹಣೆಯ ವೆಚ್ಚ ದುಬಾರಿಯಾಗಲಿದೆ ಎಂದು ತಿಳಿಸಿದ್ದಾರೆ. ಪಂಡಿತ್ ಜವಾಹರಲಾಲ್ ನೆಹರು ಅವರ ಪ್ರಕಾರ ವಿದೇಶಾಂಗ ನೀತಿಯು ಆರ್ಥಿಕ ನೀತಿಯ ಪರಿಣಾಮವಾಗಿದೆ. ನೆಹರೂ ಅವರು ಏಳೆಂಟು ದಶಕಗಳ ಹಿಂದೆಯೇ ನೀಡಿದ್ದ ಎಚ್ಚರಿಕೆ ಇಂದು ಅಕ್ಷರಶಃ ಸತ್ಯವಾಗಿದೆ. ರಾಜತಾಂತ್ರಿಕತೆ ಎನ್ನುವುದು ಕಾರ್ಯತಂತ್ರವಾಗದೆ, ಪ್ರದರ್ಶನದ ವಸ್ತುವಾಗಿ ಮಾರ್ಪಟ್ಟಾಗ, ಅದಕ್ಕೆ ಅನಿವಾರ್ಯವಾಗಿ ಬಡವರು ಮತ್ತು ಮಧ್ಯಮ ವರ್ಗದ ಜನರು ಬಲಿಯಾಗುತ್ತಾರೆ ಎಂದು ಹೇಳಿದ್ದಾರೆ.

ಅರಳಿ ಮರಕ್ಕೆ ಲಾರಿ ಡಿಕ್ಕಿ: ಇಬ್ಬರ ಸಾವು

ತುಮಕೂರು: ತಾಲೂಕಿನ ನಾಗವಲ್ಲಿ ಸಮೀಪದ ರಂಗಾಪುರ ಬಳಿಯ ಸೋಪನಹಳ್ಳಿ ಗೇಟ್‌ನಲ್ಲಿ ಅರಳಿ ಮರಕ್ಕೆ ಲಾರಿ ಡಿಕ್ಕಿಯಾಗಿ ಇಬ್ಬರು ಮೃತಪಟ್ಟಿದ್ದಾರೆ. ಕೇರಳದ ರಷೀದ್ ಅಲಿ (25), ಅಮೀನ್ (23) ಮೃತರು. ಆಂಧ್ರಪ್ರದೇಶದಿಂದ ಕೇರಳಕ್ಕೆ ಲಾರಿಯಲ್ಲಿ ಕಡಪ ಕಲ್ಲು ಸಾಗಿಸುತ್ತಿದ್ದರು. ಚಾಲಕನ ನಿಯಂತ್ರಣದ ತಪ್ಪಿದ ಲಾರಿ ಮರಕ್ಕೆ ಡಿಕ್ಕಿ ಹೊಡೆದಿದೆ. ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಹೆಬ್ಬೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಪಘಾತದ ನಂತರ ಕುಣಿಗಲ್ - ತುಮಕೂರು ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿತ್ತು. ಅಪಘಾತ ವಿಷಯ ತಿಳಿದು ಹೆಚ್ಚಿನ ಸಂಖ್ಯೆಯ ಜನರು ಜಮಾಯಿಸಿದ್ದರು. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಕುಣಿಗಲ್ ರಸ್ತೆಯಲ್ಲಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ. ಇದಕ್ಕೆ ಕಡಿವಾಣ ಹಾಕಬೇಕು. ಅದೃಷ್ಟವಶಾತ್ ಇವತ್ತು ಅರಳಿ ಮರದ ಕೆಳಗಡೆ ಯಾರೂ ಇರಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಹೆದ್ದಾರಿಯಲ್ಲಿ ಹಂಪ್ಸ್ ಅಳವಡಿಸಬೇಕು. ಅಪಘಾತ ನಿಯಂತ್ರಣಕ್ಕೆ ಅಗತ್ಯ ಕ್ರಮ ವಹಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಕರ್ನಾಟಕ ಜಾಗತಿಕ ಬ್ರ್ಯಾಂಡ್: ಸಚಿವ ಡಾ. ಜಿ.ಪರಮೇಶ್ವರ

ಸುರಕ್ಷಿತ ಡಿಜಿಟಲ್ ವ್ಯವಸ್ಥೆ

ಬೆಂಗಳೂರು: ಕರ್ನಾಟಕವು ವಿಶ್ವದಲ್ಲೇ ಅತ್ಯಂತ ಸುರಕ್ಷಿತ ಡಿಜಿಟಲ್ ವ್ಯವಸ್ಥೆಯನ್ನು ಹೊಂದಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು.

ಸಿಐಡಿ ಹಾಗೂ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಸಿಐಡಿ ಇ ಕೋಡ್ 3ನೇ ವರ್ಷದ ಸೈಬರ್ ಅಪರಾಧ ತನಿಖಾ ಶೃಂಗಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ಕೇವಲ ಒಂದು ರಾಜ್ಯವಲ್ಲ, ಅದು ಜಾಗತಿಕ ಬ್ರ್ಯಾಂಡ್. ಜಗತ್ತು ಬೆಂಗಳೂರಿನತ್ತ ನೋಡಿದಾಗ, ನಾವೀನ್ಯತೆಯ ಭವಿಷ್ಯ ಕಾಣಿಸುತ್ತದೆ. ಉತ್ತಮ ಮತ್ತು ಅತ್ಯಂತ ಸುರಕ್ಷಿತ ಡಿಜಿಟಲ್ ವ್ಯವಸ್ಥೆಯನ್ನು ನಾವು ಹೊಂದಿದ್ದೇವೆ ಎಂದರು.

43 ಸಿಇಎನ್ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿ: ಸೈಬರ್ ದಾಳಿಗಳನ್ನು ತನಿಖೆ ಮಾಡಲು ಮತ್ತು ಡಿಜಿಟಲ್ ಪುರಾವೆಗಳನ್ನು ಸಂಗ್ರಹಿಸಲು ಅಗತ್ಯವಾದ ಕೌಶಲ್ಯ, ತರಬೇತಿ ಮತ್ತು ತಂತ್ರಜ್ಞಾನದೊಂದಿಗೆ ವಿಶೇಷ ಸೈಬರ್ ಅಪರಾಧ ಘಟಕಗಳನ್ನು ಸ್ಥಾಪಿಸುವ ಮೂಲಕ ರಾಜ್ಯ ಸರ್ಕಾರವು ಸೈಬರ್ ಅಪರಾಧಗಳನ್ನು ಮಟ್ಟಹಾಕಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ. ಕರ್ನಾಟಕದ ಎಲ್ಲ ಜಿಲ್ಲೆಗಳು ಮತ್ತು ಪ್ರಮುಖ ನಗರಗಳಲ್ಲಿ ಒಟ್ಟು 43 ಸಿಇಎನ್ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿದೆ. ನಮ್ಮ ನಾಗರಿಕರಿಗೆ ಸೈಬರ್ ಸುರಕ್ಷತೆ ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ಸೈಬರ್ ಅಪರಾಧಗಳ ಪತ್ತೆ ಶೇ.15 ರಷ್ಟಿದೆ: ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ಮಾತನಾಡಿ, ಡಿಜಿಟಲ್ ಸುರಕ್ಷತೆ ಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದ್ದರೂ, ಸೈಬರ್ ಅಪರಾಧಗಳ ಪತ್ತೆ ಹಚ್ಚುವ ಪ್ರಮಾಣವು ಕೇವಲ ಶೇ.10-15 ರಷ್ಟಿದೆ. ತಂತ್ರಜ್ಞಾನವು ಕೇವಲ ಉನ್ನತ ಮಟ್ಟದ ಕಚೇರಿಗಳಿಗೆ ಸೀಮಿತವಾಗದೆ, ಜನಸಾಮಾನ್ಯರು ನೇರವಾಗಿ ಸಂಪರ್ಕಿಸುವ ಪೊಲೀಸ್ ಠಾಣೆಗಳಿಗೆ ವಿಸ್ತರಿಸಿದಾಗ ಮಾತ್ರ ಸೈಬರ್ ಸವಾಲುಗಳನ್ನು ಎದುರಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ರಾಜ್ಯ ಪೊಲೀಸ್ ಮಹಾನಿರ್ದೇಶಕರಾದ ಡಾ. ಎಂ.ಎ.ಸಲೀಂ, ಸೈಬರ್ ಕಮಾಂಡ್ ಡಿಜಿಪಿ ಪ್ರಣವ್ ಮೊಹಾಂತಿ, ಇನ್ಫೋಸಿಸ್ ಫೌಂಡೇಶನ್ ಟ್ರಸ್ಟಿ ಸುನೀಲ್ ಕುಮಾರ್ ಧಾರೇಶ್ವರ್, ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾ ಸಿಇಒ ವಿನಾಯಕ ಗೋಡ್ಸೆ, ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.



ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರವು ರಾಜ್ಯದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಹಾಗೂ ವಿವಿಧ ರಾಜ್ಯ ಮತ್ತು ಕೇಂದ್ರ ಸಂಸ್ಥೆಗಳ ಸದಸ್ಯರು ಸೇರಿದಂತೆ 62 ಸಾವಿರಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಿದೆ.
■ ಡಾ. ಜಿ.ಪರಮೇಶ್ವರ, ಸಚಿವ

ಸೈಬರ್ ಕೈಂನಿಂದ 2031ರ ವೇಳೆಗೆ 12.2 ಟ್ರಿಲಿಯನ್ ನಷ್ಟ

ಸೈಬರ್ ಕಮಾಂಡ್‌ನ ಡಿಜಿಪಿ ಡಾ.ಪ್ರಣವ್ ಮೊಹಂತಿ ಮಾತನಾಡಿ, ಜಾಗತಿಕ ಮಟ್ಟದಲ್ಲಿ ಸೈಬರ್ ಅಪರಾಧಗಳಿಂದ ಉಂಟಾಗುವ ಆರ್ಥಿಕ ನಷ್ಟವು 2031ರ ವೇಳೆಗೆ ಜಗತ್ತಿನಾದ್ಯಂತ ಸುಮಾರು 12.2 ಟ್ರಿಲಿಯನ್ ನಷ್ಟು ಮೊತ್ತದ ಹಾನಿಯಾಗುವ ಸಂಭವವಿದೆ. ಇದು ಭಾರತದ ಒಟ್ಟು ಆರ್ಥಿಕತೆಯ ಮೂರು ಪಟ್ಟು ಹೆಚ್ಚು ಎಂಬುದು ಆತಂಕಕಾರಿ ಸಂಗತಿ. ಇತ್ತೀಚಿನ ದಿನಗಳಲ್ಲಿ ಪ್ರತಿ ಸೆಕೆಂಡಿಗೆ ಸುಮಾರು 3,41,000 ಮೊತ್ತದ ಹಣ ಸೈಬರ್ ದಾಳಿಗಳಿಂದಾಗಿ ಲೂಟಿಯಾಗುತ್ತಿದೆ. ಆಧುನಿಕ ಡಿಜಿಟಲ್ ಯುಗದಲ್ಲಿ ಸೈಬರ್ ಅಪರಾಧಗಳು ಕೇವಲ ಕಂಪ್ಯೂಟರ್ ಸಿಸ್ಟಮ್‌ಗಳನ್ನು ಹ್ಯಾಕ್ ಮಾಡುವುದಕ್ಕೆ ಸೀಮಿತವಾಗಿಲ್ಲ, ಬದಲಾಗಿ ವಂಚಕರು ಈಗ ಮನುಷ್ಯನ ಮನಸ್ಸನ್ನೇ ಹ್ಯಾಕ್ ಮಾಡುವ ಸೋಷಿಯಲ್ ಇಂಜಿನಿಯರಿಂಗ್ ತಂತ್ರಕ್ಕೆ ಮೊರೆ ಹೋಗುತ್ತಿದ್ದಾರೆ ಎಂದರು.

ಒಳ ಮೀಸಲಾತಿ ಕಾಯ್ದೆ ಅನೂರ್ಜಿತ: ಛಲವಾದಿ

ಬೆಂಗಳೂರು: ಒಳ ಮೀಸಲಾತಿ ಸಂಬಂಧಿತ ಕಾಯ್ದೆಗೆ ಕೋರ್ಟ್ ಒಪ್ಪಿಗೆ ಇಲ್ಲದ ಕಾರಣ ರಾಜ್ಯಪಾಲರಿಂದ ಅಂಕಿತ ಪಡೆಯಬಾರದಿತ್ತು ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆಕ್ಷೇಪಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿದ ಅವರು, ಒಳ ಮೀಸಲಾತಿ ಶೇ. 15ರಿಂದ 17ಕ್ಕೆ ಏರಿಸಲಾಗಿತ್ತು. ನ್ಯಾ.ನಾಗಮೋಹನ್ ದಾಸ್ ಅವರ ವರದಿಯನ್ನೂ ಪಡೆದರು. ಅದರ ಪ್ರಕಾರವೇ 6, 6, 5 ಎಂದು ಹಂಚಿಕೆ ಮಾಡಿದ್ದರು. ಕಾಯ್ದೆ ಅನುಮೋದಿಸಿ ರಾಜ್ಯಪಾಲರಿಂದ ಅಂಕಿತವನ್ನೂ ಪಡೆದಿದ್ದರು. ನೀವ್ಯಾಕೆ ರಾಜ್ಯಪಾಲರ ಅಂಕಿತ ತೆಗೆದುಕೊಂಡಿರಿ? ನಿಮಗೆ ಪ್ರಜ್ಞೆ, ಬುದ್ಧಿ ಇಲ್ಲವೇ? ಅಂಕಿತ ಪಡೆದ ಮೇಲೆ ಅದನ್ನೇ ಜಾರಿಗೊಳಿಸಬೇಕಿತ್ತು. ಶೇ.15ರ ಮೇಲೆ ಹಂಚಿಕೆ ಮಾಡುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ್ದೀರಿ. ಹಾಗಾಗಿ, ಈ ಕಾಯ್ದೆ ಅನೂರ್ಜಿತ ಎಂದರು. ನೀವು ಯಾವ ರೀತಿ 56 ಸಾವಿರ ಹುದ್ದೆಗಳನ್ನು ತುಂಬುತ್ತೀರಿ? ಎಸ್‌ಸಿ, ಎಸ್‌ಟಿಗಳ ಪಾಲು ಏನು? ಧಾರವಾಡ ವಿವಿ, ಬಿಡಿಎ, ಸಾರಿಗೆ ಇಲಾಖೆಯಲ್ಲಿ ಎ, ಬಿ, ಸಿ ಪ್ರವರ್ಗಗಳನ್ನು ಯಾಕೆ ಪ್ರಕಟಿಸಿದ್ದೀರಿ? ಗೊಂದಲ ಯಾಕೆ ಸೃಷ್ಟಿಸಿದ್ದೀರಿ? ಎಂದು ಪ್ರಶ್ನಿಸಿದ ಅವರು, ಎಲ್ಲ ಹುದ್ದೆಗಳೂ ಪ್ರವರ್ಗ ಎ ಎಂದು ಬಂದಿವೆ. ಈಗ ಜಾತಿ ಸಂಘರ್ಷಕ್ಕೆ ಸಿದ್ದರಾಮಯ್ಯ ಅವರು ಕುಮ್ಮಕ್ಕು ಕೊಡುತ್ತಿದ್ದಾರೆ ಎಂದು ಟೀಕಿಸಿದರು.

2025-26ರಲ್ಲಿ 42,017 ಕೋಟಿ ರೂ., ಈ ಬಾರಿ 44,632 ಕೋಟಿ ರೂ. ಇಟ್ಟಿದ್ದಾಗಿ ಘೋಷಿಸಿದ್ದಾರೆ. 4 ವರ್ಷಗಳಲ್ಲಿ 1,56,701 ಕೋಟಿ ರೂ. ಕೊಟ್ಟ ಘೋಷಣೆ ಮಾಡಿದ್ದಾರೆ. ಆದರೆ, ಪೈಕಿ ಎಸ್‌ಸಿ-ಎಸ್‌ಟಿ ಕಲ್ಯಾಣ ಕಾರ್ಯಕ್ರಮಗಳಿಗೆ 25,291 ಕೋಟಿ ರೂ. ಮಾತ್ರ ಉಳಿದಿದೆ ಎಂದು ವಿವರಿಸಿದರು.

ಪರಿಶಿಷ್ಟ ವರ್ಗಗಳಿಗೆ ದೋಖಾ

ರಾಜ್ಯ ಸರ್ಕಾರದ 2026-27ರ ಆಯವ್ಯಯ ಪತ್ರವನ್ನು ಶುಕ್ರವಾರ ಮುಖ್ಯಮಂತ್ರಿ ಮತ್ತು ಹಣಕಾಸು ಸಚಿವ ಸಿದ್ದರಾಮಯ್ಯ ಮಂಡಿಸಿದ್ದಾರೆ. ರಾಜ್ಯ ಸರ್ಕಾರವು ಉಚಿತ, ಖಚಿತ, ನಿಶ್ಚಿತ ಎಂಬ ಘೋಷವಾಕ್ಯದಡಿ ಅಧಿಕಾರಕ್ಕೆ ಬಂದಿತ್ತು. ಪರಿಶಿಷ್ಟ ಜಾತಿ-ವರ್ಗಗಳಿಗೆ ವಿಶೇಷಗಳಿವೆ. ಅವರಿಗೆ ಘೋಷಣೆಗಳು ಉಚಿತ, ದೋಖಾ ಖಚಿತ, ನಂಬಿದವರ ಸರ್ವನಾಶ ನಿಶ್ಚಿತ ಎಂದು ವಿಶ್ಲೇಷಿಸಿದರು.

ಎಆರ್‌ಎಐ ಕೇಂದ್ರಕ್ಕೆ ಜಾಗ: ಎಚ್‌ಡಿಕೆ ಅಭಿನಂದನೆ

ಮಂಡ್ಯ: ಮಂಡ್ಯದಲ್ಲಿ ಆಟೋಮೋಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ಎಆರ್‌ಎಐ) ಸಂಶೋಧನೆ ಮತ್ತು ಪರೀಕ್ಷಾ ಕೇಂದ್ರ ತೆರೆಯಲು 100 ಎಕರೆ ಭೂಮಿಯನ್ನು ನೀಡುವುದಾಗಿ ರಾಜ್ಯ ಸರ್ಕಾರ ಬಜೆಟ್‌ನಲ್ಲಿಯೇ ಘೋಷಣೆ ಮಾಡಿರುವುದು ಸ್ವಾಗತಾರ್ಹ. ಇದಕ್ಕಾಗಿ ಸರ್ಕಾರ ಮತ್ತು ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಡ್ಯದಲ್ಲಿ ಕೈಗಾರಿಕೆಗೆ ಅಭಿವೃದ್ಧಿಗೆ ಪೂರಕ ವ್ಯವಸ್ಥೆಯನ್ನು ಸೃಷ್ಟಿ ಮಾಡಬೇಕು. ಅದಕ್ಕಾಗಿ ಎಲ್ಲರೂ ಶ್ರಮಿಸಬೇಕು. ಎಆರ್‌ಎಐ ಕೇಂದ್ರ ಸ್ಥಾಪನೆಗೆ ಮೊದಲ ಹಂತದಲ್ಲಿ ಕೇಂದ್ರ ಸರ್ಕಾರವು 500 ಕೋಟಿ ವೆಚ್ಚ ಮಾಡುತ್ತಿದೆ. ನಂತರ ಇನ್ನೂ 500 ಕೋಟಿಗಳನ್ನು ಹೂಡಿಕೆ ಮಾಡಲಾಗುವುದು. ಆದಷ್ಟು ಬೇಗ ನನ್ನ ಸಚಿವಾಲಯದ ಅಧಿಕಾರಿಗಳು, ತಾಂತ್ರಿಕ ನಿಪುಣರು ಆಗಮಿಸಿ ಸ್ಥಳ ಪರಿಶೀಲನೆ ನಡೆಸುವರು. ಭೂಮಿಯನ್ನು ರಾಜ್ಯ ಸರ್ಕಾರ ಎಲ್ಲಿ ಕೊಡಲಿದೆ ಎಂಬುದನ್ನು ಎದುರು ನೋಡುತ್ತಿದ್ದೇವೆ. ಈಗಾಗಲೇ ಸರ್ಕಾರ ಗುರುತಿಸಿರುವ ಭೂಮಿ ಯೋಜನೆಗೆ ಸೂಕ್ತವೋ ಅಲ್ಲವೋ ಎಂದು ಪರಿಶೀಲನೆ ನಡೆಸುವರು ಎಂದರು.

ಈಗಾಗಲೇ ರಾಜ್ಯದಲ್ಲಿ ಎಲೆಕ್ಟ್ರಿಕ್ ವಾಹನ ಕ್ಷೇತ್ರಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಎಫ್‌ಕೆಸಿಸಿಐ ಪದಾಧಿಕಾರಿಗಳು ಸೇರಿ 50ಕ್ಕೂ ಹೆಚ್ಚು ಕೈಗಾರಿಕೋದ್ಯಮಿಗಳ ಸಭೆ ನಡೆಸಿದ್ದೇನೆ. ರಾಜ್ಯಕ್ಕೆ ಒಳ್ಳೆಯದಾಗಬೇಕು ಎನ್ನುವ ಉದ್ದೇಶದಿಂದ ನಾನು ಕೆಲಸ ಮಾಡುತ್ತಿದ್ದೇನೆ. ಯಾರನ್ನೋ ಮೆಚ್ಚಿಸಲು ಕೆಲಸ ಮಾಡುತ್ತಿಲ್ಲ. ಜನರ ಋಣ ತೀರಿಸಲು ಕೆಲಸ ಮಾಡುತ್ತಿದ್ದೇನೆ ಎಂದು ಅವರು ಹೇಳಿದರು.



ದಾಖಲೆ ಬಜೆಟ್ಟಿನ ದಾಖಲೆ ಹೊರೆ ಜನರ ಮೇಲೆ ಬೀಳಲಿದೆ

ಸಿದ್ದರಾಮಯ್ಯ ಅವರು ದಾಖಲೆ 17ನೇ ಬಜೆಟ್ ಮಂಡಿಸಿದ್ದಾರೆ ಸರಿ. ಹಾಗೆಯೇ ಜನರ ಮೇಲೆಯೂ ದಾಖಲೆಯ ಸಾಲದ ಹೊರೆ ಹೊರಿಸಿದ್ದಾರೆ. ಈ ದಾಖಲೆ ಬಜೆಟ್‌ನ ಹೊಡೆತ ಜನರ ಮೇಲೆ ಹೇಗೆ ಬೀಳುತ್ತೆ ಅಂತ ನೋಡಬೇಕು. ಆರ್ಥಿಕ ತಜ್ಞರು ಸಹ ಈ ಬಗ್ಗೆ ಹೇಳಿದ್ದಾರೆ. ಈ ಬಜೆಟ್‌ನ ಅಂಕಿ-ಅಂಶದಿಂದ ಸಾಕಷ್ಟು ಸಮಸ್ಯೆ ಆಗುತ್ತೆ ಎಂದು ಎಚ್ಚರಿಕೆ ನೀಡಿದ್ದಾರೆ. ರಾಜ್ಯದ ಸಾಲದ ಪ್ರಮಾಣ ವಿತ್ತೀಯ ಹೊಣೆಗಾರಿಕೆಯನ್ನು ಮೀರಿದೆ. ಮನಸೋ ಇಚ್ಛೆ ಸಾಲ ಮಾಡಿದ್ದಾರೆ. ಇದರ ಪರಿಣಾಮ ಮುಂದಿನ ದಿನಗಳಲ್ಲಿ ಗೊತ್ತಾಗುತ್ತೆ ಎಂದು ಸಚಿವರು ಕಳವಳ ವ್ಯಕ್ತಪಡಿಸಿದರು.

ಆ ವ್ಯಕ್ತಿ ಜತೆ ನನ್ನ ಹೋಲಿಕೆ ಮಾಡಬೇಡಿ

ಮದ್ದೂರು ಕ್ಷೇತ್ರದ ಶಾಸಕ ಕದಲೂರು ಉದಯ್ ಅವರು ಟೀಕೆ ಮಾಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ಉತ್ತರಿಸಿದ ಎಚ್.ಡಿ.ಕುಮಾರಸ್ವಾಮಿ ಅವರು, ಅವರ ಬಗ್ಗೆ ನಾನು ಚರ್ಚೆ ಮಾಡೋ ಅವಶ್ಯಕತೆ ಇಲ್ಲ. ಆ ವ್ಯಕ್ತಿ ಜತೆ ನನ್ನ ಯಾಕೆ ಹೋಲಿಕೆ ಮಾಡ್ತೀರಾ. ನಾನು ಶ್ರೀಲಂಕಾಗೆ ಹೋಗಿ ಜಾಮೀನು ಪಡೆಯುವವರೆಗೆ ಕೂತಿರಲಿಲ್ಲ ಎಂದು ಛೇಡಿಸಿದರು.

ಬಜೆಟ್ ಕುರಿತು ನಾಳೆ ಶಾಸಕರಿಗೆ ಕಾರ್ಯಾಗಾರ: ಸ್ಪೀಕರ್ ಖಾದರ್

ಮಂಗಳೂರು: ರಾಜ್ಯ ವಿಧಾನಮಂಡಲದ ಬಜೆಟ್ ಅಧಿವೇಶನ ಆರಂಭವಾಗಲಿದ್ದು, ಈ ಹಿನ್ನೆಲೆಯಲ್ಲಿ ಮಾ. 9ರಂದು ಶಾಸಕರಿಗಾಗಿ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್ ತಿಳಿಸಿದ್ದಾರೆ.




ಮಂಗಳೂರಿನಲ್ಲಿ ಶುಕ್ರವಾರ ಸುದ್ದಿಗಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿವೇಶನದಲ್ಲಿ ಮಂಡಿಸಲಾದ ಬಜೆಟ್ ಕುರಿತು ಮೂರು ವಾರಗಳ ಕಾಲ ಸುದೀರ್ಘ ಚರ್ಚೆಗೆ ಅವಕಾಶ ಇದೆ. ಇದಕ್ಕೆ ಪೂರ್ವಭಾವಿಯಾಗಿ ಬಜೆಟ್ ಕುರಿತು ಸಂಪೂರ್ಣ ಮಾಹಿತಿ ನೀಡಲು ಶಾಸಕರಿಗೆ ಈ ಕಾರ್ಯಾಗಾರವನ್ನು ಬೆಂಗಳೂರಿನ ಹೋಟೆಲ್ ಲಲಿತ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದರು. 17 ಬಾರಿ ಬಜೆಟ್ ಮಂಡಿಸಿದ ಅನುಭವ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಾಗಾರ ನಡೆಸಿಕೊಡಲಿದ್ದಾರೆ. ಹಿರಿಯ ಅಧಿಕಾರಿಗಳು ಕೂಡ ಭಾಗವಹಿಸಲಿದ್ದಾರೆ. ಬಜೆಟ್ ಎಂದರೇನು? ಅನುದಾನದ ಹಂಚಿಕೆ ಹೇಗೆ? ಅನುದಾನದ ಬಳಕೆ ಹೇಗೆ ಇತ್ಯಾದಿ ವಿಷಯಗಳ ಮೇಲೆ ಈ ಕಾರ್ಯಾಗಾರ ಬೆಳಕು ಚೆಲ್ಲಲಿದೆ. ಆದರೆ ಈ ಬಾರಿ ಮಂಡಿಸಿದ ಬಜೆಟ್‌ಗೂ ಈ ಕಾರ್ಯಾಗಾರಕ್ಕೂ ಯಾವುದೇ ಸಂಬಂಧ ವಿಲ್ಲ ಎಂದವರು ಸ್ಪಷ್ಟಪಡಿಸಿದರು. ಈ ಬಾರಿಯ ಬಜೆಟ್ ಸಾಲ ಮಾಡಿ ಮಂಡಿಸಿದ ಬಜೆಟ್ ಎಂಬ ಆರೋಪ, ಟೀಕೆಗಳು ಕೇಳಿಬರುತ್ತಿವೆ. ಆರೋಪಗಳು ಸಹಜ, ಕೇಂದ್ರದಲ್ಲೂ ಬಜೆಟ್ ಬಗ್ಗೆ ಟೀಕೆ ಆಗುತ್ತೆ. ಹಾಗೆಯೇ ರಾಜ್ಯದಲ್ಲೂ ಸಹಜ. ಪ್ರತಿಪಕ್ಷದ ಸದಸ್ಯರು ಅವರ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಅವರಿಗೆ ಅವರ ಅಭಿಪ್ರಾಯ ತಿಳಿಸುವ ಅವಕಾಶ ಇದೆ.ಎಂದರು.

ಕೇಂದ್ರದ ಜತೆ ಕೈಜೋಡಿಸಿ: ಸೋಮಣ್ಣ


ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರ್ಕಾರ ಅಹಂಕಾರ ಬಿಟ್ಟು ಕೇಂದ್ರ ಸರ್ಕಾರದ ಜೊತೆ ಕೈಜೋಡಿಸಿ ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಿವಿಮಾತು ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಪ್ರಧಾನಿ ನರೇಂದ್ರಮೋದಿ ಅವರ ಪಾರದರ್ಶಕ ಆಡಳಿತವನ್ನು ನೋಡಿ ಕಾಂಗ್ರೆಸ್ ಸರ್ಕಾರ ಕಲಿಯಬೇಕು. ಸಾಲದ ಪ್ರಮಾಣ ಏರಿಸುವ ಮೂಲಕ ರಾಜ್ಯವನ್ನು ಮಾರಾಟಕ್ಕೆ ಇಟ್ಟಿದ್ದಾರೆ.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಇಂತಹ ಬಜೆಟ್ ನಿರೀಕ್ಷೆ ಮಾಡಿರಲಿಲ್ಲ ಎಂದರು. ನಾಲ್ಕು ಸಾವಿರ ಕನ್ನಡ ಶಾಲೆಗಳನ್ನು ಮುಚ್ಚಿಸಿ ಅಲ್ಪಸಂಖ್ಯಾತ ವರ್ಗದವರಿಗೆ ನಾಲ್ಕು ಸಾವಿರ ಕೋಟಿ ರೂ. ಅನುದಾನ ನೀಡಿದ್ದಾರೆ ಎಂದರು.

ಓದುಗರ ವಿಶೇಷ ಓದು



ಆಚಾರ್ಯ ಮಧ್ವರ ಸನ್ನಿಧಿ, ಕಾದಂಬರಿ
ಲೇ: ಡಾ.ಸುರೇಶ ಪಾಟೀಲ
ಪ್ರ: ಐಸಿರಿ ಪ್ರಕಾಶನ, ಬೆಂಗಳೂರು
ಮೊದಲ ಮುದ್ರಣ: 2025
ಪುಟ: 212 ರೂ. 250
ಸಂಪರ್ಕ: 9448700315



ಶ್ರೇಷ್ಠ ಜೀವನಕ್ಕಾಗಿ 10 ಆದರ್ಶಗಳು
ಲೇ: ಡಾ. ರಾಜನ್ ದೇಶಪಾಂಡೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಮೊದಲ ಮುದ್ರಣ: 2026
ಪುಟ: 144 ರೂ. 195
ಸಂಪರ್ಕ: (0836)-4252498/ 9448110034



ಹುಡುಕಾಟ
ಲೇ: ವೀಣಾ ಬನ್ನಂಜೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಮೊದಲ ಮುದ್ರಣ: 2017
ಪುಟ: 200 ರೂ. 250
ಸಂಪರ್ಕ: (0836)-4252498/ 9448110034



ಜ್ಞಾನ ದೇಗುಲ ನಮ್ಮೂರ ಸರ್ಕಾರಿ ಶಾಲೆ, ನಾಟಕ
ಲೇ: ಸಿದ್ದೇಶ್ವರ ನನಸುಮನೆ
ಪ್ರ: ಜನಪದರು ಸಾಂಸ್ಕೃತಿಕ ವೇದಿಕೆ (ರಿ) ಪ್ರಕಾಶನ, ಬೆಂಗಳೂರು
ಮೊದಲ ಮುದ್ರಣ: 2025
ಪುಟ: 76 ರೂ. 50
ಸಂಪರ್ಕ: 9448578021

ನ್ಯಾಯಾಲಯದ ಆದೇಶ ಎತ್ತಿಹಿಡಿದ ಹೈ

ಬೆಂಗಳೂರು: ಸ್ವಂತ ಮಗಳನ್ನು ತಾಯಿಯೇ ವೇಶ್ಯಾವಾಟಿಕೆ ದಂಧೆಗೆ ದೂಡಿದ ಆರೋಪ ಹಿನ್ನೆಲೆಯಲ್ಲಿ ವೇಶ್ಯಾವಾಟಿಕೆ ಜಾಲದಿಂದ ರಕ್ಷಿಸಲ್ಪಟ್ಟ ಸಂತ್ರಸ್ತೆಯನ್ನು ತಾಯಿಯ ಸುಪರ್ದಿಗೆ ವಹಿಸಲು ನಿರಾಕರಿಸಿದ್ದ ವಿಚಾರಣಾಧೀನ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ವಿಚಾರಣಾಧೀನ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಅರ್ಜಿ ವಜಾಗೊಳಿಸಿದೆ. ವ್ಯಾಜ್ಯದ ವಿಷಯವು ಅಪರಾಧದ ಬಗ್ಗೆ ಅಥವಾ ಸರ್ಕಾರ ಸಲ್ಲಿಸಿರುವ ಆರೋಪ ಪಟ್ಟಿಗೆ ಸಂಬಂಧಿಸಿದ್ದಲ್ಲ, ಬದಲಿಗೆ, ಸಂತ್ರಸ್ತೆ ಮತ್ತು ಇತರರ ಹೇಳಿಕೆಗಳು ತಾಯಿಯೇ ತನ್ನ ಮಗಳನ್ನು ವೇಶ್ಯಾವಾಟಿಕೆಗೆ ಒತ್ತಾಯಿಸಿದ್ದಾಳೆ ಎಂಬುದನ್ನು ಮೇಲ್ನೋಟಕ್ಕೆ ಸೂಚಿಸುತ್ತವೆ. ವೇಶ್ಯಾವಾಟಿಕೆ ದಂಧೆಯಿಂದ ಸಂತ್ರಸ್ತೆಯನ್ನು ರಕ್ಷಿಸಿ ಮಕ್ಕಳ ಕಲ್ಯಾಣ ಕೇಂದ್ರದ ವಶದಲ್ಲಿರಿಸಿದ್ದರೆ, ತಾಯಿಯೇ ತನ್ನ ಮಗಳನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿದ್ದಾಳೆ ಎಂಬ ಆರೋಪಗಳಿವೆ. ಇಂಥ ಸಂದರ್ಭದಲ್ಲಿ ಮಗುವನ್ನು ತಾಯಿಯ ವಶಕ್ಕೆ ನೀಡಬಾರದು ಎಂಬ ಹೆಚ್ಚುವರಿ ರಾಜ್ಯ ಸರ್ಕಾರಿ ಅಭಿಯೋಜಕರ ವಾದ ಸರಿಯಾಗಿದೆ ಎಂದು ನ್ಯಾಯಾಲಯ ಆದೇಶದಲ್ಲಿ ಅಭಿಪ್ರಾಯಪಟ್ಟಿದೆ.

ಪ್ರಕರಣದ ಆರೋಪ ಪಟ್ಟಿ ಸಲ್ಲಿಸುವಾಗ ತಾಯಿಯ ಹೆಸರನ್ನು ಹೇಗೆ ಕೈಬಿಡಲಾಗಿದೆ ಎಂಬುದು ಅರ್ಥವಾಗದ ವಿಷಯವಾಗಿದೆ. ಮೇಲ್ನೋಟಕ್ಕೆ ಆಕೆ ತನ್ನ ಮಗಳನ್ನು ವೇಶ್ಯಾವಾಟಿಕೆಗೆ ತಳ್ಳಿದ್ದಾಳೆ ಎಂಬ ಬಲವಾದ ಅನುಮಾನವಿದ್ದರೂ ಸಹ, ಆರೋಪ ಪಟ್ಟಿಯಲ್ಲಿ ಆಕೆಯ ಹೆಸರನ್ನು ಪೊಲೀಸರು ಹೇಗೆ ಬಿಡಲು ಸಾಧ್ಯ ಎಂದು ಪ್ರಶ್ನಿಸಿರುವ ನ್ಯಾಯಾಲಯವು ಸಂತ್ರಸ್ತೆಯನ್ನು ಅರ್ಜಿದಾರರ ವಶಕ್ಕೆ ನೀಡುವ ಬದಲು ಆಕೆಗೆ ಸುರಕ್ಷಿತ ವ್ಯವಸ್ಥೆ ಕಲ್ಪಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದಿದೆ.

ದೆಹಲಿ ಮತ್ತು ಬಾಂಬೆ ಹೈಕೋರ್ಟ್‌ಗಳ ತೀರ್ಪುಗಳನ್ನು ಉಲ್ಲೇಖಿಸಿರುವ ನ್ಯಾಯಾಲಯ, ರಕ್ಷಿಸಲ್ಪಟ್ಟ ವ್ಯಕ್ತಿಗಳನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿದಾಗ, ಮ್ಯಾಜಿಸ್ಟ್ರೇಟ್ ಅವರು ಸೆಕ್ಷನ್ 17(2)ರ ಅಡಿಯಲ್ಲಿ ಮೊದಲ ಬಾರಿಗೆ ಹಾಜರುಪಡಿಸಿದಾಗಲೇ ಅವರ ವಯಸ್ಸನ್ನು ಖಚಿತಪಡಿಸಿಕೊಳ್ಳಬೇಕು. ಒಂದುವೇಳೆ ಆ ವ್ಯಕ್ತಿ 18 ವರ್ಷದೊಳಗಿನವರಾಗಿದ್ದು, ಕಾನೂನಿನ ಸಂಘರ್ಷಕ್ಕೊಳಪಟ್ಟ ಬಾಲಾಪರಾಧಿಯಾಗಿದ್ದರೆ ಬಾಲನ್ಯಾಯ ಮಂಡಳಿಗೆ ಅಥವಾ ಆ ವ್ಯಕ್ತಿಯು ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಗುವಾಗಿದ್ದರೆ ಮಕ್ಕಳ ಕಲ್ಯಾಣ ಸಮಿತಿಗೆ ಪ್ರಕರಣವನ್ನು ವರ್ಗಾಯಿಸಬೇಕು ಎಂದು ಹೇಳಿದೆ.

ಮೇಲಿನ ತೀರ್ಪುಗಳ ಆಧಾರದಲ್ಲಿ, ತನ್ನ ಮಗಳನ್ನೇ ವೇಶ್ಯಾವಾಟಿಕೆ ದಂದೆಯಲ್ಲಿ ಬಳಸಿಕೊಳ್ಳುತ್ತಿದ್ದಾಳೆ ಎಂದು ಆರೋಪಿಸಲಾದ ತಾಯಿಗೆ ಮಗುವನ್ನು ಹಸ್ತಾಂತರಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಯಾವುದೇ ವಿಚಾರಣಾ ಅರ್ಹತೆ (ಮೆರಿಟ್) ಹೊಂದಿರದ ಕಾರಣ ಅರ್ಜಿ ವಜಾಗೊಳಿಸಲಾಗುತ್ತಿದೆ ಎಂದು ಆದೇಶಿಸಿದೆ.

ಪ್ರಶ್ನೋತ್ತರ ರತ್ನಮಾಲಿಕೆ



• ವಿದ್ವಾನ್ ನರಸಿಂಹ ಭಟ್

ಕುಲ ಮತ್ತು ಶೀಲದಲ್ಲಿ ಸದಾ ಅಚಲನಾದವನು ಯಾರು?

• ಸಜ್ಜನ ಮಹಾಪುರುಷ

ಈ ಪ್ರಶ್ನೆಯು ಬಹಳ ವಿಶಿಷ್ಟವಾದದ್ದು. ಏಕೆಂದರೆ ಕಾಲ ಮತ್ತು ವ್ಯಕ್ತಿಯ ನಡುವೆ ಇರುವ ಸಂಬಂಧವನ್ನು ವಿವರಿಸುವ ಪ್ರಶ್ನೋತ್ತರ ಇದಾಗಿದೆ. ಕಾಲವೆಂಬುದು ಹೇಗೆ ವ್ಯಕ್ತಿಯ ಮೇಲೆ ಪ್ರಭಾವವನ್ನು ಬೀರಬಲ್ಲದು ಎಂಬುದು ಇಲ್ಲಿದೆ. ಪುರುಷನೊಬ್ಬನು ತನ್ನ ಶೀಲ ಮೊದಲಾದ ಗುಣಗಳನ್ನು ಅನೇಕ ಕಾರಣಗಳಿಂದ ಬದಲಿಸುತ್ತಾನೆ. ಎಲ್ಲವೂ ಇದ್ದಂತೆ ಇರುವುದಿಲ್ಲ. ವ್ಯಕ್ತಿಯ ಕುಲ ಮತ್ತು ಶೀಲಾ ಎಂಬುದನ್ನು ಬದಲಿಸಬಹುದು. ಅಂತಹ ಶಕ್ತಿ ಯಾವುದಕ್ಕೆ ಇದೆ? ಎಂದರೆ ಕಾಲಕ್ಕೆ ಇದೆ ಎಂಬುದು ಇಲ್ಲಿನ ಆಶಯ. ಹಾಗಾಗಿ ಅಂತಹ ಕಾಲ ಮತ್ತು ವ್ಯಕ್ತಿ ನಡುವೆ ಸಂಬಂಧ ಹೇಗಿದೆ ಎಂಬುದನ್ನು ಇಲ್ಲಿ ತಿಳಿಯಬಹುದಾಗಿದೆ

ಕೃತ ತ್ರೇತ ದ್ವಾಪರ ಮತ್ತು ಕಲಿ ಎಂಬುದಾಗಿ ಕಾಲ ನಾಲ್ಕು ಬಗೆ. ಈ ನಾಲ್ಕರ ಹಿಂದಿರುವ ವಿಷಯವಾದರೂ ಏನು? ಈ ನಾಲ್ಕರ ಪ್ರಭೇದಕ್ಕೆ ಕಾರಣವೇನು? ಈ ಪ್ರಭೇದವು ಹೇಗೆ ವ್ಯಕ್ತಿಯ ಮೇಲೆ ಪ್ರಭಾವವನ್ನು ಬೀರುತ್ತದೆ? ಅತ್ಯಂತ ಪ್ರಧಾನವಾಗಿ ಯುಗ ಎಂಬ ಭೇದವು ಧರ್ಮದ ಹಿನ್ನೆಲೆಯಲ್ಲಿ ಬಂದಿದೆ. ಕೃತಯುಗದಲ್ಲಿ ಧರ್ಮವು ಪೂರ್ಣವಾಗಿ ಇರುತ್ತದೆ. ತ್ರೇತಾಯುಗದಲ್ಲಿ ಅದೇ ಧರ್ಮವು ಕಾಲು ಭಾಗ ನಷ್ಟವಾಗುತ್ತದೆ. ಅಂದರೆ ಮುಕ್ಕಾಲು ಭಾಗ ಧರ್ಮ ಕಾಲು ಭಾಗ ಅಧರ್ಮ. ದ್ವಾಪರಯುಗದಲ್ಲಿ ಅರ್ಧ ಧರ್ಮ ಮತ್ತು ಅರ್ಧ ಅಧರ್ಮ. ಕಲಿಯುಗದಲ್ಲಿ ಮುಕ್ಕಾಲು ಭಾಗ ಅಧರ್ಮ ಕಾಲುಭಾಗ ಧರ್ಮ ಎಂಬುದಾಗಿ ಈ ಯುಗದ ಸ್ವಭಾವವನ್ನು ಧರ್ಮದ ಆಧಾರದ ಮೇಲೆ ಹೇಳಲಾಗಿದೆ. ಸೃಷ್ಟಿಯಲ್ಲಿ ಧರ್ಮದ ಕಾರಣದಿಂದ ಈ ವ್ಯತ್ಯಾಸವನ್ನು ಕಾಣಬಹುದು. ಆದರೆ ಈ ಪ್ರಶ್ನೆಯಲ್ಲಿ ಹೇಳಲಾದ ಸಜ್ಜನ ಅಥವಾ ಮಹಾಪುರುಷನ ಕುಲದಲ್ಲಾಗಲಿ ಅಥವಾ ಶೀಲದಲ್ಲಾಗಲಿ ಈ ಯುಗದ ಪರಿಣಾಮವಾಗಿ ಅಥವಾ ಕಾಲದ ಪರಿಣಾಮವಾಗಿ ಅವನಲ್ಲಿ ಯಾವ ವ್ಯತ್ಯಾಸನ್ನೂ ಕಾಣಲಾಗದು. ಕುಲ ಮತ್ತು ಶೀಲ ಇವೆರಡೂ ಪರಿವರ್ತಿತವಾಗುವುದು ಸಾಮಾನ್ಯವಾಗಿ ಬಹಳ ಕಷ್ಟಸಾಧ್ಯ.

ಅಂದರೆ ಒಬ್ಬ ವ್ಯಕ್ತಿಯ ಪರಿವರ್ತನೆಯನ್ನು ಅವನ ಕುಲಶೀಲದಲ್ಲಿ ನೋಡಬಹುದು. ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಈ ಎರಡು ಮಾನದಂಡಗಳಿಂದಲೇ ಅಳೆಯುವುದುಂಟು. ವ್ಯಕ್ತಿ ಹೇಗಿದ್ದಾನೆ? ಎಂದರೆ ಅವನ ಕುಲವನ್ನು ಮತ್ತು ಶೀಲವನ್ನು ಪ್ರಶ್ನಿಸುವುದುಂಟು. ಮಹಾಪುರುಷನು ತನ್ನ ಕುಲಕ್ಕೆ ಕಳಂಕ ಬಾರದ ರೀತಿಯಲ್ಲಿ ವರ್ತಿಸುತಾನೆ. ಕಾಲದಲ್ಲಿ ಎಷ್ಟೇ ವೈಷಮ್ಯ ಕಂಡುಬಂದರೂ ಆತ ಕುಲದಲ್ಲೂ ಮತ್ತು ಶೀಲದಲ್ಲೂ ಅವಿಚಲಿತನಾಗಿಯೇ ಇರುತ್ತಾನೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಶ್ರೀರಾಮಚಂದ್ರ. ಆತ ತನ್ನ ಕುಲಕ್ಕೆ ಬರುವ ಕಳಂಕವನ್ನು ತಪ್ಪಿಸುವುದಕೋಸ್ಕರ ಸೀತಾಪರಿತ್ಯಾಗದಂತಹ ಕಾರ್ಯಗಳನ್ನು ತನ್ನ ಜೀವನದಲ್ಲಿ ಮಾಡುತ್ತಾನೆ. ಚಿಕ್ಕ ಸಂಗತಿಯನ್ನು ಅವಗಣಿಸದೆ ಪ್ರತಿಯೊಂದುಕ್ಕೂ ಮಾನ್ಯತೆಯನ್ನು ಕೊಡುವುದನ್ನು ಕಾಣಬಹುದು. ಅಂದರೆ ಯಾವುದೇ ನಿಮಿತ್ತವೂ ಮಹಪುರುಷನನ್ನು ಕದಲಿಸುವುದಿಲ್ಲ ಎಂದರ್ಥ. ಮಹಾಪುರುಷನ ಲಕ್ಷಣವಿದಲ್ಲವೇ?

ವ್ಯಾಸ ವೀಕ್ಷಿತ



• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ರಾಕ್ಷಸನ ಚರ್ಮದಿಂದಾದ ನಗಾರಿ

ಜರಾಸಂಧವಧೆಗಾಗಿ ಕೃಷ್ಣಾರ್ಜುನ-ಭೀಮಸೇನರು ಮಗಧದೇಶಕ್ಕೆ ಪ್ರಯಾಣಿಸಿದರಷ್ಟೆ. ಮಗಧವನ್ನು ಸಮೀಪಿಸುತ್ತಲೇ ಕೃಷ್ಣನು ಅದರ ಸೊಬಗನ್ನು ತಾನೇ ವರ್ಣಿಸಿದನು: ಈ ಪಂಚ ಪರ್ವತಗಳು ಹೇಗಿವೆ! ಮಹಾಶಿಖರಗಳನ್ನುಳ್ಳ ಇವು ತಂಪನೆಯ ನೆರಳುಳ್ಳ ಮರಗಳಿಂದ ತುಂಬಿವೆ. ಇವೈದೂ ಒಟ್ಟಿಗೆ ಸೇರಿ, ಪರಸ್ಪರ ಅಂಟಿಕೊಂಡಿದ್ದು, ಈ ಗಿರಿವ್ರಜನಗರವನ್ನು ಕಾಪಾಡುತ್ತಿರುವಂತಿದೆಯಲ್ಲವೇ? ಮರದ ಕೊಂಬೆಗಳ ಕೊನೆಗಳನ್ನು ಹೂಗಳು ದಟ್ಟವಾಗಿ ಸುತ್ತುವರೆದಿವೆ. ಆ ಹೂಗಳಾದರೂ ಮನೋಹರವೂ ಸುಗಂಧಭರಿತವೂ ಆಗಿವೆ; ಕಾಮಿಜನರಿಗೆ ಪ್ರಿಯವೆನಿಸುವ ಲೋಧ್ರಗಿಡಗಳ ಕಾಡುಗಳಿಂದ ತುಂಬಿವೆ.

ಕಠೋರವ್ರತ ಪಾಲಕರಾದ ಗೌತಮ ಮಹರ್ಷಿಗಳು ಮಕ್ಕಳನ್ನು ಪಡೆದದ್ದು ಈ ಎಡೆಯಲ್ಲಿಯೇ. ಅದೇ ಕಾರಣಕ್ಕೇ ಅವರು ಇಲ್ಲೇ ಇದ್ದು ಮಗಧದೇಶದ ರಾಜರನ್ನು ಅನುಗ್ರಹಿಸುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಅಂಗದೇಶ, ವಂಗದೇಶ ಮುಂತಾದ ದೇಶಗಳ ಮಹಾಬಲಶಾಲಿಗಳಾದ ರಾಜರುಗಳು ಇಲ್ಲಿಗೆ ಬಂದು ಸಂತೋಷವಾಗಿ ಇರುತ್ತಿದರು. ಅರ್ಜುನ, ನೋಡು ಈ ಆಕರ್ಷಕವಾದ ಪಿಪ್ಪಲಗಳ ಕಾಡುಗಳನ್ನು ಹಾಗೂ ಶುಭವಾದ ಲೋಧ್ರಗಳ ಕಾಡುಗಳನ್ನು. ಇವೆಲ್ಲವೂ ಗೌತಮರ ವಾಸಸ್ಥಾನಕ್ಕೆ ಸಮೀಪದಲ್ಲೇ ಹುಟ್ಟಿ ಬೆಳೆದುಕೊಂಡಿವೆ. ಈ ಸ್ಥಾನಕ್ಕೆ ಮನುವಿನ ಅನುಗ್ರಹವಾಗಿದೆ. ಎಂದೇ ಇಲ್ಲಿ ಎಂದೂ ಕ್ಷಾಮವಿಲ್ಲ. ಬೇರೆ ಅನುಗ್ರಹಗಳೂ ಈ ಎಡೆಗೆ ಉಂಟು.

ಹೀಗೆ ಈ ನಗರವು ರಮಣೀಯವಾಗಿರುವುದಲ್ಲದೆ ದುರಾಧರ್ಷವೂ ಆಗಿದೆ. ಇಂತಹ ಜಾಗದಲ್ಲಿ ಅರ್ಥಸಿದ್ಧಿಗಾಗಿ ಜರಾಸಂಧನು ನೆಲೆಯೂರಿದ್ದಾನೆ. ಇಂತಹವನ ಮನೆಗೇ ಹೋಗಿ ನಾವಿಂದು ಆತನ ದರ್ಪವನ್ನು ಅಡಗಿಸಲಿದ್ದೇವೆ ಎಂದನು.

ಹೀಗೆ ಮಾತುಕತೆಯಾದ ಮೇಲೆ ಕೃಷ್ಣಾರ್ಜುನ-ಭೀಮಸೇನರು ಮಗಧರಾಜಧಾನಿಯತ್ತ ಸಾಗಿದರು. ಅಲ್ಲಿ ನಾಲ್ಕುವರ್ಣದ ಜನಗಳೂ ಇದ್ದರು. ಜನರೆಲ್ಲರೂ ಹೃಷ್ಟಪುಷ್ಟರಾಗಿದ್ದರು. ಅನೇಕವಾದ ಉತ್ಸವಗಳಿಂದ ಕೂಡಿದ್ದ ಗಿರಿವ್ರಜವನ್ನು ಅವರು ತಲುಪಿದರು. ಆದರೆ ಅವರು ನಗರದ್ವಾರದ ಮೂಲಕ ಅದನ್ನು ಪ್ರವೇಶಿಸಲಿಲ್ಲ. ಬದಲಾಗಿ ಚೈತ್ಯಕಪರ್ವತವನ್ನು ಹತ್ತಿದರು. ಅದಾದರೂ ನಗರವಾಸಿಗಳಿಂದ ಪೂಜಿತವಾದದ್ದು, ಜನರಿಗೆ ಪ್ರಿಯವಾದದ್ದು. ಹಿಂದೆ ಅಲ್ಲೊಬ್ಬ ರಾಕ್ಷಸನಿದ್ದ. ಆತನ ಹೆಸರು ಋಷಭ. ಆತ ಮಾಂಸಭಕ್ಷಕ. ಜರಾಸಂಧನ ತಂದೆಯಾದ ಬೃಹದ್ರಥ ಅಲ್ಲಿಗೆ ಹೋಗಿ ಆತನನ್ನು ಸಂಹರಿಸಿದ. ಆತನ ಚರ್ಮವನ್ನು ಸುಲಿಸಿದ. ಮೂರು ಭೇರಿಗಳನ್ನು ಮಾಡಿಸಿ, ಆ ಭೇರಿಗಳಿಗೆ ಆ ರಾಕ್ಷಸನ ಚರ್ಮವನ್ನು ಬಳಸಿದ. ಆ ಭೇರಿಗಳು ಹೇಗಿದ್ದುವೆಂದರೆ, ಒಮ್ಮೆ ಸದ್ದು ಮಾಡಿದರೆ ಸಾಕು, ಅವುಗಳ ಮೇಲೆ ದಿವ್ಯಪುಷ್ಪಗಳ ವರ್ಷವಾಗುತ್ತಿತ್ತು. ಹಾಗಿದ್ದ ಆ ಮೂರೂ ನಗಾರಿಗಳನ್ನು ಭೀಮಾರ್ಜುನರು ಧ್ವಂಸ ಮಾಡಿದರು. ಅದಂತೂ ಜರಾಸಂಧನ ಶಿರಸ್ಸನ್ನು ಮೆಟ್ಟಿದ ಹಾಗೆಯೇ ಭಾಸವಾಯಿತು.

ಆ ಬಳಿಕ ಆ ಪರ್ವತದ ಶೃಂಗವನ್ನು ಹತ್ತಿದರು. ಆ ಶೃಂಗವು ಸ್ಥಿರವಾಗಿತ್ತು, ಸುವಿಪುಲವಾಗಿತ್ತು. ಗಂಧಗಳಿಂದಲೂ ಮಾಲೆಗಳಿಂದಲೂ ಅದನ್ನು ಅರ್ಚಿಸುವುದು ಅಲ್ಲಿಯ ಜನರ ಸಂಪ್ರದಾಯವಾಗಿತ್ತು. ಹಾಗೆ ಸುಪ್ರತಿಷ್ಠಿತವಾದ ಆ ಪರ್ವತಶಿಖರವನ್ನು ತಮ್ಮ ವಿಪುಲವಾದ ಬಾಹುಗಳಿಂದಲೇ ಹೊಡೆದುರುಳಿಸಿದರು. ಬಳಿಕ ಹರ್ಷದಿಂದ ಕೂಡಿದವರಾಗಿ ಪುರಪ್ರವೇಶವನ್ನು ಮಾಡಿದರು.

ಹೀಗೊಂದು ಕಿಟ್ಟಿ ಪಾರ್ಟಿ ಅನುಭವ

ವಕ್ರದೃಷ್ಟಿ



• ಎನ್.ರಾಮನಾಥ್
anakuramanath@gmail.com

"ಈ ತಿಂಗಳ ಕಿಟ್ಟಿ ಪಾರ್ಟಿಯನ್ನ ನಮ್ಮ ಮನೇಲೇ ಮಾಡು'' ಎಂದೆ. ಮಡದಿಹೌಹಾರಿದಳು. ಸಂಶಯಗ್ರಸ್ತಳಾದಳು. ಸನಿಹ ಬಂದಳು. ''ಹುಷಾರಾಗಿದ್ದೀರಾ?'' ಎಂದು ಕೇಳಿದಳು.

ಅವಳು ಅಷ್ಟು ಸನಿಹ ಬಂದೇ ತಿಂಗಳುಗಳಾಗಿದ್ದವು. ಆ ಸಾಮೀಪ್ಯ ನನ್ನಲ್ಲಿ ರೋಮ್ಯಾನ್ಸಿನ ಚಿಲುಮೆಯೊಂದನ್ನು ಚಿಮ್ಮಿಸಿತ್ತು.

ಮಡದಿ ನನ್ನ ಕೈ ಹಿಡಿದಳು. ಗೋಡೆಯ ಗಡಿಯಾರದತ್ತ ತಿರುಗಿದಳು.

ಮನೆಯ ಸನಿಹದ ನರ್ಸಿಂಗ್ ಹೋಮಿನಲ್ಲಿ ಹೆಡ್ ನರ್ಸ್ ಆಗಿರುವ ಅವಳು ನನ್ನ ನಾಡಿಬಡಿತವನ್ನು ಪರೀಕ್ಷಿಸುತ್ತಿದ್ದಾಳೆಂದು ತಿಳಿಯಿತು. ರೋಮ್ಯಾನ್ಸಿನ ಕನಸು ಹರಿದಿತ್ತು.

''ನಾಡಿಬಡಿತ ಸರಿಯಿರುವುದರಿಂದ ಮೈಯೇನೋ ಸರಿಯಿದೆ ಎಂದಾಯಿತು. ಆದರೆ ತಲೆ? ಹೋದ ಸರತಿಯ ಕಿಟ್ಟಿ ಪಾರ್ಟಿಯನ್ನು ಮರೆತಿರಾ?''

ಮರೆಯುವುದುಂಟೇ! ಎಂಟು ತಿಂಗಳ ಹಿಂದಿನ ಕಥೆ. ಇವರಿಗೆ ಆಗದ ಅದ್ಯಾವುದೋ ಮಹಿಳೆಯು ಅದ್ಯಾವುದೋ ಸ್ಪರ್ಧೆಯಲ್ಲಿ ಸೋತಿದ್ದನ್ನು ಸಂಭ್ರಮಿಸಲೆಂದು ಸಭೆ ಸೇರಿತ್ತು. ವಿಧವಿಧವಾದ ಸೆಂಟುಗಳು, ಪೌಡರುಗಳ ಗಂಧಮಿಶ್ರಣವು ನಾನು ತಳ್ಳಲ್ಪಟ್ಟಿದ್ದ ಮೂಲೆಕೋಣೆಯ ಮೂಲೆಮೂಲೆಗೂ ಪಸರಿಸಿ ತಲೆ ಧಿಂ ಎಂದಿತ್ತು. ಸೇರಿದ್ದ ಇಪ್ಪತ್ತು ಹೆಂಗಳೆಯರು ಇದ್ದ ನಾಲ್ಕು ಗಂಟೆಗಳಲ್ಲಿ ಮೂರು ಮೂರು ಬಾರಿ ಡ್ರೆಸ್ ಬದಲಾಯಿಸಿಕೊಂಡರು; ಮೇಕಪ್ ಮಾಡಲೆಂದೇ ಬ್ರಷ್ಷುಪಾಣಿಗಳ ದಂಡೊಂದು ನಿಯಮಿತವಾಗಿತ್ತು. ಇಪ್ಪತ್ತು ಲಲನೆಯರು ವಿವಿಧ ಪರ್ಮುಟೇಷನ್ & ಕಾಂಬಿನೇಷನ್ನಿನಲ್ಲಿ ಗುಂಪುಗಟ್ಟಿ ಸದರಿ ಗುಂಪುಗಳಲ್ಲಿ ಇಲ್ಲದಿದ್ದವರ ಜನ್ಮ ಜಾಲಾಡುವುದರ ಮೂಲಕ ಆನಂದತುಂದಿಲರಾಗಿದ್ದರು.

ಮರುದಿನ ಬೆಳಗ್ಗೆ ಕಣ್ಬಿಟ್ಟಾಗ ಕುರುಕ್ಷೇತ್ರ ಯುದ್ಧದ ಹತ್ತೊಂಬತ್ತನೆಯ ದಿನವನ್ನು ಕಂಡಂತಾಯಿತು. ಕುರುಕ್ಷೇತ್ರದ ರಣರಂಗವು ನೆತ್ತರಿನಿಂದ ತೋಯ್ದು ಕೆಂಪಾಗಿದ್ದರೆ ನಮ್ಮ ಮನೆಯನ್ನು ಕಂಡ ಗೀತರಚನಕಾರರು

ಕೆಂಪಾದವೋ ಎಲ್ಲ ಕೆಂಪಾದವೋ
ಬಳಸಿದ್ದ ಪ್ಲೇಟು ಸ್ಪೂನು
ಹರಡಿದ್ದ ಕಾರ್ಪೆಟ್ಟೆಲ್ಲ
ಸಾಸ್ ಮತ್ತು ಕೆಚಪ್ಪಿಂದ ಕೆಂಪಾದವೋ
ಗೋಡೆ ಡೋರ್ ಫ್ರೇಮುಗಳು ಕೆಂಪಾದವೋ

ಎಂದು ಹಾಡು ಬರೆಯುತ್ತಿದ್ದುದು ನಿಶ್ಚಿತ. ಕೆಂಪು ಬಣ್ಣಕ್ಕೆ ಕೆಚಪ್ಪು ಸಾಸ್‌ಗಳಲ್ಲದೆ ಕೆಲವರ ತುಟಿಯ ರಂಗು, ಕೆಲವರು ಬಳಿದುಕೊಂಡ ಕೆನ್ನೆಯ ರೌಜ್ ಎಲ್ಲವೂ ಕಾರಣವಾಗಿದ್ದವು. ಅರ್ಬನ್ ಕ್ಲೀನಿಂಗಿನವರು ಮೂರು ದಿನಗಳ ಕಾಲ ಮೆತ್ತಿದ ಖಾದ್ಯಗಳನ್ನೆಲ್ಲ ಗೋಡೆ, ಮೇಜು, ಕುರ್ಚಿಗಳಿಂದ ಕಿತ್ತಿ ತೆಗೆದ ನಂತರ ಇಡೀ ಹಜಾರ, ಪೀಠೋಪಕರಣಗಳಿಗೆ ಬಣ್ಣ ಹೊಡೆಸುವ, ಥಳಥಳಗೊಳಿಸುವ ಕೆಲಸವು ಮತ್ತಷ್ಟು ವಾರಗಳು ಹಿಡಿದಿದ್ದವು.

''ಈ ತಿಂಗಳ ಕಿಟ್ಟಿ ಪಾರ್ಟಿಯ ಡೇಟ್ ವುಮೆನ್ಸ್ ಡೇಯಂದು ಬೀಳುತ್ತಿದೆ. ಈ ವುಮೆನ್ಸ್ ಡೇಯ ಥೀಮ್ 'ಗಿವ್ ಟು ಗೇಯ್ನ್.' ಆ ಥೀಮಿಗೆ ಅನುಗುಣವಾಗಿ ಏನಾದೇನಾ ಇರುವುದು ಸೂಕ್ತ'' ಎಂದೆ; ಗತದ ಕರಾಳತೆಯನ್ನು ಕಡೆಗಣಿಸಿದ್ದೆ.

''ಮುಂದಿನ ಆಗುಹೋಗುಗಳಿಗೆ ನಾನು ಜವಾಬ್ದಾರಳಲ್ಲ'' ಎಂಬ ಡಿಸ್‌ಕ್ಲೈಮರ್ ಅನ್ನು ಮಡದಿಯು ಕೂಡಲೆ ಮುಂದಿಟ್ಟಳು. ಅಸ್ತು ಎಂದೆ.

ಮಾರ್ಚ್ ಎಂಟರ ಬೆಳಗ್ಗೆ ಮೊದಲು ಹಾಜರಾದುದು ಮಿಸ್ಟರಿ ಮೀನಾಕ್ಷಿ. ಮೀನಾಕ್ಷಿಯ ವಯಸ್ಸನ್ನು ಈವರೆಗೆ ಯಾರೆಂದರೆ ಯಾರೂ ಕಂಡುಹಿಡಿಯಲು ಸಾಧ್ಯವಾಗಿಲ್ಲವಂತೆ. ಶಾಲೆಗೊಂದು, ವರನಿಗೊಂದು, ಸರ್ಕಾರಿ ಸವಲತ್ತಿಗೊಂದು ಎನ್ನುತ್ತಾ ಐದಾರು ಡೇಟ್ಸ್ ಆಫ್ ಬರ್ತ್ ಹೊಂದಿದ್ದ ಮೀನಾಕ್ಷಿ ಕಡೆಯ ಎರಡು ದಶಕಗಳಿಂದಲೂ ಕೆಲವರೊಡನೆ ತನಗೆ ಹದಿನೆಂಟು ವಯಸ್ಸೆಂದೂ, ಕೆಲವರೊಡನೆ ಇಪ್ಪತ್ತೊಂದು ವಯಸ್ಸೆಂದೂ ಹೇಳಿಕೊಂಡು ಬಂದಿರುವುದೇ 'ಮಿಸ್ಟರಿ ಮೀನಾಕ್ಷಿ' ಎಂಬ ಬಿರುದಿನ ಹಿನ್ನೆಲೆಯಂತೆ.

ಮೀನಾಕ್ಷಿ ಬರುತ್ತಲೇ ''ಮಿಸ್ಟರ್ ಪಾಂಡು, ನಿಮ್ಮ ಕಾರ್ ಸ್ವಲ್ಪ ಬೇಕಿತ್ತಲ್ಲ. ಈ ಡ್ರೆಸ್ಸಿಗೆ ಮ್ಯಾಚ್ ಆಗೋ ಹೇರ್‌ಪಿನ್ನನ್ನ ಮನೇಲೇ ಬಿಟ್ಬಂದ್ಬಿಟ್ಟೆ'' ಎಂದಳು ಮಿನಿಮಮ್ ಡಬಲ್ ಷೋಡಶಿ.



'ಗಿವ್ ಟು ಗೇಯ್ನ್' ಥೀಮ್ ನೆನಪಾಯಿತು. ಕಾರ್ ಕೀ ಕೊಟ್ಟೆ.

ಎರಡನೆಯ ಎಂಟ್ರಿ ಪಕ್ಕದ ರಸ್ತೆಯ ರಾಕಿಂಗ್ ರಚನಾ. ಊಹೂಂ. ನೀವು ಅಂದುಕೊಂಡಂತೆ ರಚನಾ ರಾಕ್ ಸ್ಟಾರ್ ಅಲ್ಲ. ಅವಳ ತಂದೆ ಕ್ವಾರಿ ಕಂಟ್ರಾಕ್ಟರ್, ಈಕೆ ವಜ್ರದಿಂದ ಹಿಡಿದು ಸಕಲ ಅಶ್ಮಾಭರಣಗಳ ಪ್ರಿಯೆ. ''ಕಲ್ಲುಸಿಕ್ಕರೆ ಕೊಳ್ಳುವೆ; ನಾನೆಲ್ಲವೂ' ಎಂಬುದು ಅವಳ ಇಷ್ಟಗೀತೆ. 'ಒಂದು ತೊಗೊಂಡ್ರೆ ಇನ್ನೊಂದು ಉಚಿತ' ಸ್ಕೀಮಿನಲ್ಲಿ ಎಂಟರ್ ಆದ ರಚನಾ ''ಅಂಕಲ್, ನಿಮ್ಮ ರೂಮ್ ಯೂಸ್ ಮಾಡ್ಕೊಳ್ತೀನಿ'' ಎನ್ನುತ್ತಾ ಮುನ್ನಡೆದಳು. ''ಪ್ಲೀಸ್ ಫೀಲ್ ಎಟ್ ಹೋಂ'' ಎಂದೆ. ಅನ್ನಬಾರದಾಗಿತ್ತು.

ಆನಂತರ ಒಬ್ಬೊಬ್ಬರಾಗಿ ಮಹಿಳಾಮಣಿಗಳು ಬಂದು, ಮಿನಿ ಗುಂಪುಗಳನ್ನು ಮಾಡಿಕೊಂಡು ತಮಗನುಕೂಲವಾದ ಕೊಠಡಿಗಳನ್ನು ಸೇರಿ, ತಮಗೆ ಅನುಕೂಲವೆನಿಸುವ ವಸ್ತುಗಳನ್ನು ಬಳಸತೊಡಗಿದರು. ಟಾನಿಯಾ ನನ್ನವಳ ಹೇರ್ ಡ್ರೈಯರ್ ಅನ್ನು ಬಳಸಿದರೆ ಮಂಗಳಾ ಅಡುಗೆಮನೆಯಿಂದ ಸೌತೆಕಾಯಿಗಳನ್ನು ತಂದು ನನ್ನ ರಿಕ್ಲೈನರ್‌ನಲ್ಲಿ ಕುಳಿತು ಆಗಷ್ಟೇ ಪಾರ್ಲರ್ ಕೋರ್ಸ್ ಮಾಡುತ್ತಿದ್ದ ರೂಪಕಲಾಳಿಗೆ ಕೊಟ್ಟು, 'ಫೇಷಿಯಲ್ ಮಾಡೇ' ಎನ್ನುತ್ತಾ ಅವಳಿಗೆ 'ಹ್ಯಾಂಡ್ಸಾನ್ ಎಕ್ಸ್‌ಪಿರೀಯನ್ಸ್' ಕೊಡಲು ಉದ್ಯುಕ್ತಳಾದಳು.

''ಕಿಟ್ಟಿ ಪಾರ್ಟಿಗೆ ಮನೆಯಿಂದಲೇ ಮೇಕಪ್ ಮಾಡ್ಕೊಂಡು ಬರೋದು ಪದ್ಧತಿ ಅಲ್ವೇ?'' ಎಂದು ಪಿಸುಪ್ರಶ್ನಿಸಿದೆ.

''ಯೂಷುಯಲಿ ಹಾಗೇ ಮಾಡ್ತಾರೆ. ಆದರೆ ಗಿವ್ ಟು ಗೇಯ್ನ್ ಥೀಮ್ ಗೋಸ್ಕರ ಹೀಗೆ'' ಎಂದಳು ಮಡದಿ.

''ವಾಟ್ ಡೂ ಯೂ ಮೀನ್?''

''ಇವರು ಅವರಿಗೆ ಅವಕಾಶವನ್ನ ಗಿವ್‌ತಾರೆ; ಅವರು ಇವರು ಸುಂದರವಾಗುವ ಅವಕಾಶವನ್ನ ಕಲ್ಪಿಸ್ತಾರೆ. ಅವರು ಎಕ್ಸ್‌ಪೀರಿಯನ್ಸ್ ಗೇಯ್ನ್ ಮಾಡ್ತಾರೆ, ಇವರು ಲುಕ್ಸ್ ಗೇಯ್ನ್ ಮಾಡ್ತಾರೆ.'' ವಿವರಿಸಿದಳು ಮನದನ್ನೆ.

ಅಂತೂ ಮಂದಿ ಸೇರಿದ ಮೂರು ಗಂಟೆಗಳಿಗೆ ಪಾರ್ಟಿ ಶುರುವಾಯಿತು. ಕೆಲವರು ಹಾಡಿದರು, ಕೆಲವರು ಹಾಡಿದೆ ಎಂದುಕೊಂಡರು. ಅಂತಹ ಹಾಡುಗಳನ್ನು ಕೇಳಿದಂತಹ ಕೆಲವರ ಮನದಲ್ಲಿ

ಅನಿಸುತಿದೆ ಯಾಕೋ ಇಂದು ಸಿಂಗಿಂಗೆ ಇಲ್ಲವು ಎಂದು
ಸ್ಟೀಲಿನ ಪ್ಲೇಟ ಮೇಲೆ ನೈಫ್ ಕೆರೆದ ಸೌಂಡ್ ಇದು ಎಂದು
ಆಹಾ ಎಂಥ ಯಾತನೆ!
ನಿಲ್ಲಿಸದಿರೆ ಇಂಥ ಸದ್ದು ಗತಿ ENTನೇ

ಎಂಬ ಸಾಲುಗಳು ಮೂಡಿರಲೇಬೇಕು. ಅರಚುಕಲೆಯ ನಂತರ ಕುಲುಕುಕಲೆಯ ಪ್ರದರ್ಶನ ಆರಂಭವಾಯಿತು. ಅದನ್ನೇ ಕೆಲವರು ಡ್ಯಾನ್ಸ್ ಎಂದು ಕರೆದರು. ಮೂರನೆಯ ಮನೋರಂಜನೆಯ ಅಂಗವಾಗಿ ಮ್ಯೂಸಿಕಲ್ ಚೇರ್ ಆಡಿದರು. ಅವರು ಆಡಿದ ರಭಸಕ್ಕೆ ಆ ಆಟಕ್ಕೆ ಮರುನಾಮಕರಣ ಮಾಡಿ 'ಕುರ್ಚಿಪುಡಿ' ಆಟ ಎನ್ನಬೇಕೆನಿಸಿತು.

ಸೇರಿದ ಆರು ಗಂಟೆಗಳ ನಂತರ ಮಹಿಳಾಮಣಿಗಳು ಒಬ್ಬೊಬ್ಬರಾಗಿ ಜಾಗ ಖಾಲಿ ಮಾಡಿದರು. ಕಡೆಯ ಲಲನೆ ಹೊರನಡೆದಾಗ ರೈಲ್ವೇಯವರ ಕ್ಯಾಲೆಂಡರ್ ಬದಲಾಗಿತ್ತು. ಮೂಲಾ ನಕ್ಷತ್ರದವನಾದ ನಾನು ಆ ಲಲನೆಯರ ಚೇರಾಟ, ಚೀರಾಟ, ಗಾಳಿಮಾತುಗಳ ರಭಸಕ್ಕೆ ಸಿಲುಕಿ ಬಿರುಗಾಳಿಯಲ್ಲಿನ ತರಗೆಲೆಯಂತಾಗಿದ್ದೆ.

ಮರುದಿನ ಕಣ್ಬಿಟ್ಟಾಗ ಎಂಟು ತಿಂಗಳ ಹಿಂದಿನ ಕುರುಕ್ಷೇತ್ರವೇ ವಾಸಿಯೆನಿಸಿತ್ತು. ''ಮೊದಲೇ ಹೇಳಿದ್ದೆ, ನೀವು ಕೇಳಲಿಲ್ಲ'' ಎಂದು ಕೆಂಡ ಕಾರಿದಳು ಸತಿ. ''ಕಾರಣ ಇತ್ತು ಕಣೆ. ಇಲ್ಲಿ ಯಾರಾದರೂ ಚೆನ್ನಾಗಿ ಹಾಡಿದರೆ, ಕುಣಿದರೆ, ಭಾಷಣ ಮಾಡಿದರೆ ನಮ್ಮ ಕ್ಲಬ್ಬಿನ ಜನರಲ್ ಬಾಡಿ ಎಲೆಕ್ಷನ್ನಿಗೆ ಕರೆಯೋಣ ಅಂತ ಪ್ಲ್ಯಾನ್ ಹಾಕಿದ್ದೆ. ಅವರಿಗೆ ಅವಕಾಶ ಗಿವ್ವಿಸಿ ನಮ್ಮಲ್ಲಿಗೆ ನ್ಯೂ ಟ್ಯಾಲೆಂಟನ್ನು ಗೇಯ್ನ್ ಮಾಡೋಣ ಅನ್ಕೊಂಡಿದ್ದೆ. ಆದರೆ ಇಲ್ಲಿ ಹಾಡಿದವರನ್ನು ಗುಂಪು ಚದುರಿಸಲು, ಕುಣಿದವರನ್ನು ಭೂತ ಬಿಡಿಸಲು, ಭಾಷಣ ಮಾಡಿದವರನ್ನು ನಿದ್ರೆಮಾತ್ರೆಯಾಗಿ ಬಳಸಲು ಸಾಧ್ಯವಷ್ಟೆ'' ಎಂದೆ.

''ಫುಲ್ಲು ವೇಸ್ಟೂನ್ನಿ!''

''ಹಾಗೇನಿಲ್ಲ. ಮೀನಾಕ್ಷಿಗೆ ಕಾರ್ ಕೊಟ್ಟೆ; ಎರಡು ಡೆಂಟು, ಒಂದು ಸಿಗ್ನಲ್ ಜಂಪ್ ಕೇಸು ಗೇಯ್ನ್ ಆಗಿದೆ. ರಚನಾಗೆ ರೂಮ್ ಕೊಟ್ಟು 'ಫೀಲ್ ಎಟ್ ಹೋಂ' ಅಂದೆ. ಅವಳು ಬೆಡ್ ಮೇಲೆ ಒದ್ದೆ ಟವಲ್ ಹಾಕಿದಳು. ಸಿಕ್ಕ ಸಿಕ್ಕ ಕಡೆಯಲ್ಲಿ ಟಿಶ್ಯೂಗಳನ್ನ ಎಸೆದಳು. ಕಿಟಕಿಯ ಕರ್ಟನ್‌ಗೆ ಫ್ರೆಂಚ್ ಫ್ರೈಸ್ ತಿಂದು ಕೈ ಒರೆಸಿಕೊಂಡಳು. ಹೆಚ್ಚಾದ ಲಿಪ್‌ಸ್ಟಿಕ್ಕನ್ನ ಪಿಲ್ಲೋ ಕವರ್‌ನಿಂದ ಒರೆಸಿಕೊಂಡಳು. ಅಂತೂ ಅವರ ಮನೆಯಲ್ಲಿ ಹೇಗಿರ್ತಾಳೋ ಹಾಗಿದ್ದಳು. ಅವಳಿಗೆ ಸ್ವಾತಂತ್ರ್ಯ ಕೊಟ್ಟೆ, ನಾನು ಯಾರಿಗೆ ಯಾವ ಮಾತನ್ನ ಎಲ್ಲಿ ಆಡಬಾರದು ಅನ್ನೋ ಜ್ಞಾನವನ್ನ ಗೇಯ್ನ್ ಮಾಡ್ದೆ. ನನ್ನ ಕಥೆ ಹಾಗಿರಲಿ, ನೀನು ಏನು ಕೊಟ್ಟೆ, ಏನು ಪಡೆದೆ?'' ಎಂದೆ.

''ನಿಮ್ಮ ಮಾತಿಗೆ ಬೆಲೆ ಕೊಟ್ಟೆ, ಹಾಗೆ ಬೆಲೆ ಕೊಟ್ಟಿದ್ದು ಮಣ್ಣಿನ್ನೋ ಕೆಲಸ ಅನ್ನೋ ಪರಿಜ್ಞಾನವನ್ನ ಪಡೆದೆ. From give to gain to give to groan| ಒಳ್ಳೆಯ ಫಜೀತಿಯಾಯ್ತು'' ಎಂದು ಟೆರಿಬಲ್ ಸುಸ್ತಿನಲ್ಲೂ ಕೆಂಗಣ್ಣಾದಳು ಸತಿ. ''ಆಮೆನ್'' ಎಂದೆ.

ಅಧ್ಯಯನಪೂರ್ಣ ಕೃತಿ 'ಔಶನಸ ಚಾಣಕ್ಯ'

ಚಾಣಕ್ಯರ ಅಸಾಧಾರಣ ವ್ಯಕ್ತಿತ್ವವನ್ನು ಒಂದೇ ಕಡೆ ಸಮಗ್ರವಾಗಿ ಕಟ್ಟಿಕೊಡುವಲ್ಲಿ ಸದ್ಯೋಜಾತ ಭಟ್ಟರ 'ಔಶನಸ ಚಾಣಕ್ಯ' ಯಶಸ್ವಿಯಾಗಿದೆ. ಈ ಪುಸ್ತಕವು ಇಂದು ಬಿಡುಗಡೆಯಾಗಲಿದೆ.

• ಅಶ್ವಿನಿ ಹೊದಲ



ಭಾರತೀಯ ಇತಿಹಾಸವನ್ನು ವೈದಿಕ ಮತ್ತು ಪುರಾಣೇತಿಹಾಸ, ಪ್ರಾಚೀನ ಮತ್ತು ಮಧ್ಯಕಾಲೀನ ಹಾಗೂ ಆಧುನಿಕ ಇತಿಹಾಸ ಎಂಬುದಾಗಿ ಮೂರು ಕಾಲಘಟ್ಟದಲ್ಲಿ ವಿಶ್ಲೇಷಿಸಬಹುದು. ಶ್ರುತಿ-ಸ್ಮೃತಿಗಳು, ಧರ್ಮಸೂತ್ರಗಳ ಅನುಷ್ಠಾನವನ್ನು ರಾಮಾಯಣ-ಮಹಾಭಾರತಗಳಲ್ಲಿ ಕಾಣಬಹುದು. ಮಹಾಭಾರತದ ಕಾಲಕ್ಕೆ ಬಂದಾಗ ಅನೇಕ ಬೃಹತ್ ಸಾಮ್ರಾಜ್ಯಗಳು, ರಾಜವಂಶಗಳು, ಚಕ್ರವರ್ತಿಗಳು ಆರ್ಯಾವರ್ತವನ್ನು ಆಳಿಹೋಗಿದ್ದರು. ಕೌರವ-ಪಾಂಡವರು ಬೃಹಸ್ಪತಿನೀತಿ ಮತ್ತು ಶುಕ್ರನೀತಿಗಳನ್ನು ಸಂಪೂರ್ಣ ಅನುಸರಿಸಿದ್ದು ಇಡೀ ಮಹಾಭಾರತದುದ್ದಕ್ಕೂ ಕಾಣಬಹುದು. ಅರ್ಥನೀತಿ, ದಂಡನೀತಿ, ರಾಜನೀತಿಯಾದಿಯಾಗಿ ಸಾಮ್ರಾಜ್ಯ ಸ್ಥಾಪನೆ ಮತ್ತು ನಿರ್ವಹಣೆಗೆ ರಾಜನಾದವ ಪಾಲಿಸಬೇಕಾದ ಅನುಶಾಸನಗಳನ್ನು ಭೀಷ್ಮ ಮತ್ತು ವಿದುರರು ಮಹಾಭಾರತದಲ್ಲಿ ವಿಸ್ತಾರವಾಗಿ ತಿಳಿಸಿಕೊಟ್ಟಿದ್ದಾರೆ. ಆದರೆ ಮಹಾಭಾರತದ (ಕ್ರಿ.ಪೂ. 3102) ನಂತರದಲ್ಲಿ ಮತ್ತೊಂದು ರಾಜ್ಯಶಾಸ್ತ್ರ ಬಹಳ ಖ್ಯಾತವಾಯಿತು ಅದೇ ಚಾಣಕ್ಯನ ಅರ್ಥಶಾಸ್ತ್ರ. ತನಗಿಂತ ಪೂರ್ವದಲ್ಲಿದ್ದ ಶುಕ್ರನೀತಿ ಮತ್ತು ಬೃಹಸ್ಪತಿನೀತಿಯನ್ನು ಆಗಿನ ಕಾಲಘಟ್ಟಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ಚಾಣಕ್ಯ ರಚಿಸಿದ ರಾಜನೀತಿ ಸರ್ವಕಾಲಕ್ಕೂ ಅನ್ವಯಿಸುವಂತದ್ದು. ಇಂದು ಭಾರತವೂ ಸೇರಿದಂತೆ ಜಗತ್ತಿನ ಬಹುತೇಕ ದೇಶಗಳು ತಮ್ಮ ರಾಷ್ಟ್ರೀಯ ನೀತಿಗಳನ್ನು ಚಾಣಕ್ಯನ ಅರ್ಥಶಾಸ್ತ್ರದ ಮೇಲೆಯೇ ರಚಿಸಿಕೊಂಡಿವೆ.

ಭಾರತ ಯುದ್ಧ ಮುಗಿದು ಪಾಂಡವರು 36 ವರ್ಷಗಳ ಆಳ್ವಿಕೆ ನಡೆಸಿದರು. ಆನಂತರದಲ್ಲಿ ಬೃಹದ್ರಥ, ಪ್ರದ್ಯೋತ, ಶಿಶುನಾಗ ವಂಶದ ರಾಜರು ಸುಮಾರು 1500 ವರ್ಷ ಮಗಧವನ್ನು ಆಳಿದರು. ಭೌಗೋಳಿಕವಾಗಿ 16 ಮಹಾಜನಪದಗಳಲ್ಲಿ ಮಗಧವು ಪ್ರಮುಖವಾಗಿತ್ತು. ಮಗಧದ ಸಾರ್ವಭೌಮತ್ವದ ಅಧಿಪತ್ಯವು ಶಿಶುನಾಗರ ನಂತರ ನಂದ ವಂಶದ ರಾಜರ ತೆಕ್ಕೆಗೆ ಬಿತ್ತು. ನಂದವಂಶದ ಕೊನೆಯ ದೊರೆ ಸುಮಾಲ್ಯನಂದನ ವಿಷಯ ಲೋಲುಪತೆಯಿಂದ ಮಹಾಜನಪದವೊಂದು ಅರಾಜಕತೆಯತ್ತ ಸಾಗುತ್ತಿದ್ದಾಗಲೇ ಗ್ರೀಕ್ ದೊರೆ ಅಲೆಕ್ಸಾಂಡರ್ ಭಾರತದ ಮೇಲೆ ತನ್ನ ಅಧಿಪತ್ಯ ಸ್ಥಾಪಿಸಲು ಸಿಂಧೂನದಿಯ ಸಮೀಪ ಬೀಡುಬಿಟ್ಟಿದ್ದ. ಅಲ್ಲಿಂದ ಆರಂಭವಾಗುವುದೇ ರೋಚಕ ಇತಿಹಾಸ. ಒಳಗಿನ ರಾಜಕೀಯ ಶಿಥಿಲತೆ ಮತ್ತು ಹೊರಗಿನಿಂದ ಯವನರ ದಾಳಿ ಎರಡಕ್ಕೂ ಪರಿಹಾರವೆಂದರೆ ಅಖಂಡ ಭಾರತವನ್ನು ಏಕಚಕ್ರಾಧಿಪತ್ಯದ ಕೆಳಗೆ ತರುವುದು. ಚಾರಿತ್ರಿಕವಾಗಿ ಇದೊಂದು ಮಹತ್ವದ ಘಟ್ಟವೆನಿಸುತ್ತದೆ. ಹೊಸದೊಂದು ಬದಲಾವಣೆಯ ಅನಿವಾರ್ಯತೆಯನ್ನು ಮನಗಂಡ ಧೀಮಂತ ಮಹಾಗುರು ಚಾಣಕ್ಯರು ಮಗಧವನ್ನು ಮೋರಿಯಾ ಜನಪದದ ರಾಜಕುಮಾರನಾದ ಚಂದ್ರಗುಪ್ತನನ್ನು ಆ ಮಹಾನ್ ಕಾರ್ಯಕ್ಕೆ ತರಬೇತುಗೊಳಿಸಿದ ಪರಿ ನಿಜಕ್ಕೂ ಕುತೂಹಲಕಾರಿ. ಚಾಣಕ್ಯರ ಕಾರ್ಯವೈಖರಿ, ವಿದ್ವತ್ತು, ತಂತ್ರಗಾರಿಕೆ ಎಲ್ಲವನ್ನೂ ವಿಷದವಾಗಿ ಒಳಗೊಂಡಿರುವ ಐತಿಹಾಸಿಕ ಕಾದಂಬರಿಯೇ ಸದ್ಯೋಜಾತ ಭಟ್ಟರ 'ಔಶನಸ ಚಾಣಕ್ಯ'. ಮಹಾಜನಪದಗಳ ಆಗಿನ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ವ್ಯವಸ್ಥೆಗಳ ಸಂಪೂರ್ಣ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಈ ಪುಸ್ತಕ ಯಶಸ್ವಿಯಾಗಿದೆ. ಕನ್ನಡದಲ್ಲಿ ಚಾಣಕ್ಯರ ಕುರಿತಾಗಿ ಕೆಲವು ಕಾದಂಬರಿಗಳು ಬಂದಿದ್ದರೂ ಈ ಪುಸ್ತಕ ಅವರ ಪರಿಪೂರ್ಣ ವ್ಯಕ್ತಿತ್ವವನ್ನು ಕಾಲ್ಪನಿಕವಾಗಿರಿಸದೇ ಐತಿಹಾಸಿಕ ಹಿನ್ನೆಲೆಯಲ್ಲಿ ನೈಜವಾಗಿ ಕಟ್ಟಿಕೊಡುತ್ತದೆ.



ಒಂದು ಸಾಮ್ರಾಜ್ಯ ಸ್ಥಾಪನೆ ಎಂದರೆ ಒಂದು ಸಾಲಿನಲ್ಲಿ ದಾಖಲಾಗುವ ಇತಿಹಾಸವಲ್ಲ. ಮೌರ್ಯ ಸಾಮ್ರಾಜ್ಯ ಸ್ಥಾಪನೆಯ ಮೂಲಕ ಸುಭದ್ರ ಭಾರತ ನಿರ್ಮಾಣಕ್ಕಾಗಿ ಚಾಣಕ್ಯರು ಅನುಸರಿಸಿದ ತಂತ್ರಗಾರಿಕೆ ಎಂಥವರನ್ನೂ ನಿಬ್ಬೆರಗಾಗಿಸುವಂತದ್ದು. ಸಮಸ್ತ ಆರ್ಯಾವರ್ತ, ಆರ್ಯ ಸಂಸ್ಕೃತಿಯ ಮೇಲೆ ವಿದೇಶೀಯರ ದಾಳಿಯನ್ನು ವಿರೋಧಿಸಲು, ಅವರು ಭಾರತದೊಳಗೆ ಪ್ರವೇಶಿಸದಂತೆ ತಡೆಯಲು, ಆಂತರಿಕ ಕಲಹಗಳನ್ನು ಸೃಷ್ಟಿಸಿಕೊಂಡು ವಿದೇಶೀಯರ ಕೈಗೆ ಭಾರತವನ್ನು ಒಪ್ಪಿಸಲು ಸಿದ್ಧರಾಗಿದ್ದ ದುರ್ಬಲ ರಾಜರನ್ನು ನಿರ್ಮೂಲ ಮಾಡುವಂತಹ ಕಷ್ಟಸಾಧ್ಯವಾದ ಕಾರ್ಯವನ್ನು ಸಾಧಿಸಿದವರು ಚಾಣಕ್ಯರು. ಪ್ರಬಲವಾದ ಚಕ್ರವರ್ತಿಯೊಬ್ಬನ ನಾಯಕತ್ವದಿಂದ ಮಾತ್ರವೇ ಭಾರತದ ಐಕ್ಯತೆ ಸಾಧ್ಯವೆಂಬುದನ್ನು ಮನಗಂಡ ಚಾಣಕ್ಯರು ತಕ್ಷಶಿಲೆಯಿಂದ ಮಗಧಕ್ಕೆ ಬಂದು ದುರ್ಬಲ ರಾಜರನ್ನೆಲ್ಲ ತಂತ್ರಗಾರಿಕೆಯಿಂದ ತಮ್ಮ ಹಿಡಿತಕ್ಕೆ ತೆಗೆದುಕೊಂಡು, ಸಣ್ಣಸಣ್ಣ ಜನಪದಗಳ ಜನರನ್ನು ಒಟ್ಟುಗೂಡಿಸಿ ಗ್ರೀಕ್‌ಸೇನೆಯನ್ನು ಹಿಮ್ಮೆಟ್ಟುವಂತೆ ಮಾಡಿ, ದುಷ್ಟ ನಂದರಾಜನ ದುರಾಡಳಿತವನ್ನು ಅಂತ್ಯಗೊಳಿಸಿ, ಚಂದ್ರಗುಪ್ತನಿಂದ ಮೌರ್ಯ ಸಾಮ್ರಾಜ್ಯ ಸ್ಥಾಪಿಸಿದ ಧೀಮಂತ ವ್ಯಕ್ತಿ. ಔಶನಸವೆಂಬ ವಿಚಿತ್ರ ಮತ್ತು ನಿಗೂಢ ತಂತ್ರಗಾರಿಕೆಯೊಂದು ಪ್ರಾಚೀನದಲ್ಲಿ ಇತ್ತಾದರೂ ಅದರ ಪರಿಪೂರ್ಣ ಪ್ರಯೋಗವನ್ನು ಕೃತಿಕಾರರು ಪ್ರಪ್ರಥಮ ಬಾರಿಗೆ ಕನ್ನಡಕ್ಕೆ ಪರಿಚಯಿಸಿದ್ದಾರೆ. ಅಂದಿನ ಕಾಲಕ್ಕೆ ಕುಟಿಲ ರಾಜಕೀಯ ತಂತ್ರವಾದ ಔಶನಸ ನೀತಿಯಲ್ಲಿ ಪರಿಣತರಾಗಿದ್ದ ಬೆರಳೆಣಿಕೆಯಷ್ಟು ಜನರಲ್ಲಿ ಪ್ರಾಚಾರ್ಯ ಚಾಣಕ್ಯರು ಮುಂಚೂಣಿಯಲ್ಲಿ ನಿಲ್ಲುತ್ತಾರೆ.

ಆದಾಗಲೇ ಮಗಧವು ಬಹುದೊಡ್ಡ ಸಾಮ್ರಾಜ್ಯವಾಗಿತ್ತು. ಕ್ರಯ-ವಿಕ್ರಯಗಳ ವಹಿವಾಟು ಉನ್ನತಸ್ತರದಲ್ಲಿ ಅಭಿವೃದ್ಧಿಗೊಂಡಿತ್ತು. ಪೂರ್ವದಿಂದ ಹೊರಟ ವಣಿಕರು ಕೋಸಲ, ಕಾಶೀ, ಶ್ರಾವಸ್ತಿ, ಪಾಂಚಾಲ, ಕೇಕಯದ ಮಾರ್ಗವಾಗಿ ಗಾಂಧಾರ, ಕಾಂಭೋಜದೆಡೆಗೆ ತೆರಳುತ್ತಿದ್ದರು. ಸಾರ್ಥ ಎಂಬ ಸುಸಜ್ಜಿತ ವ್ಯಾಪಾರ ಮತ್ತು ವಾಣಿಜ್ಯ ವ್ಯವಸ್ಥೆಯೇ ರಾಜ್ಯ ಕೋಶಗಳನ್ನು ತುಂಬಿಸುವ ಆರ್ಥಿಕ ಪ್ರಮುಖ ಮೂಲವಾಗಿತ್ತು. ಸಾರ್ಥಗಳು ಮಹಾನಗರಗಳನ್ನು ಹಾದುಹೋಗುವಾಗ ನಡೆಯುವ ಚಟುವಟಿಕೆಗಳು, ಅಲ್ಲಿನ ರಕ್ಷಣಾ ವ್ಯವಸ್ಥೆ, ವಿಭಿನ್ನ ಸಂಸ್ಕೃತಿಗಳ ಮಿಶ್ರಣ, ಭಾಷಾ ಕಲೆಗಳು, ಎಲ್ಲವನ್ನೂ ಕೃತಿಕಾರರು ವಿಶೇಷವಾಗಿ ಪರಿಚಯಿಸಿದ್ದಾರೆ. ಪ್ರಾಯಶಃ ಸಾರ್ಥದ ಪರಿ ಕಲ್ಪನೆಯೇ ಚಾಣಕ್ಯರಿಗೆ ಅರ್ಥನೀತಿಯನ್ನು ಸಾರ್ವಕಾಲಿಕವಾಗಿರುವಂತೆ ರಚಿಸುವುದು ಸಾಧ್ಯವಾಯಿತು. ಮೊಘಲರು ಭಾರತವನ್ನು ಪ್ರವೇಶಿಸಿದ ನಂತರದಲ್ಲಿ ಈ ಸಾರ್ಥವೆಂಬ ವ್ಯಾಪಾರ ಪದ್ಧತಿ ಕಣ್ಣಿಗೆ ಕಾಣದಂತೆ ನಶಿಸಿತು.

ಒಂದು ರಾಷ್ಟ್ರದ ಉಳಿವಿಗೆ ಧರ್ಮಮೂಲದಿಂದ ಬರುವ ಅರ್ಥವೇ ಅತ್ಯಂತ ಪ್ರಮುಖವಾದದ್ದು. ದಂಡ ಮತ್ತು ತೆರಿಗೆ ಕೋಶಕ್ಕೆ ಮೂಲವಾದರೂ ಅದಕ್ಕೊಂದು ಚೌಕಟ್ಟು ಇರಬೇಕು. ಜನರು ಅರ್ಥ ವ್ಯವಸ್ಥೆಯಿಂದ ದೂರ ಸರಿದರೆ ಅಥವಾ ಅನಗತ್ಯ ಸ್ವೇಚ್ಛಾಕಾರ್ಯಗಳಲ್ಲಿ ನಿರತರಾದರೆ ಅದು ಇಡೀ ರಾಷ್ಟ್ರವನ್ನು ಅವನತಿಗೆ ದೂಡುತ್ತದೆ. ರಾಜನಾದವನಿಗೆ ಜಿತೇಂದ್ರಿಯತ್ವವೇ ಪ್ರಧಾನ, ಆತ ರಾಜಪೀಠವನ್ನು ಅಲಂಕರಿಸಿದರೂ ವಿಲಾಸೀಜೀವನ ನಡೆಸದೇ ಸಂನ್ಯಾಸಿಯಂತೆಯೇ ಜೀವಿಸಬೇಕು ಎಂಬುದು ಚಾಣಕ್ಯರ ತತ್ತ್ವ. ಶಿಥಿಲವಾಗುತ್ತಿದ್ದ ರಾಜಕೀಯ ವ್ಯವಸ್ಥೆಗೆ ಅವಶ್ಯವಾಗಿರಲೇಬೇಕಾದ ಆಡಳಿತಾತ್ಮಕ ಕ್ರಮಗಳು, ಸೇನಾ ವ್ಯವಸ್ಥೆ, ಗೂಢಚರ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ, ರಾಜತಂತ್ರಗಳು, ನೆರೆಹೊರೆ ರಾಜ್ಯಗಳೊಂದಿಗಿನ ಸೌಹಾರ್ದತೆ, ಬಾಹ್ಯ ಆಕ್ರಮಣಗಳನ್ನು ಬಗ್ಗುಬಡಿಯುವ ಆಂತರಿಕ ಭದ್ರತೆ, ರಾಜ್ಯಾಡಳಿತದಲ್ಲಿರುವ ಪ್ರತಿಯೊಬ್ಬನ ಜವಾಬ್ದಾರಿ ಮತ್ತು ಕರ್ತವ್ಯಗಳು, ಎಲ್ಲವನ್ನೂ ಚಾಣಕ್ಯರು ಹೇಗೆ ನಿರ್ವಹಿಸಿದರು ಎಂಬುದನ್ನು ಪುಸ್ತಕ ಓದಿಯೇ ತಿಳಿಯಬೇಕು.

ಪ್ರಬಲ ಮತ್ತು ಸದೃಢ ರಾಷ್ಟ್ರನಿರ್ಮಾಣಕ್ಕಾಗಿ ತಮ್ಮ ಇಡೀ ಜೀವನವನ್ನೇ ವಿನಿಯೋಗಿಸಿಕೊಂಡವರು ಆಚಾರ್ಯ ಚಾಣಕ್ಯರು. ಅವರ ಇಡೀ ಜೀವನವೇ ಅಧ್ಯಯನಕ್ಕೆ ಯೋಗ್ಯವಾದದ್ದು. ಆರ್ಯಸಂಸ್ಕೃತಿ, ಆರ್ಯಪರಂಪರೆ, ಆರ್ಯದೇಶವನ್ನು ಸದಾ ಏಕತ್ರವಾಗಿರಿಸಲು ಶ್ರಮಿಸಿದ ಅಸಾಧಾರಣ ವ್ಯಕ್ತಿತ್ವವನ್ನು ಒಂದೇ ಕಡೆ ಸಮಗ್ರವಾಗಿ ಕಟ್ಟಿಕೊಡುವಲ್ಲಿ ಸದ್ಯೋಜಾತ ಭಟ್ಟರ 'ಔಶನಸ ಚಾಣಕ್ಯ' ಯಶಸ್ವಿಯಾಗಿದೆ. ಪ್ರತಿಯೊಂದು ಅಧ್ಯಾಯವು ರೋಮಾಂಚನವನ್ನುಂಟುಮಾಡುತ್ತದೆ. ಓದುಗನ ಮನಸ್ಸನ್ನು ಅಂದಿನ ಕಾಲಕ್ಕೆ ಕೊಂಡೊಯ್ದು ವಿಹರಿಸುವಂತೆ ಮಾಡುವುದಂತೂ ಸತ್ಯ. ಚಾಣಕ್ಯರನ್ನು ಧಾರಾವಾಹಿಗಳಲ್ಲೋ, ಚಲನಚಿತ್ರಗಳಲ್ಲೋ ಕಾಲ್ಪನಿಕವಾಗಿ ಚಿತ್ರಿಸಿಕೊಂಡು ಅವರ ವ್ಯಕ್ತಿತ್ವವನ್ನು ಸಂಕುಚಿತಗೊಳಿಸಿ ಇದಮಿತ್ಥಂ ಎಂದು ತಿಳಿಯುವುದರ ಬದಲಾಗಿ ಚಾಣಕ್ಯರ ನೈಜವ್ಯಕ್ತಿತ್ವವನ್ನು ಅರಿಯಲು ಇತಿಹಾಸಕಾರರಾದ ಸದ್ಯೋಜಾತ ಭಟ್ಟರ ಅಧ್ಯಯನಪೂರ್ಣ ಕೃತಿ 'ಔಶನಸ ಚಾಣಕ್ಯ'ವನ್ನು ಎಲ್ಲರೂ ಓದಲೇಬೇಕೆಂಬ ಆಗ್ರಹ ನನ್ನದು. ಇಂದು ಬಿಡುಗಡೆಯಾಗುತ್ತಿರುವ ಕನ್ನಡ ಸಾಹಿತ್ಯಲೋಕಕ್ಕೆ ಅತ್ಯುತ್ತಮ ಕಾಣಿಕೆಯಾದ ಕೃತಿಗೆ ಮತ್ತು ಕೃತಿಕಾರರಿಗೆ ಅಭಿನಂದನೆಗಳು.

ಜನೌಷಧಿ ಅಗ್ಗವೂ ಹೌದು, ವಿಶ್ವಾಸಾರ್ಹವೂ ಹೌದು; ಉಳಿತಾಯದೊಂದಿಗೆ ಆರೋಗ್ಯ ರಕ್ಷಣೆ

• ಜೆ.ಪಿ.ನಡ್ಡಾ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು



ಒಂದು ರಾಷ್ಟ್ರದ ಪ್ರಗತಿಯ ನಿಜವಾದ ಅಳತೆಗೋಲು ಅಲ್ಲಿನ ನಾಗರಿಕರು ಆರೋಗ್ಯ ರಕ್ಷಣೆಯಂತಹ ಮೂಲಭೂತ ಅವಶ್ಯಕತೆಗಳನ್ನು ಎಷ್ಟು ಸುಲಭವಾಗಿ ಪಡೆಯುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ದಶಕಗಳ ಕಾಲ, ಔಷಧಿಗಳ ಹೆಚ್ಚಿನ ಬೆಲೆಯು ಭಾರತದ ಲಕ್ಷಾಂತರ ಜನರ ಆರೋಗ್ಯ ಮತ್ತು ಕ್ಷೇಮಕ್ಕೆ ಪ್ರಮುಖ ಆರ್ಥಿಕ ಅಡಚಣೆಯಾಗಿತ್ತು. ಈ ಹಿನ್ನೆಲೆಯಲ್ಲಿ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಪ್ರಾರಂಭವಾದ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ (ಪಿಎಂಬಿಜೆಪಿ), ಬ್ರಾಂಡೆಡ್ ಔಷಧಿಗಳಿಗಿಂತ ಗಣನೀಯವಾಗಿ ಕಡಿಮೆ ಬೆಲೆಗೆ ಗುಣಮಟ್ಟದ ಜೆನೆರಿಕ್ ಔಷಧಿಗಳನ್ನು ಒದಗಿಸುವ ಮೂಲಕ ಸಾರ್ವಜನಿಕ ಆರೋಗ್ಯ ರಕ್ಷಣೆಯಲ್ಲಿನ ನಿರ್ಣಾಯಕ ಕೊರತೆಯನ್ನು ನೀಗಿಸಿದೆ. ಆಳವಾದ ವ್ಯವಸ್ಥಿತ ಬದಲಾವಣೆಯನ್ನು ತಂದಿದೆ.

ಜಾಗತಿಕವಾಗಿ, ಜೆನೆರಿಕ್ ಔಷಧಿಗಳು ಸುಲಭವಾಗಿ ಲಭ್ಯವಾಗುವ ಆರೋಗ್ಯ ವ್ಯವಸ್ಥೆಯ ಬೆನ್ನೆಲುಬಾಗಿವೆ. ಪ್ರಪಂಚದಾದ್ಯಂತ ಶೇ.80-90 ರಷ್ಟು ವೈದ್ಯರು ಬರೆಯುವ ಚೀಟಿಗಳಲ್ಲಿ ಇವುಗಳೇ ಇರುತ್ತವೆ. ಅಗತ್ಯ ಔಷಧಿಗಳ ಲಭ್ಯತೆಯನ್ನು ವಿಸ್ತರಿಸುವಲ್ಲಿ ಇವು ನಿರ್ಣಾಯಕ ಪಾತ್ರ ವಹಿಸಿವೆ. ಜೆನೆರಿಕ್ ಔಷಧಿಗಳು ಪ್ಯಾಕೇಜಿಂಗ್, ಲೇಬಲಿಂಗ್ ಮತ್ತು ನಿಷ್ಕ್ರಿಯ ಘಟಕಾಂಶಗಳಲ್ಲಿ ವ್ಯತ್ಯಾಸ ಹೊಂದಿರಬಹುದು, ಆದರೆ ಇವುಗಳು ಅವುಗಳ ಚಿಕಿತ್ಸಕ ಪರಿಣಾಮದ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಎಂದು ಅಧ್ಯಯನಗಳು ತೋರಿಸಿವೆ. ಇವು ಡೋಸೇಜ್, ಸುರಕ್ಷತೆ, ಸಾಮರ್ಥ್ಯ, ಗುಣಮಟ್ಟ ಮತ್ತು ಉದ್ದೇಶಿತ ಬಳಕೆಯ ವಿಷಯದಲ್ಲಿ ಬ್ರಾಂಡೆಡ್ ಔಷಧಿಗಳಿಗೆ ಸಮನಾಗಿರುತ್ತವೆ ಮತ್ತು ಅದೇ ಕಟ್ಟುನಿಟ್ಟಾದ ಉತ್ಪಾದನಾ ಮತ್ತು ಗುಣಮಟ್ಟದ ಮಾನದಂಡಗಳನ್ನು ಅನುಸರಿಸುತ್ತವೆ.

ಪಿಎಂಬಿಜೆಪಿ ಎನ್ನುವುದು ಕೇವಲ ಚಿಲ್ಲರೆ ವ್ಯಾಪಾರದ ಒಂದು ವಿಧಾನವಲ್ಲ; ಇದು ಭಾರತದ ಆರೋಗ್ಯ ವ್ಯವಸ್ಥೆಯ ರಚನಾತ್ಮಕ ಬಲವರ್ಧನೆಯನ್ನು ಪ್ರತಿನಿಧಿಸುತ್ತದೆ. ಇದು ಈ ವರ್ಷದ ಜನೌಷಧಿ ಸಪ್ತಾಹದ ವಿಷಯವಾದ ''ಜನೌಷಧಿ ಸಸ್ತೀ ಭೀ, ಭರೋಸೆಮಂದ್ ಭೀ, ಸೇಹತ್ ಕಿ ಬಾತ್, ಬಚತ್ ಕೆ ಸಾತ್'' (ಜನೌಷಧಿ ಅಗ್ಗವೂ ಹೌದು, ವಿಶ್ವಾಸಾರ್ಹವೂ ಹೌದು, ಉಳಿತಾಯದೊಂದಿಗೆ ಆರೋಗ್ಯದ ರಕ್ಷಣೆ) ಎಂಬುದರಲ್ಲಿ ಪ್ರತಿಫಲಿಸುತ್ತದೆ, 18,000 ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳ ನಿರಂತರವಾಗಿ ವಿಸ್ತರಿಸುತ್ತಿರುವ ಜಾಲದ ಮೂಲಕ, ಈ ಯೋಜನೆಯು ಔಷಧಿಗಳು ಮಾರುಕಟ್ಟೆ ದರಕ್ಕಿಂತ ಶೇ.50ರಿಂದ 80ರಷ್ಟು ಕಡಿಮೆ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡಿದೆ. ಇದು ಎಲ್ಲಾ ಸಾಮಾಜಿಕ-ಆರ್ಥಿಕ ಹಿನ್ನೆಲೆಯ ಕುಟುಂಬಗಳಿಗೆ ಬೆಂಬಲ ನೀಡುತ್ತಿದೆ.

ಈ ಯೋಜನೆಯ ಪ್ರಮಾಣವು ಅದರ ಉತ್ಪನ್ನಗಳ ಪಟ್ಟಿಯಲ್ಲಿಯೂ ಕಂಡುಬರುತ್ತದೆ. ಜನೌಷಧಿಯು 29 ವಿಭಿನ್ನ ಚಿಕಿತ್ಸಾ ಕ್ಷೇತ್ರಗಳನ್ನು ಒಳಗೊಂಡಿರುವ 2,110 ಔಷಧಿಗಳು ಮತ್ತು 315 ಶಸ್ತ್ರಚಿಕಿತ್ಸಾ ಉತ್ಪನ್ನಗಳ ಬೃಹತ್ ಸಂಗ್ರಹವನ್ನು ಹೊಂದಿದೆ. ಭಾರತೀಯ ಔಷಧಗಳು ಮತ್ತು ವೈದ್ಯಕೀಯ ಸಾಧನಗಳ ಬ್ಯೂರೋ (ಪಿಎಂಬಿಐ) ನೇರ ಉಸ್ತುವಾರಿಯಲ್ಲಿ, ಈ ಉತ್ಪನ್ನಗಳ ವಿಸ್ತರಣೆಯು ಮಾರುಕಟ್ಟೆ ವಿಶ್ಲೇಷಣೆ, ಪಾಲುದಾರರ ತೊಡಗಿಸಿಕೊಳ್ಳುವಿಕೆ ಮತ್ತು ಸಮರ್ಪಿತ ತಜ್ಞರ ಸಮಿತಿಯ ಕಟ್ಟುನಿಟ್ಟಿನ ಮೇಲ್ವಿಚಾರಣೆಯನ್ನು ಒಳಗೊಂಡಿರುವ ಒಂದು ಕ್ರಿಯಾತ್ಮಕ ಮತ್ತು ದತ್ತಾಂಶ ಆಧಾರಿತ ಪ್ರಕ್ರಿಯೆಯಾಗಿದೆ. ಇದು ಯೋಜನೆಯು ದೇಶದ ಬದಲಾಗುತ್ತಿರುವ ಆರೋಗ್ಯ ಅವಶ್ಯಕತೆಗಳು ಮತ್ತು ಔಷಧೀಯ ಬೇಡಿಕೆಗಳಿಗೆ ಅನುಗುಣವಾಗಿರುವುದನ್ನು ಖಚಿತಪಡಿಸುತ್ತದೆ. ಬಲವಾದ ನಿಯಂತ್ರಕ ಮೇಲ್ವಿಚಾರಣೆಯೊಂದಿಗೆ, ಭಾರತೀಯ ಔಷಧ ಕಂಪನಿಗಳು ಅಮೆರಿಕ, ಬ್ರಿಟನ್ ಮತ್ತು ಐರೋಪ್ಯ ಒಕ್ಕೂಟದಂತಹ ಕಟ್ಟುನಿಟ್ಟಾದ ಮಾರುಕಟ್ಟೆಗಳು ಸೇರಿದಂತೆ 200ಕ್ಕೂ ಹೆಚ್ಚು ದೇಶಗಳಲ್ಲಿ ವಿಶ್ವಾಸಾರ್ಹ ಪೂರೈಕೆದಾರರಾಗಿ ಬೆಳೆದಿವೆ. ಭಾರತೀಯ ಔಷಧ ಕಂಪನಿಗಳು ಲ್ಯಾಟಿನ್ ಅಮೆರಿಕ, ಆಫ್ರಿಕಾ ಮತ್ತು ಪೂರ್ವ ಯುರೋಪಿನಂತಹ ಉದಯೋನ್ಮುಖ ಮಾರುಕಟ್ಟೆಗಳಿಗೂ ವಿಸ್ತರಿಸುತ್ತಿವೆ.

ಈ ಉದ್ಯಮವು 'ಬಯೋಸಿಮಿಲರ್ಸ್', ಜೈವಿಕ ಔಷಧಿಗಳ ಜೆನೆರಿಕ್ ಆವೃತ್ತಿಗಳ ಮೇಲೆ ಗಮನ ಹರಿಸುತ್ತಿದೆ, ಜತೆಗೆ ಸಂಕೀರ್ಣ ಜೆನೆರಿಕ್ಸ್ ಮತ್ತು ವಿಶೇಷ ಔಷಧಿಗಳನ್ನು ತಯಾರಿಸಲು ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಹೆಚ್ಚಿನ ಹೂಡಿಕೆ ಮಾಡುತ್ತಿದೆ. ಈ ದೂರದೃಷ್ಟಿಯ ಯೋಜನೆಗಳು ಭಾರತವನ್ನು ಜಾಗತಿಕ ಉತ್ಪಾದನಾ ಕೇಂದ್ರವಾಗಿ ಮಾತ್ರವಲ್ಲದೆ, ಕೈಗೆಟುಕುವ ಔಷಧಿ ಕ್ಷೇತ್ರದಲ್ಲಿ ಭವಿಷ್ಯದ ನಾವೀನ್ಯತೆ ನಾಯಕನನ್ನಾಗಿ ರೂಪಿಸುತ್ತಿವೆ.

ಬಹು-ಪದರದ ಗುಣಮಟ್ಟ ಭರವಸೆ ಚೌಕಟ್ಟಿನ ಮೂಲಕ, 'ಕಡಿಮೆ ಬೆಲೆ ಎಂದರೆ ಉತ್ಪಾದನಾ ಗುಣಮಟ್ಟದಲ್ಲಿ ರಾಜಿ' ಎಂಬ ಮಿಥ್ಯೆಯನ್ನು ಪಿಎಂಬಿಜೆಪಿ ಪರಿಣಾಮಕಾರಿಯಾಗಿ ತೊಡೆದುಹಾಕಿದೆ. ಜಾಗತಿಕ ಉತ್ಪಾದನಾ ಮಾನದಂಡಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಲು ಡಬ್ಲ್ಯುಎಚ್‌ಒ-ಜಿಎಂಪಿ ಪ್ರಮಾಣೀಕೃತ ತಯಾರಕರಿಂದ ಔಷಧಿಗಳನ್ನು ಖರೀದಿಸಲಾಗುತ್ತದೆ. ಪ್ರತಿ ಬ್ಯಾಚ್ ಔಷಧಿಯು ಔಷಧಾಲಯದ ಶೆಲ್ಫ್ ತಲುಪುವ ಮೊದಲು ರಾಷ್ಟ್ರೀಯ ಪರೀಕ್ಷೆ, ಮಾಪನಾಂಕ ನಿರ್ಣಯ ಪ್ರಯೋಗಾಲಯಗಳ ಮಾನ್ಯತೆ ಮಂಡಳಿ (ಎನ್‌ಎಬಿಎಲ್) ಅನುಮೋದಿತ ಪ್ರಯೋಗಾಲಯಗಳಲ್ಲಿ ಕಟ್ಟುನಿಟ್ಟಾದ ಮೌಲ್ಯೀಕರಣಕ್ಕೆ ಒಳಗಾಗಬೇಕು ಎಂಬುದು ನಿಯಮವಾಗಿದೆ. ಈ ಔಷಧಗಳು ಔಷಧ ಮತ್ತು ಸೌಂದರ್ಯವರ್ಧಕ ಕಾಯ್ದೆ, 1940 ಅನ್ನು ಅನುಸರಿಸುತ್ತವೆ. ಲಭ್ಯತೆ, ಗುಣಮಟ್ಟ ಮತ್ತು ಕೈಗೆಟುಕುವ ದರ ಎಂಬ ಮೂರು ಸ್ತಂಭಗಳ ಮೇಲೆ ಕೇಂದ್ರೀಕರಿಸುವ ಮೂಲಕ, ಪಿಎಂಬಿಜೆಪಿ ಲಕ್ಷಾಂತರ ಜನರ ವೈದ್ಯಕೀಯ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡಿದೆ. ನಿರಂತರ ಸಾಂಸ್ಥಿಕ ಬೆಂಬಲ, ಹೆಚ್ಚುತ್ತಿರುವ ಸಾರ್ವಜನಿಕ ಜಾಗೃತಿ ಮತ್ತು ಮತ್ತಷ್ಟು ಮೂಲಸೌಕರ್ಯ ಸುಧಾರಣೆಗಳೊಂದಿಗೆ, ಪ್ರತಿ ಜಿಲ್ಲೆಯಲ್ಲಿ 'ಜನೌಷಧಿ ಕೇಂದ್ರ' ಎಂಬ ದೃಷ್ಟಿಕೋನವು ಈಗ ಕೇವಲ ಆಶಯವಾಗಿ ಉಳಿದಿಲ್ಲ? ಅದು ನನಸಾಗುತ್ತಿರುವ ವಾಸ್ತವವಾಗಿದೆ.



151.8 ದಶಲಕ್ಷ ಡಾಲರ್ ವೆಚ್ಚ | ಸಂಸತ್ ಒಪ್ಪಿಗೆ ಇಲ್ಲದೆ ನೇರ ಅನುಮೋದನೆ

ಇಸ್ರೇಲ್‌ಗೆ 12,000 ಬಾಂಬ್ ಮಾರಾಟಕ್ಕೆ ಅಮೆರಿಕ ಒಪ್ಪಿಗೆ

ವಾಷಿಂಗ್ಟನ್: ಇರಾನ್ ಯುದ್ಧದ ಮಧ್ಯೆ ಇಸ್ರೇಲ್ ಮನವಿ ಮೇರೆಗೆ 151.8 ದಶಲಕ್ಷ ಡಾಲರ್ ಮೌಲ್ಯದ 12,000 ಬಾಂಬ್‌ಗಳ ತುರ್ತು ಮಾರಾಟಕ್ಕೆ ಅಮೆರಿಕ ಸಂಸತ್ತಿನ ಅನುಮತಿ ಇಲ್ಲದೆಯೇ ಟ್ರಂಪ್ ಸರ್ಕಾರ ನೇರ ಅನುಮೋದನೆ ನೀಡಿದೆ. ಮಧ್ಯ ಪ್ರಾಚ್ಯದಲ್ಲಿ ಇರಾನ್ ಮೇಲಿನ ಯುದ್ಧ ಗಂಭೀರ ರೂಪ ತಾಳಿದ್ದು, ತಲಾ 1,000 ಪೌಂಡ್ ಭಾರದ 12,000 ಬಿಎಲ್‌ಯು -110ಎ/ಬಿ ಬಾಂಬ್‌ಗಳಿಗಾಗಿ ಇಸ್ರೇಲ್ ಮನವಿ ಮಾಡಿತ್ತು. ಈ ಮಾರಾಟದಲ್ಲಿ ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿಯೂ ಇರುವುದರಿಂದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಅವರು ತಕ್ಷಣವೇ ಅನುಮೋದನೆ ನೀಡಿದ್ದಾರೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ.

ಸಂಸತ್ತಿನ ಒಪ್ಪಿಗೆ ಇಲ್ಲದೆ ಅನುಮೋದನೆ: ಸಾಮಾನ್ಯವಾಗಿ ಶಸ್ತ್ರಾಸ್ತ್ರ ಮಾರಾಟ ಒಪ್ಪಂದಗಳಿಗೆ ಅಮೆರಿಕ ಸಂಸತ್ತಿನ ಅನುಮತಿ ಪಡೆಯಬೇಕು. ಆದರೆ ಇಸ್ರೇಲ್ ತುರ್ತು ಮನವಿಗೆ ಸ್ಪಂದಿಸಿದ ರುಬಿಯೋ ಅನುಮೋದನೆ ನೀಡಿದ್ದಾರೆ. ಈ ಒಪ್ಪಂದವು, ಪ್ರಸ್ತುತ ಮತ್ತು ಭವಿಷ್ಯದ ಆಕ್ರಮಣಗಳನ್ನು ಎದುರಿಸುವಲ್ಲಿ ಇಸ್ರೇಲ್ ಸಾಮರ್ಥ್ಯ ಬಲವರ್ಧಿಸಲಿದೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ. ಹೊಸ ಪ್ಯಾಕೇಜ್‌ನಲ್ಲಿ ಬಾಂಬ್‌ಗಳಷ್ಟೇ ಅಲ್ಲದೆ ಎಂಜಿನಿಯರಿಂಗ್, ಲಾಜಿಸ್ಟಿಕ್ಸ್ ಮತ್ತು ತಾಂತ್ರಿಕ ಸೇವೆಗಳನ್ನೂ ಒದಗಿಸಲಿದೆ.



ಎಲ್ಲೆಡೆ ದಟ್ಟ ಹೊಗೆ | ಘರ್ಷಣೆ ಇನ್ನಷ್ಟು ದಿನಗಳಿಗೆ ವಿಸ್ತರಿಸುವ ಸಾಧ್ಯತೆ

ದಾಳಿ-ಪ್ರತಿ ದಾಳಿಗೆ ಮಧ್ಯಪ್ರಾಚ್ಯ ತತ್ತರ!

ದುಬೈ: ಇಸ್ರೇಲ್ ಶನಿವಾರ ಮುಂಜಾನೆ ಇರಾನ್ ರಾಜಧಾನಿ ಟೆಹ್ರಾನ್ ಮೇಲೆ ಹೊಸ ಸರಣಿ ದಾಳಿಗಳನ್ನು ನಡೆಸಿದ್ದು, ಇಡೀ ನಗರ ಸ್ಫೋಟದ ಸದ್ದಿನಿಂದ ನಡುಗಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಈ ನಡುವೆ, ಅತ್ಯಂತ ಭೀಕರ ಬಾಂಬ್ ದಾಳಿಗಳು ಇನ್ನು ಮುಂದೆ ನಡೆಯಲಿವೆ ಎಂದು ಅಮೆರಿಕ ಎಚ್ಚರಿಸಿರುವುದು, ಘರ್ಷಣೆ ಇನ್ನಷ್ಟು ದಿನಗಳಿಗೆ ವಿಸ್ತರಿಸುವ ಸೂಚನೆ ನೀಡಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಫೋಟೋ, ವಿಡಿಯೋಗಳಲ್ಲಿ, ಪಶ್ಚಿಮ ಟೆಹ್ರಾನ್‌ನಲ್ಲಿ ಸರಣಿ ಸ್ಫೋಟಗಳ ನಂತರ ಕಪ್ಪು ಹೊಗೆ ಆವರಿಸುತ್ತಿರುವುದು ಕಂಡುಬಂದಿದೆ. ವಿಶಾಲ ವ್ಯಾಪ್ತಿಯ ಕ್ಷಿಪಣಿಗಳನ್ನು ಬಳಸಿ ದಾಳಿಗಳನ್ನು ಆರಂಭಿಸಿರುವುದಾಗಿ ಇಸ್ರೇಲ್ ದೃಢಪಡಿಸಿದೆ. ಇದೇ ವೇಳೆ ಇರಾನ್ ಉಡಾಯಿಸಿದ ಕ್ಷಿಪಣಿಗಳನ್ನು ತಡೆಹಿಡಿದಿರುವುದಾಗಿ ಇಸ್ರೇಲ್ ಸೇನೆ ಹೇಳಿಕೊಂಡಿದೆ.

ಅಮೆರಿಕದ ನಿಲುವು ಮತ್ತು ಮಿಲಿಟರಿ ಬೆಂಬಲ: ಈ ಮಧ್ಯೆ, ಅಮೆರಿಕಾದ ಡೊನಾಲ್ಡ್ ಟ್ರಂಪ್ ಆಡಳಿತ, ಇಸ್ರೇಲ್‌ಗೆ 151 ಮಿಲಿಯನ್ ಡಾಲರ್ ಮೌಲ್ಯದ ಹೊಸ ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮೋದನೆ ನೀಡಿದೆ. ಈ ಮೂಲಕ ಇರಾನ್ ಮೇಲೆ ಮತ್ತಷ್ಟು ಒತ್ತಡ ಹೇರಲಾಗಿದೆ. ಇರಾನ್ ಬೇಷರತ್ತಾಗಿ ಶರಣಾಗುವವರೆಗೆ ಯಾವುದೇ ಮಾತುಕತೆ ಸಾಧ್ಯವಿಲ್ಲ ಎಂದು ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದಾರೆ.

ರಷ್ಯಾ ಮತ್ತು ರಾಜತಾಂತ್ರಿಕ ನಡೆಗಳು

ಈ ಪ್ರದೇಶದಲ್ಲಿರುವ ಅಮೆರಿಕದ ಮಿಲಿಟರಿ ನೆಲೆಗಳನ್ನು ಗುರಿಯಾಗಿಸಲು ರಷ್ಯಾ ಇರಾನ್‌ಗೆ ಮಾಹಿತಿ ಹಂಚಿಕೊಳ್ಳುತ್ತಿದೆ ಎಂದು ಅಮೆರಿಕದ ಗುಪ್ತಚರ ಅಧಿಕಾರಿಗಳು ಗಂಭೀರ ಆರೋಪ ಮಾಡಿದ್ದಾರೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರೊಂದಿಗೆ ಮಾತನಾಡಿ, ಆರಂಭಿಕ ದಾಳಿಯಲ್ಲಿ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆಗೆ ಸಂತಾಪ ಸೂಚಿಸಿದ್ದಾರೆ.

ಉತ್ತರಾಧಿಕಾರಿ ವಿಚಾರ, ಅಮೆರಿಕ ವಿರುದ್ಧ ಇರಾನ್ ಕೆಂಡ

ಯುದ್ಧದ ಆರಂಭಿಕ ದಾಳಿಗಳಲ್ಲಿ ಹತ್ಯೆಗೀಡಾದ ಖಮೇನಿ ಅವರ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ತಾವೂ ಭಾಗಿಯಾಗಬೇಕು ಎಂದು ಟ್ರಂಪ್ ಮಾಧ್ಯಮ ಸಂಸ್ಥೆಗಳಿಗೆ ತಿಳಿಸಿದ್ದಾರೆ. ಟ್ರಂಪ್ ಅವರ ಈ ಹೇಳಿಕೆಯನ್ನು ವಿಶ್ವಸಂಸ್ಥೆಯಲ್ಲಿನ ಇರಾನ್ ರಾಯಭಾರಿ ಅಮೀರ್ ಸಯೀದ್ ಇರವಾನಿ ಖಂಡಿಸಿದ್ದಾರೆ. ಇರಾನ್ ತನ್ನ ಆಂತರಿಕ ವ್ಯವಹಾರಗಳಲ್ಲಿ ಯಾವುದೇ ವಿದೇಶಿ ಶಕ್ತಿಯ ಹಸ್ತಕ್ಷೇಪವನ್ನು ಒಪ್ಪುವುದಿಲ್ಲ ಮತ್ತು ಎಂದಿಗೂ ಅನುಮತಿಸುವುದಿಲ್ಲ ಎಂದು ಅವರು ಹೇಳಿದ್ದಾರೆ.

30ಕ್ಕೂ ಹೆಚ್ಚು ಯುದ್ಧನೌಕೆಗಳನ್ನು ಮುಳುಗಿಸಿದ ಅಮೆರಿಕ

ವಾಷಿಂಗ್ಟನ್: ಇರಾನ್ ವಿರುದ್ಧ ಯುದ್ಧ ಆರಂಭವಾದಾಗಿನಿಂದ ಈವರೆಗೆ ಅಮೆರಿಕ ಇರಾನ್‌ನ 30ಕ್ಕೂ ಹೆಚ್ಚು ನೌಕಾಪಡೆ ಹಡಗುಗಳನ್ನು ಮುಳುಗಿಸಿದೆ, ಎಂದು ಯುನೈಟೆಡ್ ಸ್ಟೇಟ್ಸ್ ಸೆಂಟ್ರಲ್ ಕಮಾಂಡ್ (ಸೆಂಟ್‌ಕಾಮ್) ನ ಉನ್ನತ ಮಿಲಿಟರಿ ಕಮಾಂಡರ್ ತಿಳಿಸಿದ್ದಾರೆ. ಅಮೆರಿಕದ ಸೆಂಟ್ರಲ್ ಕಮಾಂಡ್ ಮುಖ್ಯಸ್ಥ ಅಡ್ಮಿರಲ್ ಬ್ರಾಡ್ ಕೂಪರ್ ಮಾತನಾಡಿ, ನಾಶಪಡಿಸಲಾದ ಹಡಗುಗಳಲ್ಲಿ ಎರಡನೇ ಮಹಾಯುದ್ಧದ ಕಾಲದ ವಿಮಾನವಾಹಕ ನೌಕೆಯ ಗಾತ್ರದಷ್ಟೇ ದೊಡ್ಡದಾದ ಇರಾನ್‌ನ 'ಡ್ರೋನ್-ವಾಹಕ' ಹಡಗು ಕೂಡ ಸೇರಿದೆ. ಸಂಘರ್ಷದ ಆರಂಭಿಕ ದಿನಗಳಿಗೆ ಹೋಲಿಸಿದರೆ ಇರಾನ್‌ನ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿ ಸುಮಾರು ಶೇ. 90 ರಷ್ಟು ಕುಸಿದಿವೆ ಎಂದು ಹೇಳಿದ್ದಾರೆ. ಇರಾನ್‌ನ ಮಿಲಿಟರಿ ಮೂಲಸೌಕರ್ಯಗಳ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ಸತತ ದಾಳಿಗಳು ಹಾಗೂ ಇರಾನ್‌ನ ಡ್ರೋನ್ ಬೆದರಿಕೆಗಳನ್ನು ಎದುರಿಸಲು ವಿನ್ಯಾಸಗೊಳಿಸಲಾದ 'ಲೂಕಾಸ್' ಅಟ್ಯಾಕ್ ಡ್ರೋನ್‌ಗಳಂತಹ ಹೊಸ ತಂತ್ರಜ್ಞಾನಗಳ ಬಳಕೆಯೇ ಈ ಕುಸಿತಕ್ಕೆ ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಪ್ರಾದೇಶಿಕ ವ್ಯಾಪ್ತಿಗೆ ಹರಡಿದ ಯುದ್ಧ

ಈ ಸಂಘರ್ಷ ಈಗ ಉಭಯ ದೇಶಗಳ ಗಡಿ ಮೀರಿ ಹರಡುತ್ತಿದೆ. ಬಹ್ರೇನ್ ಮೇಲೆ ಇರಾನ್ ದಾಳಿ ನಡೆಸಿದ ಬೆನ್ನಲ್ಲೇ ಅಲ್ಲಿ ವಾಯುದಾಳಿಯ ಮುನ್ನೆಚ್ಚರಿಕೆ ಸೈರನ್ ಮೊಳಗಿದೆ. ಸೌದಿ ಅರೇಬಿಯಾದ ಶೈಬಾ ತೈಲ ಕೇಂದ್ರದತ್ತ ಬರುತ್ತಿದ್ದ ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಮತ್ತು ಅಮೆರಿಕದ ಪಡೆಗಳಿರುವ ಪ್ರಿನ್ಸ್ ಸುಲ್ತಾನ್ ವಾಯು ನೆಲೆಯನ್ನು ಗುರಿಯಾಗಿಸಿಕೊಂಡಿದ್ದ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ತಡೆಹಿಡಿಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕ ಗೆಲುವಿಗೆ ಪಾದ್ರಿ ಪ್ರಾರ್ಥನೆ

ಶ್ವೇತಭವನದ ಹಿರಿಯ ಅಧಿಕಾರಿಯೊಬ್ಬರು ಶ್ವೇತಭವನದಲ್ಲಿ ಯುದ್ಧದ ಬಗ್ಗೆ ಪಾದ್ರಿಯೊಬ್ಬರು ಪ್ರಾರ್ಥಿಸುತ್ತಿರುವ ವಿಡಿಯೋ ತುಣುಕು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದೆ. ಉಲ್ಬಣಗೊಳ್ಳುತ್ತಿದ್ದಂತೆ ತುಣುಕು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ. ನಾನು ನಿಮ್ಮ ಅನುಗ್ರಹಕ್ಕಾಗಿ ನಿಮ್ಮ ರಕ್ಷಣೆಗಾಗಿ ಪ್ರಾರ್ಥಿಸುತ್ತೇನೆ. ನಮ್ಮ ಪಡೆಗಳಿಗೆ ಮತ್ತು ನಮ್ಮ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನಮ್ಮ ಎಲ್ಲಾ ಪುರುಷರು ಮತ್ತು ಮಹಿಳೆಯರಿಗೆ ಅನುಗ್ರಹ ಮತ್ತು ರಕ್ಷಣೆಗಾಗಿ ನಾನು ಪ್ರಾರ್ಥಿಸುತ್ತೇನೆ ಎಂದು ಪಾದ್ರಿ ಹೇಳುತ್ತಿರುವುದು ವಿಡಿಯೋದಲ್ಲಿ ಸೆರೆಯಾಗಿದೆ.



ಹೆಚ್ಚುತ್ತಿರುವ ಸಾವು-ನೋವು, ಜಾಗತಿಕ ಆತಂಕ

ಈ ಯುದ್ಧದಲ್ಲಿ ಈವರೆಗೆ ಇರಾನ್‌ನಲ್ಲಿ ಕನಿಷ್ಠ 1,230, ಲೆಬನಾನ್‌ನಲ್ಲಿ 200 ಮತ್ತು ಇಸ್ರೇಲ್‌ನಲ್ಲಿ ಸುಮಾರು 12 ಜನರು ಮೃತಪಟ್ಟಿದ್ದಾರೆ. ಆರು ಅಮೆರಿಕನ್ ಸೈನಿಕರು ಕೂಡ ಹತ್ಯೆಗೀಡಾಗಿದ್ದಾರೆ. ಈ ಸಂಘರ್ಷದಿಂದಾಗಿ ಗಲ್ಫ್ ರಾಷ್ಟ್ರಗಳ ಇಂಧನ ರಫ್ತಿಗೆ ಅಡ್ಡಿಯಾಗಬಹುದು ಮತ್ತು ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 150 ಡಾಲರ್‌ಗೆ ಏರಬಹುದು, ಎಂದು ಕತಾರ್ ಆತಂಕ ವ್ಯಕ್ತಪಡಿಸಿದೆ. ಈಗಾಗಲೇ ಕಚ್ಚಾ ತೈಲ ಬೆಲೆ ಕಳೆದ ಎರಡು ವರ್ಷಗಳಲ್ಲೇ ಮೊದಲ ಬಾರಿಗೆ 90 ಡಾಲರ್ ಗಡಿ ದಾಟಿದೆ.



ನೆರೆ ರಾಷ್ಟ್ರಗಳಿಗೆ ಕ್ಷಮೆ ಕೇಳಿದ ಇರಾನ್ ಅಧ್ಯಕ್ಷ

ಇಸ್ರೇಲ್ ಮತ್ತು ಅಮೆರಿಕದೊಂದಿಗಿನ ಯುದ್ಧದ ಸಮಯದಲ್ಲಿ ಪ್ರಾರಂಭಿಸಿದ ದಾಳಿಗಳಿಗಾಗಿ ಇರಾನ್ ಅಧ್ಯಕ್ಷ ಮಸೂದ್ ಪೆಜೆಷ್ಕಿಯನ್ ಅವರು ನೆರೆಯ ರಾಷ್ಟ್ರಗಳಿಗೆ ಕ್ಷಮೆಯಾಚಿಸಿದ್ದಾರೆ. ಇಸ್ರೇಲ್ ಅವರು ಮೊದಲು ದಾಳಿ ಮಾಡುವವರೆಗೆ ನಾವು ಅದರ ಮೇಲೆ ದಾಳಿ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಇರಾನ್‌ನಿಂದ ದಾಳಿಗೊಳಗಾದ ನೆರೆಯ ರಾಷ್ಟ್ರಗಳಿಗೆ ನಾನು ನನ್ನ ಪರವಾಗಿ ಮತ್ತು ರಾಷ್ಟ್ರದ ಪರವಾಗಿ ಕ್ಷಮೆಯಾಚಿಸುತ್ತೇನೆ. ಮಧ್ಯಂತರ ನಾಯಕತ್ವ ಮಂಡಳಿಯು ಶುಕ್ರವಾರ ನೆರೆಯ ದೇಶಗಳ ಮೇಲೆ ಯಾವುದೇ ದಾಳಿಗಳನ್ನು ಮಾಡಲಾಗುವುದಿಲ್ಲ, ಆ ದೇಶಗಳಿಂದ ನಮ್ಮ ಮೇಲೆ ದಾಳಿ ನಡೆಯದ ಹೊರತು ಯಾವುದೇ ಕ್ಷಿಪಣಿಗಳನ್ನು ಹಾರಿಸಲಾಗುವುದಿಲ್ಲ ಎಂದು ಒಪ್ಪಿಕೊಂಡಿದೆ ಎಂದು ಪೆಜೆಷ್ಕಿಯನ್ ಇರಾನಿನ ರಾಜ್ಯ ಟಿವಿ ಪ್ರಸಾರ ಮಾಡಿದ ಭಾಷಣದಲ್ಲಿ ಹೇಳಿದರು. ಅಂತೆಯೇ ಇರಾನ್ ಮೇಲೆ ದಾಳಿ ಮಾಡಿ ತಮ್ಮ ಸರ್ವೋಚ್ಚ ನಾಯಕ ಖಮೇನಿ ಹತ್ಯೆ ಮಾಡಿದ ಇಸ್ರೇಲ್-ಅಮೆರಿಕವನ್ನ ಕ್ಷಮಿಸೋ ಮಾತೇ ಇಲ್ಲ, ತಮ್ಮ ದೇಶವು ಇಸ್ರೇಲ್ ಮತ್ತು ಅಮೆರಿಕ ಮುಂದೆ ಎಂದೂ ಶರಣಾಗುವುದಿಲ್ಲ ಮಸೌದ್ ಪೆಜೆಶ್ಕಿಯಾನ್ ಹೇಳಿದ್ದಾರೆ.

ಇರಾನ್ ಹೊಸ ಅಧ್ಯಾಯಕ್ಕೆ ಬಲಪಂಥೀಯ ಪಕ್ಷ ಸ್ಥಾಪನೆ

ಟೆಹ್ರಾನ್: ಇರಾನ್ ರಾಷ್ಟ್ರೀಯವಾದಿ ಬಣ ಹೊಸ ಪಕ್ಷ ಸ್ಥಾಪನೆಯೊಂದಿಗೆ ದಶಕಗಳ ಇಸ್ಲಾಮಿಕ್ ಆಡಳಿತದ ನಂತರ ಇರಾನ್‌ನ ಹೊಸ ಅಧ್ಯಾಯಕ್ಕೆ ಮುನ್ನುಡಿ ಬರೆದಿದೆ. ಇಸ್ಲಾಮಿಕ್ ಕ್ರಾಂತಿಗೂ ಮುನ್ನ ರಾಷ್ಟ್ರಧ್ವಜದಲ್ಲಿದ್ದ ಸಿಂಹ ಮತ್ತು ಸೂರ್ಯ ಬಲಪಂಥೀಯ ಪಕ್ಷದ ಚಿಹ್ನೆಯಾಗಿ ಮರಳಿವೆ. ಇರಾನ್‌ನ ದಮಾವಂದ್ ಪರ್ವತದಲ್ಲಿ ಖಡ್ಗ ಹಿಡಿದ ಸಿಂಹ ಮತ್ತು ಸೂರ್ಯೋದಯ, ಹಳೆಯ ಪರ್ಷಿಯನ್ ಸಂಪ್ರದಾಯವಾದಿ ಸಂಕೇತಗಳನ್ನು ಕನ್ಸರ್ವೇಟಿವ್ ಪಕ್ಷ (ಸಿಪಿಐ) ತನ್ನ ಧ್ವಜದಲ್ಲಿ ಬಳಸಿಕೊಂಡಿದೆ.



ಕಿರುಸುದ್ದಿ

ಭಾರತದೊಂದಿಗೆ ರಕ್ಷಣಾ ಸಹಕಾರ ವಿಸ್ತರಣೆಗೆ ಬದ್ಧ

ಹೊಸದಿಲ್ಲಿ: ಭಾರತದೊಂದಿಗೆ ವಿಶೇಷವಾಗಿ ಸುಧಾರಿತ ಡ್ರೋನ್ ತಂತ್ರಜ್ಞಾನಗಳಲ್ಲಿ ರಕ್ಷಣಾ ಸಹಕಾರವನ್ನು ವಿಸ್ತರಿಸಲು ಪೋಲೆಂಡ್ ಎದುರು ನೋಡುತ್ತಿದೆ ಎಂದು ಪೋಲೆಂಡ್ ವಿದೇಶಾಂಗ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆರ್ಥಿಕ ಅಭಿವೃದ್ಧಿ ಮತ್ತು ತಂತ್ರಜ್ಞಾನ ಸಚಿವಾಲಯದ ಅಧೀನ ಕಾರ್ಯದರ್ಶಿ ಮೈಕೆಲ್ ಬರಾನೋವ್ಸ್ಕಿ ಅವರು ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ, ಭಾರತವನ್ನು ಕೇವಲ ಮಾರುಕಟ್ಟೆಯಾಗಿ ಮಾತ್ರವಲ್ಲದೆ ಕಾರ್ಯತಂತ್ರದ ಪಾಲುದಾರನಾಗಿ ನೋಡುವುದಕ್ಕೆ ಒತ್ತು ನೀಡಿದರು.

ತೈಲ ಆಮದು: ಸ್ವತಂತ್ರ ನಿಲುವು ಸ್ಪಷ್ಟಪಡಿಸಿದ ಭಾರತ

ಹೊಸದಿಲ್ಲಿ: ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಭಾರತಕ್ಕೆ ಯಾವುದೇ ರಾಷ್ಟ್ರದ ಅನುಮತಿಯ ಅಗತ್ಯವಿಲ್ಲ, ದೇಶ ಈ ವಿಚಾರದಲ್ಲಿ ಸ್ವಾಯತ್ತತೆಯನ್ನು ಬಿಟ್ಟುಕೊಟ್ಟಿಲ್ಲ, ಎಂದು ಭಾರತೀಯ ಅಧಿಕಾರಿಗಳು ದೃಢಪಡಿಸಿದ್ದಾರೆ. ರಷ್ಯಾದಿಂದ ತೈಲ ಖರೀದಿಸಲು ಅಮೆರಿಕಾ ಭಾರತಕ್ಕೆ ತಾತ್ಕಾಲಿಕ ಸಡಿಲಿಕೆ ನೀಡಿದ ಬೆನ್ನಲ್ಲೇ ಶನಿವಾರ ಈ ಸ್ಪಷ್ಟನೆ ನೀಡಲಾಗಿದೆ.

ಎಲ್‌ಪಿಜಿ ಬೆಲೆ 60 ರೂ. ಏರಿಕೆ, ಹೊಸ ದರ ಜಾರಿ

ಹೊಸದಿಲ್ಲಿ: ಇರಾನ್ ಯುದ್ಧದ ನಡುವೆ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ದೇಶಾದ್ಯಂತ 60 ರೂ. ಏರಿಕೆಯಾಗಿದ್ದು, ಶನಿವಾರವೇ ಹೊಸ ದರವನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. 14.2 ಕೆ.ಜಿ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ 60 ರೂ. ಹೆಚ್ಚಿಸಲಾಗಿದೆ. ಅದೇ ರೀತಿ 19 ಕೆ.ಜಿ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆ 115 ರೂ.ನಷ್ಟು ಹೆಚ್ಚಿಸಲಾಗಿದೆ. ಇವುಗಳು ಹೋಟೆಲ್, ರೆಸ್ಟೋರೆಂಟ್ ಮತ್ತು ಸಣ್ಣ ಉದ್ಯಮಗಳ ಮೇಲೆ ಪರಿಣಾಮ ಬೀರಲಿದೆ.



ಇದೇವೇಳೆ ದೇಶದಲ್ಲಿ ಇಂಧನ ಕೊರತೆ ಇಲ್ಲ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್‌ದೀಪ್ ಸಿಂಗ್ ಪುರಿ ಭರವಸೆ ನೀಡಿದ್ದು, ಗ್ರಾಹಕರು ತೈಲ ಪೂರೈಕೆ ವ್ಯತ್ಯಯಗಳ ಬಗ್ಗೆ ಚಿಂತಿಸಬೇಕಾದ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ. ಭಾರತೀಯರಿಗೆ ಕೈಗೆಟಕುವ ದರದಲ್ಲಿ ಇಂಧನ ಲಭ್ಯತೆ ನೋಡಿಕೊಳ್ಳುವುದು ನಮ್ಮ ಪ್ರಾಥಮಿಕ ಆದ್ಯತೆಯಾಗಿದೆ ಎಂದು ಸಚಿವರು ಎಕ್ಸ್ ಪೋಸ್ಟ್ ನಲ್ಲಿ ತಿಳಿಸಿದ್ದಾರೆ. ದೇಶದಲ್ಲಿ ಇಂಧನ ಕೊರತೆ ಇದೆಯೆಂಬ ವದಂತಿಯನ್ನು ಅವರು ತಳ್ಳಿಹಾಕಿದ್ದು, ಆಧಾರರಹಿತ ವರದಿ ಎಂದಿದ್ದಾರೆ.

ಬೆಂಗಳೂರಿನಲ್ಲಿ ಎಲ್‌ಪಿಜಿ ದರ: ಬೆಂಗಳೂರಿನಲ್ಲಿ 14.2 ಕೆ.ಜಿ. ಗೃಹ ಬಳಕೆ ಸಿಲಿಂಡರ್ ಬೆಲೆ 855.5ರಿಂದ 915.5 ರೂ. ತಲುಪಿದೆ. 19 ಕೆ.ಜಿ. ಎಲ್‌ಪಿಜಿ ಬೆಲೆ 144 ರೂ. ಏರಿಕೆ ಕಂಡು 1958 ರೂ. ತಲುಪಿದೆ.

ವಿದೇಶಿ ಕರೆನ್ಸಿ ಸಂಪತ್ತು ಹೆಚ್ಚಳ: ಆರ್‌ಬಿಐ ವರದಿ

ಹೊಸದಿಲ್ಲಿ: ಅತ್ತ ಇಸ್ರೇಲ್ -ಇರಾನ್ ಸಂಘರ್ಷ ಮುಂದುವರಿದಿರುವಂತೆಯೇ, ಭಾರತೀಯ ರಿಸರ್ವ್ ಬ್ಯಾಂಕ್ ದೇಶದ ಜನತೆಗೆ ಮಹತ್ವದ ಸುದ್ದಿ ನೀಡಿದೆ. ವಿದೇಶಿ ವಿನಿಮಯ ಮೀಸಲಿನ ಅತಿದೊಡ್ಡ ಭಾಗವೆಂದು ಪರಿಗಣಿಸಲಾದ ವಿದೇಶಿ ಕರೆನ್ಸಿ ಸಂಪತ್ತು 561ಮಿ.ಡಾ.ಗಳಷ್ಟು ಹೆಚ್ಚಳಗೊಂಡು ಫೆ.27ಕ್ಕೆ ಅಂತ್ಯಗೊಂಡ ವಾರದಲ್ಲಿ 573. 12ಬಿಲಿಯನ್ ಡಾಲರ್‌ಗೇರಿರುವುದಾಗಿ ಆರ್‌ಬಿಐ ಮಾಹಿತಿ ನೀಡಿದೆ.

ಸಾರ್ವಕಾಲಿಕ ದಾಖಲೆ: ಅಂತಾರಾಷ್ಟ್ರೀಯ ಉದ್ವಿಗ್ನತೆಯ ಸನ್ನಿವೇಶದಲ್ಲೇ ಭಾರತದ ವಿದೇಶಿ ವಿನಿಮಯ ಮೀಸಲು 4.88ಬಿ.ಡಾ. ಏರಿಕೆಯಾಗಿ ಸಾರ್ವಕಾಲಿಕ ದಾಖಲೆಯಾದ 728.49ಬಿ.ಡಾ.ತಲುಪಿರುವುದು ಆರ್‌ಬಿಐ ಬಿಡುಗಡೆಗೊಳಿಸಿದ ಅಂಕಿ-ಅಂಶಗಳಿಂದ ವ್ಯಕ್ತವಾಗಿದೆ. ಇದು ಭಾರತದ ಆರ್ಥಿಕತಳಹದಿ ಸುಭದ್ರವಾಗಿರುವುದನ್ನು ಎತ್ತಿತೋರಿದೆ. ಡಾಲರ್ ಲೆಕ್ಕದಲ್ಲಿ ಹೇಳುವುದಾದರೆ , ಈ ಸೊತ್ತುಗಳು ಇತರ ಪ್ರಮುಖ ಕರೆನ್ಸಿಗಳಾದ ಯುರೋ, ಬ್ರಿಟಿಷ್ ಪೌಂಡ್ ಸ್ಟರ್ಲಿಂಗ್, ಜಪಾನಿನ ಯೆನ್‌ನಂತಹವುಗಳ ಮೌಲ್ಯಗಳಲ್ಲಿ ಆಗುತ್ತಿರುವ ಏರಿಳಿತಗಳ ಪರಿಣಾಮದ ಹೊರತಾಗಿಯೂ ಈ ಮೀಸಲು ಇರುವುದು ಗಮನಾರ್ಹವಾಗಿದೆ.

ಭಾರತೀಯ ಕೇಂದ್ರೀಯ ಬ್ಯಾಂಕ್‌ನ ಚಿನ್ನದ ಮೀಸಲು ಪ್ರಮಾಣ ಕೂಡ 4.14ಬಿಲಿಯನ್ ಡಾ.ಗಳಷ್ಟು ಹೆಚ್ಚಳಗೊಂಡು 131.63ಬಿ.ಡಾ.ಗಳಿಗೇರಿದೆ.ವಿಶೇಷ ಹಿಂತೆಗೆತ ಹಕ್ಕುಗಳು(ಎಸ್‌ಡಿಆರ್) ಕೂಡ 26ಮಿ.ಡಾ.ಹೆಚ್ಚಳವಾಗಿ 18.87ಬಿ.ಡಾ.ಗೇರಿದೆ. ಅಂತಾರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್)ನಲ್ಲಿ ಭಾರತೀಯ ಮೀಸಲು ಕೂಡ 158ಮಿ.ಡಾ.ಹೆಚ್ಚಳಗೊಡು 4.87ಬಿ.ಡಾ.ತಲುಪಿರುವುದಾಗಿಯೂ ಅಂಕಿ-ಅಂಶಗಳು ತಿಳಿಸಿವೆ.

ಮುಂದಿನ ವರ್ಷಾಂತ್ಯಕ್ಕೆ ಏಡ್ಸ್ ನಿಯಂತ್ರಣ ಗುರಿ

ಹೊಸದಿಲ್ಲಿ: ಮಿಷನ್ ಏಡ್ಸ್ ಸುರಕ್ಷಾ ಅನ್ವಯದಲ್ಲಿ, ಭಾರತವು 2027ರ ಡಿಸೆಂಬರ್ 1ರ ವಿಶ್ವ ಏಡ್ಸ್ ದಿನದ ವೇಳೆಗೆ ಎಚ್‌ಐವಿ ನಿಯಂತ್ರಣ ಸಾಧಿಸುವ ಗುರಿ ಹೊಂದಲಿದೆ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯ (ನ್ಯಾಕೊ) ಮಹಾನಿರ್ದೇಶಕ ಡಾ. ರಾಕೇಶ್ ಗುಪ್ತಾ ಹೇಳಿದ್ದಾರೆ.



ದೇಶಾದ್ಯಂತ ಅನುಷ್ಠಾನಗೊಳ್ಳುತ್ತಿರುವ 'ಮಿಷನ್ ಏಡ್ಸ್ ಸುರಕ್ಷಾ' ಭಾಗವಾಗಿ, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯು ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ 'ಸುರಕ್ಷಾ ಸಂಕಲ್ಪ ಕಾರ್ಯಗಾರ'ವನ್ನು ಉದ್ದೇಸಿ ಮಾತನಾಡಿದ ಅವರು, ಭಾರತದಲ್ಲಿ ಎಚ್‌ಐವಿ ಸಾಂಕ್ರಾಮಿಕವನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ತರುವ ಗುರಿ ಹೊಂದಲಾಗಿದೆ. 2027ರ ಡಿಸೆಂಬರ್ 1ರೊಳಗೆ ದೇಶವನ್ನು ಎಚ್‌ಐವಿ ಮುಕ್ತವಾಗಿಸಲು ಕೇಂದ್ರ ಸರ್ಕಾರವು 'ಮಿಷನ್ ಏಡ್ಸ್ ಸುರಕ್ಷಾ'ಮೂಲಕ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ನಿಟ್ಟಿನಲ್ಲಿ, ಜಾಗತಿಕ ಗುರಿಗಳಾದ 95-95-99 ಸಾಧಿಸುವ ಗುರಿ ಹೊಂದಿದೆ. ಹೆಚ್ಚಿನ ಎಚ್‌ಐವಿ ಪ್ರಭಾವ ಮತ್ತು ಸೋಂಕಿನ ಪ್ರಮಾಣವಿರುವ 219 ಆದ್ಯತೆಯ ಜಿಲ್ಲೆಗಳನ್ನು ದೇಶಾದ್ಯಂತ ಗುರುತಿಸಲಾಗಿದೆ. ಸೋಂಕಿನ ಪ್ರಮಾಣ, ಪ್ರಸ್ತುತತೆ, ರೋಗದ ಹೊರೆ ಮತ್ತು ಹೆಚ್ಚಿನ ಅಪಾಯದ ಗುಂಪುಗಳ ಆಧಾರದ ಮೇಲೆ ಗುರುತಿಸಲಾಗಿದೆ ಎಂದು ತಿಳಿಸಿದರು.

ಕರ್ನಾಟಕದ ಎಚ್‌ಐವಿ ಸ್ಥಿತಿಗತಿ ಬಗ್ಗೆ ವಿಶೇಷ ಗಮನ ಹರಿಸಲಾಗುತ್ತಿದೆ. ರಾಜ್ಯದಲ್ಲಿ ಎಚ್‌ಐವಿ ಪ್ರಸ್ತುತತೆ ಶೇ. 0.44ರಷ್ಟಿದ್ದು, ಇದು ರಾಷ್ಟ್ರೀಯ ಸರಾಸರಿಯಾದ ಶೇ.0.2ಗಿಂತ ಹೆಚ್ಚಾಗಿದೆ ಎಂದಿದ್ದಾರೆ.

ಡೇರಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಖುಲಾಸೆ

ಚಂಡೀಗಢ: 2002ರ ಪತ್ರಕರ್ತ ರಾಮ್ ಚಂದರ್ ಛತ್ರಪತಿ ಕೊಲೆ ಪ್ರಕರಣದಲ್ಲಿ, ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಸಿಂಗ್‌ನನ್ನು ಪಂಜಾಬ್ ಮತ್ತು ಹರ್ಯಾಣ ಹೈಕೋರ್ಟ್ ಶನಿವಾರ ಖುಲಾಸೆ ಮಾಡಿದೆ. ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು ಮತ್ತು ನ್ಯಾಯಮೂರ್ತಿ ವಿಕ್ರಮ್ ಅಗರ್ವಾಲ್ ಅವರನ್ನೊಳಗೊಂಡ ವಿಭಾಗೀಯ ಪೀಠ, 2019ರ ಸಿಬಿಐ ವಿಶೇಷ ನ್ಯಾಯಾಲಯ ನೀಡಿದ್ದ ಜೀವಾವಧಿ ಶಿಕ್ಷೆಯ ತೀರ್ಪನ್ನು ರದ್ದುಗೊಳಿಸಿದೆ. ಡೇರಾದಲ್ಲಿ ನಡೆಯುತ್ತಿದ್ದ ಲೈಂಗಿಕ ಶೋಷಣೆಯನ್ನು ಬಹಿರಂಗಪಡಿಸಿದ್ದಕ್ಕಾಗಿ ಸಿರ್ಸಾದಲ್ಲಿ ಛತ್ರಪತಿ ಮೇಲೆ ಗುಂಡು ಹಾರಿಸಲಾಗಿತ್ತು. ಈ ಪ್ರಕರಣದಲ್ಲಿ ರಾಮ್ ರಹೀಂ ವಿರುದ್ಧ ವಿದ್ದ ಆರೋಪಗಳನ್ನು ಹೈಕೋರ್ಟ್ ವಜಾಗೊಳಿಸಿದೆ. ಆದರೆ, ಪ್ರಕರಣದ ಇತರ ಮೂವರು ಆರೋಪಿಗಳ ಶಿಕ್ಷೆಯನ್ನು ಎತ್ತಿ ಹಿಡಿಯಲಾಗಿದೆ. ಈ ಪ್ರಕರಣದಲ್ಲಿ ಬಿಡುಗಡೆಯಾಗಿದ್ದರೂ, ಅತ್ಯಾಚಾರ ಪ್ರಕರಣದಲ್ಲಿ 20 ವರ್ಷಗಳ ಜೈಲು ಶಿಕ್ಷೆ ಅನುಭವಿಸುತ್ತಿರುವ ರಾಮ್ ರಹೀಂ, ರೋಹ್ಟಕ್‌ನ ಸುನಾರಿಯಾ ಜೈಲಿನಲ್ಲೇ ಇರಲಿದ್ದಾನೆ.

ಐರಿಸ್ ದೆನಾ ಮುಳುಗಡೆಗೂ ಮುನ್ನ ಕೊಚ್ಚಿಯಲ್ಲಿ ಲವಣ್ ಡಾಕ್

ಮಾನವೀಯ ದೃಷ್ಟಿಯಿಂದ ಲಂಗರಿಗೆ ಅವಕಾಶ

ಹೊಸದಿಲ್ಲಿ: ಇರಾನ್ ಯುದ್ಧನೌಕೆ ಐರಿಸ್ ದೆನಾವನ್ನು ಅಮೆರಿಕ ನೌಕಾಪಡೆ ಹಿಂದು ಮಹಾಸಾಗರದಲ್ಲಿ ಮುಳುಗಿಸಿದ ಬಗ್ಗೆ ಮೊದಲ ಪ್ರತಿಕ್ರಿಯೆ ನೀಡಿದ ವಿದೇಶಾಂಗ ಸಚಿವ ಎಸ್. ಜೈಶಂಕರ್, ಅದೇ ದಿನ ಇರಾನ್‌ನ ಇನ್ನೊಂದು ಯುದ್ಧನೌಕೆ ಲವಣ್‌ಗೆ ಮಾನವೀಯತೆ ದೃಷ್ಟಿಯಿಂದ ನಿಲುಗಡೆಗೆ ಅವಕಾಶ ಮಾಡಿಕೊಟ್ಟಿದ್ದೆವು ಎಂದು ಹೇಳಿದ್ದಾರೆ.

ದಿಲ್ಲಿಯಲ್ಲಿ ನಡೆದ ರೈಸಿನಾ ಸಂವಾದ 2026ರಲ್ಲಿ ಮಾತನಾಡಿದ ಸಚಿವ ಜೈಶಂಕರ್, ನಾನೂ ವಿಶ್ವಸಂಸ್ಥೆಯ ಸಮುದ್ರ ಕಾನೂನು ಒಪ್ಪಂದ 1982 ಮತ್ತು ಅಂತಾರಾಷ್ಟ್ರೀಯ ಕಾನೂನು ಬೆಂಬಲಿಸುತ್ತೇವೆ. ಆದರೆ ಇರಾನ್ ಮನವಿ ಮಾಡಿದ್ದರಿಂದ ಮಾನವೀಯ ದೃಷ್ಟಿಯಿಂದ ಕೊಚ್ಚಿಯಲ್ಲಿ ಡಾಕ್ ಮಾಡಲು ಅವಕಾಶ ನೀಡಿದ್ದೆವು ಎಂದು ಹೇಳಿದ್ದಾರೆ.

ಮಾ.1ರಂದು ಅವರಿಗೆ ಒಳಗೆ ಪ್ರವೇಶಿಸಲು ಅನುಮತಿಸಿದ್ದೆವು. ಇಲ್ಲಿಗೆ ತಲುಪಲು ಅವರಿಗೆ ಕೆಲವು ದಿನಗಳು ಬೇಕಾದವು. ನಂತರ ಇರಾನ್ ಹಡಗುಗಳು ಕೊಚ್ಚಿಯಲ್ಲಿ ಲಂಗರು ಹಾಕಿದ್ದವು. ಬಹಳಷ್ಟು ಯುವ ಕ್ಯಾಡೆಟ್‌ಗಳು ಇದ್ದರು. ಐರಿಸ್ ಲವಣ್ ಅಷ್ಟೇ ಅಲ್ಲ, ಇನ್ನೂ ಎರಡು ಯುದ್ಧನೌಕೆಗಳಿದ್ದವು ಎಂದು ಜೈಶಂಕರ್ ತಿಳಿಸಿದ್ದಾರೆ. ಹಡಗುಗಳು ಇಲ್ಲಿಗೆ ಫ್ಲೀಟ್ ರಿವ್ಯೂ ನಡೆಸಲು ಬಂದಾಗ ಮತ್ತು ಇಲ್ಲಿಂದ ಹೊರಟಾಗಿನ ಪರಿಸ್ಥಿತಿ ಸಂಪೂರ್ಣ ಬೇರೆಯದೇ ಆಗಿತ್ತು. ಆದರೆ ಕೆಟ್ಟ ಪರಿಸ್ಥಿತಿಯಲ್ಲಿ ಸಿಲುಕಿದ್ದರು. ಅದರಲ್ಲೊಂದು (ಐರಿಸ್ ದೆನಾ) ಶ್ರೀಲಂಕಾ ಸಮೀಪ ದುರದೃಷ್ಟವಶಾತ್ ದಾಳಿಗೆ ಒಳಗಾಗಿದ್ದು, ಅದರಲ್ಲಿ ಒಬ್ಬರೂ ಉಳಿದಿಲ್ಲ ಎಂದು ಜೈಶಂಕರ್ ವಿವರಿಸಿದರು.

ಹಿಂದು ಮಹಾಸಾಗರದಲ್ಲಿ ಭಾರತವೊಂದೇ ರಕ್ಷಣೆ ನೀಡುತ್ತದೆ. ಆದರೆ ಸತ್ಯಾಂಶ ತಿಳಿಯದೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ. ಕಳೆದ 5 ದಶಕಗಳಿಂದ ಡೀಗೋ ಗಾರ್ಸಿಯಾ (ಬ್ರಿಟನ್-ಅಮೆರಿಕ ಜಂಟಿ ರಹಸ್ಯ ಮಿಲಿಟರಿ ದ್ವೀಪ) ಹಿಂದು ಮಹಾಸಾಗರದಲ್ಲಿದೆ ಎಂದು ಜೈಶಂಕರ್ ಸ್ಪಷ್ಟಪಡಿಸಿದ್ದಾರೆ.

ಆಪರೇಷನ್ ಎಪಿಕ್ ಫ್ಯೂರಿ ಅನ್ವಯದಲ್ಲಿ ದೆನಾ ಯುದ್ಧನೌಕೆಯ ಮೇಲೆ ಅಮೆರಿಕ ಫೆ.28ರಂದು ದಾಳಿ ನಡೆಸಿತ್ತು. ಅದರಲ್ಲಿದ್ದ 80ಕ್ಕೂ ಹೆಚ್ಚು ನಾವಿಕರು ಬಲಿಯಾಗಿದ್ದು, 32 ಮಂದಿಯನ್ನು ಶ್ರೀಲಂಕಾ ನೌಕಾಪಡೆ ರಕ್ಷಿಸಿತ್ತು.

ಭಾರತದ ಪ್ರಗತಿ ತಡೆರಹಿತ

ಭಾರತದ ಪ್ರಗತಿ ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಒಂದು ರಾಷ್ಟ್ರದ ಆರ್ಥಿಕ ಪ್ರಗತಿಯಲ್ಲಿ ಇತರ ರಾಷ್ಟ್ರಗಳು ಪಾತ್ರ ವಹಿಸುತ್ತವೆ. ಆದರೆ ಭಾರತದ ಪ್ರಗತಿಯನ್ನು ಭಾರತವೇ ನಿರ್ಧರಿಸಲಿದೆ ಎಂದು ಸಚಿವ ಜೈಶಂಕರ್ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಭಾರತವನ್ನು ದೂರ ಮಾಡಿ ಪಾಕ್ ಗೆಳೆತನ ಸೂಕ್ತವಲ್ಲ ಎಂದ ಆಸ್ಟ್ರೇಲಿಯಾದ ಮಾಜಿ ಪ್ರಧಾನಿ ಟೋನಿ

ಸಂಬಂಧ ನಿಭಾಯಿಸುವಲ್ಲಿ ಎಡವಿದ ಟ್ರಂಪ್

ಹೊಸದಿಲ್ಲಿ: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದೊಂದಿಗಿನ ಸಂಬಂಧಗಳನ್ನು ನಿಭಾಯಿಸುವಲ್ಲಿ ಭಾರೀ ದೊಡ್ಡ ತಪ್ಪುಗಳನ್ನು ಎಸಗಿದ್ದಾರೆ ಎಂಬುದಾಗಿ ಆಸ್ಟ್ರೇಲಿಯಾದ ಮಾಜಿ ಪ್ರಧಾನಿ ಟೋನಿ ಅಬೋಟ್ ಹೇಳಿದ್ದಾರೆ.



ಭಾರತವನ್ನು ದೂರ ಮಾಡಿ ಪಾಕಿಸ್ತಾನಿ ಸೇನಾ ಮುಖ್ಯಸ್ಥ ಅಸೀಮ್ ಮುನೀರ್‌ಗೆ ಸ್ವಾಗತ ಹೇಳಿದ ಟ್ರಂಪ್ ನಿಲುವು ಭಾರೀ ಪ್ರಮಾದವಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ತಾನು ಟ್ರಂಪ್‌ರ ವಿದೇಶಾಂಗ ನೀತಿಯ ಜಾಗತಿಕ ಅಭಿಮಾನಿಯಲ್ಲ. ಟ್ರಂಪ್ ಎಸಗಿದ ಮೂರು ನಿರ್ದಿಷ್ಟ ತಪ್ಪುಗಳನ್ನು ಅವರು ಎತ್ತಿತೋರಿದ್ದು, ಇದರಲ್ಲಿ ಭಾರತವನ್ನು ಅನಪೇಕ್ಷಿತವಾಗಿ ದೂರವಿಟ್ಟ ನಿಲುವು ಟ್ರಂಪ್ ಎಸಗಿದ ಭಾರೀ ದೊಡ್ಡ ತಪ್ಪು.ಮೊದಲು ಭಾರತದ ಮೇಲೆ ದಂಡನಾ ಸುಂಕ ಹೇರಿದರು. ತಾನು ಭಾರತ -ಪಾಕಿಸ್ತಾನ ಸಂಘರ್ಷವನ್ನು ನಿಲ್ಲಿಸಿದ್ದು ತಾನೇ ಎಂದು ಹೇಳಿಕೊಂಡಿದ್ದು, ಪಾಕಿಸ್ತಾನದ ಸೇನಾ ಮುಖ್ಯಸ್ಥ ಅಸೀಮ್ ಮುನೀರ್‌ಗೆ ಶ್ವೇತಭವನದಲ್ಲಿ ಸ್ವಾಗತ ಕೋರಿದ್ದು ಇವೆಲ್ಲ ಟ್ರಂಪ್ ಮಾಡಿದ ದೊಡ್ಡ ಎಡವಟ್ಟುಗಳು ಎಂದು ಅವರು ಎನ್‌ಡಿಟಿವಿಗೆ ನೀಡಿದ ಸಂದರ್ಶನವೊಂದರಲ್ಲಿ ಬೊಟ್ಟು ಮಾಡಿದರು.ಪಾಕಿಸ್ತಾನ ಭಾರತದ ವಿರುದ್ಧ ಭಯೋತ್ಪಾದನೆಯನ್ನು ಪ್ರಾಯೋಜಿಸುವ ದೇಶ ಎಂಬುದು ನಿಸ್ಸಂದೇಹದ ವಿಷಯವಾಗಿರುವುದಷ್ಟೇ ಅಲ್ಲದೆ, ದೀರ್ಘಕಾಲದಿಂದ ಇಂತಹ ಕೆಲಸವನ್ನು ಮಾಡುತ್ತಾ ಬಂದಿರುವುದು ಸರ್ವವೇದ್ಯವಾಗಿರುವಾಗ ಟ್ರಂಪ್ ನಡೆ ದೊಡ್ಡ ಪ್ರಮಾದ ಎಂದರು.

ಭಾರತದೊಂದಿಗೆ ಫೆಬ್ರವರಿಯಲ್ಲಿ ಮುಕ್ತ ವ್ಯಾಪಾರ ಒಪ್ಪಂದವೊಂದನ್ನು ಘೋಷಿಸುವ ಮೂಲಕ ಟ್ರಂಪ್ ಭಾರತದೊಂದಿಗಿನ ಉದ್ವಿಗ್ನತೆಯನ್ನು ಭಾಗಶಃ ಸರಿಪಡಿಸಿಕೊಂಡರು. ಈ ಒಪ್ಪಂದದಂತೆ ಟ್ರಂಪ್ ಭಾರತದ ಅನೇಕ ವಸ್ತುಗಳ ಮೇಲಿನ ಸುಂಕಗಳನ್ನು ಕಡಿಮೆ ಮಾಡಿದರು.ಕೊನೆಗೆ ಹೇಗೋ ತನ್ನ ಮಹಾನ್ ಮಿತ್ರರಲ್ಲಿ ಒಬ್ಬರೆಂದು ಗುರುತಿಸಿದ ಮೋದಿಯವರ ಜೊತೆ ಮರಳಿ ಸ್ನೇಹ ಸಾಧಿಸಿಕೊಂಡರು.ಇದಕ್ಕೂ ಮುನ್ನ ಟ್ರಂಪ್ ಭಾರತದ ವಿರುದ್ಧ ಶೇ.25ರಷ್ಟು ಪ್ರತೀಕಾರದ ಸುಂಕ ವಿಧಿಸಿದ್ದಲ್ಲದೆ, ರಷ್ಯಾದಿಂದ ತೈಲ ಖರೀದಿಸುತ್ತಿರುವುದಕ್ಕಾಗಿ ಭಾರತದ ಮೇಲೆ ಮತ್ತೆ ಶೇ.25ರಷ್ಟು ಹೆಚ್ಚುವರಿ ಸುಂಕ ಹೇರಿದ್ದರು. ಅನಂತರ ಅಮೆರಿಕದ ಸುಪ್ರೀಂಕೋರ್ಟ್ ಕೂಡ ಟ್ರಂಪ್ ಹೇರಿದ ಸುಂಕವನ್ನು ಹಿಂಪಡೆಯುವಂತೆ ಆದೇಶಿಸಿತ್ತು.

ಪ್ರಸಕ್ತ ಮಧ್ಯಪ್ರಾಚ್ಯದ ಸಂಘರ್ಷ ವಿಸ್ತರಿಸುತ್ತಿದ್ದು, ಇದು ಸದ್ಯ ಕೊನೆಗೊಳ್ಳುವ ಸಾಧ್ಯತೆ ಕಂಡುಬರದಿರುವುದರಿಂದ ಉಂಟಾಗಿರುವ ಅನಿಶ್ಚಿತತೆಯ ಕುರಿತಂತೆ ಅವರನ್ನು ಕೇಳಲಾಯಿತು. ಇರಾನಿನಲ್ಲಿ ಆಡಳಿತ ವ್ಯವಸ್ಥೆ ಬದಲಾಗುವ ಸಾಧ್ಯತೆಯ ಬಗ್ಗೆ ಏನೂ ಹೇಳಲಾಗದು. ಆದಾಗ್ಯೂ ತಕ್ಷಣಕ್ಕೆ ಇಂತಹ ಸಾಧ್ಯತೆ ಇಲ್ಲ, ಯಾಕೆಂದರೆ ಇರಾನಿನ ಈಗಿನ ಆಡಳಿತ ಇನ್ನೂ ಇರಾನಿನ ಕೆಲವು ವರ್ಗಗಳ ಮೇಲೆ ಹಿಡಿತ ಹೊಂದಿದೆ. ಇದನ್ನು ಕೀಳಂದಾಜಿಸಲಾಗದು ಎಂದು ಅವರು ಹೇಳಿದರು. ಆದಾಗ್ಯೂ ಇರಾನಿನಲ್ಲಿನ ಹಾಲಿ ಅಪವಿತ್ರ ಮತೀಯ ನಿರಂಕುಶತೆಯಿಂದ ಹೊರಬರಲು ಸಾಧ್ಯವಾದಲ್ಲಿ ಅದೊಂದು ಪ್ರಮುಖ ಪರಿಣಾಮವಾಗಬಹುದು. ಜತೆಗೆ ಇರಾನಿನಲ್ಲಿ ಇನ್ನು ಹಾಲಿ ಸರಕಾರವೇ ಇರಲಿ ಅಥವಾ ಬದಲಿ ಸರಕಾರವೇ ಬಂದರೂ ಹಿಂದಿನ ಆಕ್ರಮಣಕಾರಿ ಸಾಮರ್ಥ್ಯ ಇರಾನಿಗೆ ಉಳಿಯಲಾರದು ಎಂದರು.

ಟಿ20 ವಿಶ್ವಕಪ್ ಗೆದ್ದು ಬೀಗಲಿ ಭಾರತ

ನ್ಯೂಜಿಲೆಂಡ್-ಭಾರತ ಫೈನಲ್ ಪಂದ್ಯ ಇಂದು | ಚೋಕರ್ಸ್ ಪಟ್ಟ ಕಳಚುವುದೇ ಕಿವೀಸ್?

ಅಹಮದಾಬಾದ್: ಒಂದು ತಿಂಗಳು, 20 ತಂಡಗಳು, 55 ಪಂದ್ಯಗಳು, ಸಾವಿರಾರು ರನ್ನುಗಳು, ನೂರಾರು ವಿಕೆಟ್‌ಗಳು, ಕ್ಯಾಚಿನ ರೋಮಾಂಚನ, ವಿಕೆಟ್‌ನ ಅಗ್ರೆಶನ್, ಶತಕದ ಸೆಲಬ್ರೇಶನ್ ಜೊತೆಗೆ ಗೆಲುವಿನ ಹಂಬಲ, ಸೋಲಿನ ಆಘಾತದೊಂದಿಗೆ ಪಂದ್ಯದ ಕೊನೆಯ ಕ್ಷಣದ ಆತಂಕ.. ಇಷ್ಟೆಲ್ಲಾ ನಡೆದಿರುವುದಕ್ಕೆ ಸಾಕ್ಷಿಯಾಗಿರುವ ಜಗತ್ತಿನ ಕೋಟ್ಯಾಂತರ ಕ್ರಿಕೆಟ್ ಅಭಿಮಾನಿಗಳು ಕಾತರದಿಂದ ಕಾಯುತ್ತಿರುವ ದಿನ ಬಂದಿದೆ. ಪ್ರತಿಷ್ಠಿತ ಟಿ20 ವಿಶ್ವಕಪ್ ಪಂದ್ಯಾವಳಿಯ ಅಂತಿಮ ಪಂದ್ಯ ಭಾನುವಾರ ನಡೆಯಲಿದೆ. ಹಾಲಿ ಚಾಂಪಿಯನ್ ಭಾರತ ಹಾಗೂ ಚೋಕರ್ಸ್ ಪಟ್ಟ ಹೊತ್ತಿಕೊಂಡಿರುವ ನ್ಯೂಜಿಲೆಂಡ್ ತಂಡಗಳು ಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ತೀವ್ರ ಹಣಾಹಣಿಯ ನಂತರ ಈ ಮಾದರಿಯ ಕ್ರಿಕೆಟ್‌ನ ಚಾಂಪಿಯನ್‌ಗಳು ಸಿಗಲಿದ್ದಾರೆ. ಕಿರೀಟ ಧರಿಸಿದವರೇ ಈ ಸರ್ತಿಯ ರಾಜ ಎನಿಸಿಕೊಳ್ಳಲಿದ್ದಾರೆ. ಲೀಗ್ ಹಂತದ ನಾಲ್ಕು, ಸೂಪರ್ 8ರಲ್ಲಿ ಮೂರು ಮತ್ತು ಸೆಮಿಫೈನಲ್ ಗೆಲುವಿನೊಂದಿಗೆ ಪಂದ್ಯಾವಳಿಯ ಎರಡು ಬೆಸ್ಟ್ ತಂಡಗಳು ನರೇಂದ್ರ ಮೋದಿ ಕ್ರೀಡಾಂಗಣಕ್ಕೆ ತಲುಪಿವೆ. ಅಭ್ಯಾಸಗಳನ್ನು ನಡೆಸುತ್ತಿವೆ, ಕೋಚ್‌ಗಳು ಪಿಚ್‌ಗೆ ಅಂಟಿಕೊಂಡು ಯೋಜನೆಗಳನ್ನು ರೂಪಿಸುತ್ತಿದ್ದರು. ಅಂಪೈಯರ್‌ಗಳು ಲೆಕ್ಕಾಚಾರ ಮಾಡಿಕೊಳ್ಳುತ್ತಿದ್ದರು. ಮೈದಾನದ ಹೊರಕ್ಕೆ ಅಭಿಮಾನಿಗಳ ದಂಡು, ತಮ್ಮ ತಂಡ ಬೆಂಬಲಿಸಲು ಕಾದು ನಿಂತಿದ್ದರು. ಮೈದಾನದ ತುಂಬಾ ಕ್ಯಾಮೆರಾಗಳು ಡ್ರಿಲ್ ಮಾಡುತ್ತಿದ್ದವು, ಜಾಹೀರಾತಿನ ಭರಾಟೆ ಜೋರಾಗಿಯೇ ಇತ್ತು. ಒಟ್ಟಿನಲ್ಲಿ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಟಿಪಿಕಲ್ ಫೈನಲ್ ಆಯೋಜಿತ ಕ್ರೀಡಾಂಗಣದಂತೆ ಕಾಣಿಸುತ್ತಿತ್ತು. ದೊಡ್ಡ ಹಣಾಹಣಿಗೆ ಅಣಿಯಾಗುತ್ತಿತ್ತು.

ಅಭ್ಯಾಸದಲ್ಲಿ ಮುಳುಗಿದ ಭಾರತ ತಂಡ

ಆಡುವವರು ಹನ್ನೊಂದು ಜನರು. ಆದರೆ ಫೈನಲ್ ಪಂದ್ಯಕ್ಕೂ ಮುನ್ನ ನಡೆಯುತ್ತಿದ್ದ ಅಭ್ಯಾಸದಲ್ಲಿ ಭಾರತದ ಪ್ರತಿಯೊಬ್ಬರೂ ಅತ್ಯಂತ ಶ್ರದ್ಧೆಯಿಂದ ಮತ್ತು ನಿಷ್ಠೆಯಿಂದ ಅಭ್ಯಾಸ ಮಾಡುವುದು ಕಂಡುಬಂದಿತ್ತು. ವಿಶೇಷವಾಗಿ ಭಾರತಕ್ಕಾಗಿ ಪ್ರತಿಯೊಂದು ವಿಭಾಗಕ್ಕೂ ಕೋಚ್‌ಗಳಿದ್ದಾರೆ. ಅವರವರ ಕೆಲಸದಲ್ಲಿ ಅವರು ತೊಡಗಿದ್ದರು. ಶಿವಂ ದುಬೆ, ಸೂರ್ಯ, ಸಂಜು ಸ್ಯಾಮ್ಸನ್, ಹಾರ್ದಿಕ್ ಪಾಂಡ್ಯ ಸೇರಿದಂತೆ ವಿವಿಧ ಬ್ಯಾಟರ್‌ಗಳು ಪ್ಯಾಡಿನೊಂದಿಗೆ ಮೈದಾನದಲ್ಲಿ ಅಬ್ಬರಿಸಿದರು. ತಂಡದಲ್ಲಿ ಅವಕಾಶ ಪಡೆಯದ ರಿಂಕು ಸಿಂಗ್ ಮತ್ತು ವಾಷಿಂಗ್ಟನ್ ಸುಂದರ್ ಕೂಡ ಬ್ಯಾಟಿಂಗ್ ಮಾಡಿದರು. ಇಶಾನ್ ಕಿಶನ್ ಮತ್ತು ಅಭಿಷೇಕ್ ಶರ್ಮ ಫೈನಲಿಗಾಗಿ ಹೆಚ್ಚಿನ ಬೆವರು ಸುರಿಸುವುದು ಕಂಡುಬಂದಿತು. ಬೌಲರ್‌ಗಳೂ ಅದೇ ಹಂತದಲ್ಲಿ ಅಭ್ಯಾಸ ನಡೆಸುತ್ತಿದ್ದರು. ಮಾರ್ನೆ ಮಾರ್ಕಲ್ ತಮ್ಮ ವಿಭಿನ್ನ ಯೋಜನೆಗಳೊಂದಿಗೆ ಸಲಹೆಗಳನ್ನು ನೀಡುತ್ತಿದ್ದರು.

ಭಾರತಕ್ಕಿದು ನಾಲ್ಕನೇ ಫೈನಲ್

ಭಾರತ ನಾಲ್ಕನೇ ಬಾರಿ ಫೈನಲ್ ಆಡುತ್ತಿದೆ. ಮೂರನೇ ಟ್ರೋಫಿಗಾಗಿ ಕಾದಾಟ ನಡೆಸುತ್ತಿದೆ.



ದುಬಾರಿಯಾಗದಿರುವುದೇ ಸವಾಲು

ಇನ್ನೊಂದು ಬದಿಯಲ್ಲಿ ಭಾರತ ಉತ್ತಮ ಬೌಲಿಂಗ್ ಮಾಡಿದ್ದರೂ ವರುಣ್ ಚಕ್ರವರ್ತಿ ಸೇರಿದಂತೆ ಪ್ರಮುಖ ಬೌಲರ್‌ಗಳು ದಂಡಿಸಿಕೊಂಡಿದ್ದಾರೆ. ಜಸ್‌ಪ್ರೀತ್ ಬೂಮ್ರಾ ಹಾಗೂ ಹಾರ್ದಿಕ್ ಪಾಂಡ್ಯ ಮಾತ್ರ ದೊಡ್ಡ ಪರಿಣಾಮ ನೀಡುತ್ತಿದ್ದಾರೆ. ಅರ್ಶದೀಪ್ ಸಿಂಗ್ ವೈಡ್‌ಗಳಿಂದ ಹಿನ್ನಡೆ ಅನುಭವಿಸಿದ್ದಾರೆ. ಸ್ಪಿನ್ ವಿಭಾಗದಲ್ಲಿ ಅಕ್ಷರ್ ಪಟೇಲ್ ವಿಕೆಟ್ ಕಿತ್ತರೂ ಕಳೆದೆರಡು ಪಂದ್ಯಗಳಲ್ಲಿ ವರುಣ್ ಚಕ್ರವರ್ತಿ ದಂಡಿಸಿಕೊಂಡಿದ್ದಾರೆ. ಬೌಲಿಂಗ್‌ನಲ್ಲಿ ದುಬಾರಿಯಾಗದಿರುವುದೇ ಭಾರತಕ್ಕೆ ಸವಾಲಾದಂತಿದೆ.

ತಂಡಗಳು

ಭಾರತ: ಸಂಜು ಸ್ಯಾಮ್ಸನ್ (ಕೀಪರ್), ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮ, ಇಶಾನ್ ಕಿಶನ್, ತಿಲಕ್ ವರ್ಮ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ವರುಣ್ ಚಕ್ರವರ್ತಿ, ಜಸ್ಪ್ರೀತ್ ಬುಮ್ರಾ, ಮಹಮ್ಮದ್ ಸಿರಾಜ್, ರಿಂಕು ಸಿಂಗ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್.

ನ್ಯೂಜಿಲೆಂಡ್: ಟಿಮ್ ಸೀಫರ್ಟ್ (ಕೀಪರ್), ಮಿಚೆಲ್ ಸ್ಯಾಂಟ್ನರ್ (ನಾಯಕ), ಫಿನ್ ಅಲೆನ್, ರಚಿನ್ ರವೀಂದ್ರ, ಗ್ಲೆನ್ ಫಿಲಿಪ್ಸ್, ಮಾರ್ಕ್ ಚಾಪ್ಮನ್, ಡೇರಿಲ್ ಮಿಚೆಲ್, ಜೇಮ್ಸ್ ನೀಶಮ್, ಕೋಲ್ ಮೆಕಾಂಚಿ, ಮ್ಯಾಟ್ ಹೆನ್ರಿ, ಲಾಕಿ ಫರ್ಗುಸನ್, ಡೆವೊನ್ ಕಾನ್ವೆ, ಕೈಲ್ ಜೇಮಿಸನ್, ಇಶ್ ಸೋಧಿ, ಜಾಕೋಬ್ ಡಫಿ,

ಅಲ್ಲಿಂದ ಇಲ್ಲಿಯವರೆಗೆ ಭಾರತ	
ಎದುರಾಳಿ	ಫಲಿತಾಂಶ
ಅಮೆರಿಕ	29 ರನ್ ಜಯ
ನಮೀಬಿಯಾ	93 ರನ್ ಜಯ
ಪಾಕಿಸ್ತಾನ	61 ರನ್ ಜಯ
ನೆದರ್ಲೆಂಡ್ಸ್	17 ರನ್ ಜಯ
ಸೂಪರ್-8 ಪಂದ್ಯಗಳಲ್ಲಿ	
ಎದುರಾಳಿ	ಫಲಿತಾಂಶ
ದ.ಆಫ್ರಿಕಾ	76 ರನ್ ಸೋಲು
ಜಿಂಬಾಬ್ವೆ	72 ರನ್ ಜಯ
ವಿಂಡೀಸ್	5 ವಿಕೆಟ್ ಜಯ
ಸೆಮಿಫೈನಲ್	
ಇಂಗ್ಲೆಂಡ್	7 ರನ್ ಜಯ

ಅಲ್ಲಿಂದ ಇಲ್ಲಿಯವರೆಗೂ ಕಿವೀಸ್	
ಎದುರಾಳಿ	ಫಲಿತಾಂಶ
ಅಫ್ಘಾನ್	5 ವಿಕೆಟ್ ಗೆಲುವು
ಯುಎಇ	10 ವಿಕೆಟ್ ಗೆಲುವು
ದ.ಆಫ್ರಿಕಾ	7 ರನ್ ಸೋಲು
ಕೆನಡಾ	8 ವಿಕೆಟ್ ಗೆಲುವು
ಸೂಪರ್-8	
ಎದುರಾಳಿ	ಫಲಿತಾಂಶ
ಪಾಕಿಸ್ತಾನ	ರದ್ದು
ಶ್ರೀಲಂಕಾ	61 ರನ್ ಗೆಲುವು
ಇಂಗ್ಲೆಂಡ್	4 ವಿಕೆಟ್ ಸೋಲು
ದ.ಆಫ್ರಿಕಾ	9 ವಿಕೆಟ್ ಗೆಲುವು

ಪಿಚ್ ವರದಿ

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಈ ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಉತ್ತಮ ಪ್ರದರ್ಶನ ನೀಡಿದ್ದಾರೆ. ಹೆಚ್ಚಿನ ಬೌನ್ಸ್ ಇರುವುದರಿಂದ ಬ್ಯಾಟರ್‌ಗಳಿಗೆ ಸಹಾಯಕವಾಗಲಿದೆ. ಸ್ಪಿನ್ ಬೌಲರ್‌ಗಳಿಗೆ ಅಲ್ಪ ಲಾಭ ನೀಡಲಿದೆ. ಮಳೆ ಸಾಧ್ಯತೆ ಕಮ್ಮಿ. ಹೆಚ್ಚಿನ ಪಂದ್ಯಗಳಲ್ಲಿ 190 ದಾಟಿದ್ದೇ ಉದಾಹರಣೆ ಇದೆ. ಟಾಸ್ ಗೆದ್ದ ತಂಡ ಬ್ಯಾಟಿಂಗ್ ಆಯ್ದುಕೊಳ್ಳಬಹುದು

ಪಂದ್ಯದ ವಿವರ

ಯಾವಾಗ: ಭಾನುವಾರ, **ಎಲ್ಲಿ:** ಅಹಮದಾಬಾದ್, **ಸಮಯ:** ಸಂಜೆ 7, **ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ನ್ಯೂಜಿಲೆಂಡ್ ಮೇಲೆ ಒತ್ತಡದ ಕಾವು

ಹತ್ತಾರು ವರ್ಷಗಳಿಂದ ವಿಶ್ವಕಪ್ ಅಂತಹ ದೊಡ್ಡ ಟೂರ್ನಿಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡುತ್ತಲೇ ಬಂದಿರುವ ನ್ಯೂಜಿಲೆಂಡ್ ಗಮನ ಸೆಳೆದೇ ಹೊರಹೋಗುತ್ತದೆ. ಆದರೆ ದುರಾದೃಷ್ಟವಶಾತ್ ಕಪ್ ಮಾತ್ರ ತೆಗೆದುಕೊಂಡು ಹೋಗಿಲ್ಲ. ಅದಕ್ಕಾಗಿ ಈ ತಂಡವನ್ನು ಚೋಕರ್ಸ್ ಅನ್ನುತ್ತಾರೆ. ಇದೇ ಮಾತು ಈಗ ನ್ಯೂಜಿಲೆಂಡ್ ತಂಡಕ್ಕೆ ಒಂದು ಕಡೆ ಸವಾಲಾಗಿ ಬರುತ್ತಿದ್ದರೆ ಒಂದು ಕಡೆ ಒತ್ತಡವಾಗಿ ಕಾಡುತ್ತಿದೆ. ಮೊದಲ ಪಂದ್ಯದಿಂದಲೂ ಉತ್ತಮ ಆರಂಭ ಪಡೆಯುತ್ತಿರುವ ಕಿವೀಸ್ ದೊಡ್ಡ ಸ್ಕೋರ್‌ಗಳನ್ನೇ ನಿರ್ಮಿಸುತ್ತಿದೆ. ಹಂಗೆ ಬೌಲಿಂಗ್‌ನಲ್ಲೂ ಸ್ಪಿನ್ ಹಾಗೂ ವೇಗದ ಸಂಯೋಜನೆಯೊಂದಿಗೆ ಎದುರಾಳಿಗಳನ್ನು ಕಾಡುತ್ತಿದೆ. ಕೊಂಚ ವಿಶ್ವಾಸ, ಕೊಂಚ ಪ್ರತಿರೋಧದೊಂದಿಗೆ ವಿಶ್ವಾಸ! ಸಜ್ಜಾಗಿ ನಿಂತಂತಿದೆ ಕಿವೀಸ್.

ಬ್ಯಾಟಿಂಗ್ ಬಲವೇ ಭಾರತದ ಶಕ್ತಿ

ವಿಶ್ವಕಪ್ ಪಂದ್ಯಾವಳಿಯ ಆರಂಭಿಕ ಪಂದ್ಯಗಳಲ್ಲಿ ವಿಫಲವಾಗಿದ್ದ ಬ್ಯಾಟಿಂಗ್ ಪಡೆ ಮತ್ತೆ ತನ್ನ ಲಯಕ್ಕೆ ಬಂದಿದೆ. ಕಳೆದ ಎರಡು ಪಂದ್ಯಗಳಲ್ಲಿ ವಿಂಡೀಸ್ ಹಾಗೂ ಇಂಗ್ಲೆಂಡ್ ಮೇಲೆ ದೊಡ್ಡ ಮೊತ್ತವನ್ನು ಗಳಿಸಿದೆ ಭಾರತ ಬ್ಯಾಟಿಂಗ್ ಪಡೆ. ಆರಂಭಿಕರಾದ ಅಭಿಷೇಕ್ ಶರ್ಮ ಅವರ ಕಳಪೆ ಪ್ರದರ್ಶನದ ಮಧ್ಯಯೂ, ಸಂಜು ಸ್ಯಾಮ್ಸನ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಆಸರೆಯಾಗಿದ್ದಾರೆ. ಕಳೆದ ಎರಡೂ ಪಂದ್ಯಗಳಲ್ಲಿ ಅವರೇ ಪಂದ್ಯಶ್ರೇಷ್ಠ ಆಟಗಾರ. ಇನ್ನು ಮೂರನೇ ಕ್ರಮಾಂಕದಲ್ಲಿ ಇಶಾನ್ ಕಿಶನ್ ಕೂಡ ಅಷ್ಟೇ ಪರಿಣಾಮಕಾರಿ ಆಟವಾಡುತ್ತಿದ್ದಾರೆ. ಇನ್ನು ಮಧ್ಯಮ ಕ್ರಮಾಂಕದಲ್ಲಿ ಶಿವಂ ದುಬೆ ದೊಡ್ಡ ಬಲವನ್ನೇ ನೀಡುತ್ತಿದ್ದಾರೆ. ಸೂರ್ಯ ಸ್ವಲ್ಪ ಹಿನ್ನಡೆ ಅನುಭವಿಸಿದರೂ ಹಾರ್ದಿಕ್ ಪಾಂಡ್ಯ, ತಿಲಕ್ ವರ್ಮ ಸಿಕ್ಕ ಅವಕಾಶದಲ್ಲಿ ದೊಡ್ಡ ಪರಿಣಾಮ ಬೀರಿಸುತ್ತಿದ್ದಾರೆ. ಭಾರತಕ್ಕೆ ಬ್ಯಾಟಿಂಗ್ ಚಿಂತೆಯೇ ಇಲ್ಲ.

ಕಿರುಸುದ್ದಿ

ಭಾರತೀಯರ ನಿಶ್ಶಬ್ಧವೇ ನಮ್ಮ ಗುರಿ: ಸ್ಯಾಂಟ್ನರ್

ಅಹಮದಾಬಾದ್: ಕ್ರೀಡಾಂಗಣದಲ್ಲಿ ಸೇರುವ ಲಕ್ಷಾಂತರ ಭಾರತದ ಅಭಿಮಾನಿಗಳನ್ನು ನಿಶ್ಯಬ್ದಗೊಳಿಸುತ್ತೇವೆ ಎಂಬ ಎದುರಾಳಿ ನಾಯಕರ ಹೇಳಿಕೆಯ ಸರದಿ ಮುಂದುವರೆದಿದೆ. ಭಾನುವಾರದಂದು ಭಾರತ ಹಾಗೂ ಕಿವೀಸ್ ತಂಡಗಳು ಎದುರಾಗಲಿವೆ. ಇದಕ್ಕೂ ಮುನ್ನ ಶನಿವಾರದಂದು ನಡೆದಿರುವ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿರುವ ನ್ಯೂಜಿಲೆಂಡ್ ನಾಯಕ ಮಿಚೆಲ್ ಸ್ಯಾಂಟ್ನರ್ ಕೂಡ ಅದೇ ಹೇಳಿಕೆ ನೀಡಿದ್ದಾರೆ. 2023ರ ವಿಶ್ವಕಪ್ ವೇಳೆ ಆಸ್ಟ್ರೇಲಿಯಾ ನಾಯಕ ಹೇಳಿದ್ದ ಮಾತೊಂದು ನೆನಪಿಗೆ ಇಟ್ಟುಕೊಂಡಿರುವ ಸ್ಯಾಂಟ್ನರ್ ನಾವು ಅಭಿಮಾನಿಗಳನ್ನು ನಿಬ್ಬರಗಾಗಿಸುವಂತೆ ಮಾಡುತ್ತೇವೆ ಎಂದು ಪ್ರತಿಪಾದಿಸಿದರು. ಈ ಹಿಂದೆ ಇಂಗ್ಲೆಂಡ್‌ನ ಸ್ಯಾಮ ಕರ್ರನ್ ಕೂಡ ಸೆಮಿಫೈನಲ್ ಪಂದ್ಯಕ್ಕೂ ಮುನ್ನ ಇದೇ ಮಾತು ಹೇಳಿದ್ದರು.

ಬೂಮ್ರಾ ಬಗ್ಗೆ ಎಚ್ಚರಿಕೆ: ಬೂಮ್ರಾ ಅವರ ಬೌಲಿಂಗ್‌ಗೆ ನ್ಯೂಜಿಲೆಂಡ್‌ನ ಉತ್ತರವೇನು ಎಂಬ ಪ್ರಶ್ನೆಗೆ ಸ್ಯಾಂಟ್ನರ್ ಉತ್ತರಿಸಿ, ಬೂಮ್ರಾ ಒಬ್ಬರು ವಿಶ್ವ ದರ್ಜೆ ಬೌಲರ್. ಅವರ ಬಗ್ಗೆ ಚರ್ಚೆಗಳು ತಂಡದಲ್ಲಿ ನಡೆದಿರುತ್ತವೆ, ನಾವು ಕೂಡ ಮಾಡಿದ್ದೇವೆ. ಬೂಮ್ರಾ ಅಲ್ಲದೆ ಭಾರತ ತಂಡದಲ್ಲಿ ಎಲ್ಲರೂ ಬೆಸ್ಟ್ ಬೌಲರ್‌ಗಳೇ ಇದ್ದಾರೆ. ಅವರ ಬಗ್ಗೆ ಕೂಡ ನಾವು ತಯಾರಿ ಮಾಡಿಕೊಂಡಿದ್ದೇವೆ ಎಂದರು.

ಹೊಸದೇನಾದರೂ ಹೇಳಿ: ಸೂರ್ಯಕುಮಾರ್

ಅಹಮದಾಬಾದ್: ಎಲ್ಲರೂ ಅದೇ ಸಾಲುಗಳನ್ನು ಹೇಳುತ್ತಿದ್ದಾರೆ. ಹೊಸದೇನಾದರೂ ಹೇಳಿ ಎಂದು ಸೂರ್ಯಕುಮಾರ್ ಯಾದವ್ ಸ್ಯಾಂಟ್ನರ್ ಅವರ ನಿಶ್ಯಬ್ದ ಹೇಳಿಕೆಗೆ ಪ್ರತ್ಯುತ್ತರ ನೀಡಿದರು. ಮಾಧ್ಯಮಗೋಷ್ಠಿಯಲ್ಲಿ ಮಾತನಾಡುತ್ತಾ ಅವರು, ಫೈನಲ್ ಆಡುವ ಬಗ್ಗೆ ನಮಗೆ ಎಲ್ಲರಿಗೂ ಹೆಮ್ಮೆಯಿದೆ. ಹಾಗೇ ಒಂದು ಉತ್ಸಾಹವಿದೆ. ನಮ್ಮ ತಂಡದಲ್ಲಿ ಉತ್ತಮ ವಾತಾವರಣವಿದ್ದು ನಾವು ದೊಡ್ಡ ಫಲಿತಾಂಶ ಪಡೆಯುತ್ತೇವೆ ಎಂಬ ನಂಬಿಕೆ ನನಗಿದೆ ಎಂದರು. ನಾಯಕನಾಗಿ ನನಗೆ ಒಂದಿಷ್ಟು ಒತ್ತಡಗಳಿರುವುದು ಸಹಜ. ಅದನ್ನು ನಾನು ತಿರಸ್ಕರಿಸಲಾಗುವುದಿಲ್ಲ, ಆದರೆ ಉತ್ತಮ ಆಟವೇ ನಮ್ಮ ಉತ್ತರ ಎಂದು ಪ್ರತಿಪಾದಿಸಿದರು.

10-ಕೆ ಬೆಂಗಳೂರು ಸ್ಪರ್ಧೆಗೆ ಮಹಿಳಾ ತಂಡ ಪ್ರಕಟ

ಬೆಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಮುಂಚಿತವಾಗಿ, ಪ್ರೊಕ್ಯಾಮ್ ಇಂಟರ್ ನ್ಯಾಷನಲ್ ಏಪ್ರಿಲ್ 26 ರ ಭಾನುವಾರ ನಡೆಯಲಿರುವ ಟಿಸಿಎಸ್ ವರ್ಲ್ಡ್ 10-ಕೆ ಬೆಂಗಳೂರಿನ 18ನೇ ಆವೃತ್ತಿಗೆ ಎಲ್ಲಾ ಮಹಿಳಾ ವೇಗಿಗಳ ತಂಡವನ್ನು ಘೋಷಿಸಿದೆ. ಆವೃತ್ತಿಯಲ್ಲಿ 9,000 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದಾರೆ.

ಸ್ಪರ್ಧಿಗಳ-ಸ್ಪರ್ಧಿಸುವ ಓಟದ ಪಟ್ಟಿ: ಮೆಹ್ವಿಶ್ ಹುಸೇನ್ (ಸಮಯ: 50 ನಿಮಿಷ) (ಮಂಗಳೂರು); ಜಯಶ್ರೀ ವನಮ (55 ನಿಮಿಷ; ತೆಲಂಗಾಣ); ಡಾ.ಬೆನೀತಾ ಕಿರಣ್ (56 ನಿಮಿಷ; ಬೆಂಗಳೂರು); ನಿಯಾತಿ ಕೋಟಿಯಾನ್ (58 ನಿಮಿಷ; ಬೆಂಗಳೂರು); ಪಾಯಲ್ ಆಶರ್ (60 ನಿಮಿಷ; ಮುಂಬೈ); ಇಂದುಮತಿ ನಾಯರ್ (60 ನಿಮಿಷ; ಬೆಂಗಳೂರು); ಲಕ್ಷ್ಮಿ ರೂಪೇಶ್ (65 ನಿಮಿಷ; ಬೆಂಗಳೂರು); ಡಾ.ಮೀನಾಕ್ಷಿ ಹರಿಹರನ್ (70 ನಿಮಿಷ; ಗುವಾಹಟಿ); ಜಾಹ್ನವಿ ಗೌಡ (70 ನಿಮಿಷ) ಬೆಂಗಳೂರು); ದಿವ್ಯ ಮಾದಯ್ಯ (70 ನಿಮಿಷ; ಕೂರ್ಗ್); ಸಂಗೀತಾ ಕುಮಾರಿ (75 ನಿಮಿಷ) ಬೆಂಗಳೂರು); ಸಾರಿಕಾ ಶರ್ಮ (80 ನಿಮಿಷ, ಅಹಮದಾಬಾದ್); ಸೋನಿ ಕುಮಾರಿ (83 ನಿಮಿಷ) ಬೆಂಗಳೂರು); ನರ್ಮದಾ ಜೆ (85 ನಿಮಿಷ; ಬೆಂಗಳೂರು).

ಶಾಟ್‌ಪುಟ್: ತಜೇಂದರ್‌ಪಾಲ್‌ಗೆ ಚಿನ್ನ

ಚಂಡೀಗಢ: ಏಷ್ಯನ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತ ಹಾಗೂ ರಾಷ್ಟ್ರೀಯ ದಾಖಲೆಯ ಧಾರಕ ತಜೇಂದರ್‌ಪಾಲ್ ಸಿಂಗ್ ತೂರ್ ಪಟಿಯಾಲಾದಲ್ಲಿ ನಡೆಯುತ್ತಿರುವ ಇಂಡಿಯನ್ ಓಪನ್ ತ್ರೋಸ್ ಸ್ಪರ್ಧೆಯ ಮೊದಲ ದಿನವೇ ಶಾಟ್‌ಪುಟ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಪಂಜಾಬ್‌ನ ಅಥ್ಲೀಟ್ ತೂರ್ ಮೊದಲ ಪ್ರಯತ್ನದಲ್ಲೇ ಇಪ್ಪತ್ತು ದಶಮಾಂಶ ಐದು ಒಂದು ಮೀಟರ್ ದೂರಕ್ಕೆ ಶಾಟ್‌ಪುಟ್ ಎಸೆದು ಚಿನ್ನದ ಪದಕ ತನ್ನದಾಗಿಸಿಕೊಂಡರು. ಪಟಿಯಾಲಾದ ರಾಷ್ಟ್ರೀಯ ಕ್ರೀಡಾ ಸಂಸ್ಥೆಯ ಮೈದಾನದಲ್ಲಿ ನಡೆಯುತ್ತಿರುವ ಈ ಎರಡು ದಿನಗಳ ಸ್ಪರ್ಧೆಯಲ್ಲಿ ಅವರು ತಮ್ಮ ಈ ವರ್ಷದ ಅತ್ಯುತ್ತಮ ಪ್ರದರ್ಶನ ನೀಡಿದರು. ನನ್ನ ಪ್ರದರ್ಶನದಿಂದ ತೃಪ್ತಿಯಿದೆ, ಎಂದು ತೂರ್ ಸ್ಪರ್ಧೆಯ ಬಳಿಕ ಹೇಳಿದರು. ತೂರ್ ಒಟ್ಟು ಮೂರು ಪ್ರಯತ್ನಗಳಲ್ಲಿ ಇಪ್ಪತ್ತು ಮೀಟರ್ ಗಡಿ ದಾಟಿದರು. ಇಪ್ಪತ್ತು ದಶಮಾಂಶ 02 ಮೀಟರ್ ಮತ್ತು ಇಪ್ಪತ್ತು ದಶಮಾಂಶ 07 ಮೀಟರ್ ದೂರಕ್ಕೆ ಕೂಡ ಎಸೆದು ಉತ್ತಮ ಲಯದಲ್ಲಿರುವುದನ್ನು ತೋರಿಸಿದರು. ಉಳಿದ ಮೂರು ಪ್ರಯತ್ನಗಳಲ್ಲಿ ಮಾನ್ಯ ಅಳತೆ ದಾಖಲಾಗಲಿಲ್ಲ. ಈ ಋತುವಿನಲ್ಲಿ ಅವರ ಪ್ರಮುಖ ಗುರಿ ಜಪಾನ್‌ನಲ್ಲಿ ನಡೆಯಲಿರುವ ಮುಂದಿನ ಏಷ್ಯನ್ ಕ್ರೀಡಾಕೂಟದಲ್ಲಿ ಮತ್ತೆ ಚಿನ್ನದ ಪದಕ ಉಳಿಸಿಕೊಳ್ಳುವುದಾಗಿದೆ. ಆದಕ್ಕಾಗಿ ಈ ವರ್ಷ ನಂತರದ ಹಂತದಲ್ಲಿ ಅತ್ಯುತ್ತಮ ಫಾರ್ಮ್ ತಲುಪುವಂತೆ ತರಬೇತಿ ನಡೆಸುತ್ತಿರುವುದಾಗಿ ಅವರು ತಿಳಿಸಿದ್ದಾರೆ.

ಡಬಲ್ಸ್ ಫೈನಲ್‌ನಲ್ಲಿ ಭಾರತೀಯ ಜೋಡಿ ಕಮಾಲ್
ವೈಷ್ಣವಿ-ಅಂಕಿತಾ ಚಾಂಪಿಯನ್ಸ್!

ರಾಚಪ್ಪಾ ಜಂಬಗಿ

ಕಲಬುರಗಿ: ಕಳೆದ ಮೂರನಾಲ್ಕು ದಿನಗಳಿಂದ ಟೆನಿಸ್ ಕ್ರೀಡಾಂಗಣದಲ್ಲಿ ಬಲವಾದ ಪ್ರದರ್ಶನ ನೀಡಿರುವ ವೈಷ್ಣವಿ ಅಡ್ಕರ್ ಹಾಗೂ 8ನೇ ಶ್ರೇಯಾಂಕಿತ ಅಂಕಿತಾ ರೈನಾ ಜೋಡಿಯು ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಪಂದ್ಯದ ಚಾಂಪಿಯನ್ ಪಟ್ಟ ಗೆದ್ದು ಬೀಗಿದೆ.

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲಾನ್ ಟೆನಿಸ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಟಿಎಫ್ ಡಬ್ಲ್ಯು 35 ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಫೈನಲ್ ಪಂದ್ಯದಲ್ಲಿ ಎದುರಾಳಿ ಭಾರತೀಯ ಆಕಾಂಕ್ಷಾ ದಿಲೀಪ್ ನಿಟ್ಟೂರೆ, ಸೋಹಾ ಸಾಧಿಕ್ ಜೋಡಿಯನ್ನು 6-2,6-2 ಅಂತರದಲ್ಲಿ ಮಣಿಸಿ ಮಹಿಳಾ ಡಬಲ್ಸ್ ವಿಭಾಗದ ಚಾಂಪಿಯನ್ ಆಗಿ ಹೊರಹೊಮ್ಮಿತು.

ಪಂದ್ಯದ ಆರಂಭದಲ್ಲೇ ಎರಡೂ ಜೋಡಿಗಳು ತಮ್ಮ ಸರ್ವಿಸ್ ಗೇಮ್‌ಗಳನ್ನು ಉಳಿಸಿಕೊಂಡರೂ, ಬಳಿಕ ನೆಟ್ ಬಳಿ ಅಡ್ಕರ್ ಚುರುಕು ಆಟ ಹಾಗೂ ರೈನಾ ಅವರ ನಿಖರ ಶಾಟ್‌ಗಳ ನೆರವಿನಿಂದ ಎದುರಾಳಿಗಳ ಸರ್ವಿಸ್‌ನ್ನು ಬ್ರೇಕ್ ಮಾಡಿದ ಅಡ್ಕರ್- ರೈನಾ ಜೋಡಿ ಮೊದಲ ಸೆಟ್ ಅನ್ನು 6-2 ಅಂತರದಲ್ಲಿ ಗೆದ್ದು ಮುನ್ನಡೆ ಪಡೆದುಕೊಂಡಿತು. ಮುಂದಿನ ಸೆಟ್‌ಗಳಲ್ಲಿ ಕೂಡ ಗೆಲುವಿನಾಟ ಆಡಿದ ಈ ಜೋಡಿ ಮುನ್ನಡೆ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಯಿತು. ಕೊನೆಯಲ್ಲಿ ನೆಟ್ ಬಳಿ ಅಡ್ಕರ್ ಹೊಡೆದ ಅದ್ಭುತ ಬ್ಯಾಕ್ ಹ್ಯಾಂಡ್ ಶಾಟ್ ಕಿರೀಟವನ್ನು ಖಚಿತಪಡಿಸಿತು.



'ನಮಸ್ಕಾರ ಕಲಬುರಗಿ' ಇಲ್ಲಿ ನಾನು ಎರಡನೇ ಬಾರಿಗೆ ಐಟಿಎಫ್ ಪಂದ್ಯ ಆಡುತ್ತಿದ್ದೇನೆ. ಇಲ್ಲಿಯ ಬಿಸಿಲಿನ ಜೊತೆಗೆ ಅಭಿಮಾನಿಗಳ ಬೆಂಬಲ ಕೂಡ ಚೆನ್ನಾಗಿದೆ. ಫೈನಲ್‌ನಲ್ಲಿ ಆಕಾಂಕ್ಷಾ, ಸಾಧಿಕ್ ಜೋಡಿ ಕೂಡ ಚೆಂದದ ಆಟವಾಡಿದೆ. ಕೆ.ಎಸ್.ಎಲ್.ಟಿ ಹಾಗೂ ಕಲಬುರಗಿ ಮಂದಿಗೆ ತುಂಬಾ ಥ್ಯಾಂಕ್ಸ್.

■ ಅಂಕಿತಾ ರೈನಾ, ಟೆನಿಸ್ ಆಟಗಾರ್ತಿ

ಸಿಂಗಲ್ಸ್ ನಲ್ಲೂ ಇವರದ್ದೇ ದರ್ಬಾರ್!

ಕೂಟದಲ್ಲಿ ಹೆಡ್‌ಲೈನ್ ಆಗಿ ಮೆರೆಯುತ್ತಿರುವ ಈ ಇಬ್ಬರ ಆಟ ಬರೀ ಡಬಲ್ಸ್‌ಗೆ ಮಾತ್ರ ಸಿಮೀತವಾಗಿರಲೇ ಇಲ್ಲ. ಪರಾಕ್ರಮ ಮೆರೆದು ಉಪಾಂತ್ಯಕ್ಕೆ ತಲುಪಿದ್ದ ಈ ಇಬ್ಬರೂ ವೈಯಕ್ತಿಕ ಆಟಗಳಲ್ಲೂ ಅಷ್ಟೇ ಚೆಂದವಾಗಿ ಆಡಿದರು. ಸಿಂಗಲ್ಸ್ ಸೆಮಿಫೈನಲ್ ಪಂದ್ಯಗಳಲ್ಲಿ ವೈಷ್ಣವಿ ಹಾಗೂ ಅಂಕಿತಾ ಕ್ರಮವಾಗಿ ನೆದರ್ಲ್ಯಾಂಡ್ಸ್ ಅಗ್ರ ಆಟಗಾರ್ತಿ ಜಾಸ್ಮಿನ್ ಗಿಂಬ್ರೇರ್ ಹಾಗೂ ಥೈಲ್ಯಾಂಡಿನ ಥಾಸ್ಪಾರ್ನ್ ವಿರುದ್ಧ ಗೆದ್ದು, ಮುಂದಿನ ಹಂತವಾದ ಸಿಂಗಲ್ಸ್ ಫೈನಲ್ ಪ್ರವೇಶ ಪಡೆದರು. ಜೋಡಿ ಚಾಂಪಿಯನ್ ಈಗ ಎದುರಾಗಲಿರುವುದೇ ವಿಶೇಷ. ಜಾಸ್ಮಿನ್ ಗಿಂಬ್ರೇರ್ ಮಾಡಿದ ಕೆಲ ಅನಗತ್ಯ ದೋಷ ಪ್ರಯೋಜನಪಡಿಸಿಕೊಂಡ ವೈಷ್ಣವಿ ಅಡ್ಕರ್, ಅಂತಿಮವಾಗಿ 6-3, 6-2 ಅಂತರಗಳಿಂದ ನೆದರ್ಲ್ಯಾಂಡ್ಸ್ ಅಗ್ರ ಆಟಗಾರ್ತಿಗೆ ಸೋಲಿಸಿದರು.
8ನೇ ಶ್ರೇಯಾಂಕದ ಅಂಕಿತಾ ರೈನಾ, ಥೈಲ್ಯಾಂಡಿನ ಅನುಭವಿ ಆಟಗಾರ್ತಿ, ಟೂರ್ನಿಯಲ್ಲಿ ಅದ್ಭುತ ಪ್ರದರ್ಶನ ತೋರಿದ ಥಾಸಪಾರ್ನ್ ನಾಕ್ಲೋ ವಿರುದ್ಧ ಬಲಿಷ್ಠ ಹೋರಾಟ ಮತ್ತು ದೃಢ ಮನೋಬಲ ಪ್ರದರ್ಶಿಸಿ ಫೈನಲ್‌ಗೆ ಪ್ರವೇಶ ಪಡೆದರು. ಮೊದಲ ಸೆಟ್ 4-6ನಲ್ಲಿ ಸೋತು ನಿರಾಶೆಗೊಂಡರೂ ಆತ್ಮವಿಶ್ವಾಸ ಮಾತ್ರ ಕಳೆದುಕೊಳ್ಳದೇ ಕೋರ್ಟ್ ಮೇಲಿನ ನಿರ್ಧಾರಾತ್ಮಕ ಆಟದೊಂದಿಗೆ ಮುಂದಿನ ಸೆಟ್‌ಗಳನ್ನು 6-4,6-2 ಅಂತರದಲ್ಲಿ ಗೆದ್ದು ಸಿಂಗಲ್ಸ್ ಫೈನಲ್‌ಗೇರಿದರು.

ಶೀಘ್ರವೇ ತವರಿಗೆ ಕ್ರಿಕೆಟಿಗರು

ಮುಂಬೈ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ವಾಣಿಜ್ಯ ವಿಮಾನ ಹಾರಾಟಕ್ಕೆ ನಿರ್ಬಂಧಿಸಿರುವ ನಿಟ್ಟಿನಲ್ಲಿ ವೆಸ್ಟ್ ಇಂಡೀಸ್, ದ.ಆಫ್ರಿಕಾ ಮತ್ತು ಇಂಗ್ಲೆಂಡ್ ಆಟಗಾರರು ಭಾರತದಲ್ಲೇ ಉಳಿದಿದ್ದು, ವಾರಾಂತ್ಯದಲ್ಲಿ ವಿಶೇಷ ವಿಮಾನಗಳ ಮೂಲಕ ಕಳಿಸಿಕೊಡುವ ಯೋಜನೆ ಬಿಸಿಸಿಐ ಹಾಕಿಕೊಂಡಿದೆ. ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಸೋತು ಹೊರಬಿದ್ದಿರುವ ಮೂರೂ ತಂಡದ ಆಟಗಾರರು ಪಂದ್ಯಾವಳಿಯಿಂದ ಹೊರಬಿದ್ದರೂ ಇಲ್ಲೇ ಉಳಿಯಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಗಲ್ಫ್ ಪ್ರದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಐಸಿಸಿ ಉಳಿದ ಆಟಗಾರರನ್ನು ಚಾರ್ಟರ್ ವಿಮಾನದ ಮೂಲಕ ತಲುಪಿಸುವ ಭರವಸೆ ಮೂಡಿಸಿದೆ. ಸುರಕ್ಷತೆಯ ಖಚಿತತೆ ನೀಡಿದೆ.

ಚಾರ್ಟರ್ ವಿಮಾನದಲ್ಲಿ ಪ್ರಯಾಣ: ವರದಿಗಳ ಪ್ರಕಾರ ಬಿಸಿಸಿಐ ಖಾಸಗಿ ಜೆಟ್‌ಗಳ ಮೂಲಕ ಆಟಗಾರರನ್ನು ಕಳಿಸಿಕೊಡುವ ಯೋಜನೆ ಹಾಕಿಕೊಂಡಿದೆ. ಇಂಗ್ಲೆಂಡ್ ತಂಡದ ಆಟಗಾರರು ಭಾನುವಾರದಂದು ಲಂಡನ್‌ಗೆ ನೇರ ವಿಮಾನದ ಮೂಲಕ ಹೋಗಲಿದ್ದಾರೆ. ಆದರೆ ವಿಂಡೀಸ್ ಮತ್ತು ದ.ಆಫ್ರಿಕಾ ತಂಡಗಳ ಆಟಗಾರರು ಇನ್ನೊಂದು ಚಾರ್ಟರ್ ವಿಮಾನದ ಮೂಲಕ ಜೋಹಾನ್ಸ್‌ಬರ್ಗ್‌ಗೆ ತಲುಪಲಿದ್ದಾರೆ. ನಂತರ ಸ್ವದೇಶಕ್ಕೆ ಹೋಗಲಿದ್ದಾರೆ ಎನ್ನಲಾಗಿದೆ.

- ಇಂದು ಇಂಗ್ಲೆಂಡ್ ತಂಡ ಸ್ವದೇಶಕ್ಕೆ ಸಾಧ್ಯತೆ
- ಮರಳಲು ವಿಂಡೀಸ್ ಕೋಚ್ ಸ್ಯಾಮಿ ಚಡಪಡಿಕೆ

ಡೆರೇನ್ ಸ್ಯಾಮಿಗೆ 5 ಸ್ಟಾರ್ ಹೋಟೆಲ್‌ನಲ್ಲಿರಲು ಕಷ್ಟವೇ?

ಯುದ್ಧ ದಿನದಿನಕ್ಕೂ ಭೀಕರ ರೂಪ ಪಡೆದುಕೊಳ್ಳುತ್ತಿದೆ. ಸಾವಿರಾರು ಜನರು ಜೀವ ಕಳೆದುಕೊಳ್ಳುತ್ತಿದ್ದಾರೆ. ಆದರೆ ವೆಸ್ಟ್ ಇಂಡೀಸ್ ತಂಡದ ಪ್ರಧಾನ ತರಬೇತುದಾರ ಡೆರೇನ್ ಸ್ಯಾಮಿ ಅವರಿಗೆ ಮಾತ್ರ 5 ಸ್ಟಾರ್ ಹೋಟೆಲ್‌ನಲ್ಲಿ ಉಳಿದುಕೊಳ್ಳಲು ಕಷ್ಟವಾಗುತ್ತಿದೆಯಂತೆ. ಕಳೆದ ಭಾನುವಾರ ನಡೆದಿದ್ದ ಭಾರತದ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಹೊರಬಿದ್ದಿದ್ದ ವಿಂಡೀಸ್ ಮುಂಬೈನ 5 ಸ್ಟಾರ್ ಹೋಟೆಲ್ ಒಂದರಲ್ಲಿದೆ. ಈ ಮಧ್ಯೆ, ಪರಿಸ್ಥಿತಿ ಬಗ್ಗೆ ಅರಿವಿದ್ದರೂ ಸ್ಯಾಮಿ, ಬಿಸಿಸಿಐ ಅವರಿಗೆ ಬಲವಂತವಾಗಿ ಭಾರತದಲ್ಲಿ ಉಳಿಸಿಕೊಂಡಿರುವಂತೆ ಆಡುತ್ತಿದ್ದಾರೆ. ಟ್ವಿಟ್ಟರ್‌ನಲ್ಲಿ ನನಗೆ ಮನೆಗೆ ಹೋಗುವುದಿದೆ ಎಂದು ಪೋಸ್ಟ್ ಮಾಡಿದ್ದರು. ಶನಿವಾರದಂದು ಆರನೇ ದಿನ ಇಲ್ಲೇ ಉಳಿದಿದ್ದೇವೆ ಎಂದು ಬರೆದುಕೊಂಡಿದ್ದಾರೆ. ಅಷ್ಟೇ ಅಲ್ಲದೆ, ಆಫ್ರಿಕಾದ ಗಿಬ್ಸ್ 7ನೇ ದಿನ ವಿರಾಮ ಸಿಗಬಹುದೇ ಎಂದು ಟ್ವಿಟ್ ಮಾಡಿದ್ದು, ಅದಕ್ಕೆ ಉತ್ತರಿಸಿರುವ ಸ್ಯಾಮಿ, ಆ ದಿನಗಳು ಬೇಗನೇ ಬರಬೇಕೆಂದು ಪ್ರತಿಕ್ರಿಯಿಸಿದ್ದಾರೆ. ಇದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದ್ದು, ಸ್ಯಾಮಿಗೆ 5 ಸ್ಟಾರ್ ಹೋಟೆಲ್‌ನಲ್ಲಿ ಉಳಿಯುವುದು ಕಷ್ಟದ ಕೆಲಸವೇ ಎಂದು ಪ್ರಶ್ನಿಸಿದ್ದಾರೆ.

ಪ್ರಾಗ್ ಚೆಸ್: ಅರವಿಂದ್‌ಗೆ ಎರಡನೇ ಸ್ಥಾನ

ಹೊಸದಿಲ್ಲಿ: ಪ್ರಾಗ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಚೆಸ್ ಉತ್ಸವದ ಮಾಸ್ಟರ್ಸ್ ವಿಭಾಗದಲ್ಲಿ ಭಾರತೀಯ ಗ್ರ್ಯಾಂಡ್ ಮಾಸ್ಟರ್ ಅರವಿಂದ್ ಚಿತಂಬರಂ ಚೆಕ್ ಗಣರಾಜ್ಯದ ಡೇವಿಡ್ ನವಾರಾ ಅವರನ್ನು ಸೋಲಿಸಿ ಐದು ಅಂಕಗಳೊಂದಿಗೆ ಕೂಟದಲ್ಲಿ ಸಂಯುಕ್ತ ದ್ವಿತೀಯ ಸ್ಥಾನ ಪಡೆದರು. ಇರಾನ್‌ನ ವಿಶ್ವ ಚಾಂಪಿಯನ್ ಡಿ. ಗುಕೇಶ್ ಕೊನೆಯ ಸುತ್ತಿನಲ್ಲಿ ಸ್ಪೇನ್‌ನ ಡೇವಿಡ್ ಆಂಟನ್ ಗುಯಿಜಾರೊ ಅವರನ್ನು ಸೋಲಿಸಿ ತಮ್ಮ ನಿರ್ಜಯ ಸರಣಿಗೆ ತೆರೆ ಎಳೆದರು. ಉಜ್ಬೆಕಿಸ್ತಾನದ ನೋದಿರ್ಬೆಕ್ ಅಬ್ದುಸತ್ತೋರೋವ್ ಟೂರ್ನಿ ಗೆದ್ದರು. ಚಾಲೆಂಜರ್ಸ್ ವಿಭಾಗದಲ್ಲಿ ಭಾರತದ ದಿವ್ಯಾ ದೇಶಮುಖ್ ಚೆಕ್ ಗಣರಾಜ್ಯದ ಸ್ಟೆಪಾನ್ ಹ್ಯೆಕ್ ಅವರನ್ನು ಸೋಲಿಸಿ ಮೂರನೇ ಸ್ಥಾನ ಪಡೆದರು

ವೀಲ್‌ಚೇರ್ ಟೆನಿಸ್: ಭಾರತಕ್ಕೆ ಕಂಚು

ಕೊಲಂಬೋ: ಕೊಲಂಬೊದಲ್ಲಿ ನಡೆದ ಬಿಎನ್‌ಪಿ ಪರಿಬಾ ವೀಲ್‌ಚೇರ್ ವಿಶ್ವ ತಂಡ ಕಪ್ ಏಷ್ಯಾ ಅರ್ಹತಾ ಸ್ಪರ್ಧೆಯಲ್ಲಿ ಭಾರತೀಯ ಪುರುಷರ ತಂಡ ಐತಿಹಾಸಿಕ ಕಂಚಿನ ಪದಕ ಗೆದ್ದಿದೆ. ತೈವಾನ್ ವಿರುದ್ಧ ನಡೆದ ಪಂದ್ಯದಲ್ಲಿ ಭಾರತ 3-0 ಅಂತರದಲ್ಲಿ ಜಯ ಸಾಧಿಸಿ ಈ ಸಾಧನೆ ಮಾಡಿತು. ಮಾರ್ಚ್ ಎರಡರಿಂದ ಆರರವರೆಗೆ ನಡೆದ ಈ ಸ್ಪರ್ಧೆಯನ್ನು ಅಂತರರಾಷ್ಟ್ರೀಯ ಟೆನ್ನಿಸ್ ಮಹಾಸಂಸ್ಥೆ ಆಯೋಜಿಸಿತ್ತು. ಈ ಟೂರ್ನಿಯನ್ನು ವೀಲ್‌ಚೇರ್ ಟೆನ್ನಿಸ್‌ನ ಡೆವಿಸ್ ಕಪ್ ಎಂದು ಕರೆಯಲಾಗುತ್ತದೆ.



ಪಾಕ್ ವಿರುದ್ಧ ಜಯ: ಭಾರತೀಯ ತಂಡದಲ್ಲಿ ಕರ್ನಾಟಕದ ಶೇಖರ್ ವೀರಸ್ವಾಮಿ ಮತ್ತು ಬಸವರಾಜ ಕುಂದರ್ಗಿ ಜೊತೆಗೆ ತಮಿಳುನಾಡಿನ ಕಾರ್ತಿಕ್ ಕರುಣಾಕರಣ ಇದ್ದರು. ಆರಂಭಿಕ ಪಂದ್ಯದಲ್ಲಿ ಭಾರತ ಕೊರಿಯಾ ಗಣರಾಜ್ಯ ವಿರುದ್ಧ 0-3 ಅಂತರದಲ್ಲಿ ಸೋತಿತು. ನಂತರ ಆತಿಥೇಯ ಶ್ರೀಲಂಕಾ ವಿರುದ್ಧವೂ ತಂಡಕ್ಕೆ 0-3 ಸೋಲು ಎದುರಾಯಿತು. ಆದರೆ ಮೂರನೇ ಪಂದ್ಯದಲ್ಲಿ ಭಾರತಭರ್ಜರಿಪುನರಾಗಮನಮಾಡಿತು. ಪಾಕಿಸ್ತಾನ ವಿರುದ್ಧ ನಡೆದ ಪಂದ್ಯದಲ್ಲಿ ಕಾರ್ತಿಕ್ ಕರುಣಾಕರಣ ಮತ್ತು ಶೇಖರ್ ವೀರಸ್ವಾಮಿ ಸಿಂಗಲ್ಸ್ ಪಂದ್ಯಗಳಲ್ಲಿ ಸುಲಭವಾಗಿ ಗೆದ್ದು ಭಾರತಕ್ಕೆ ಮುನ್ನಡೆ ತಂದರು. ನಂತರ ಡಬಲ್ಸ್ ಪಂದ್ಯದಲ್ಲೂ ಭಾರತೀಯ ಜೋಡಿ 6-0, 6-0 ಅಂತರದಲ್ಲಿ ಗೆದ್ದಿತು.

ನಿರ್ಣಾಯಕ ಪಂದ್ಯದಲ್ಲಿ ಮಿಂಚಿನಾಟ: ಕಂಚಿನ ಪದಕಕ್ಕಾಗಿ ನಡೆದ ನಿರ್ಣಾಯಕ ಪಂದ್ಯದಲ್ಲಿ ಭಾರತ ತೈವಾನ್ ವಿರುದ್ಧ ಮತ್ತೊಮ್ಮೆ ಪ್ರಭಾವಿ ಪ್ರದರ್ಶನ ನೀಡಿತು. ಕಾರ್ತಿಕ್ ಕರುಣಾಕರಣ ಟಾಂಗ್ ಚಾವ್ ಹಾನ್ ಅವರನ್ನು 6-1, ಅಂತರದಲ್ಲಿ ಸೋಲಿಸಿದರು. ಶೇಖರ್ ವೀರಸ್ವಾಮಿ ವಾಂಗ್ ವೆಯ್ ಹುವಾನ್ ವಿರುದ್ಧ 6-2, ಅಂತರದಲ್ಲಿ ಜಯ ಸಾಧಿಸಿದರು. ನಂತರ ಡಬಲ್ಸ್ ಪಂದ್ಯದಲ್ಲೂ ಭಾರತೀಯ ಜೋಡಿ 6-1, 6-0 ಅಂತರದಲ್ಲಿ ಗೆದ್ದು ಭಾರತಕ್ಕೆ ಕಂಚಿನ ಪದಕವನ್ನು ಖಚಿತಪಡಿಸಿತು. ಮುಂದಿನ ಅವಧಿಯಲ್ಲಿ ಭಾರತೀಯ ವೀಲ್‌ಚೇರ್ ಟೆನ್ನಿಸ್ ಆಟಗಾರರು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಮುಂದಿನ ವಿಶ್ವ ತಂಡ ಕಪ್ ಅರ್ಹತಾ ಚಕ್ರಕ್ಕೆ ಸಿದ್ಧತೆ ನಡೆಸಲಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5917

ಎಡದಿಂದ ಬಲಕ್ಕೆ
1.ವಸು ಒಳಗೊಂಡ ಸಂಪೂರ್ಣವಾಗಿ ತಿಳಿಹೇಳುವಿಕೆ (4)
3.ಉಪವಾಸ ಬಿಟ್ಟ ನಂತರ ಮಾಡಿದ ಭಾಷಣ (4)
5.ಬಿಸಿ ಕಡೆಯಲ್ಲಿಟ್ಟುಕೊಂಡ ಶೌರ್ಯ (3)
6.ರಾಜಿ ಮಾಡಿಕೊಳ್ಳದೆ ಸೋಲು (4)
8.ಆಂಜನೇಯನ ಒಂದು ಹೆಸರು (4)
10.ವಿಪರೀತವಾಗಿ ವರ್ತಿಸು (4)
12.ವ್ಯವಸ್ಥಿತವಾಗಿರುವಂಥಾದ್ದು ತಿರುಗಿದೆ (4)
14.ವೇತನವು ಕಡೆಯಲ್ಲಿ ದೀರ್ಘವಾಗಿದೆ (3)
15.ಕಲಾಪತ್ತಿನ ಅಂಚುಳ್ಳ ರುಮಾಲು (4)
16.ಪರ್ಣದ ನಡುವೆ ಸಮಗ್ರವಾದುದಿದೆ (4)

ಮೇಲಿನಿಂದ ಕೆಳಕ್ಕೆ
1.ಕೃಷ್ಣನ ವಿರಾಟ ದರ್ಶನ (4)
2.ಸುತನು ಈ ನಡುವೆ ಹೇಳಿದ ಗುಡ್-ಮಾರ್ನಿಂಗ್ (4)
3.ದೊಡ್ಡ ಆಕಾಶಕಾಯದ ಸುತ್ತ ಸುತ್ತುತ್ತಿರುವುದು (4)
4.ಒಮ್ಮತ-ಏಕಾಭಿಪ್ರಾಯ (4)
7.ಸೀತೆ ಹೀಗೆ ದಶರಥ ಪುತ್ರನ ಹೆಂಡತಿಯಾಗಿ (4)
9.ಮೆಲುವಾಗಿ ಬೀರಿದ ನಗೆ (4)
10.ಆಡಿನ ನಡುವೆ ಅಣ್ಣನಿದ್ದಾನೆ (3)
11.ಪಟ ಕಡೆಯಲ್ಲಿರುವ ಮೋಸದಿಂದ ಕೂಡಿದ್ದು (3)
12.ಅಗಲವಾದ ತಟ್ಟೆ ತಲೆಕೆಳಗಾಗಿದೆ (3)
13.ಒಳ್ಳೆಯ ಬಣ್ಣವುಳ್ಳ ಬಂಗಾರ (3)

5916 ಉತ್ತರ

ಎಡದಿಂದ ಬಲಕ್ಕೆ:
2.ಮೆಲ್ಲುಸಿರು 4.ಹರ
5.ಚತುರ 6.ತರುಣಾತಪ
9.ಕಿರುಗೆಜ್ಜೆ
10.ದೇವದಾಸ
13.ರಸಾನುಭವ
15.ಜಹಜು 17.ಸ್ವರ
18.ಕಾಸದಾರ

ಮೇಲಿನಿಂದ ಕೆಳಕ್ಕೆ :
1.ಮಂಚ 2.ಮೆರವಣಿಗೆ
3.ಸಿರಿತನ 4.ಹರಿತ
7.ಪರಿಸರ 8.ಬಾಕಿದಾರ
11.ವಜ್ರಪಂಜರ
12.ನವರಸ 14.ಸಾಕಾರ
16.ಜುಟ್ಟು

IN THE COURT OF THE HON'BLE CIVIL JUDGE AND J.M.F.C.AT AT SANDUR.
EP. No.9/2024

Between: DHR: ....Smt Mahadevakka
And
JDR:..... Lambani Shankribai dead by LRS Shivakumar and others

TO WHOMESEVER IT MAY CONCERN NOTICE

To,
ADDRESS OF JDR No 2 and 5
JDR No: 2, Madhuraja S/o Narasimha Naik, aged about 40 years, R/o Bandeebasapura Thanda Village, Kudligi Taluk, Vijayanagara District.
JDR No: 5, Smt. Shilpa Bai W/o Suresh Naik, D/o Narasimha Naik, aged about 34 years, R/o Bandeebasapura Thanda Village, Kudligi Taluk, Vijayanagara District.

Whereas above named plaintiffs have filed the above suit against JDR for executing the decree.
JDR No 2 and 5 to are any person interested are hereby summoned to appear before this Court in person or by a pleader duly instructed and able to answer all material question relating to the EP No: 9/2024 on 10/04/2026 at 11:00 AM before this Court. In the default of your appearance on the date /day of the above will be heard and determined as ex-party.
Given under my hand and seal of the court of this 03rd day of march-2026.

//by order of this Court//
Shirastedar,
Civil Judge & JMFC Court Sandur.
H M Kotraiah
Advocate for DHR

IN THE COURT OF THE 3rd ADDITIONAL CIVIL JUDGE & JMFC AT BALLARI
Crl. M.C. No. 36/2026

Between:-1)SIDDAMMA W/O LATE. THIMMAPPA, aged about 68 years, paramenent residing at Janekunte village, Ballari taluk and District presently resding at ward No.32, Bijapura colony, Cowl Bazaar, Ballari.
2) VENKATESH.A S/O THIMMAPPA, aged about 52 years, R/o,ward No.32, Bijapura colony, Cowl Bazaar, Ballari
3) NARAYANA S/O LATE.THIMMAPPA, aged about 50 years, R/o, ward No.29, Ramanjineya Nagar, Belagal road, Ballari
...Petitioners
And
RESPONDENT:The Register of Births & Death's, Thasildhar, Taluk office, Ballari ..Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 husband by name THIMMAPPA S/O LATE CHAKALI GOVINDAPPA was died on 18-07-2002 at Janekunte village, Ballari taluk and District in the above mentioned address.
Therefore, If any persons are interested you are hereby directed to appear in this court in person or by a pleader duly instructed on 17-04-2026 at about 11.00 a.m to show cause against the above suit, failing which the suit will be heard and determined ex-parte against you.
Given under my hand and seal of the court on this 07th day March-2026.

By Order of the court.
Shirestedar,
3rd Addl Civil Judge and JMFC Ballari.
G. Ramalingappa
Advocate for the petitioner

IN THE COURT OF THE 3rd ADDITIONAL CIVIL JUDGE & JMFC AT BALLARI
Crl. M.C. No. 37/2026

Between:-1)SIDDAMMA W/O LATE. THIMMAPPA, aged about 68 years, paramenent residing at Janekunte village, Ballari taluk and District presently resding at ward No.32, Bijapura colony, Cowl Bazaar, Ballari.
2) VENKATESH.A S/O THIMMAPPA, aged about 52 years, R/o,ward No.32, Bijapura colony, Cowl Bazaar, Ballari
3) NARAYANA S/O LATE.THIMMAPPA, aged about 50 years, R/o, ward No.29, Ramanjineya Nagar, Belagal road, Ballari ...Petitioners
And
RESPONDENT:The Register of Births & Death's, Thasildhar, Taluk office, Ballari ..Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 mother-in-law by name THAYAMMA W/O LATE CHAKALI GOVINDAPPA was died on 24-10-2018 at Janekunte village, Ballari taluk and District in the above mentioned address.
Therefore, If any persons are interested you are hereby directed to appear in this court in person or by a pleader duly instructed on 17-04-2026 at about 11.00 a.m to show cause against the above suit, failing which the suit will be heard and determined ex-parte against you.
Given under my hand and seal of the court on this 07th day March-2026.

By Order of the court.
Shirestedar,
3rd Addl Civil Judge and JMFC Ballari.
G. Ramalingappa
Advocate for the petitioner

IN THE COURT OF CIVIL JUDGE & JMFC AT SIRUGUPPA
Criminal. Misc. Case No: 215/2026

Between:S.Basavaraja
....PETITIONER
- V/s -
The Tahasildar -Cum-Birth and Death Registrar, Taluk Office, Siruguppa & Others RESPONDENTS

TO WHOM SO EVER MAY CONCERN NOTICE

WHEREAS above named petitioner herein have instituted above petition under section 13(3) of Birth and Deaths Act 1969 against the Respondent for the purpose of seeking death certificate of petitioner's grand mother date of death by name HAMPAMMA W/O JADEPPA who died on 08-11-2003 at Konchigeri Village.
Any person interested are here by summoned to appear before this court in person or by pleader duly instructed and able to answer all material questions relating to the petition on 18-04-2026 at 11.00 am before this court.
In default of your appearance on the date/ day of above petition will be heard and determined as "Ex-parte"
Given under my hand & seal of the court this 07th day of March-2026

By Order of the court,
Sd/- Chief ministrial officer,
Civil judge & JMFC Court Siruguppa.
Sd/- VENKATESH R S
Advocates Siruguppa.

IN THE COURT OF CIVIL JUDGE & JMFC AT SIRUGUPPA
Criminal. Misc. Case No: 216/2026

Between:S.Basavaraja
...PETITIONER
- V/s -
The Tahasildar -Cum-Birth and Death Registrar, Taluk Office, Siruguppa & Others....RESPONDENTS

TO WHOM SO EVER MAY CONCERN NOTICE

WHEREAS above named petitioner herein have instituted above petition under section 13(3) of Birth and Deaths Act 1969 against the Respondent for the purpose of seeking death certificate of petitioner's grand father date of death by name JADEPPA S/O SANNA MUDDANNA who died on 03-05-1990 at Konchigeri Village.
Any person interested are here by summoned to appear before this court in person or by pleader duly instructed and able to answer all material questions relating to the petition on 17-04-2026 at 11.00 am before this court.
In default of your appearance on the date/ day of above petition will be heard and determined as "Ex-parte"
Given under my hand & seal of the court this 07th day of March-2026

By Order of the court,
Sd/- Chief ministrial officer,
Civil judge & JMFC Court Siruguppa.
Sd/- VENKATESH R S
Advocates Siruguppa.

IN THE COURT OF THE 3rd ADDITIONAL CIVIL JUDGE & JMFC AT BALLARI
Crl. M.C. No. 38/2026

Between:-1)SIDDAMMA W/O LATE THIMMAPPA, aged about 68 years, paramenent residing at Janekunte village, Ballari taluk and District presently resding at ward No.32, Bijapura colony, Cowl Bazaar, Ballari.
2) VENKATESH.A S/O THIMMAPPA, aged about 52 years, R/o,ward No.32, Bijapura colony, Cowl Bazaar, Ballari
3) NARAYANA S/O LATE.THIMMAPPA, aged about 50 years, R/o, ward No.29, Ramanjineya Nagar, Belagal road, Ballari ...Petitioners
And
RESPONDENT: The Register of Births & Death's, Thasildhar, Taluk office, Ballari ..Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 father-in-law by name CHAKALI GOVINDAPPA S/O LATE.THIMMAPPA was died on 14-09-2014 at Janekunte village, Ballari taluk and District in the above mentioned address.
Therefore, If any persons are interested you are hereby directed to appear in this court in person or by a pleader duly instructed on 17-04-2026 at about 11.00 a.m to show cause against the above suit, failing which the suit will be heard and determined ex-parte against you.
Given under my hand and seal of the court on this 07th day March-2026.

By Order of the court.
Shirestedar,
3rd Addl Civil Judge and JMFC Ballari.
G. Ramalingappa
Advocate for the petitioner

IN THE COURT OF THE 3rd ADDITIONAL CIVIL JUDGE & JMFC AT BALLARI
Crl. M.C. No. 73/2026

Between:-1) RAJASAB S/O LATE. PAKKIRSAB, aged about 42 years,
2) THIPPUSULTHAN S/O LATE.PAKKIRSAB, aged about 40 years,
3) RASOOL BEE W/O EMMIGANUR SAB D/O S/O LATE. PAKKIRSAB, aged about 50 years,
4)SHASHINA BEGUM W/O FAKRUDDIN SAB, D/O LATE.PAKKIRSAB, aged abou 46 years, all are R/o, Sreedharagadda village, Ballari taluk and District.
...Petitioners
And
The register of Birth & Death's Register, Thasildhar, Taluk office, Ballari .... Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's father by name PAKKIRSAB S/O LATE. KHASIM SAB, was died on 22-10-2004 at Sangankallu village, Ballari taluk and District in the above mentioned address.
Therefore, If any persons are interested you are hereby directed to appear in this court in person or by a pleader duly instructed on 15-04-2026 at about 11.00 a.m to show cause against the above suit, failing which the suit will be heard and determined ex-parte against you.
Given under my hand and seal of the court on this 07th day March-2026.

By Order of the court.
Shirestedar,
3rd Addl Civil Judge and JMFC Ballari.
P. Bheemaiah
Advocate for the petitioner

CHANGE OF NAME

I, **FAHIKA MOHAMMED ALI GAIMA** (Old Name) Resident of Navayatkeri, Post : Upponi, Taluk : Honnavar, Dist. : Uttara Kannada, Karnataka State, Pin Code : 581334, India, have changed my name as **FAIKA PERVEZ AHMED DHARWAD** (New Name) for all purposes affidavit Dtd.: 07-03-2026 sworn before notary **S. G. Hegde.**

CHANGE OF NAME

I, **PREMKUMAR JEBADOSS & ABRAHAM** (Old Name) R/o: H. No: 74, Ambedkar Nagar, Anand Nagar Road, OldHubballi, Hubballi - 580024, Dist: Dharwad, have changed my name as **PREMKUMAR P. NADAR** (New Name) for all purposes affidavit Dtd.: 06-03-2026 sworn before notary **T. G. Balannavar.**

ಕರ್ನಾಟಕ ಸರ್ಕಾರ
ಅಬ್ದುಲ್‌ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ
ಲಲಿತಮಹಲ್ ರಸ್ತೆ, ಮೈಸೂರು-570011 ದೂ.0821-2522901/906,
ಇ-ಮೇಲ್: sird-mysore@ka.gov.in

ಸಂಖ್ಯೆ:-SIRDPR-ADMOEST2/5/2024 ದಿನಾಂಕ: 07.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

KTPP ಅಧಿನಿಯಮ 1999 ಮತ್ತು ನಿಯಮಗಳು 2000 ರ ಅನ್ವಯ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆಳಗಿನ ಕಾರ್ಯಗಳಿಗಾಗಿ ಎರಡು ಪ್ರತ್ಯೇಕ ಅಲ್ಪಾವಧಿ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ:

1. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಮತ್ತು ಅಧೀನ ಸಂಸ್ಥೆಗಳಿಗೆ ಅಗತ್ಯವಿರುವ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒಂದು ವರ್ಷ ಅವಧಿಗೆ ಪಡೆಯುವ ಸಂಬಂಧ
2. ಸಂಸ್ಥೆಯ ಕೇಂದ್ರ ಕಚೇರಿಯ ವಸತಿನಿಲಯಕ್ಕೆ ಅಗತ್ಯವಿರುವ ಹೌಸ್‌ಕೀಪಿಂಗ್ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒಂದು ವರ್ಷ ಅವಧಿಗೆ ಪಡೆಯುವ ಸಂಬಂಧ

ಭರ್ತಿ ಮಾಡಿದ ಟೆಂಡರ್‌ಗಳನ್ನು ದಿನಾಂಕ: 16.03.2026 ರ ಸಂಜೆ 05.00 ಗಂಟೆಯ ವರೆಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ https://www.kppp.karnataka.gov.in ಅಥವಾ ಸಂಸ್ಥೆಯ ದೂರವಾಣಿ ಸಂಖ್ಯೆ: 0821-2522903 / 906 ಅನ್ನು ಸಂಪರ್ಕಿಸಬಹುದು.

ಸಹಿ/-ನಿರ್ದೇಶಕರು
ಅ.ನ.ಸಾ.ರಾ.ಗ್ರಾ & ಪಂ.ರಾ.ಸಂಸ್ಥೆ, ಮೈಸೂರು
ವಾಸಾಸಂಇ/ಮೈಸೂರು/1796/ಶಿರಡಿಸಾಯಿ/2025-26

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ: ಲೋ.ಇ:ಮಂ.ವಿ:ಟಿ.ಎನ್.ಡಿ:(55ಇ/46ಇ):2025-26:ಜೆಇ-1 ದಿನಾಂಕ: 06.03.2026

ಟೆಂಡರ್ ಪ್ರಕಟಣೆ / ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ) /2ನೇ ಕರೆ /3ನೇ ಕರೆ

ಲೆಕ್ಕಶೀರ್ಷಿಕೆ: 8443 ವಿಪತ್ತು ಉಪಶಮನ ನಿಧಿ ಇಂಡೆಂಟ್ ನಂ: 34060, 34059, 34074. **ಲೆಕ್ಕಶೀರ್ಷಿಕೆ: 5054-80-190-0-01-132** ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ -ಬಂಡವಾಳ ವೆಚ್ಚದಡಿ ಇಂಡೆಂಟ್ ನಂ: **33250 ಲೆಕ್ಕಶೀರ್ಷಿಕೆ: 3054-04-337-1-10-200** ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ರಡಿ ಇಂಡೆಂಟ್ ನಂ.**32115, 34228, 34230** ಈ ಕಾಮಗಾರಿಗಳಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಮತ್ತು ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ **(CMIDP)** ಇಂಡೆಂಟ್ ನಂ: **32069** ಈ ಕಾಮಗಾರಿಗೆ **2ನೇ ಕರೆಯಾಗಿ** ಮತ್ತು ಇಂಡೆಂಟ್ ನಂ: **32072 3ನೇ ಕರೆಯಾಗಿ ಟೆಂಡರ್ ಕರೆಯಲಾಗಿದ್ದು**, ಈ ಕಾಮಗಾರಿಗಳಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 16.03.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಲೆಕ್ಕಶೀರ್ಷಿಕೆ: 8443 - ಠೇವಣಿ ಕೊಡುಗೆ ರಡಿ ಇಂಡೆಂಟ್ ನಂ: **34124** ಈ ಕಾಮಗಾರಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 23.03.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ.8.00 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.110.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗಳಿಗೆ KW-1, KW-2, KW-3 ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ರೂ.5.00 ಲಕ್ಷ ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಹಾಗೂ ಕಾಮಗಾರಿಗಳ ಮೀಸಲಾತಿ ವಿವರ, ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
DIPR/DK/KSMCA/1713/25-26 dt.07.03.2026

ಕರ್ನಾಟಕ ಸರ್ಕಾರ
ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ
ಸಾರ್ವಜನಿಕ ಆಸ್ಪತ್ರೆ, ಹರಪನಹಳ್ಳಿ-583131 ವಿಜಯನಗರ ಜಿಲ್ಲೆ.
ph No.08398-280266, 280222
Email id: ghharapanahalli1@gmail.com

ಸಂ:ಸಾಆಹ.ಹಳ್ಳಿ/591/2025-26 ದಿನಾಂಕ:06.03.2026

ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

2025-26 ನೇ ಸಾಲಿಗೆ ಸಾರ್ವಜನಿಕ ಆಸ್ಪತ್ರೆಗೆ ಬೇಕಾಗಬಹುದಾದ ವೈದ್ಯಕೀಯ ಉಪಕರಣಗಳು ಮತ್ತು ಇತರೆ ಯಂತ್ರೋಪಕರಣಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರಮೆಂಟ್ ಟೆಂಡರನ್ನು ಆಹ್ವಾನಿಸಲಾಗಿದೆ, Last Date and time for receipt of tender's date:16.03.2026 ಸಂಜೆ 4:00 ಗಂಟೆಯವರೆಗೆ ಸದರಿ ಇ-ಟೆಂಡರ್ ಗಳನ್ನು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ http://e-proc.karnataka.gov.in ನಲ್ಲಿ ವೀಕ್ಷಣೆಗೆ ಹಾಗೂ ಡೌನಲೋಡಗೆ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮುಖ್ಯ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಹರಪನಹಳ್ಳಿ, ಇವರ ದೂರವಾಣಿ ಸಂಖ್ಯೆ:9686855501 ಇವರಿಗೆ ಸಂಪರ್ಕಿಸಬಹುದು.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ಹರಪನಹಳ್ಳಿ, ವಿಜಯನಗರ ಜಿಲ್ಲೆ.
ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/581

ಕರ್ನಾಟಕ ಸರ್ಕಾರ
ಪೊಲೀಸ್ ಅಧೀಕ್ಷಕರ ಕಛೇರಿ, ಉತ್ತರ ಕನ್ನಡ ಜಿಲ್ಲೆ, ಕಾರವಾರ

ಸಂ: ಸಂಗ್ರಹ/ರಸ್ತೆ ಸಂಚಾರ ಸುರಕ್ಷತೆ/303(5)/2025-26 ದಿನಾಂಕ: 06-03-2026

ಇ-ಟೆಂಡರ್ ಪ್ರಕಟಣೆ

ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಘಟಕಕ್ಕೆ ಅವಶ್ಯಕವಿರುವ ರಸ್ತೆ ಸಂಚಾರ ಮತ್ತು ಸುರಕ್ಷತಾ ಸಾಮಗ್ರಿಗಳನ್ನು ಸರಬರಾಜು ಮಾಡುವ ಕಛೇರಿಯ ಪತ್ರ ಸಂಖ್ಯೆ: ಸಂಗ್ರಹ/ರಸ್ತೆ ಸಂಚಾರ ಸುರಕ್ಷತೆ/303(5)/2025-26. **"Variable Message Sign Boards (VMS)"** ಗಳನ್ನು ಸರಬರಾಜು ಮಾಡುವ ಕುರಿತು ಕ್ರಮ ಸಂಖ್ಯೆ: ಕೆಪಿಎ/2025-26/ಐ.ಎನ್.ಡಿ 0567 ನೇದನ್ನು ಕೆ.ಪಿ.ಪಿ. ಪೋರ್ಟಲ್ ನಲ್ಲಿ ದಿನಾಂಕ: 04-03-2026 ರಂದು ಆಹ್ವಾನಿಸಿದ್ದು, ದಿನಾಂಕ: 11-03-2026 ರಂದು ಸಮಯ 17-00 ಘಂಟೆಗೆ ಮುಕ್ತಾಯವಾಗಲಿದೆ.

ಹೆಚ್ಚಿನ ವಿವರಗಳಿಗೆ **www.kppp.karnataka.gov.in** ಅಥವಾ ಜಿಲ್ಲಾ ಪೊಲೀಸ್ ಕಛೇರಿಯ ದೂರವಾಣಿ ಸಂಖ್ಯೆ: 08382-226307 ಗೆ ಸಂಪರ್ಕಿಸಬಹುದು.

ಸಹಿ/- ಅಧ್ಯಕ್ಷರು ಹಾಗೂ ಪೊಲೀಸ್ ಅಧೀಕ್ಷಕರು.
ಟೆಂಡರ್ ಆಹ್ವಾನ ಸಮಿತಿ, ಉತ್ತರ ಕನ್ನಡ ಜಿಲ್ಲೆ, ಕಾರವಾರ.
DIPR/KWR/KSMCA/1187/25-26 Dt 07.03.2026

ಜಿಲ್ಲಾ ಪಂಚಾಯತ್ ಧಾರವಾಡ
ಕಾರ್ಯನಿರ್ವಾಹಕ ಇಂಜಿನೀಯರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ವಿಶ್ವೇಶ್ವರಯ್ಯಾ ಮಾರ್ಗ, ಧಾರವಾಡ - 580001.
ದೂರವಾಣಿ: 0836-2442316, ಇ-ಮೇಲ್: zpeddwd@rediffmail.com

ಕ್ರ.ಸಂ.: .ಪಂ.ರಾ.ಇಂ.ವಿ.ಧಾ/ಸ.ಇಂ.-2/2025-2026/5023 ದಿನಾಂಕ: 06-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ -44/2025-26
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ ಇವರಿಂದ ಸರ್ಕಾರಿ ಆದೇಶ ಸಂಖ್ಯೆ: No.FD 876 Exp-12/2017, Bangalore, dated: 15-09-2017 ರನ್ವಯ ವಿವಿಧ ಲೆಕ್ಕಶೀರ್ಷಿಕೆಗಳಡಿ ಕಾಮಗಾರಿಗಳ ಐಟಂವಾರು ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಲೋಕೋಪಯೋಗಿ / ಪಂ.ರಾ.ಇಂ. ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ KW-2, 3 ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯ ಇ-ಪ್ರೊಕ್ಯೂರ್‌ಮೆಂಟ್‌ನ **https://kppp.karnataka.gov.in/** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು.

Indent Numbers General : **24884/Call-2, 20060/Call-3, 24911.**

ಕ್ಯಾಲೆಂಡರ್ ಆಫ್ ಇವೆಂಟ್ಸ್: 1) ಟೆಂಡರ್ ದಾಖಲೆಗಳನ್ನು ದಿನಾಂಕ: **07-03-2026** ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: **16-03-2026 ರ ಸಂಜೆ 4.00 ಘಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದು. **2)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **17-03-2026 ರ ಸಾಯಂಕಾಲ 4.30 ಘಂಟೆಗೆ.** ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ. **3)** ಆರ್ಥಿಕ ಬಿಡ್ ತೆರೆಯುವ ದಿನಾಂಕ: **20-03-2026 ರ ಬೆಳಿಗ್ಗೆ 11.00 ಘಂಟೆಗೆ.** ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.

ಕಾಮಗಾರಿಯ ಹೆಸರು / ಗುತ್ತಿಗೆದಾರರ ಅರ್ಹತೆ / ಟೆಂಡರ್ ನಿಯಮ / ಟೆಂಡರ್ ಷರತ್ತುಗಳು / ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ / ಇಎಂಡಿ ಮೊತ್ತ ಇತ್ಯಾದಿ ವಿವರಗಳಿಗೆ **https://kppp.karnataka.gov.in/** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು.

ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- (ಆರ್.ಎಂ.ಸೊಪ್ಪಿಮಠ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ.
ವಾಸಾಸಂಇ/ಧಾರವಾಡ/1321/ಅಡ್ವರ್ಟೋರ್/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್38/25-26 ದಿ:02.03.2026 (3ನೇ ಕರೆ)
ಉಲ್ಲೇಖ: 1 ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 30/2025-26 ದಿನಾಂಕ: 29.12.2025 (1ನೇ ಕರೆ) **2.** ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್34/2025-26 ದಿನಾಂಕ: 28.01.2026 (2 ನೇ ಕರೆ)

(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ. ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ KPWD Class-IV & above ದರ್ಜೆಯ ಗುತ್ತಿಗೆದಾರರಿಂದ ಕೆ.ಪಿ.ಪಿ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.

ಸಾಗರ ಮತ್ತು ಹೊಸನಗರ ತಾಲ್ಲೂಕು ವ್ಯಾಪ್ತಿಯಲ್ಲಿ ಕಾಲು ಸಂಕ (Foot Bridge) ಅಭಿವೃದ್ಧಿ ಕಾಮಗಾರಿಗಳ (05 ಸಂಖ್ಯೆ) ಟೆಂಡರಿಗಿಟ್ಟ ಮೊತ್ತ ರೂ. 39.98 ಲಕ್ಷಗಳಿಂದ ರೂ. 9.95 ಲಕ್ಷಗಳು & ಇ.ಎಂ.ಡಿ ಮೊತ್ತ ರೂ. 0.68 ಲಕ್ಷಗಳಿಂದ ರೂ. 0.25 ಲಕ್ಷಗಳು.

1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ: 06.03.2026 ರಿಂದ 13.03.2026 ಸಂಜೆ 5.30 ರವರೆಗೆ 2) ಟೆಂಡರ್ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 12.03.2026 ಸಂಜೆ 5.30 ರ ವರೆಗೆ 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 16.03.2026 ಬೆಳಗ್ಗೆ 11.00 ಗಂಟೆಗೆ. 4) ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ (www.kppp.karnataka.gov.in) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/46/03/1962

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಂಕೇಶ್ವರ

ಕ್ರ.ಸಂ.ಕೃ.ಉ.ಮಾ.ಸ(ಸಂ)/ಲಿ.ಲೈ.ಫೀ/ಟೆಪ್ರ/566/2025-26 ದಿನಾಂಕ:06-03-2026

-ಲೀವ್ಹ್ ಮತ್ತು ಲೈಸನ್ಸ್ ಫೀ ಹಂಚಿಕೆಯ ಪ್ರಕಟಣೆ-

ಸಂಕೇಶ್ವರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಕ್ಯಾಂಟೀನ ಕಟ್ಟಡವನ್ನು, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಾವಳಿಗಳು-2004 ರ ನಿಯಮ 14 ರನ್ವಯ ಸಾರ್ವಜನಿಕರಿಗೆ ಪ್ರತಿ 11 ತಿಂಗಳ ಅವಧಿಗೆ ನವೀಕರಿಸುವ ಹಾಗೂ 33 ತಿಂಗಳಿಗೆ ಶೇಕಡಾ 5% ರಷ್ಟು ಲೀವ್ ಮತ್ತು ಲೈಸನ್ಸ್ ಫೀ ದರಗಳನ್ನು ಹೆಚ್ಚಿಸುವ ಮತ್ತು ಸಮಿತಿಯು ಕಾಲಕಾಲಕ್ಕೆ ವಿಧಿಸುವ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು ಗರಿಷ್ಠ 55 ತಿಂಗಳ ಅವಧಿಗೆ ಲೀವ್ ಮತ್ತು ಲೈಸನ್ಸ್ ಫೀ ಆಧಾರದ ಮೇಲೆ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1) ಸದರಿ ಕಟ್ಟಡಕ್ಕೆ ಪ್ರತಿ ಮಾಹೆ ಇಲಾಖೆ ನಿಗದಿಪಡಿಸಿದ ದರ ರೂ.13,300/- ಆಗಿದ್ದು, ಸದರಿ ಕಟ್ಟಡವನ್ನು ಪಡೆಯಲಿಚ್ಚಿಸುವವರು ಕಟ್ಟಡದ ಎರಡು ತಿಂಗಳ ನಿಗದಿತ ಲೀವ್ ಮತ್ತು ಲೈಸನ್ಸ್ ಶುಲ್ಕದ ಮೊತ್ತ ರೂ.26,600/-ಗಳನ್ನು 'ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಂಕೇಶ್ವರ' ಇವರ ಹೆಸರಿನಲ್ಲಿ ಡಿಡಿ/ಆರ.ಟಿ.ಜಿ.ಎಸ ಮೂಲಕ ಮುಂಗಡ ಠೇವು ಸಂದಾಯ ಮಾಡಬೇಕು. 2)ನೋಂದಣಿ ಶುಲ್ಕ 300/- ಮತ್ತು ರೂ.500/-ಗಳ ಫಾರ್ಮ ಫೀಯನ್ನು ಪ್ರತ್ಯೇಕ ತೆರಿಗೆಗಳೊಂದಿಗೆ ಪಾವತಿಸಿ ಖಾಲಿ ಟೆಂಡರ ಫಾರ್ಮಗಳನ್ನು ದಿನಾಂಕ:20/03/2026 ರಂದು ಸಾಯಂಕಾಲ 4-00 ಘಂಟೆಯವರೆಗೆ ಪಡೆಯಬಹುದು. 3) ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ಅಗತ್ಯ ದಾಖಲೆಗಳೊಂದಿಗೆ ಇ.ಎಂ.ಡಿ ಠೇವಣಿಯ ಡಿಡಿ/ರಶೀದಿಯೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ:27/03/2026 ಮಧ್ಯಾನ್ಹ 03-00 ಘಂಟೆಯವರೆಗೆ ಸ್ವೀಕರಿಸಲಾಗುವುದು. 4) ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ದಿನಾಂಕ: 30/03/2026 ರಂದು ಮಧ್ಯಾಹ್ನ 12-00 ಗಂಟೆಗೆ ತೆರೆಯಲಾಗುವುದು ಹಾಗೂ ಟೆಂಡರ-ಕಂ-ಬಹಿರಂಗ ಹರಾಜನ್ನು ಕೈಕೊಳ್ಳಲಾಗುವುದು 5) ಮೇಲಿನ ಕಟ್ಟಡಕ್ಕೆ ಸಲ್ಲಿಸಿದ ಟೆಂಡರಗಳನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. 6) ಉಪಹಾರ ಗೃಹ ನಡೆಸಲು ಅವಶ್ಯಕವಿರುವ ಸರಕಾರದ ಸಂಬಂದಪಟ್ಟ ಇಲಾಖೆಯ ಪರವಾನಗೆಯನ್ನು ಹೊಂದಿರತಕ್ಕದ್ದು.7)ಸದರಿ ಹಂಚಿಕೆಯು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಮಂಜೂರಾತಿಗೆ ಒಳಪಟ್ಟಿರುತ್ತದೆ. 8)ಯಾವುದೇ ಕಾರಣ ನೀಡದೇ ಟೆಂಡರಗಳನ್ನು ಸ್ವೀಕರಿಸುವ ಹಾಗೂ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ. 9)ಇನ್ನುಳಿದ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳಿಗೆ ಹಾಗೂ ವಿವರಗಳನ್ನು ಕಚೇರಿ ಸಮಯದಲ್ಲಿ ಪಡೆಯಬಹುದು.

ಸಹಿ/- ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಂಕೇಶ್ವರ

ಸಹಿ/- ಆಡಳಿತಾಧಿಕಾರಿಗಳು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಂಕೇಶ್ವರ

DIPR/BGM/RO-NO-2018/KSMCA/2024-25

ಕರ್ನಾಟಕ ಸರ್ಕಾರ
(ತೋಟಗಾರಿಕೆ ಇಲಾಖೆ)
ತೋಟಗಾರಿಕೆ ಜಂಟಿ ನಿರ್ದೇಶಕರವರ ಕಾರ್ಯಾಲಯ (ಜಿಲ್ಲಾ ಪಂಚಾಯತ್) ಕೊಪ್ಪಳ
ತಾಲ್ಲೂಕು & ಜಿಲ್ಲೆ : ಕೊಪ್ಪಳ Email ID : jdhkoppal@gmail.com

ಕ್ರಸಂ :ತೋಜನಿ:ಜಿಪಂ:ಕೊ:ತಾಸ: :2025-26/337 ದಿನಾಂಕ : 06.03.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ವಿಷಯ : 2025-26 ನೇ ಸಾಲಿಗೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿರುವ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ಸಿರಿವಾರದ ಜಮೀನಿನಲ್ಲಿ ದಟ್ಟವಾದ ಕಾಡುಸ್ವಚ್ಛತೆ ಹಾಗೂ ಸಮತಟ್ಟುಗೊಳಿಸಲು ಇ-ಟೆಂಡರ್ ಪ್ರಕಟಣೆಯನ್ನು ಹೊರಡಿಸುವ ಬಗ್ಗೆ.

2025-26 ನೇ ಸಾಲಿಗೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿರುವ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ಸಿರಿವಾರದ ಜಮೀನಿನಲ್ಲಿ ದಟ್ಟವಾದ ಕಾಡು ಸ್ವಚ್ಛತೆ ಹಾಗೂ ಸಮತಟ್ಟುಗೊಳಿಸಲು ಸ್ಪರ್ಧಾತ್ಮಕ ದರದಲ್ಲಿ ಕಾಮಗಾರಿ ನಿರ್ವಹಿಸಲು ಕರ್ನಾಟಕ ಪಾರದರ್ಶಕತೆ (KTTP) ನಿಯಮಾವಳಿ ಪ್ರಕಾರ/ಇಲಾಖಾ ನಿಯಮಾವಳಿ ಮೇರೆಗೆ ಇ-ಟೆಂಡರ್‌ಅನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಅರ್ಹ ವ್ಯಕ್ತಿ /ಸಂಸ್ಥೆಗಳು/ಗುತ್ತಿಗೆದಾರರು ಟೆಂಡರ್ ಅರ್ಜಿಗಳನ್ನು KPPP Portal ನಿಂದ ಪಡೆಯಬಹುದಾಗಿದೆ. (ಹೆಚ್ಚಿನ ವಿವರಗಳನ್ನು **https://kppp.karnataka.gov.in/Portal** ವಿಳಾಸದಲ್ಲಿ ಪಡೆಯಬಹುದು).

(1) ಟೆಂಡರ್‌ನ ಒಟ್ಟು ಮೊತ್ತ : ಅಂದಾಜು **ರೂ. 35.00 ಲಕ್ಷಗಳು** (2) ಟೆಂಡರ್ ಪ್ರಕಟಣೆ ದಿನಾಂಕ : **07.03.2026** (3) ಟೆಂಡರ್ ಫಾರಂ ಬೆಲೆ : ಇ-ಆಡಳಿತದನ್ವಯ (4) ಇ-ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ : **16.03.2026 ರಂದು ಸಾಯಂಕಾಲ 5:30 ಗಂಟೆಯ** ವರೆಗೆ (5) ಇ-ಸಂಗ್ರಹಣ ವೇದಿಕೆಯ ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ. : **18.03.2026 ರಂದು ಬೆಳಗ್ಗೆ : 10:30 ಗಂಟೆಗೆ** (6) ತಾಂತ್ರಿಕ ಬಿಡ್‌ನಲ್ಲಿ ಅನುಮೊದನೆಗೊಂಡ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ. : **ದಿನಾಂಕ : 20.03.2026 ಬೆಳಗ್ಗೆ : 10:30 ಗಂಟೆಗೆ** (7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ : **ರೂ. 70,000/-** (ರೂ. ಎಪ್ಪತ್ತು ಸಾವಿರ ರೂ ಮಾತ್ರ) (8) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, : ಫೋನ್ ಸಂಖ್ಯೆ : ತೋಟಗಾರಿಕೆ ಜಂಟಿ ನಿರ್ದೇಶಕರ ಕಚೇರಿ (ಜಿ.ಪಂ.) ಕೊಪ್ಪಳ, **ಫೋನ್ ಸಂಖ್ಯೆ : 9448999237** (9) ಭದ್ರತಾ ಠೇವಣಿ ಮೊತ್ತ. : **ರೂ. 1,75,000/-** (ರೂ. ಒಂದು ಲಕ್ಷದ ಎಪ್ಪತ್ತೈದು ಸಾವಿರ ಮಾತ್ರ).

ಸಹಿ/- ತೋಟಗಾರಿಕೆ ಜಂಟಿ ನಿರ್ದೇಶಕರು
(ಜಿ.ಪಂ.) ಕೊಪ್ಪಳ
ವಾ.ಸಾ.ಇ/ಕೊಪ್ಪಳ/737/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಸರ್ಕಾರ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ, ಹಾವೇರಿ

ಇ-ಟೆಂಡರ್ ಪ್ರಕಟಣೆ

ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಛೇರಿ, ಹಾವೇರಿಯಲ್ಲಿ ಖಾಲಿ ಇರುವ 02 ಡೇಟಾ ಎಂಟ್ರಿ ಆಪರೇಟರ್, 02 ಸಮೂಹ 'ಡಿ' ಹಾಗೂ 01 ವರದಾ ವಿದ್ಯಾಪೀಠ, ನೆಗಳೂರುಗೆ ಕಾವಲುಗಾರ ಹುದ್ದೆಗಳಿಗೆ ಹೊರಸಂಪನ್ಮೂಲ ಸಿಬ್ಬಂದಿ ಸೇವೆಯನ್ನು 2026-27 ನೇ ಸಾಲಿನ 12 ತಿಂಗಳ ಅವಧಿಗೆ ದಿನಾಂಕ : 01-04-2026 ರಿಂದ 31-03-2027 ರವರೆಗೆ ಅರ್ಹ ಹೊರ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಕೆ.ಟಿ.ಪಿ.ಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಹಾಗೂ ಸರ್ಕಾರಿ ಆದೇಶದ ಅನುಸಾರ ಪಡೆದುಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ (ಕೆ.ಪಿ.ಪಿ.ಪಿ)-1999, ನಿಯಮಗಳು 2000 ರ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

Tender Information : (1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ DSDEL/2025-26/SE0055 ದಿನಾಂಕ : **06-03-2026,** ವೆಬ್ ಸೈಟ್ ವಿಳಾಸ Website : https://kppp.karnataka.gov.in
(2) ಟೆಂಡರ್ ಫಾರಂ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ವೇಳೆ : **20-03-2026** ಸಂಜೆ 5.00 ಗಂಟೆ

ಸಹಿ/- ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು,
ದಿನಾಂಕ : 06-03-2026 ಹಾವೇರಿ ಜಿಲ್ಲೆ, ಹಾವೇರಿ
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/782/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-6/2025-26/6564 ದಿನಾಂಕ: 05.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https://kppp.karnataka.gov.in/ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2025-26/BR/WORK_INDENT33717	200.00
2)	PWD/2025-26/BD/WORK_INDENT34339	300.00
3)	PWD/2025-26/BD/WORK_INDENT34340	200.00
4)	PWD/2025-26/BD/WORK_INDENT34367	235.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **09.03.2026** ರಂದು **12.00** ಗಂಟೆಯ ವರೆಗೆ. ಆ)ಕೆಪಿಪಿ-ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **13.03.2026** ರಂದು **16.00** ಗಂಟೆಯ ವರೆಗೆ ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **14-03-2026** ರಂದು **16.30** ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, **ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ
ಡಿಐಪಿಆರ್/ಬಳ್ಳಾರಿ/1102/ಕೆಎಸ್‌ಎಂಸಿಎ/2025-26

ಮಹಾನಗರ ಪಾಲಿಕೆ, ಕಲಬುರಗಿ
ದೂರವಾಣಿ: 08472-278675, ಫಾಕ್ಸ್ : 08472-260776, ಇ-ಮೇಲ್:itstaff_ulb_gulbarga@yahoo.com

No: KMP/EE/TS-02/15th FC/2025-26 Date : 07.03.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ. ಸಂಖ್ಯೇ : /2025-26

1) ಕಾಮಗಾರಿಯ ವಿವರ : **ಕಲಬುರಗಿ ಮಹಾನಗರ ಪಾಲಿಕೆಯಿಂದ 2024-25ನೇ ಸಾಲಿನ 15ನೇಹಣಕಾಸು ಯೋಜನೆಯಡಿ** ಉಳಿತಾಯವಾದ ಮೊತ್ತದಲ್ಲಿ ಮತ್ತು 2024-25 & 2025-26 ನೇ ಸಾಲಿನ 15ನೇ ಹಣಕಾಸು ಆಯೋಗದ ಪರಿಷ್ಕೃತ ಕ್ರಿಯಾ ಯೋಜನೆಯ ಅನುದಾನದಲ್ಲಿ ಹಾಗೂ 2025-26ನೇ ಸಾಲಿನ 15ನೇ ಹಣಕಾಸು ಆಯೋಗದ ಕ್ರಿಯಾ ಯೋಜನೆಯ ಅನುದಾನದಲ್ಲಿ ಅನುಮೋದನೆಗೊಂಡ ಒಟ್ಟು (24) ಕಾಮಗಾರಿಗಳಿಗೆ ಕೆ.ಪಿ.ಪಿ. ಪೋರ್ಟಲ್ -20 ನಲ್ಲಿ ಕೆ.ಟಿ.ಪಿ.ಪಿ. ರ ಪ್ರಕಾರ ಕೆ.ಡಬ್ಲ್ಯೂ-1,2,3,&4 ರ ಮೂಲಕ 15 ದಿನಗಳ ಟೆಂಡರನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in/ ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಕನಿಷ್ಠ ಮೊತ್ತ ರೂ.4.00 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ.121.00 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ:3&4ನೇ ದರ್ಜೆ ಮತ್ತು ಹೆಚ್ಚು 4) ಟೆಂಡರ ಅರ್ಜಿಯ ಬೆಲೆ ರೂ.ಕೆ.ಪಿ.ಪಿ.ಪಿ. ಪೋರ್ಟಲ್ -2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಕನಿಷ್ಠ ರೂ.5,200.00 ಗಳು ಹಾಗೂ ಗರಿಷ್ಠ ರೂ.1,87,700.00ಗಳು 5) ಪೂರ್ವಭಾವಿ ಸಭೆ ದಿನಾಂಕ: 25.03.2026 ರಂದು ಬೆಳಿಗ್ಗೆ 11.00 ಗಂಟೆಗೆ 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 25.03.2026 ರಂದು ಸಾಯಂಕಾಲ 4.30 ಗಂಟೆಗೆ 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: 26.03.2026 ರಂದು ಸಾಯಂಕಾಲ 4.35 ಗಂಟೆಗೆ 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: 27.03.2026 ರಂದು ಬೆಳಿಗ್ಗೆ 11.30 ಗಂಟೆಗೆ ನಿಗದಿಪಡೆಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ **http://www.kalaburagicity.mrc.gov.in**

Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

ಸಹಿ/- ಕಾರ್ಯಪಾಲಕ ಅಭಿಯಂತರರು
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ
ವಾ.ಸಾ.ಸಂ.ಇ.ಕಲಬುರಗಿ/1146/ದೇಶಪಾಂಡೆ ಪಬ್ಲಿಸಿಟಿ/2025-26



ಉದ್ಯೋಗಸ್ಥ ಮಹಿಳೆಯರು

ಉದ್ಯೋಗಮ್ ಸ್ತ್ರೀ -ಪುರುಷ ಲಕ್ಷಣಂ. ಬದಲಾದ ಈ ಸಾಲುಗಳು ಇಂದಿನ ಕಾಲಕ್ಕೆ ಸೂಕ್ತ ಎನಿಸುತ್ತದೆ. ಈ ಕಾಲದಲ್ಲಿ ಎಷ್ಟು ಆದಾಯವಿದೆಯೋ ಅಷ್ಟೇ ಖರ್ಚುಗಳಿರುತ್ತವೆ. ಹಾಗಾಗಿ ಮಹಿಳೆಯ ದುಡಿಮೆ ಅನಿವಾರ್ಯ ಹಾಗು ಅತ್ಯಾವಶ್ಯಕಎನಿಸುತ್ತದೆ. ಉದ್ಯೋಗಿ ಮಹಿಳೆ ಇಂದಿನ ಸಮಾಜದ ಶಕ್ತಿಯ ಸಂಕೇತವಾಗಿದೆ. ಅವಳು ಮನೆಯಲ್ಲೂ, ಕಚೇರಿಯಲ್ಲೂ ಸಮಾನವಾಗಿ ಹೊಣೆಗಾರಿಕೆಯನ್ನು ನಿಭಾಯಿಸುತ್ತಾಳೆ. ಶಿಕ್ಷಣವು ಅವಳಿಗೆ ಆತ್ಮವಿಶ್ವಾಸವನ್ನು ನೀಡುತ್ತದೆ. ಅದೇ ಆತ್ಮ ವಿಶ್ವಾಸ ಅವಳನ್ನು ಎತ್ತರದ ಶಿಖರಗಳಿಗೆ ಕೊಂಡೊಯ್ಯುತ್ತದೆ. ಉದ್ಯೋಗವು ಅವಳಿಗೆ ಆರ್ಥಿಕ ಸ್ವಾವಲಂಬನೆಯನ್ನು ನೀಡುವುದಲ್ಲದೆ ಕುಟುಂಬದ ಅಭಿವೃದ್ಧಿಗೆ ಅವಳ ಆದಾಯ ಸಹಕಾರಿಯಾಗಿರುತ್ತದೆ. ಅವಳು ಸಮಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಾಳೆ. ಸಮಾಜದಲ್ಲಿ ಮಹಿಳೆಯ ಸ್ಥಾನವನ್ನು ಉನ್ನತಗೊಳಿಸುತ್ತಾಳೆ. ಕಠಿಣ ಪರಿಶ್ರಮದಿಂದ ತನ್ನ ಗುರಿಗಳನ್ನು ಸಾಧಿಸುತ್ತಾಳೆ. ಸವಾಲುಗಳನ್ನು ಧೈರ್ಯದಿಂದ ಎದುರಿಸುತ್ತಾಳೆ. ಅವಳು ಇತರ ಮಹಿಳೆಯರಿಗೆ ಪ್ರೇರಣೆಯಾಗುತ್ತಾಳೆ. ತಾಯಿಯಾಗಿ ಮಕ್ಕಳಿಗೆ ಉತ್ತಮ ಮಾದರಿಯಾಗುತ್ತಾಳೆ. ಅವಳ ಸಾಧನೆಗಳು ಸಮಾಜಕ್ಕೆ ಹೆಮ್ಮೆ ತಂದಿವೆ. ಉದ್ಯೋಗ ಕ್ಷೇತ್ರಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಅವಳು ಸಮಾನ ಹಕ್ಕುಗಳಿಗಾಗಿ ಹೋರಾಡುತ್ತಾಳೆ. ಅವಳ ಕಾರ್ಯಕ್ಷೇತ್ರದಲ್ಲಿ ತನ್ನ ಪ್ರತಿಭೆಯನ್ನು ತೋರಿಸುತ್ತಾಳೆ, ಅಲ್ಲದೆ ಕುಟುಂಬ ಮತ್ತು ಉದ್ಯೋಗದ ನಡುವೆ ಸಮತೋಲನ ಕಾಯ್ದುಕೊಳ್ಳುತ್ತಾಳೆ. ಅವಳು ಆತ್ಮಗೌರವದಿಂದ ಜೀವನ ನಡೆಸುತ್ತಾಳೆ.ಸಮಾಜದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸುತ್ತಾಳೆ.ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಉದ್ಯೋಗಿ ಮಹಿಳೆ ದೇಶದ ಆರ್ಥಿಕತೆಗೆ ಬಲವಾಗಿದ್ದಾಳೆ. ಅವಳು ಸಮಾಜದ ಬದಲಾವಣೆಗೆ ಕಾರಣವಾಗುತ್ತಾಳೆ. ಕಷ್ಟಗಳ ನಡುವೆಯೂ ತನ್ನ ಕನಸುಗಳನ್ನು ಬಿಡುವುದಿಲ್ಲ, ಉದ್ಯೋಗವು ಅವಳಿಗೆ ಸ್ವಾತಂತ್ರ್ಯತೆಯ ಅನುಭವ ನೀಡುತ್ತದೆ. ಅವಳ ಪರಿಶ್ರಮದಿಂದ ಕುಟುಂಬ ಸುಖವಾಗಿ ಸಾಗುತ್ತದೆ. ಮಹಿಳೆಯ ಸಾಮರ್ಥ್ಯಕ್ಕೆ ಉದ್ಯೋಗದ ಆವರಣ ಒಂದು ವೇದಿಕೆಯಾಗಿದೆ. ಅವಳ ಶ್ರಮ, ಶಕ್ತಿ, ಮತ್ತು ಸಹನೆಯ ಪ್ರತಿರೂಪವಾಗಿರುತ್ತಾಳೆ . ಉದ್ಯೋಗಿ ಮಹಿಳೆ ಸಮಾಜದ ಪ್ರಗತಿಯ ಚಿಹ್ನೆಯಾಗಿಹಳು. ಅವಳು ಸಮಾನತೆಯ ಸಂಕೇತವಾಗಿಹಳು.ಹೊಸ ತಲೆಮಾರಿಗೆ ಆತ್ಮವಿಶ್ವಾಸವನ್ನು ಬೋಧಿಸುತ್ತಾಳೆ.ಉದ್ಯೋಗಿ ಮಹಿಳೆ ನಮ್ಮ ದೇಶದ ಗೌರವವಾಗಿದ್ದಾಳೆ.ಅವಳು ಮನೆಯಲ್ಲೂ, ಕಚೇರಿಯಲ್ಲೂ ಸಮಾನವಾಗಿ ಹೊಣೆಗಾರಿಕೆಯನ್ನು ನಿಭಾಯಿಸುತ್ತಾಳೆ. ಶಿಕ್ಷಣವು ಅವಳಿಗೆ ಆತ್ಮವಿಶ್ವಾಸವನ್ನು ನೀಡುತ್ತದೆ. ಉದ್ಯೋಗವು ಅವಳಿಗೆ ಆರ್ಥಿಕ ಸ್ವಾವಲಂಬನೆಯನ್ನು ನೀಡುತ್ತದೆ. ಸವಾಲುಗಳನ್ನು ಧೈರ್ಯದಿಂದ ಎದುರಿಸುತ್ತಾಳೆ. ಅವಳು ಇತರ ಮಹಿಳೆಯರಿಗೆ ಪ್ರೇರಣೆ ಮತ್ತು ಮಾದರಿಯಾಗುತ್ತಾಳೆ. ಅವಳ ಸಾಧನೆ ಹೆಮ್ಮೆ ತಂದಿವೆ. ಉದ್ಯೋಗ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಅವಳು ಸಮಾನ ಹಕ್ಕುಗಳಿಗಾಗಿ ಹೋರಾಡುತ್ತಾಳೆ. ಮಹಿಳೆ ಸಮಾಜದ ಪ್ರಗತಿಯ ಚಿಹ್ನೆಯಾಗಿದ್ದಾಳೆ. ಅವಳು ಸಮಾನತೆಯ ಸಂಕೇತವಾಗಿದೆ. ಹೊಸ ತಲೆಮಾರಿಗೆ ಆತ್ಮವಿಶ್ವಾಸವನ್ನು ಬೋಧಿಸುತ್ತಾಳೆ. ಉದ್ಯೋಗಿ ಮಹಿಳೆ ನಮ್ಮ ದೇಶದ ಗೌರವವಾಗಿದ್ದಾಳೆ. ಅವಳ ಕುಟುಂಬದ ಬೆನ್ನೆಲುಬಾಗಿರುತ್ತಾಳೆ.

ಉದ್ಯೋಗಸ್ಥ ಮಹಿಳೆಯರಿಗೆ ಮಾಸಿಕ ರಜೆ

ಮಹಿಳೆಯರು ಋತುಚಕ್ರದ ಸಮಯದಲ್ಲಿ ದೈಹಿಕ ಮತ್ತು ಮಾನಸಿಕ ಅಸಹನೆ ಅನುಭವಿಸುತ್ತಾರೆ. ಈ ಸಂದರ್ಭದಲ್ಲಿ ವಿಶ್ರಾಂತಿ ಅತ್ಯಂತ ಅಗತ್ಯವಾಗುತ್ತದೆ. ಉದ್ಯೋಗ ಕ್ಷೇತ್ರದಲ್ಲಿಯೂ ಮಹಿಳೆಯರ ಈ ಅವಸ್ಥೆಗೆ ಸಹಕಾರ ನೀಡಬೇಕು. ಮಾಸಿಕ ರಜೆ ಎಂಬುದು ಮಹಿಳೆಯರ ಆರೋಗ್ಯ ಹಕ್ಕಿನ ಭಾಗವಾಗಿದೆ. ಭಾರತದಲ್ಲಿ ಕೆಲವು ರಾಜ್ಯ ಸರ್ಕಾರಗಳು ಈಗಾಗಲೇ ಈ ರಜೆ ಅನುಮತಿಸಿವೆ.

ದಿಗಂತ ವಿಶೇಷ


ಅಂತಾರಾಷ್ಟ್ರೀಯ ಮಹಿಳಾ ದಿನದ ಇತಿಹಾಸ

1908ರಲ್ಲಿ ಅಮೆರಿಕಾದ ನ್ಯೂಯಾರ್ಕ್ ನಲ್ಲಿ ಮಹಿಳೆಯರ ಹಕ್ಕುಗಳಿಗಾಗಿ ಪ್ರತಿಭಟನೆಗಳು ಪ್ರಾರಂಭವಾದವು. ಹೆಣ್ಣು ಮಕ್ಕಳ ಹಕ್ಕುಗಳಿಗಾಗಿ ಅನೇಕ ಪ್ರತಿಭಟನೆಗಳು ನಡೆದವು. ವಿಶ್ವಸಂಸ್ಥೆಯು 1975ರಿಂದ ಮಾರ್ಚ್ 8 ಅನ್ನು ಅಂತಾರಾಷ್ಟ್ರೀಯ ಮಹಿಳಾ ದಿನ ಎಂದು ಅಧಿಕೃತವಾಗಿ ಘೋಷಿಸಿತು. ಆ ದಿನದಂದು ಮಹಿಳೆಯರ ಸಾಧನೆಗಳನ್ನು ಸಂಭ್ರಮಿಸಲಾಗುತ್ತದೆ. ಈ ಆಚರಣೆಯ ಮೂಲಕ ಮಹಿಳಾ ಹಕ್ಕುಗಳನ್ನು ಬಲಪಡಿಸಿ ಸಮಾನತೆಯನ್ನು ಕಲ್ಪಿಸಿ ಕೊಡುವಲ್ಲಿ ಕಾನೂನು ವ್ಯವಸ್ಥೆಗಳನ್ನು ಉತ್ತೇಜಿಸಲು ಕರೆ ನೀಡಲಾಗುತ್ತದೆ. ಪ್ರತಿ ವರ್ಷವೂ ಇಂತಹ ಘೋಷವಾಕ್ಯಗಳು ಮಹಿಳೆಯರ ಹಕ್ಕುಗಳ ರಕ್ಷಣೆ, ಕಾನೂನು ನೆರವು, ಮತ್ತು ಸಮಾನ ಅವಶ್ಯಕತೆಗಳನ್ನು ಒದಗಿಸುವ ಜಾಗತಿಕ ಪ್ರಯತ್ನಗಳನ್ನು ಪ್ರತಿಬಿಂಬಿಸುತ್ತದೆ. ಇರಲಿ ಅಂತಾರಾಷ್ಟ್ರೀಯ ಆಚರಣೆಗಳು ಏನೇ ಇರಲಿ, ಪ್ರಪಂಚದಲ್ಲಿರುವ ಎಲ್ಲಾ ಒಳ್ಳೆಯ ವಿಷಯಗಳನ್ನು ಅರಿಸೋಣ, ಅರ್ಥೈಸಿಕೊಂಡು ಕೆಲವನ್ನು ಮಾತ್ರ ಪಾಲಿಸಿ ನಮ್ಮ ಸಂಸ್ಕೃತಿ ಹಾಗು ನಮ್ಮ ಸನಾತನ ಆಚರಣೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡೋಣ.

ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ । ಯತ್ರೈತಾಸ್ತು ನ ಪೂಜ್ಯಂತೇ ಸರ್ವಾಸ್ತತ್ರಾಫಲಾಃ ಕ್ರಿಯಾಃ ॥

ಮಹಿಳೆಯರಿಗೆ ಕಾನೂನು ಶಿಕ್ಷಣ ಅತ್ಯಗತ್ಯ

ಮಹಿಳಾ ದೌರ್ಜನ್ಯವು ಸಮಾಜದ ಗಂಭೀರ ಸಮಸ್ಯೆಯಾಗಿದೆ. ಇದು ಶಾರೀರಿಕ, ಮಾನಸಿಕ, ಸಾಮಾಜಿಕ ಹಾಗೂ ಆರ್ಥಿಕ ರೀತಿಯಲ್ಲಿಯೂ ಕಾಣಿಸಿಕೊಳ್ಳುತ್ತದೆ. ಮಹಿಳೆಯರು ಮನೆ, ಕೆಲಸದ ಸ್ಥಳ, ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಪಿತೃಸತ್ತಾತ್ಮಕ ಮನೋಭಾವನೆ ಇದರ ಪ್ರಮುಖ ಕಾರಣವಾಗಿದೆ. ಬಾಲ್ಯದಲ್ಲೇ ಹುಡುಗಿಯರ ಮೇಲೆ ಅನ್ಯಾಯ ನಡೆಯುವುದು ಕಂಡುಬರುತ್ತದೆ. ಶಿಕ್ಷಣದ ಕೊರತೆ ಮಹಿಳೆಯರ ಶಕ್ತಿಯನ್ನು ಹಿಂಸಿಸುತ್ತದೆ. ವರದಕ್ಷಿಣೆ, ಲೈಂಗಿಕ ಕಿರುಕುಳ, ಮಹಿಕೆಯರ ಮೇಲಿನ ದಬ್ಬಾಳಿಕೆ,ಇವು ಮಹಿಳಾ ದೌರ್ಜನ್ಯದ ರೂಪಗಳು. ಸಾಮಾಜಿಕ ಮಾಧ್ಯಮಗಳಲ್ಲಿಯೂ ಮಹಿಳೆಯರ ಮಾನಹಾನಿ ನಡೆಯುತ್ತಿದೆ. ಮಹಿಳೆಯರನ್ನು ದುರ್ಬಲರೆಂದು ನೋಡುವ ಮನೋಭಾವ ಬದಲಾಗಬೇಕಾಗಿದೆ. ಮಹಿಳೆಯರ ಹಕ್ಕುಗಳನ್ನು ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ. ಭಾರತದ ಸಂವಿಧಾನವು ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಿದೆ.



ಹೆಣ್ಣುಮಕ್ಕಳಿಗೆ ಆತ್ಮರಕ್ಷಣಾ ತರಬೇತಿ ದೊರಕಲಿ

ಮಹಿಳಾ ದೌರ್ಜನ್ಯವು ಕೇವಲ ಮಹಿಳೆಯರ ಸಮಸ್ಯೆಯಲ್ಲ, ಸಮಾಜದ ಸಮಸ್ಯೆ. ನ್ಯಾಯಾಂಗವು ತ್ವರಿತ ನ್ಯಾಯ ನೀಡುವುದು ಅಗತ್ಯ. Justice delayed is Justice denied" ಎಂಬಂತೆ ತಡವಾಗಿ ತೀರ್ಪು ನೀಡಿದರೆ ಪ್ರಯೋಜನವಿಲ್ಲ. ಮಹಿಳೆಯರ ಸಾಧನೆಗಳನ್ನು ಗುರುತಿಸಿ ಗೌರವಿಸಬೇಕು. ಪ್ರತಿ ಮನೆಯೂ ಮಹಿಳೆಯರ ಸುರಕ್ಷಿತ ಸ್ಥಳವಾಗಿರಬೇಕು. ಮಹಿಳೆಯರ ವಿರುದ್ಧದ ಹಿಂಸೆಗೆ ಶೂನ್ಯ ಸಹಿಷ್ಣುತೆ ಇರಬೇಕು. ಸಂಸ್ಕೃತಿಯ ಹೆಸರು ನೀಡಿ ದೌರ್ಜನ್ಯಕ್ಕೆ ಅವಕಾಶ ಕೊಡಬಾರದು. ಮಹಿಳೆಯರ ಗೌರವ ಕಾಪಾಡಿದರೆ ಸಮಾಜ ನಿಜವಾದ ಪ್ರಗತಿಯನ್ನು ಸಾಧಿಸುತ್ತದೆ.

ಕಾನೂನು ಸಮಾಜದಲ್ಲಿ ಶಾಂತಿ, ನ್ಯಾಯ ಹಾಗೂ ಸಮಾನತೆಯನ್ನು ಕಾಪಾಡಲು ನಿರ್ಮಿಸಲಾದ ವ್ಯವಸ್ಥೆ: ಕಾನೂನಿನ ಮೂಲ ಉದ್ದೇಶ ಪ್ರಜೆಗಳ ಹಕ್ಕುಗಳನ್ನು ರಕ್ಷಿಸುವುದು. ಇದು ದುರ್ಬಲರನ್ನು ಬಲಿಷ್ಠರಿಂದ ರಕ್ಷಿಸುತ್ತದೆ. ಕಾನೂನು ಸತ್ಯ ಮತ್ತು ನ್ಯಾಯದ ಸಾಧನವಾಗಿದೆ. ನಾಗರಿಕರು ಕಾನೂನನ್ನು ಪಾಲಿಸಿದರೆ ಸಮಾಜದಲ್ಲಿ ಶಿಸ್ತು ನೆಲೆಸುತ್ತದೆ. ಕಾನೂನು ಪ್ರತಿ ವ್ಯಕ್ತಿಗೂ ಸಮಾನ ಅವಕಾಶವನ್ನು ನೀಡುತ್ತದೆ. ನ್ಯಾಯಾಂಗವು ಕಾನೂನಿನ ಜಾರಿಗೆ ಪ್ರಮುಖ ಪಾತ್ರ ವಹಿಸುತ್ತದೆ. ಕಾನೂನಿನ ಸಹಾಯದಿಂದ ಅಪರಾಧಿಗಳಿಗೆ ಶಿಕ್ಷೆ ನೀಡಲಾಗುತ್ತದೆ. ಕಾನೂನು ಅಕ್ರಮ ಚಟುವಟಿಕೆಗಳನ್ನು ತಡೆಯುತ್ತದೆ. ಕಾನೂನು ಪ್ರಜೆಗಳಲ್ಲಿ ಹೊಣೆಗಾರಿಕೆಯನ್ನು ಬೆಳೆಸುತ್ತದೆ.ಆದರೆ, ಕೆಲವು ವೇಳೆ ಕಾನೂನಿನ ದುರುಪಯೋಗವೂ ನಡೆಯುತ್ತದೆ. ಕೆಲವು ಜನ ಕಾನೂನಿನ ಲೋಪದೋಷಗಳನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸುತ್ತಾರೆ. ಸುಳ್ಳು ದೂರುಗಳು, ನಕಲಿ ದಾಖಲೆಗಳು ಮುಂತಾದವುಗಳಿಂದ ಕಾನೂನಿನ ಅರ್ಥವನ್ನು ವಿಕೃತಗೊಳಿಸುತ್ತಾರೆ. ಕೆಲವು ರಾಜಕೀಯ ನಾಯಕರೂ ಕಾನೂನನ್ನು ತಮ್ಮ ಲಾಭಕ್ಕೆ ಬಳಸುತ್ತಾರೆ. ಕಾನೂನು ಸದುಪಯೋಗಕ್ಕಿಂತ ದುರುಪಯೋಗವಾಗುವಾಗ ನಿರಪರಾಧಿಗಳು ಶಿಕ್ಷೆ ಅನುಭವಿಸುತ್ತಾರೆ. ಕೆಲವೊಮ್ಮೆ ಪೊಲೀಸರ ಅಥವಾ ಅಧಿಕಾರಿಗಳ ಅಜಾಗರೂಕತೆ ಕಾನೂನಿನ ವಿಶ್ವಾಸ ಹಾಳುಮಾಡುತ್ತದೆ. ಕಾನೂನಿನ ನಿಧಾನ ಪ್ರಕ್ರಿಯೆಯಿಂದ ಅನ್ಯಾಯ ಅನುಭವಿಸುವವರು ಹೆಚ್ಚಾಗುತ್ತಾರೆ.



ಸ್ತ್ರೀ....... ಎಂದರೆ ಅಷ್ಟೇ ಸಾಕೆ. ನಿನಗೆ ಬೇರೆ ಹೆಸರು ಬೇಕೇ. ಡಾ . ಜಿ ಎಸ್ ಶಿವರುದ್ರಪ್ಪನವರು ಸ್ತ್ರೀಯನ್ನು ಪ್ರಕೃತಿಗೆ ಹೋಲಿಸಿ ಮಹಿಳೆಯ ತ್ಯಾಗ, ಪ್ರೀತಿ ಮತ್ತು ಸೃಷ್ಟಿಯ ಸಾಮರ್ಥ್ಯ, ಆಕಾಶದ ಬೆಳಕು, ಹಸಿರು ಬೆಟ್ಟ, ಮತ್ತು ದೀಪದ ಬೆಳಕಿಗೆ ಹೋಲಿಸಿ ವರ್ಣಿಸಿದ್ದಾರೆ. ಸ್ತ್ರೀಯನ್ನು ತ್ಯಾಗಮಯಿಯಾದ ಹೆಣ್ಣು, ಬಾಂಧವ್ಯದ ಸಂಕೇತ, ಪ್ರೀತಿಯ ಆಗರ, ಆಕೆ ಪ್ರಕೃತಿ ಮತ್ತು ಪ್ರೀತಿಯ ಮೂಲವಾಗಿದ್ದಾಳೆ ಎಂದು ಕವಿ ವರ್ಣಿಸಿದ್ದಾರೆ.

ಸ್ತ್ರೀ.....ಎಂದರೆ ಅಷ್ಟೇ ಸಾಕೆ? ನಿನಗೆ ಬೇರೆ ಹೆಸರು ಬೇಕೇ?

ಸ್ತ್ರೀ ಎಂದರೆ ಮಾತೃತ್ವ



ಶೋಭಾ ನಂದ.
ಲೇಖಕಿ ಮತ್ತು ಅನುವಾದಕಿ

ಸ್ತ್ರೀ ಮತ್ತು ಪುರುಷ ಎಂಬುದು ವ್ಯವಹಾರಿಕ ಭೇದವಷ್ಟೇ ಆತ್ಮಕ್ಕೆ ಯಾವುದೇ ಲಿಂಗಭೇದವಿಲ್ಲ, ಮನುಷ್ಯತ್ವ ಒಂದೇ ಆದರೂ ಸ್ತ್ರೀ ಮತ್ತು ಪುರುಷ ಎಂಬುದು ಎರಡು ಮುಖ್ಯ ಭೇದಗಳು. ಕಾರ್ಯರೂಪಕ್ಕೆ ಬರುವಾಗ ನಮ್ಮ ದೇಹ ಹಾಗೂ ಪಾತ್ರಗಳು ವ್ಯತ್ಯಾಸವಾಗುತ್ತದೆ. ಸ್ತ್ರೀ ಮತ್ತು ಪುರುಷ ಅವರದ್ದೇ ವೈಶಿಷ್ಟ್ಯ ಇರುತ್ತದೆ. ಅನ್ಯರು ಸ್ತ್ರೀಯನ್ನು ಒಂದು ಭೋಗ ವಸ್ತುವಾಗಿ ಕಂಡರೂ ನಮ್ಮ ಸನಾತನದಲ್ಲಿ ಆ ಭಾವನೆ ಇಲ್ಲ. ಭಗವಂತನು ಅವನ ಲೀಲೆಯಲ್ಲಿ ನಾನಾ ನಾಮಗಳನ್ನು ರೂಪಗಳನ್ನು ಸೃಷ್ಟಿ ಮಾಡಿದ್ದಾನೆ. ಅದರಲ್ಲಿ ಪ್ರಮುಖವಾದದ್ದು ಸ್ತ್ರೀ ಮತ್ತು ಪುರುಷ ಎಂಬುದು. ಮಹಿಳೆಯರಿಗೆ ಶಿಕ್ಷಣ ಮತ್ತು ಗೌರವ ನೀಡದ ಹೊರತು ಜಗತ್ತಿನ ಕಲ್ಯಾಣ ಸಾಧ್ಯವಿಲ್ಲ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ನಮ್ಮ ಸನಾತನ ಧರ್ಮದಲ್ಲಿ ಸ್ತ್ರೀ ಗೆ ಅತ್ಯುತ್ತಮವಾದ ಪೂಜ್ಯ ಸ್ಥಾನವನ್ನು ನೀಡಿದ್ದಾರೆ. ಅದೇ ಮಾತೃತ್ವ. ಸ್ತ್ರೀಯನ್ನು ಬದಲಾಗುವ ಪ್ರಕೃತಿಗೆ ಹೋಲಿಸಿ ಅವಳ ಹುಮ್ಮಸ್ಸನ್ನು ಹೆಚ್ಚು ಮಾಡಿದ್ದಾರೆ. ಸ್ತ್ರೀ ಬಹುಕಾರ್ಯಕ ಕೆಲಸಗಳನ್ನು ಚೆನ್ನಾಗಿ ನಿಭಾಯಿಸುತ್ತಾಳೆ. ಮಕ್ಕಳ ಪಾಲನೆ ಪೋಷಣೆಯಲ್ಲದೆ ಅವರ ಸರ್ವಾಂಗೀಣ ಬೆಳವಣಿಗೆ ಬೇಕಾದ ಎಲ್ಲಾ ಆಯಾಮಗಳನ್ನು ಗರ್ಭಸಂಸ್ಕಾರದಲ್ಲೇ ತೊಡಗಿಸಿಕೊಳ್ಳುತ್ತಾಳೆ. ಒಮ್ಮೆ ಒಬ್ಬ ಮಹಿಳೆ ತನ್ನ 4 ವರ್ಷದ ಮಗುವನ್ನು ಕರೆದುಕೊಂಡು ಸ್ವಾಮಿ ವಿವೇಕಾನಂದರ ಬಳಿ ಹೋಗಿದ್ದಳು. ತನ್ನ ಮಗನಿಗೆ ವಿದ್ಯಾಭ್ಯಾಸ ಪ್ರಾರಂಭಿಸಬೇಕು , ಅದರ ಜವಾಬ್ದಾರಿಯನ್ನು ಸ್ವಾಮಿ ವಿವೇಕಾನಂದರೇ ವಹಿಸಬೇಕು ಎಂದು ವಿನಂತಿಸಿದಳು. ಆಗ ವಿವೇಕಾನಂದರುಹೀಗೆಂದರು, -ಈಗಾಗಲೇ ನೀವು 4ವರ್ಷ 9ತಿಂಗಳು ತಡವಾಗಿ ಬಂದಿದ್ದೀರಿ ತಾಯಿ . ಇದರ ಅರ್ಥ ಮಗುವಿಗೆಗರ್ಭ ಸಂಸ್ಕಾರದಿಂದಲೇ ಅವರ ವಿದ್ಯಾಭ್ಯಾಸ ಪ್ರಾರಂಭವಾಗುತ್ತದೆ ಎಂದು ಆ ತಾಯಿಗೆ ಅರ್ಥೈಸಿದರು.



ಭಾರತೀಯ ಸಂಸ್ಕೃತಿಯಲ್ಲಿ ನಾರಿಯರ ಪಾತ್ರ

ಪ್ರಾಚೀನ ಭಾರತದಲ್ಲಿ ಮಹಿಳಾ ವಿದ್ವಾಂಸರನ್ನು ಋಷಿಕರು ಅಥವಾ ಬ್ರಹ್ಮವಾದಿನಿಯರು ಎಂದು ಕರೆಯುತ್ತಿದ್ದರು. ಇವರು ವೇದ ಮಂತ್ರಗಳನ್ನು ರಚಿಸುತ್ತಿದ್ದರು. ಪ್ರಾಚೀನ ಭಾರತದಲ್ಲಿ ಮಹಿಳೆಯರಿಗೆ ಗೌರವ ಸ್ಥಾನವಿತ್ತು. ಶಿಕ್ಷಣ ಸಾಹಿತ್ಯ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಮಹಿಳೆಯರು ಯಜ್ಞ, ಹೋಮ ಸಂವಾದಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಜ್ಞಾನ,ಧೈರ್ಯ, ಹಾಗು ಕಲೆಗಳಲ್ಲಿ ನಿಪುಣರಾಗಿದ್ದರು. ಪೌರಾಣಿಕ ಕಾಲದಲ್ಲಿ ಸೀತಾ, ಸಾವಿತ್ರಿ, ದ್ರೌಪದಿ,ತಾರ,ಮಂಡೋದರಿ ಮುಂತಾದವರು ಆದರ್ಶ ಮಹಿಳೆಯರಾಗಿ ನಡೆದುಕೊಂಡರು. ಅನೇಕ ಮಹಿಳೆಯರು ರಾಜಕೀಯ ಹಾಗೂ ಯುದ್ಧ ಕ್ಷೇತ್ರದಲ್ಲಿ ಚಾಣಾಕ್ಷರಗಿದ್ದರು. ಉದಾಹರಣೆಗೆ ರಾಣಿ ಅಬ್ಬಕ್ಕ, ಕಿತ್ತೂರು ಚೆನ್ನಮ್ಮ, ರಾಣಿ ಚೆನ್ನಭೈರಾದೇವಿ, ಹಾಗೂ ಒನಕೆ ಓಬವ್ವ, ಪ್ರಾಚೀನ ಕಾಲದ ಮಹಿಳೆಯರಲ್ಲಿ ಧರ್ಮ ನಿಷ್ಠೆ ಮತ್ತು ತ್ಯಾಗದ ಗುಣಗಳು ತುಂಬಿದ್ದವು. ಮಹಿಳೆಯರು ಸಮಾಜದ ನೈತಿಕತೆ ಮತ್ತು ಸಂಸ್ಕೃತಿಯ ಸಂರಕ್ಷಕರಾಗಿದ್ದರು ಅವರ ಆ ನಡವಳಿಕೆ ಹಾಗೂ ಅರ್ಥಪೂರ್ಣ ಪಾತ್ರದಿಂದ ಭಾರತೀಯ ಸಂಸ್ಕೃತಿಯ ಮಹತ್ವ ಹೆಚ್ಚಾಗಿದೆ. ಗೃಹ ಕಾರ್ಯಗಳಲ್ಲದೆ ಪ್ರಾಚೀನ ಕಾಲದ ಮಹಿಳೆಯರಲ್ಲಿ ಧರ್ಮ ನಿಷ್ಠೆ ಮತ್ತು ತ್ಯಾಗದ ಗುಣಗಳು ತುಂಬಿದ್ದವು. ಮಹಿಳೆಯರು ಸಮಾಜದ ನೈತಿಕತೆ ಮತ್ತು ಸಂಸ್ಕೃತಿಯ ಸಂರಕ್ಷಕರಾಗಿದ್ದರು ಅವರ ಆ ನಡವಳಿಕೆ ಹಾಗೂ ಅರ್ಥಪೂರ್ಣ ಪಾತ್ರದಿಂದ ಭಾರತೀಯ ಸಂಸ್ಕೃತಿಯ ಮಹತ್ವ ಹೆಚ್ಚಾಗಿದೆ ಗೃಹ ಕಾರ್ಯದರ್ಶಿ ಅಲ್ಲದೆ ಜ್ಞಾನಾರ್ಜನೆಯಲ್ಲಿಯೂ ತೊಡಗಿಸಿಕೊಂಡಿದ್ದರು ಸಂಗೀತ ಸಾಹಿತ್ಯಗಳಲ್ಲಿ ಪರಿಣತರಾಗಿದ್ದರು. ಅನೇಕ ಋಷಿ ಪತ್ನಿಯರು ತಮ್ಮ ಪತಿಯರ ಜತೆ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಆಗಿನ ಕಾಲದಲ್ಲಿ ಮಹಿಳೆಯರನ್ನು ಗೃಹಲಕ್ಷ್ಮಿ ಎಂದು ಗೌರವಿಸುತ್ತಿದ್ದರು. ಮಹಿಳೆಯರು ಮಕ್ಕಳಿಗೆ ನೈತಿಕತೆ ಮತ್ತು ಧರ್ಮದ ಪಾಠ ಕಲಿಸುತ್ತಿದ್ದರು . ವೈದ್ಯಕೀಯ ಹಾಗೂ ಆಯುರ್ವೇದ ಕ್ಷೇತ್ರಗಳಲ್ಲಿಯೂ ಪರಿಣತರಾಗಿದ್ದರು. ತ್ಯಾಗಶೌರ್ಯ ಮತ್ತು ನಿಷ್ಠೆಯ ಉದಾಹರಣೆಗಳು ನಮಗೆ ಸಿಗುತ್ತವೆ. ವೇದಗಳ ಅಧ್ಯಯನಗಳಲ್ಲಿ ಮಹಿಳೆಯರ ಬೌದ್ಧಿಕ ಶಕ್ತಿಯ ಉಲ್ಲೇಖಗಳು ಕಾಣುತ್ತವೆ. ಪ್ರಾಚೀನ ಮಹಿಳೆಯರು ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದಾರೆ ಈ ಕಾರಣದಿಂದಾಗಿ ಭಾರತೀಯ ಸಂಸ್ಕೃತಿ ಮತ್ತು ಪರಂಪರೆ ಇಂದು ಜೀವಂತವಾಗಿದೆ.

ಮಾಸಿಕ ರಜೆಯಿಂದ ಮಾನಸಿಕ ಶಾಂತಿ

ಹಲವಾರು ಖಾಸಗಿ ಸಂಸ್ಥೆಗಳು ಸಹ ಮಹಿಳಾ ಸಿಬ್ಬಂದಿಗೆ ಮಾಸಿಕ ರಜೆ ನೀಡಲು ಪ್ರಾರಂಭಿಸಿವೆ. ಈ ರಜೆಯ ಉದ್ದೇಶ ಮಹಿಳೆಯರ ಆರೋಗ್ಯ ಮತ್ತು ಗೌರವ ಕಾಪಾಡುವುದು. ಇಂತಹ ಸಮಯದಲ್ಲಿ ಮಹಿಳೆಯರ ದೇಹದಲ್ಲಿ ಹಾರ್ಮೋನ್ ಬದಲಾವಣೆಗಲಾಗುತ್ತವೆ. ಬದಲಾವಣೆಗಳಿಂದ ತಲೆನೋವು, ಹೊಟ್ಟೆನೋವು ಇತ್ಯಾದಿ ಸಮಸ್ಯೆಗಳು ಕಾಣಿಸಬಹುದು. ಕೆಲಸದ ಒತ್ತಡದಿಂದ ಆರೋಗ್ಯ ಹದಗೆಡುವ ಸಾಧ್ಯತೆ ಇರುತ್ತದೆ.ಆದ್ದರಿಂದ ಮಹಿಳೆಯರು ವಿಶ್ರಾಂತಿ ಪಡೆದರೆ ಅವರ ಕಾರ್ಯಕ್ಷಮತೆ ಹೆಚ್ಚುತ್ತದೆ. ಮಾಸಿಕ ರಜೆಯು ಮಹಿಳೆಯರಿಗೆ ಮಾನಸಿಕ ಶಾಂತಿಯನ್ನು ನೀಡುತ್ತದೆ. ಈ ರಜೆ ಮಹಿಳೆಯರ ಹಕ್ಕು ಎಂದು ಸಮಾಜ ಗುರುತಿಸಬೇಕು. ಉದ್ಯೋಗದಾತರು ಇದನ್ನು ಸಹಾನುಭೂತಿಯ ದೃಷ್ಟಿಯಿಂದ ಅಲ್ಲದೆ ಮಾನವೀಯತೆಯ ದೃಷ್ಟಿಯಿಂದ ನೋಡಬೇಕು. ರಜೆಯು ಸಂಬಳ ಕಡಿತವಿಲ್ಲದೆ ನೀಡಲ್ಪಡುವಂತಾಗಬೇಕು. ಮಹಿಳೆಯರು ನಾಚಿಕೆಪಡುವ ಅಗತ್ಯವಿಲ್ಲ? ಇದು ನೈಸರ್ಗಿಕ ಪ್ರಕ್ರಿಯೆ. ಕೆಲಸದ ಸ್ಥಳದಲ್ಲಿ ಈ ವಿಷಯದ ಬಗ್ಗೆ ತೆರೆದ ಮನಸ್ಸಿನಿಂದ ಚರ್ಚಿಸಬೇಕು. ಪುರುಷ ಸಹೋದ್ಯೋಗಿಗಳೂ ಸಹ ಮಹಿಳೆಯರ ಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ಇದು ಮಹಿಳೆಯರ ಕಾರ್ಯಸ್ಥಳದಲ್ಲಿ ಸಮಾನ ಅವಕಾಶಗಳನ್ನು ಒದಗಿಸುತ್ತದೆ.ಮಾಸಿಕ ರಜೆಯು ಉದ್ಯೋಗದಲ್ಲಿ ಮಹಿಳೆಯರ ಉಳಿವನ್ನು ಹೆಚ್ಚಿಸುತ್ತದೆ. ಇದರಿಂದ ಮಹಿಳೆಯರ ಮೇಲೆ ಇರುವ ಒತ್ತಡ ಕಡಿಮೆಯಾಗುತ್ತದೆ. ಸರ್ಕಾರ ಮತ್ತು ಖಾಸಗಿ ಕ್ಷೇತ್ರಗಳು ಈ ನೀತಿಯನ್ನು ಕಡ್ಡಾಯಗೊಳಿಸಬೇಕು.ಪ್ರತಿ ಸಂಸ್ಥೆಯು ಮಾಸಿಕ ರಜೆ ನೀತಿಯನ್ನು ಸ್ಪಷ್ಟವಾಗಿ ಪ್ರಕಟಿಸಬೇಕು. ಮಾಸಿಕ ರಜೆಯು ಕೇವಲ ವಿಶ್ರಾಂತಿಗಾಗಿ ಅಲ್ಲ, ಗೌರವದ ಸಂಕೇತವೂ ಆಗಿದೆ. ಇದು ಸಮಾನತೆ, ಗೌರವ ಮತ್ತು ಆರಾಮದ ನಿಜವಾದ ಸೂಚಕವಾಗಿದೆ.

ಆದ್ದರಿಂದ "ಮಾಸಿಕ ರಜೆ"?
ಮಹಿಳೆಯರ ಆರೋಗ್ಯ,
ಮಾನವೀಯ ಹಕ್ಕಿಗೆ ಗೌರವ!



ವಿಶ್ವಸಂಸ್ಥೆಯ ಪ್ರಕಾರ ಈ ವರ್ಷ ಅಂದರೆ 2026ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಘೋಷವಾಕ್ಯವು ಪಡೆಯಲು ನೀಡಿ (ಗೀವ್ ಟು ಗೈನ್) ಎಂದಾಗಿದೆ.

ಮಹಿಳೆಯರಿಗೆ ಶೌಚಾಲಯ ವ್ಯವಸ್ಥೆ ಅತ್ಯಂತ ಅಗತ್ಯ



ಶೌಚಾಲಯಗಳ ಕೊರತೆಯಿಂದ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ಶೌಚಾಲಯಗಳ ನಿರ್ಮಾಣಕ್ಕೆ ಆದ್ಯತೆ ನೀಡಬೇಕು. ಸ್ವಚ್ಛ ಹಾಗೂ ಸುರಕ್ಷಿತ ಶೌಚಾಲಯಗಳಿಲ್ಲದಿದ್ದರೆ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ. ಇತ್ತೀಚಿನ ದಿನಗಳಲ್ಲಿ ಪ್ರವಾಸ ಮುಗಿಸಿ ಬಂದಂತಹ ಅನೇಕ ಮಹಿಳೆಯರಿಗೆ ಮೂತ್ರನಾಳದ ಸೋಂಕು ಉಂಟಾಗುತ್ತಿದೆ. ಪ್ರವಾಸಿ ತಾಣಗಳಲ್ಲಿ ಈ ಸಮಸ್ಯೆ ಹೆಚ್ಚು ಕಂಡುಬರುತ್ತದೆ. ಮಹಿಳೆಯರ ಗೌಪ್ಯತೆ ಮತ್ತು ಸುರಕ್ಷತೆಗಾಗಿ ಪ್ರತ್ಯೇಕ ಶೌಚಾಲಯದ ಅಗತ್ಯವಿದೆ . ಶೌಚಾಲಯಗಳಲ್ಲಿ ನೀರು, ಸಾಬೂನು ಮತ್ತು ಕಸದ ನಿರ್ವಹಣೆ ಸರಿಯಾಗಿ ಇರಬೇಕು.

ಸುಪೋಷಿತ ಮಹಿಳೆ

ಸುಪೋಷಿತ ಮಹಿಳೆ ಸಮಾಜದ ಆರೋಗ್ಯದ ಮೂಲಸ್ತಂಭಳು. ಆಕೆಯ ಶಾರೀರಿಕ ಮತ್ತು ಮಾನಸಿಕ ಆರೋಗ್ಯವು ಕುಟುಂಬದ ಸುಖಕ್ಕೆ ಕಾರಣವಾಗುತ್ತದೆ.ಪೌಷ್ಟಿಕ ಆಹಾರ ಸೇವನೆಯಿಂದ ಮಹಿಳೆಯ ಶಕ್ತಿ ಮತ್ತು ತಾಳ್ಮೆ ಹೆಚ್ಚುತ್ತದೆ. ಗರ್ಭಿಣಿಯರು ಮತ್ತು ತಾಯಂದಿರಿಗೆ ವಿಶೇಷ ಪೋಷಣೆಯ ಅಗತ್ಯವಿದೆ. ಸರಿಯಾದ ಆಹಾರ, ವ್ಯಾಯಾಮ ಮತ್ತು ವಿಶ್ರಾಂತಿ ಸುಪೋಷಣೆಗೆ ಅಗತ್ಯ. ಮಹಿಳೆಯ ಪೋಷಣೆ ರಾಷ್ಟ್ರದ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ಸರ್ಕಾರದ ಪೌಷ್ಟಿಕ ಆಹಾರ ಯೋಜನೆಗಳು ಮಹಿಳೆಯರ ಆರೋಗ್ಯ ಸುಧಾರಿಸುತ್ತವೆ. ಅನಿಮಿಯಾ ಮುಂತಾದ ರೋಗಗಳಿಂದ ತಪ್ಪಿಸಿಕೊಳ್ಳಲು ಪೌಷ್ಟಿಕತೆ ಮುಖ್ಯ. ಅರಿವು ಮತ್ತು ಶಿಕ್ಷಣದಿಂದ ಮಹಿಳೆಯರು ತಮ್ಮ ಆರೋಗ್ಯ ಕಾಪಾಡಿಕೊಳ್ಳಬಹುದು.ಸುಪೋಷಿತ ಮಹಿಳೆ ಎಂದರೆ, ಶಕ್ತಿಶಾಲಿ, ಆತ್ಮವಿಶ್ವಾಸಿ ಮತ್ತು ಸಂತುಷ್ಟ ಜೀವನ ನಡೆಸುವವಳು. ಈ ನಿಟ್ಟಿನಲ್ಲಿ ಎಲ್ಲಾ ಮಹಿಳೆಯರು ತಮ್ಮ ತಮ್ಮ ವಯಸ್ಸಿಗೆ ಅನುಗುಣವಾಗಿ ಆಹಾರ ಸೇವಿಸಿ ಸದೃಢರಾಗಿರಬೇಕು. ಇದರಿಂದ ತಮ್ಮ ಪರಿವಾರಕ್ಕೆ ಮತ್ತು ದೇಶಕ್ಕೆ ಸಲ್ಲಿಸುವ ಮಹಾನ್ ಸೇವೆ ಎನಿಸಿಕೊಳ್ಳುತ್ತದೆ.

ಕಾನೂನು ಶಸ್ತ್ರವಾಗಿ ಅಲ್ಲ, ರಕ್ಷಣೆ ಸಾಧನವಾಗಿ ಬಳಕೆಯಾಗಲಿ

ಕಾನೂನು ಎಲ್ಲರಿಗೂ ಸಮಾನವಾಗಿ ಅನ್ವಯವಾಗಬೇಕು.ಕಾನೂನಿನ ಜ್ಞಾನ ಪ್ರತಿಯೊಬ್ಬ ನಾಗರಿಕನಿಗೂ ಅಗತ್ಯ. ಪ್ರಜೆಗಳು ತಮ್ಮ ಹಕ್ಕು ಮತ್ತು ಕರ್ತವ್ಯಗಳನ್ನು ತಿಳಿದಿರಬೇಕು. ಕಾನೂನಿನ ಸರಿಯಾದ ಉಪಯೋಗದಿಂದ ನ್ಯಾಯ ಸಮಾಜದಲ್ಲಿ ಬೆಳೆಯುತ್ತದೆ. ಕಾನೂನಿನ ದುರುಪಯೋಗವನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಅಗತ್ಯ. ನ್ಯಾಯಾಂಗ ವ್ಯವಸ್ಥೆಯ ಪಾರದರ್ಶಕತೆ ಕಾನೂನಿನ ಗೌರವವನ್ನು ಹೆಚ್ಚಿಸುತ್ತದೆ. ಮಾಧ್ಯಮ ಮತ್ತು ಶಿಕ್ಷಣ ವ್ಯವಸ್ಥೆಯು ಕಾನೂನು ಅರಿವು ಮೂಡಿಸಬೇಕು. ಕಾನೂನನ್ನು ಶಸ್ತ್ರವಾಗಿ ಅಲ್ಲ, ರಕ್ಷಣೆಯ ಸಾಧನವಾಗಿ ಬಳಸಬೇಕು. ಸತ್ಯ, ನೀತಿ, ಧರ್ಮ ? ಇವುಗಳ ಮೇಲೆ ಕಾನೂನು ಆಧಾರವಾಗಿರಬೇಕು. ಕಾನೂನಿನ ಸದುಪಯೋಗದಿಂದ ಮಾತ್ರ ದೇಶದ ಪ್ರಗತಿ ಮತ್ತು ನ್ಯಾಯಯುತ ಸಮಾಜ ಸಾಧ್ಯ.




ಶಿಕ್ಷಣವೇ ದೌರ್ಜನ್ಯ ನಿವಾರಣೆಯ ಮೊದಲ ಹೆಜ್ಜೆ

ಗೃಹ ಹಿಂಸೆ ವಿರೋಧಿ ಕಾಯ್ದೆ ಮಹಿಳೆಯರಿಗಾಗಿ ಒಂದು ಶಕ್ತಿ ಆಗಿದೆ. ಮಹಿಳಾ ಶಿಕ್ಷಣವೇ ದೌರ್ಜನ್ಯ ನಿವಾರಣೆಯ ಮೊದಲ ಹೆಜ್ಜೆ. ಮಹಿಳೆಯರು ಆತ್ಮವಿಶ್ವಾಸದಿಂದ ಬದುಕಬೇಕಾಗಿದೆ. ಕುಟುಂಬದಿಂದಲೇ ಮಹಿಳೆಯರಿಗೆ ಗೌರವ ಕಲಿಸಬೇಕು. ಸಮಾಜದಲ್ಲಿ ಲಿಂಗ ಸಮಾನತೆ ಬೆಳೆಸುವುದು ಅತ್ಯಾವಶ್ಯಕ. ಮಹಿಳೆಯರ ಸುರಕ್ಷತೆಗೆ ಕಾನೂನುಗಳು ಸಾಕಷ್ಟಿವೆ, ಆದರೆ ಜಾಗೃತಿಯ ಅಗತ್ಯವಿದೆ. ಮಹಿಳಾ ಸಬಲೀಕರಣದಿಂದ ದೌರ್ಜನ್ಯ ಕಡಿಮೆಯಾಗಬಹುದು. ಉದ್ಯೋಗಸ್ತ ಮಹಿಳೆಯರು ಕೆಲಸದ ಸ್ಥಳಗಳಲ್ಲಿ ಸುರಕ್ಷಿತ ವಾತಾವರಣ ಪಡೆಯಬೇಕು. ಪುರುಷರ ಮನೋಭಾವ ಬದಲಾದರೆ ದೌರ್ಜನ್ಯ ತಡೆಯಬಹುದು. ಮಾಧ್ಯಮಗಳು ಮಹಿಳೆಯರ ಗೌರವ ಕಾಪಾಡುವಲ್ಲಿ ಪಾತ್ರವಹಿಸಬೇಕು.



ಪ್ರವಾಸಿಗರಿಗೆ ಸ್ವಚ್ಛತೆಯ ಕುರಿತು ಜಾಗೃತಿ ಮೂಡಿಸುವುದು ಮುಖ್ಯ

ಶೌಚಾಲಯಗಳ ನಿರ್ವಹಣೆಗೆ ಸ್ಥಳೀಯ ಮಹಿಳಾ ಸ್ವಸಹಾಯ ಸಂಘಗಳ ನೆರವು ಪಡೆಯಬಹುದು. ಶೌಚಾಲಯಗಳ ಶುದ್ಧತೆ ಕಾಪಾಡುವ ಸಿಬ್ಬಂದಿ ನೇಮಕ ಮಾಡಬೇಕು. ಮಹಿಳೆಯರಿಗೆ ಶೌಚಾಲಯ ಸೌಲಭ್ಯ ಒದಗಿಸುವುದು ಅವರ ಹಕ್ಕಾಗಿದೆ. ಅನೇಕ ತಾಣಗಳಲ್ಲಿ ಪೇಡ್ ಶೌಚಾಲಯಗಳು ಇದ್ದರೂ ಅವು ಎಲ್ಲೆಡೆ ಲಭ್ಯವಿಲ್ಲ. ಸರ್ಕಾರದ ಸ್ವಚ್ಛ ಭಾರತ್ ಅಭಿಯಾನ ಈ ಸಮಸ್ಯೆ ಪರಿಹಾರಕ್ಕೆ ಸಹಾಯಕವಾಗಿದೆ. ಪ್ರವಾಸೋದ್ಯಮ ಇಲಾಖೆಯು ಹೊಸ ತಾಣಗಳ ಅಭಿವೃದ್ಧಿಯಲ್ಲಿ ಶೌಚಾಲಯ ವ್ಯವಸ್ಥೆಯನ್ನು ಮಾಡಬೇಕು. ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ಸಿಸಿಟಿವಿ ಹಾಗೂ ಬೆಳಕಿನ ವ್ಯವಸ್ಥೆಯೂ ಇರಬೇಕು. ಮಕ್ಕಳೊಂದಿಗೆ ಪ್ರಯಾಣಿಸುವ ಮಹಿಳೆಯರಿಗೆ ವಿಶ್ರಾಂತಿ ಕೊಠಡಿಗಳೂ ಉಪಯುಕ್ತ. ಮಹಿಳಾ ಶೌಚಾಲಯಗಳ ಸಂಖ್ಯೆ ಹೆಚ್ಚಿಸುವ ಮೂಲಕ ಮಹಿಳಾ ಪ್ರವಾಸಿಗರ ಸಂಖ್ಯೆಯೂ ಹೆಚ್ಚುತ್ತದೆ. ಶೌಚಾಲಯಗಳಲ್ಲಿ ಸ್ವಚ್ಛತೆ ಕಾಪಾಡುವುದು ಆರೋಗ್ಯದ ದೃಷ್ಟಿಯಿಂದ ಮುಖ್ಯ. ಶೌಚಾಲಯ ವ್ಯವಸ್ಥೆ ಸುಧಾರಿಸಿದರೆ ಪ್ರವಾಸಿ ತಾಣದ ಚಿತ್ರಣ ಕೂಡ ಉತ್ತಮವಾಗುತ್ತದೆ. ಸ್ವಚ್ಛ, ಸುರಕ್ಷಿತ ಮತ್ತು ಗೌಪ್ಯ ಶೌಚಾಲಯ ವ್ಯವಸ್ಥೆ ಮಹಿಳೆಯರ ಗೌರವದ ಪ್ರತೀಕವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರಿ ಸಿಬ್ಬಂದಿಗಳು ಸಹಕರಿಸಿ ಮಹಿಕೆಯರಿಗೆ ಶೌಚಾಲಯದ ವ್ಯವಸ್ಥೆ ಹಾಗೆ ಈಗಾಗಲೇ ಇರುವ ಶೌಚಾಲಯಗಳ ಸ್ವಚ್ಛತೆ ಕಾಪಾಡುವಲ್ಲಿ ಸಹಕರಿಬೇಕು. ರಾಜ್ಯ ಹಾಗು ಕೇಂದ್ರ ಸರ್ಕಾರವು, ಸ್ಥಳೀಯರು ಹಾಗು ಜನ ಪ್ರತಿನಿಧಿಗಳು ಇದರ ಬಗ್ಗೆ ಹೆಚ್ಚು ಪ್ರಾಶಸ್ತ್ಯ ನೀಡಬೇಕು. ಮಹಿಳೆಯರ ಆರೋಗ್ಯದ ದೃಷ್ಟಿಯಿಂದ ಈ ಲೇಖನಿಯ ಧ್ವನಿಯು ಎಲ್ಲರಿಗೂ ತಲುಪುವುದು ಎಂಬ ಒಂದು ಸಣ್ಣ ಆಶಯ.



ಕಿರುಸುದ್ದಿ



ಲಕ್ಷ್ಮೇಶ್ವರ: ಹೋಳಿ ಹಬ್ಬ (ರಂಗಪಂಚಮಿ) ಆಪರೇಷನ್ ಸಿಂಧೂರ ಹಾಗೂ ಭಾರತ ಧ್ವಜ ಚಿತ್ರ ಮುಖದ ಬಿಡಿಸುವ ಮೂಲಕ ಗಮನ ಸೆಳೆದ ಪಟ್ಟಣದ ವ್ಯಾಪಾರಸ್ಥ ಕೊಟ್ರೇಶ ಕತ್ತಿ.



ಲಕ್ಷ್ಮೇಶ್ವರ: ಪಟ್ಟಣದ ಇತಿಹಾಸ ಪ್ರಸಿದ್ಧ ಹಾವಳಿ ಆಂಜನೇಯ ದೇವಸ್ಥಾನದಲ್ಲಿ ಆಂಜನೇಯ ಮೂರ್ತಿಗೆ ಹೋಳಿ ಹಬ್ಬ (ರಂಗ ಪಂಚಮಿ) ಪ್ರಯುಕ್ತ ವಿವಿಧ ಬಣ್ಣಗಳಿಂದ ವಿಶೇಷ ಮಹಾಪೂಜೆ ನಡೆಯಿತು.



ಲಕ್ಷ್ಮೇಶ್ವರ: ತಾಲೂಕಿನಲ್ಲಿ ಶನಿವಾರ ನಡೆದ ಹೋಳಿ ಹಬ್ಬದ ಪ್ರಯುಕ್ತ ಪಟ್ಟಣದ ಮುಕ್ತಿಮಂದಿರ ರೋಡ ಸೋಮೇಶ್ವರ ನಗರದಲ್ಲಿ ಜನರನ್ನು ಆಕರ್ಷಿಸಿದ ಎತ್ತರದ ಕಾಮಣ್ಣನ ಮೂರ್ತಿ.

ದತ್ತಿ ಪ್ರಶಸ್ತಿ ಪ್ರದಾನ

ಗದಗ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಮಾ.8 ರಂದು ಸಂಜೆ 6ಕ್ಕೆ ನಗರದ ತೋಂಟದ ಸಿದ್ಧಲಿಂಗ ಶ್ರೀಗಳ ಕನ್ನಡ ಭವನ, ಕಸಾಪ ಕಾರ್ಯಾಲಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಶಶಿಕಲಾ ಪಾಟೀಲ ಸ್ಮರಣಾರ್ಥ ದತ್ತಿ ಪ್ರಶಸ್ತಿ ಪ್ರದಾನ ಹಾಗೂ ಪಾರ್ವತಿ ಚಂದ್ರಶೇಖರ ಹನುಮಸಾಗರ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆ ಜಿಲ್ಲಾ ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ ವಹಿಸುವರು. ಸಮಾಜ ಸೇವಕ ಸರೋಜಾ ಬನ್ನೂರ ಹಾಗೂ ಕಸ್ತೂರೆಮ್ಮ ಹಿರೇಮಠ ಅವರಿಗೆ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ವೀಣಾ ಪಾಟೀಲ ಉಪನ್ಯಾಸ ನೀಡುವರು. ರತ್ನಕ್ಕ ಪಾಟೀಲ, ಲಲಿತಾ ಬಾಳಿಹಳ್ಳಿಮಠ, ಸುಜಾತಾ ಗುಡಿಮನಿ ಆಗಮಿಸುವರು. ನೀಲಮ್ಮ ಅಂಗಡಿ ಅವರಿಂದ ಗೀತ ಗಾಯನ ಜರುಗುವುದು ಎಂದು ಕಿಶೋರಬಾಬು ನಾಗರಕಟ್ಟಿ, ದತ್ತಪ್ರಸನ್ನ ಪಾಟೀಲ ಹಾಗೂ ಡಿ.ಎಸ್.ಬಾಪುರಿ ತಿಳಿಸಿದ್ದಾರೆ.

ರಸ್ತೆ ದುರಸ್ತಿಗೆ ಆಗ್ರಹ

ಮುಂಡರಗಿ: ತಾಲೂಕಿನ ಕೊರ್ಲಹಳ್ಳಿ ಸಿಂಗಟಾಲೂರು ರಸ್ತೆ, ಮುಂಡರಗಿ ರಾಮೇನಹಳ್ಳಿ, ನಾಗರಹಳ್ಳಿ ರಸ್ತೆ ಸೇರಿದಂತೆ ಅನೇಕ ಪಿಡಬ್ಲೂಡಿ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವ ಕಾಮಗಾರಿ ವಿಳಂಬವಾಗುತ್ತಿದ್ದು, ತ್ವರಿತವಾಗಿ ಕಾಮಗಾರಿ ಮುಕ್ತಾಯಗೊಳಿಸಬೇಕೆಂದು ಸಿಂಗಟಾಲೂರು ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿ ಸದಸ್ಯ ಕೊಟ್ರೇಶ ಬಳ್ಳೊಳ್ಳಿ ಒತ್ತಾಯಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಕೊರ್ಲಹಳ್ಳಿಯಿಂದ ಸಿಂಗಟಾಲೂರು ಗ್ರಾಮದವರೆಗಿನ ಪಿಡಬ್ಲೂಡಿ ರಸ್ತೆಗಳಲ್ಲಿನ ತಗ್ಗುಗಳನ್ನು ಮುಚ್ಚುವುದಕ್ಕಾಗಿ ಕಳೆದ ಒಂದೂವರೆ ತಿಂಗಳ ಹಿಂದೆ ಎಲ್ಲ ತಗ್ಗುಗಳಿಗೂ ಕಡಿಗಳನ್ನು ಹಾಕಿ ಹಾಗೇ ಬಿಟ್ಟಿದ್ದಾರೆ. ನಿತ್ಯ ಈ ರಸ್ತೆಯಲ್ಲಿ ಓಡಾಡುವರು ಪರದಾಡುತ್ತಿದ್ದಾರೆ. ಮಾ.3ರಂದು ಸಿಂಗಟಾಲೂರು ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಜರುಗಲಿದ್ದು, ಸುಲಭ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿದ್ದಾರೆ.

ನಿಧನ ಸುದ್ದಿ

ಹನಮಪ್ಪ ಐನಾಪುರ



ನರಗುಂದ: ತಾಲೂಕಿನ ಭೈರನಹಟ್ಟಿ ಗ್ರಾಮದ ಹನಮಪ್ಪ ಈರಪ್ಪ ಐನಾಪೂರ(68) ಬುಧವಾರ ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಶಂಕ್ರವ್ವ ಪರ್ವತಗೌಡ್ರ



ನರಗುಂದ: ತಾಲೂಕಿನ ಹದಲಿ ಗ್ರಾಮದ ಶಂಕ್ರವ್ವ ರುದ್ರಗೌಡ ಪರ್ವತಗೌಡ್ರ (85) ಗುರುವಾರ ನಿಧನರಾದರು. ಮೃತರು ಓರ್ವ ಪುತ್ರ, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಲಕ್ಷ್ಮೇಶ್ವರ: ಪಟ್ಟಣದ ಹಳ್ಳದಕೇರಿಯ ಪಾಣಿಗಟ್ಟಿ ಓಣಿಯಲ್ಲಿ ಕಾಮ ಹಾಗೂ ರತಿ ಮೆರವಣಿಗೆಯು ತೆಂಗಿನಕಾಯಿ ಕಲಾಕೃತಿಯಲ್ಲಿ ನಡೆಯಿತು.

ಮಾ.14ರಂದು ರಾಷ್ಟ್ರೀಯ ಲೋಕ ಅದಾಲತ್

ಗದಗ: ಜಿಲ್ಲೆಯಲ್ಲಿ ಮಾ.14 ರಂದು ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದ್ದು ಸಾರ್ವಜನಿಕರು, ಪಕ್ಷಗಾರರು ತಮ್ಮ ವ್ಯಾಜ್ಯಗಳನ್ನು ಪರಸ್ಪರ ರಾಜೀ ಸಂಧಾನದ ಮೂಲಕ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಿಕೊಳ್ಳಲು ಸದವಕಾಶವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ನಾಗವೇಣಿ ತಿಳಿಸಿದರು. ನಗರದ ಜಿಲ್ಲಾ ಸತ್ರ ನ್ಯಾಯಾಲಯದ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಲೋಕ ಅದಾಲತ್ ಕುರಿತು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಸಾರ್ವಜನಿಕರು ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಹಾಗೂ ನ್ಯಾಯಾಲಯಕ್ಕೆ ದಾಖಲಿಸದೇ ಇರುವ ಪ್ರಕರಣಗಳನ್ನು ವ್ಯಾಜ್ಯಪೂರ್ವ ಪ್ರಕರಣಗಳೆಂದು ಪರಿಗಣಿಸಿ ಶೀಘ್ರ ಪರಿಹಾರ ಪಡೆದುಕೊಳ್ಳಲು ಇದೊಂದು ಸದವಕಾಶವಾಗಿದೆ. [illegible] ರಾಜೀ ಸಂಧಾನದಲ್ಲಿ ಪ್ರಕರಣ ಇತ್ಯರ್ಥವಾದರೆ ನ್ಯಾಯಾಲಯಕ್ಕೆ ತುಂಬಿದ ಶುಲ್ಕವನ್ನು ಸಂಪೂರ್ಣ ಮರುಪಾವತಿ ಮಾಡಲಾಗುವುದು ಹಾಗೂ ಪ್ರಕರಣ ರಾಜೀ ಆದಲ್ಲಿ ಉಭಯ ಪಕ್ಷಗಾರರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ. ಜಿಲ್ಲೆಯಲ್ಲಿ ರಾಜೀ ಸಂಧಾನಕ್ಕಾಗಿ ಪ್ರತಿಯೊಂದು ನ್ಯಾಯಾಲಯಕ್ಕೆ ಒಂದು ಬೆಂಚಿನಂತೆ ಒಟ್ಟು 13 ಬೆಂಚ್ ಗಳನ್ನು ರಚಿಸಿದ್ದು ಗದಗ ಜಿಲ್ಲೆಯಲ್ಲಿ ಒಟ್ಟು 20187 ವಿವಿಧ ಚಾಲ್ತಿ ಪ್ರಕರಣಗಳಿದ್ದು ಅದರಲ್ಲಿ ಈಗಾಗಲೇ ರಾಜೀ ಆಗಬಹುದಾದ 3175 ಪ್ರಕರಣಗಳನ್ನು ಗುರುತಿಸಲಾಗಿದೆ ಎಂದರು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿ.ಎಸ್.ಶಿವನಗೌಡ್ರ ಮಾತನಾಡಿ, ಪ್ರತಿದಿನ ರಾಜೀಗಾಗಿ ಆಯ್ಕೆ ಮಾಡಿದ ಪ್ರಕರಣಗಳನ್ನು ಸಂಬಂಧಪಟ್ಟ ವಕೀಲರು ಹಾಗೂ ಪಕ್ಷಗಾರರೊಂದಿಗೆ ಮುಂಚಿತವಾಗಿಯೇ ರಾಜೀ ಸಂಧಾನದಿಂದ ಆಗುವ ಪ್ರಯೋಜನಗಳ ಬಗ್ಗೆ ತಿಳಿಸಿ ಅವರ ಮನ ಒಲಿಸಿ ರಾಜೀ ಸಂಧಾನ ಮಾಡಿಕೊಳ್ಳಲು ತಿಳಿಯಪಡಿಸಲಾಗುವುದು ಎಂದರು.



ನರಗುಂದ: ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಅವರು ಮುಗನೂರು ಗ್ರಾಮದ ರೈತ ಬಸನಗೌಡ ಮಲ್ಲನಗೌಡ್ರ ಜಮೀನಿಗೆ ಭೇಟಿ ನೀಡಿ ಜೀವಾಮೃತ ಘನ ಜೀವಾಮೃತ ಮಾಡುವ ವಿಧಾನಗಳ ಬಗ್ಗೆ ಮಾಹಿತಿ ಪಡೆದರು. ಹಿರೇಕೊಪ್ಪ ಗ್ರಾಮದ ಕಾಂತೇಶ್ ಕುಲಗೇರಿ ಅವರ ಜಮೀನಿಗೆ ಭೇಟಿ ನೀಡಿ ಕೃಷಿ ಭಾಗ್ಯ ಯೋಜನೆ ಅಡಿ ನಿರ್ಮಿಸಿಕೊಂಡ ಕೃಷಿ ಹೊಂಡ ಪರಿಶೀಲಿಸಿದರು.ಪಿಎಂಎಫ್ ಎಂಇ ಯೋಜನೆಯಡಿ ಹಿರೇಕೊಪ್ಪ ಗ್ರಾಮದ ಸುರೇಶ ಕುರ್ಲಗೇರಿ ಪಡೆದ ಸೈಲೇಜ್ ಪ್ಯಾಕಿಂಗ್ ಮಷೀನ್ ಪರಿಶೀಲಿಸಿದರು.

ರಂಗಿನಾಟದಲ್ಲಿ ಮಿಂದೆದ್ದ ಅವಳಿ ನಗರ



ಗದಗ: ಅವಳಿ ನಗರದಲ್ಲಿ ಶನಿವಾರ ರಂಗಪಂಚಮಿ ಪ್ರಯುಕ್ತ ವಿವಿಧ ಬಡಾವಣೆಗಳಲ್ಲಿ ಬೆಳಗ್ಗೆಯಿಂದಲೇ ಚಿಣ್ಣರು ಪರಸ್ಪರ ಗುಲಾಲ್ ಎರಚಿಕೊಂಡು ಬಣ್ಣದಲ್ಲಿ ಮಿಂದೆದ್ದರು. ಯುವಕ, ಯುವತಿಯರು, ವಯಸ್ಸು ಗಂಡು ಮತ್ತು ಹೆಣ್ಣು ಮಕ್ಕಳು ಅದಕ್ಕೆ ಹೊರತಾಗಿರಲಿಲ್ಲ.

ಹೋಳಿ ಹುಣ್ಣಿಮೆಯಾದ ಐದನೇ ದಿನದಂದು ನಗರದಲ್ಲಿ ರಂಗಪಂಚಮಿ ಆಚರಿಸಲಾಗುತ್ತದೆ. ನಗರದ ವಿವಿಧ ಬಡಾವಣೆಗಳಲ್ಲಿ ಬೆಳಗಿನ ಜಾವ ಕಾಮದೇವನನ್ನು ದಹಿಸಿದ ಬಳಿಕ ಬಣ್ಣದೋಕುಳಿ ಚಾಲನೆ ಪಡೆಯುತ್ತದೆ. ನಗರದ ಗಾಂಧಿ ಸರ್ಕಲ್, ವಿಶ್ವೇಶ್ವರಯ್ಯ ರೋಡ್, ಹಳೆ ಸರಾಫ್ ಬಜಾರ್, ಟಾಂಗಾ ಕೂಟ, ಸ್ಟೇಷನ್ ರಸ್ತೆ, ನಾಮಜೋಶಿ ರಸ್ತೆ, ಪಾಲಾ ಬಾದಾಮಿ ರೋಡ್, ಜೆಟಿ ಕಾಲೇಜ್ ರೋಡ್, ವೆಂಕಟೇಶ ಟಾಕೀಸ್ ರೋಡ್, ಬೆಟಗೇರಿ ಬಸ್ ನಿಲ್ದಾಣ, ಬಳಗಾನೂರ ರೋಡ್, ಮುಳಗುಂದ ನಾಕಾ, ಮುಳಗುಂದ ರಸ್ತೆ, ಹುಡ್ಕೊ ಕಾಲೋನಿ, ನರಸಪಾರು, ಬೆಟಗೇರಿ, ಗಂಗಾಪುರ ಪೇಟೆ ಸರ್ಕಲ್, ಹೊಸ ಬಸ್ ನಿಲ್ದಾಣದ ಹಿಂಭಾಗ ಸೇರಿದಂತೆ ಹಲವೆಡೆ ಜಮಾಯಿಸಿದ್ದ ಯುವಕ-ಯುವತಿಯರು ಪರಸ್ಪರ ಬಣ್ಣ ಹಚ್ಚಿಕೊಂಡು ಸಂಭ್ರಮಿಸಿದರು.

ಮನೆ ಮುಂದಿನ ಕಟ್ಟೆಯ ಮೇಲೆ ಬಕೆಟ್‌ಗಳಲ್ಲಿ ಬಣ್ಣ ತುಂಬಿಟ್ಟುಕೊಂಡು ನಿಂತಿದ್ದ ಚಿಣ್ಣರು, ದಾರಿ ಹೋಕರ ಮೇಲೆ ಬಣ್ಣ ಎರಚಿ ಖುಷಿಪಟ್ಟರು. ಚಿಣ್ಣರ ಸೇನೆಯಿಂದ ತಪ್ಪಿಸಿಕೊಳ್ಳಲು ಕೆಲವರು ಅವರ ಮಾರ್ಗವನ್ನೇ ಬದಲಿಸಿಕೊಂಡು ದೈನಂದಿನ ಕೆಲಸಗಳಿಗೆ ಹೋದರು. ಯುವಕರ ದಂಡು ಬೈಕ್‌ಗಳಲ್ಲಿ ಸುತ್ತಾಡಿ ಸ್ನೇಹಿತರೊಂದಿಗೆ ಬಣ್ಣದಾಟವಾಡಿದರು. ಎಲ್ಲೆಡೆ ದ್ವಿಚಕ್ರ ವಾಹನಗಳ ಸೈಲೆನ್ಸರ್ ಶಬ್ದ ಕಿವಿಗೆ ಅಪ್ಪಳಿಸುತ್ತಿತ್ತು. ಯುವಕರು ಬಣ್ಣದಾಟದ ವೇಳೆ ಪರಸ್ಪರ ಕೋಳಿ ಮೊಟ್ಟೆ ಟೊಮ್ಯಾಟೊಗಳನ್ನು ತಲೆ ಮೇಲೆ ಹೊಡೆದುಕೊಂಡರು.

ಸೆಲ್ಫಿ ಕ್ಲಿಕ್ಕಿಸಿದ ಯುವತಿಯರು



ನಗರದ ವಿವಿಧ ಬಡಾವಣೆಯಲ್ಲಿ ಮಹಿಳೆಯರು, ಮಕ್ಕಳು, ಯುವಕರು ಬಣ್ಣದೋಕುಳಿ ಸಂಭ್ರಮದಲ್ಲಿ ತೊಡಗಿದರು. ಒಬ್ಬರಿಗೊಬ್ಬರು ಬಣ್ಣ ಎರಚುವ ಮೂಲಕ ರಂಗಿನ ಹಬ್ಬದಲ್ಲಿ ನಗರದ ಎಲ್ಲಾ ಜನರು ಬಣ್ಣದಲ್ಲಿ ಮಿಂದೆದ್ದು, ಚಿತ್ರ ವಿಚಿತ್ರವಾಗಿ ಕಾಣಿಸುತ್ತಿದ್ದರು. ಇದೇ ಸಮಯದಲ್ಲಿ ಯುವಕರು ಹಾಗೂ ಮಹಿಳೆಯರು ಸೆಲ್ಫಿ ತಗೆದುಕೊಂಡು ಖುಷಿಪಟ್ಟರು.

ಹೋಳಿ ಸಂಭ್ರಮ









ಬಣ್ಣದ ಚಿತ್ತಾರ

ಅವಳಿ ನಗರದಲ್ಲಿ ಯುವಕರು, ಯುವತಿಯರು ಬೈಕ್ ಓಡಿಸಿಕೊಂಡು ರಸ್ತೆ ಪಕ್ಕದ ಜನರು ಮತ್ತು ಸ್ನೇಹಿತರ ಜತೆಗೆ ಬಣ್ಣದಾಟ ಆಡುವಾಗ ಕೆಳಗೆ ಚೆಲ್ಲಿದ ವಿವಿಧ ಬಣ್ಣಗಳಿಂದ ನಗರದ ರಸ್ತೆಗಳೆಲ್ಲ ಚಿತ್ತಾರದ ರಂಗೋಲಿ ಹಾಕಿದಂತೆ ಕಂಡು ಬಂತು.

- ಹೋಳಿ ಹಬ್ಬದ ನಿಮಿತ್ತ ಅವಳಿ ನಗರದ ಎಲ್ಲ ಬಡಾವಣೆ, ಪ್ರಮುಖ ರಸ್ತೆಗಳಲ್ಲಿ ಹಲಗೆ, ಪುಂಗಿ ಸದ್ದು ಜೋರಾಗಿತ್ತು
- ಕೆಲವರು ಬೈಕ್‌ಗಳಲ್ಲಿ ಹಲಗೆ ಬಾರಿಸುತ್ತಾ, ಸಿಳ್ಳೆ ಹಾಕುತ್ತ, ಕೇಕೆ ಹೊಡೆಯುತ್ತಾ ನಗರ ಸುತ್ತಿದರು
- ವಿವಿಧ ಬಡಾವಣೆಗಳಲ್ಲಿ ಮಹಿಳೆಯರೂ ಅಕ್ಕಪಕ್ಕದವರಿಗೆ ಬಣ್ಣ ಹಚ್ಚುವ ಮೂಲಕ ಸಂಭ್ರಮಿಸಿದರು

ಓಕುಳಿಯಾಟದ ಸಂಭ್ರಮ ಜೋರು

ಲಕ್ಷ್ಮೇಶ್ವರ: ಪಟ್ಟಣದಲ್ಲಿ ಶನಿವಾರ ರಂಗಪಂಚಮಿ ನಿಮಿತ್ತ ವಿವಿಧ ಬಡಾವಣೆಗಳಲ್ಲಿ ಮಕ್ಕಳು, ಯುವಕರು, ಮಹಿಳೆಯರು, ಓಕುಳಿಯಾಟದಲ್ಲಿ ಪಾಲ್ಗೊಳ್ಳುವ ಮೂಲಕ ರಂಗಿನಾಟಕ್ಕೆ ಮೆರಗು ತಂದರು.

ಪಟ್ಟಣದಲ್ಲಿ ಸಂಜೆಯವರೆಗೂ ಸಹ ಅಲ್ಲಲ್ಲಿ ರಂಗಿನಾಟದಲ್ಲಿ ತೊಡಗಿರುವವರು ಕಂಡು ಬಂದರು. ಪಟ್ಟಣದಲ್ಲಿ ಅನೇಕ ಕಡೆಗಳಲ್ಲಿ ಸಣ್ಣಪುಟ್ಟ ರೀತಿಯಲ್ಲಿ ಕಾಮ-ರತಿಯರ ಮೂರ್ತಿ ಸ್ಥಾಪನೆ ಮಾಡಲಾಗಿತ್ತು. ದೊಡ್ಡ ಪ್ರಮಾಣಲ್ಲಿ 3-4 ಕಡೆಗಳಲ್ಲಿ ಅದ್ದೂರಿ ಆಚರಣೆ ನಡೆಯಿತು. ಹಳ್ಳದಕೇರಿ ಓಣಿಯಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಕಾಮ-ರತಿಯ ಪ್ರತಿಷ್ಠಾಪನೆ ಮಾಡಿ ಮಹಿಳೆಯರು, ಮಕ್ಕಳು, ವೃದ್ಧರು, ಯುವಕರು ಸೇರಿ ಸಂಭ್ರಮದಿಂದ ರಂಗಪಂಚಮಿಯಲ್ಲಿ ಪಾಲ್ಗೊಂಡಿದ್ದರು. ಹಾವಳಿ ಆಂಜನೇಯ ದೇವಸ್ಥಾನ ಹತ್ತಿರ ಹಿಂದೂ ಮಹಾ ಸಭಾದಿಂದ ಹಾಗೂ ಸೊಪ್ಪಿನಕೇರಿ ಓಣಿಯ ಸನಾತನ ಯುವಕ ಮಂಡಳದಿಂದ ರೇನ್ ಡ್ಯಾನ್ಸ್ ನಡೆಯಿತು. ರಂಗಪಂಚಮಿ ಬಣ್ಣದಾಟದಲ್ಲಿ ಪಟ್ಟಣದಲ್ಲಿ ಅನೇಕ ಮಹಿಳೆಯರು ತಮ್ಮ ಗುಂಪಿನೊಂದಿಗೆ ಸೇರಿಕೊಂಡು ಪರಸ್ಪರ ಬಣ್ಣ ಎರಚುವ ಮೂಲಕ ತಮ್ಮ ಸಂತಸವನ್ನು ಹಂಚಿಕೊಂಡರು. ಒಂದೊಂದು ಓಣಿಯಲ್ಲಿ ಹೀಗೆ ಮಹಿಳೆಯರು ಈ ಬಾರಿ ಬಣ್ಣದಾಟದಲ್ಲಿ ಪಾಲ್ಗೊಂಡಿರುವುದು ವಿಶೇಷವಾಗಿತ್ತು. ಅನೇಕ ಯುವಕರು ವಿವಿಧ ವೇಷಗಳನ್ನು ಧರಿಸಿ ಗಮನ ಸೆಳೆದರು. ಮುಂಜಾನೆ 7 ಗಂಟೆಗೆ ಪ್ರಾರಂಭವಾದ ಓಕುಳಿಯಾಟ ಸಂಜೆ 6 ಗಂಟೆಯಾದರೂ ಕೆಲವು ಕಡೆ ಮೆರವಣಿಗೆಗಳು ನಡೆಯುತ್ತಿದ್ದು, ಅನೇಕರು ಇನ್ನೂ ಓಕುಳಿಯಾಟವನ್ನು ನಡೆಸುತ್ತಿದ್ದರು. ಕಳೆದ ಬಾರಿಗೆ ಹೋಲಿಸಿದಾಗ ಈ ಬಾರಿ ರಂಗಿನಾಟಕ್ಕೆ ಹೆಚ್ಚಿಗೆ ಜನರು ಆಸಕ್ತಿಯಿಂದ ಪಾಲ್ಗೊಂಡಿದ್ದರೆ, ಮಧ್ಯಾಹ್ನ 12 ಗಂಟೆಯಿಂದ 4 ಗಂಟೆಯವರೆಗೂ 35-36 ಡಿಗ್ರಿ ಉರಿಬಿಸಿಲಿನಲ್ಲಿ ಅಲ್ಲಲ್ಲಿ ಕುಳಿತು ಧಣಿವಾರಿಸಿಕೊಳ್ಳುತ್ತಿರುವ ದೃಶ್ಯವೂ ಕಂಡುಬಂತು.



ಉತ್ತಮ ಸಮಾಜ ನಿರ್ಮಾಣಕ್ಕೆ ನೌಕರರ ಸೇವೆ ಅನನ್ಯ

ರೋಣ: ಉತ್ತಮ ಸಮಾಜ ನಿರ್ಮಾಣ ಕಾರ್ಯದಲ್ಲಿ ರಾಜ್ಯ ಸರ್ಕಾರಿ ನೌಕರರ ಸೇವೆ ಅನನ್ಯವಾಗಿದ್ದು, ಸರ್ಕಾರದ ಯೋಜನೆಗಳು ಫಲಾನುಭವಿಗಳಿಗೆ ತಲುಪುವಲ್ಲಿ ನೌಕರರ ಪಾತ್ರ ದೊಡ್ಡದಿದೆ ಎಂದು ಶಾಸಕ ಹಾಗೂ ರಾಜ್ಯ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್.ಪಾಟೀಲ ಹೇಳಿದರು.

ಅವರು ಶನಿವಾರ ಪಟ್ಟಣದ ಗುರುಭವನದಲ್ಲಿ ಜರುಗಿದ ರೋಣ ತಾಲೂಕು ನೌಕರರ ಸಮಾವೇಶ, ಮಹಿಳಾ ದಿನಾಚರಣೆ, ಸರ್ವ ಸದಸ್ಯರ ಸಾಮಾನ್ಯ ಸಭೆ ಹಾಗೂ ತಾಲೂಕು ಉತ್ತಮ ಸರ್ಕಾರಿ ನೌಕರ ಪ್ರಶಸ್ತಿ ಪುರಸ್ಕಾರ ಸಮಾರಂಭವನ್ನು ಉಧ್ಘಾಟಿಸಿ ಮಾತನಾಡಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಮಾತನಾಡಿ, ದೇಶದ 22 ರಾಜ್ಯಗಳಲ್ಲಿ ಸೇಂಟ್ರಲ್ ಪೇ ಸ್ಕಿಂ ಜಾರಿಯಲ್ಲಿದೆ. ವಿಪರ್ಯಾಸ ಅಂದರೆ ಇದರಿಂದ ಕರ್ನಾಟಕ ರಾಜ್ಯ ನೌಕರರು ವಂಚಿತರಾಗಿದ್ದು, ಕೇಂದ್ರ ಸರ್ಕಾರ ಕೂಡ ಸೇಂಟ್ರಲ್ ಪೇ ಸ್ಕಿಂ ಜಾರಿಗೊಳಿಸಬೇಕು. ರಾಜ್ಯದಲ್ಲಿ 2 ಲಕ್ಷ 93 ಸಾವಿರ ಎನ್‌ಪಿಎಸ್ ನೌಕರರಿದ್ದು ಅವರೆಲ್ಲರೂ ಇದೇ ಸರಕಾರದಲ್ಲಿ ಓಪಿಎಸ್‌ಗೆ ಒಳಪಡಲಿದ್ದಾರೆ. ಯಾವ ಎನ್ ಪಿಎಸ್ ನೌಕರರೂ ಭಯ ಪಡುವ ಅಗತ್ಯ ವಿಲ್ಲ ಎಂದರು.

> ರಾಜ್ಯ ಸರ್ಕಾರಿ ನೌಕರರಿಗೆ ಶೇ.25ರಷ್ಟು ರಿಯಾಯಿತಿ ದರದಲ್ಲಿ ಎಂಎಸ್‌ಐಎಲ್ ಮಾದರಿಯಲ್ಲಿ ಲಿಕ್ಕರ್ ಒದಗಿಸುವ ಕುರಿತು ಚಿಂತನೆ ನಡೆಸಲಾಗಿದ್ದು, ಅಲ್ಲಿ ದಿನಸಿ ಸೇರಿ ಅಗತ್ಯ ವಸ್ತುಗಳು ರಿಯಾಯಿತಿ ದರದಲ್ಲಿ ನೌಕರರಿಗೆ ಸಿಗಲಿದೆ. ಕರ್ತವ್ಯದ ಸಂಧರ್ಭದಲ್ಲಿ ನೌಕರರ ಮೇಲೆ ಹಲ್ಲೆ ನಡೆದರೆ 3 ತಿಂಗಳ ಕಠೀಣ ಶಿಕ್ಷೆ ಜಾರಿಯಾಗಬೇಕು ಎಂಬ ಕಾನೂನು ಸರ್ಕಾರ ಜಾರಿ ಮಾಡಲಿದೆ.
>
> ■ ಸಿ.ಎಸ್. ಷಡಾಕ್ಷರಿ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ

ಯಚ್ಚರೇಶ್ವರ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಎಸ್.ಜಿ.ದಾನಪ್ಪಗೌಡರ, ವೈ.ಡಿ.ಗಾಣಿಗೇರ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾನೌಕರ ಸಂಘದ ಅಧ್ಯಕ್ಷ ಡಾ. ಬಸವರಾಜ ಬಳ್ಳಾರಿ, ಇಂದುಮತಿ ಸಾಲಿಮಠ, ವಿ.ಬಿ.ಸೋಮನಕಟ್ಟಿಮಠ, ಯೂಸುಪ್ ಇಟಗಿ, ಬಸವರಾಜ ನವಲಗುಂದ, ತೋಟಪ್ಪ ನವಲಗುಂದ, ಮುತ್ತಣ್ಣ ಸಂಗಳದ, ತಹಶೀಲ್ದಾರ್ ನಾಗರಾಜ ಕೆ., ಇಓ ಚಂದ್ರಶೇಖರ ಕಂದಕೂರ, ಬಿಇಓ ಎ.ಎನ್.ಕಾಂಬೋಗಿ ಸೇರಿದಂತೆ ಇತರರಿದ್ದರು.



ಸಂಪೂರ್ಣ ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಮಾದಿಗ ಸಮಾಜದಿಂದ ಪ್ರತಿಭಟನೆ

ಲಕ್ಷ್ಮೇಶ್ವರ: ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಸಂಪೂರ್ಣವಾಗಿ ಜಾರಿಯಾಗುವವರೆಗೆ ಹೊಸ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ ಆಗ್ರಹಿಸಿ ಗದಗ ಜಿಲ್ಲಾ ಮಾದಿಗ ಸಂಘಟನೆಗಳ ಒಕ್ಕೂಟ ಮತ್ತು ಕರ್ನಾಟಕ ಪ್ರದೇಶ ಮಾದಿಗ ಸಂಘ ಗದಗ ಜಿಲ್ಲಾ ಘಟಕಗಳ ತಾಲೂಕು ಘಟಕಗಳ ವತಿಯಿಂದ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಹೊಸ ಬಸ್‌ನಿಲ್ದಾಣದ ಎದುರು ರಸ್ತೆ ತಡೆ ನಡೆಸಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಿದರು.

ಈ ವೇಳೆ ಮುಖಂಡರಾದ ಸುರೇಶ ನಂದೆಣ್ಣವರ, ಕೊಟೆಪ್ಪ ವರ್ದಿ ಮತ್ತು ಫಕೀರೇಶ ಮ್ಯಾಟಣ್ಣವರ ಮಾತನಾಡಿ, ಸರ್ಕಾರವು ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸುಮಾರು 56,432 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಲು ಕ್ರಮ ಕೈಗೊಂಡಿರುವುದು ತಿಳಿದುಬಂದಿದೆ. ಆದರೆ ಸಚಿವ ಸಂಪುಟದ ತೀರ್ಮಾನದಂತೆ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿಯಾಗುವವರೆಗೆ ಯಾವುದೇ ಹೊಸ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಬಾರದು ಎಂದು 2024ರ ನವೆಂಬರ್ 25ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸುತ್ತೋಲೆ ಹೊರಡಿಸಿದೆ. ಇಂತಹ ಸಂದರ್ಭದಲ್ಲಿ ಹೊಸ ನೇಮಕಾತಿ ಪ್ರಕ್ರಿಯೆ ಆರಂಭಿಸುವುದು ಮಾದಿಗ ಸಮುದಾಯಕ್ಕೆ ಅನ್ಯಾಯವಾಗುತ್ತದೆ ಎಂದು ಆರೋಪಿಸಿದರು. ನ್ಯಾ.ಹೆಚ್.ಎನ್.ನಾಗಮೋಹನ್ ದಾಸ್ ಆಯೋಗದ ಶಿಫಾರಸಿನಂತೆ ಪ್ರತಿಯೊಂದು ನೇಮಕಾತಿಯಲ್ಲಿ ಪ್ರವರ್ಗ (ಎ) ವರ್ಗಕ್ಕೆ ಶೇ.6 ರಷ್ಟು ಹುದ್ದೆಗಳನ್ನು ಕಡ್ಡಾಯವಾಗಿ ಮೀಸಲಿಡಬೇಕು. ಜನಸಂಖ್ಯೆಗೆ ಅನುಪಾತವಾಗಿ ಶೈಕ್ಷಣಿಕ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಮಾದಿಗ ಸಮುದಾಯಕ್ಕೆ ಸಮರ್ಪಕ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿದರು. ಮುಖಂಡರುಗಳಾದ ಫಕೀರೇಶ ಭಜಕ್ಕನವರ, ಅನಿಲ ಮುಳಗುಂದ, ಮನೋಹರ ಕರ್ಜಗಿ, ಬಸವಣ್ಣೆಪ್ಪ ನಂದೆಣ್ಣವರ, ರಾಮಣ್ಣ ಅಡಗಿಮನಿ, ರಮೇಶ ಗಡದವರ, ಚಂದ್ರು ದೊಡ್ಡಮನಿ, ನಾಗರಾಜ ದೊಡ್ಡಮನಿ, ಫಕೀರೇಶ ನಂದೆಣ್ಣವರ, ಮಹಾಂತೇಶ ಗುಡಿಸಲಮನಿ, ಸದಾನಂದ ನಂದೆಣ್ಣವರ, ದೇವಪ್ಪ ನಂದೆಣ್ಣವರ, ಯಲ್ಲಪ್ಪ ಹಂಜಗಿ ಮುಂತಾದವರಿದ್ದರು.



ಸಮ ಸಮಾಜದ ಕನಸು ಕಂಡ ವ್ಯಕ್ತಿ ಬಿ.ಬಾಬು: ಡಾ.ಸಿದ್ದನಗೌಡ ಪಾಟೀಲ

ಮುಂಡರಗಿ: ವ್ಯಕ್ತಿ ಮತ್ತು ವ್ಯಕ್ತಿತ್ವದಲ್ಲಿ ಸಾಕಷ್ಟು ವ್ಯತ್ಯಾಸ ಇದ್ದು, ಜಾತಿ ಮತ, ಕುಟುಂಬ ಮೀರಿ ಸಮುದಾಯದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿ ಜನಪರ, ಸಮಾಜಪರ ಮತ್ತು ಎಲ್ಲರೂ ಸಮಾನರು ಎಂಬ ಭಾವನೆತಾಳುವದು ಸುಲಭದ ಕೆಲಸವಲ್ಲ, ಅದರಲ್ಲಿಯೇ ತಮ್ಮ ಬದುಕಿನುದ್ದಕ್ಕೂ ಸಮ ಸಮಾಜದ ಕನಸು ಕಂಡ ವ್ಯಕ್ತಿ ಬಿ.ಬಾಬು ಎಂದು ಎಐಟಿಯುಸಿ ರಾಜ್ಯ ಘಟಕದ ಕಾರ್ಯದರ್ಶಿ, ಹಿರಿಯ ಪತ್ರಕರ್ತ ಡಾ.ಸಿದ್ದನಗೌಡ ಪಾಟೀಲ ಹೇಳಿದರು.

ಅವರು ಪಟ್ಟಣದಲ್ಲಿ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡ ರಂಗಕರ್ಮಿ, ಹೋರಾಟಗಾರ ಬಿ.ಬಾಬು ನೆನಪು ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಕೆಂಪು ಶಾಲು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಡಾ.ವಿನಯಾ ವಕ್ಕುಂದ, ರಾಜ್ಯ ಕುರಿ ಮತ್ತು ಉಣ್ಣೆ ನಿಗಮ ಮಾಜಿ ಅಧ್ಯಕ್ಷ ವೈ.ಎನ್.ಗೌಡರ .ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ, ಬಸವರಾಜ ಸೂಳಿಬಾವಿ, ಡಾ.ರಾಜಾನಾಯಕ ಮಾತನಾಡಿದರು. ಎ.ಬಿ.ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಶರೀಫ್ ಬಿಳಿಯಲಿ, ಶಂಕ್ರಣ್ಣ ಕೊತಬಾಳ ಸಂಗಡಿಗರಿಂದ ಬಿ.ಬಾಬು ರಚಿಸಿದ ಬನ್ನಿರೋ ಹೊಸ ನಾಡೊಂದ ಕಟ್ಟೋಣ ಕ್ರಾಂತಿ ಗೀತೆ ಸಾದರ ಪಡಿಸಿದರು. ಅಲ್ಲಮಪ್ರಭು ಬೆಟದೂರ, ಈ ಬಸವರಾಜು, ಬಿ.ಎ.ಕೆಂಚರೆಡ್ಡಿ, ಡಾ.ಎಂ.ಡಿ.ವಕ್ಕುಂದ, ಶಂಕರ ಹಲಗತ್ತಿ, ಸಿ.ಜಿ.ಹಿರೇಮಠ, ಬಿ.ಎಸ್.ಸೊಪ್ಪಿನ, ಶಂಕರಗೌಡ ಸಾತ್ಮಾರ, ಪಿ.ಪೀರಬಾಷಾ, ರಂಗಭೂಮಿ ಕಲಾವಿದ ಬಸವರಾಜ ಬೆಂಗೇರಿ, ಬಸವರಾಜ ಗಾರ್ಗಿ, ಚಾಂದಬಿ ಬಳಬಟ್ಟಿ, ಶಾಂತಕುಮಾರ ಪೂಜಾರ, ಪಾಲಾಕ್ಷಿ ಗಣದಿನ್ನಿ ,ನಾಗೇಶ ಹುಬ್ಬಳ್ಳಿ ,ಹು.ಬಾ.ವಡ್ಡಟ್ಟಿ ,ಕವಿ ಬಂಕಾಪುರ ,ಮುತ್ತು ಹಾಳಕೇರಿ ,ಬಿ.ಕೆ.ಪೂಜಾರ ,ಸತೀಶ ಪಾಶಿ , ಮಹೆಬೂಬಸಾಬ ಹವಲ್ದಾರ ,ಶಂಕರ ಕುಕನೂರ ,ಚಂದ್ರಹಾಸ ಉಳ್ಳಾಗಡ್ಡಿ ಇತರರಿದ್ದರು. ಶಾಂತಕುಮಾರ ಪೂಜಾರ ಸ್ವಾಗತಿಸಿದರು. ಎ.ಕೆ.ಮುಲ್ಲಾನವರ ನಿರೂಪಿಸಿದರು. ಹಿರಿಯ ಚಿತ್ರಕಲಾವಿದ ಶಂಕರಗೌಡ ಪಾಟೀಲ ಅವರು ಸಂಗ್ರಹಿಸಿದ ಬಿ.ಬಾಬು ಅವರ ರಂಗಭೂಮಿ ವೃತ್ತಿ ಬದುಕಿನ ವಿಶೇಷ ಛಾಯಾಚಿತ್ರಗಳು ಹಾಗೂ ಲೇಖನಗಳ ಪ್ರದರ್ಶನ ನಡೆಯಿತು.



ಪುರಾಣ ಮಂಗಲೋತ್ಸವ ಇಂದು: ಸುರೇಶ ಅಕ್ಕಿ



ಶಿರಹಟ್ಟಿ: ತಾಲೂಕಿನ ಖಾನಾಪುರ ಗ್ರಾಮದ ಮಹಾಮಹಿಮ ತ್ರಿವಿಧ ದಾಸೋಹ ಮೂರ್ತಿ ಕಲಬುರ್ಗಿ ಶ್ರೀ ಶರಣಬಸವೇಶ್ವರ ಪುರಾಣ ಪ್ರವಚನದ 50ನೇ ವರ್ಷದ ಸುವರ್ಣ ಮಹೋತ್ಸವದ ಮಹಾಮಂಗಲೋತ್ಸವ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮ ಮಾ. 8ರಂದು ಜರುಗಲಿದೆ ಎಂದು ಗ್ರಾಮದ ಮುಖಂಡ ಸುರೇಶ ಅಕ್ಕಿ ಹೇಳಿದರು.

ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಆಮಂತ್ರಣ ಕರ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿ, ಪುರಾಣ ಪ್ರವಚನದ ಸುವರ್ಣ ಮಹೋತ್ಸವದ ಮಹಾಮಂಗಲೋತ್ಸವ ಕಾರ್ಯಕ್ರಮದ ಮಾ. 8ರಂದು ಸಾಮೂಹಿಕ ವಿವಾಹ ಹಾಗೂ ಸಂಜೆ 7.30 ಗಂಟೆಗೆ ಮಹಾ ಮಂಗಲೋತ್ಸವ ಕಾರ್ಯಕ್ರಮ ನಡೆಯಲಿದೆ. ಇದರ ಸನ್ನಿಧಾನವನ್ನು ಶಿರಹಟ್ಟಿಯ ಫಕೀರ ಸಿದ್ದರಾಮ ಸ್ವಾಮೀಜಿ, ಬನ್ನಿಕೊಪ್ಪದ ಡಾ. ಸುಜ್ಞಾನದೇವ ಶಿವಾಚಾರ್ಯ ಸ್ವಾಮೀಜಿ ವಹಿಸುವರು. ಪುರಾಣ ಪ್ರವಚನವನ್ನು ನರಗುಂದದ ಪುಣ್ಯಾರಣ್ಯ ಪತ್ರಿವನಮಠದ ಡಾ. ಗುರು ಸಿದ್ದವೀರ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ನೀಡಲಿದ್ದಾರೆ. ಸಾನ್ನಿಧ್ಯವನ್ನು ಬೆಳ್ಳಟ್ಟಿಯ ಬಸವಲಿಂಗ ಸ್ವಾಮೀಜಿ ವಹಿಸುವರು ಎಂದರು. ಕಮಿಟಿ ಬಸವರಾಜ ಹಲಸೂರ, ಪಂಚಪ್ಪ ಹಲಸೂರ, ಅಶೋಕ ಮಡಿವಾಳರ, ರುದ್ರಪ್ಪ ಕರಮುಡಿ, ರಾಜು ಛಬ್ಬಿ, ಜಗದಯ್ಯ ಹಿರೇಮಠ, ಫಕ್ಕೀರಪ್ಪ ರಡ್ಡರ, ಮಹಾಂತೇಶ ಪವಾಡಶೆಟ್ಟರ, ಸುರೇಶ ಹಿರೇಮಠ, ದ್ಯಾಮಣ್ಣ ಬಂಡಿ, ಪಾರಮ್ಮ ಹಿರೇಮಠ, ಪಾರಮ್ಮ ಬೆಂತೂರ ಉಪಸ್ಥಿತರಿದ್ದರು.

ಹಿಂದೂ ಸಮ್ಮೇಳನ ಇಂದು: ಪಲ್ಲೇದ

ರೋಣ: ದ್ರೋಣಾಪೂರ ಎಂಬ ಹೆಗ್ಗಳಿಕೆಯನ್ನು ಹೊಂದಿರುವ ರೋಣ ನಗರದಲ್ಲಿ ಮಾ.8ರಂದು ಹಿಂದೂ ಸಮ್ಮೇಳನವನ್ನು ಅದ್ದೂರಿಯಿಂದ ಆಚರಿಸಲಾಗುವುದು ಎಂದು ಸಮಿತಿ ಅಧ್ಯಕ್ಷ ಶಿವಣ್ಣ ಪಲ್ಲೇದ ಹೇಳಿದರು.

ಅವರು ಶನಿವಾರ ಪಟ್ಟಣದ ಪಿಡಬ್ಲುಡಿ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ರಾಷ್ಟ್ರ ರಕ್ಷಣೆ ಮತ್ತು ರಾಷ್ಟ್ರಾಭಿಮಾನದ ವಿಷಯವಾಗಿ ಹಿಂದೂ ಸಮ್ಮೇಳನವನ್ನು ಆಯೋಜನೆ ಮಾಡಲಾಗಿದೆ. ಸಮ್ಮೇಳನದಲ್ಲಿ ದೇಶಾಭಿಮಾನ ಕುರಿತು ವಿಚಾರ ಸಂಕೀರ್ಣ ಜರುಗಲಿದೆ ಎಂದರು.

ಉಪಾಧ್ಯಕ್ಷ ಭರಮಗೌಡ ಲಿಂಗನಗೌಡ್ರ ಮಾತನಾಡಿ, ಸಮ್ಮೇಳನ ನಡೆಯುವ ದಿನ ಬೆಳಗ್ಗೆ 9 ಕ್ಕೆ ಪಟ್ಟಣದ ಸಿದ್ದಾರೂಢ ಮಠದಿಂದ ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನ 2ಕ್ಕೆ ರಾಘವೇಂದ್ರ ಕಲ್ಯಾಣ ಮಂಟಪದಿಂದ ಶೋಭಾಯಾತ್ರೆ ಏರ್ಪಡಿಸಲಾಗಿದೆ. ಶೋಭಾಯಾತ್ರೆಯಲ್ಲಿ ರಾಷ್ಟ್ರಭಕ್ತರ ಭಾವಚಿತ್ರಗಳನ್ನು ಪ್ರದರ್ಶನ ಗೈಯಲಾಗುವುದು. ಜೊತೆಗೆ ಯಾತ್ರೆಯೂ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಶರಣಬಸವೇಶ್ವರ ಪ್ರೌಢ ಶಾಲೆಯನ್ನು ತಲುಪಲಿದ್ದು, ಸಂಜೆ 6ಕ್ಕೆ ಸಾರ್ವಜನಿಕ ಸಮಾರಂಭ ನಡೆಯಲಿದೆ. ಸಾನ್ನಿಧ್ಯವನ್ನು ಗುರುಪಾದ ದೇವರು ವಹಿಸಲಿದ್ದು, ಮುಖ್ಯ ವಕ್ತರರಾಗಿ ಹನಮಂತ ಮಳಲಿ ಆಗಮಿಸಲಿದ್ದಾರೆ ಎಂದರು.

ಬಸವರಾಜ ಸಜ್ಜನರ, ಲಿಲಾವತಿ ಚಿತ್ರಗಾರ, ವಿರೇಶ ದೊಡ್ಡಣ್ಣವರ, ವೀರೇಶ ಗದಗಿನ, ವೀರೇಶ ಸಂಕನಗೌಡರ, ರವಿ ಕೊಪ್ಪದ, ವಿಶ್ವನಾಥ ಬಾಳಿಕಾಯಿ, ರಾಜು ಕುಲಕರ್ಣಿ, ಬಿ.ಎಂ.ಪಾಟೀಲ, ಪ್ರಶಾಂತ ಕೆಂದೂರ ಸೇರಿದಂತೆ ಹಿಂದೂ ಸಮ್ಮೇಳನ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಶಿಕ್ಷಕರಿಂದ ಸರ್ವತೋಮುಖ ಅಭಿವೃದ್ಧಿ



ಗಜೇಂದ್ರಗಡ: ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಮುಖ್ಯವಾಗಿದೆ. ಸರ್ಕಾರ ಕನ್ನಡ ಶಾಲೆಗಳನ್ನು ಉಳಿಸುವ ದೃಷ್ಟಿಯಲ್ಲಿ ಯೋಜನೆಗಳನ್ನು ರೂಪಿಸಬೇಕು. ಹಿಂದಿನ ಕಾಲಕ್ಕೂ ಮತ್ತು ಪ್ರಸ್ತುತ ಸಂದರ್ಭಕ್ಕೂ ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಬದಲಾವಣೆಗಳನ್ನು ಕಂಡಿದ್ದೇವೆ ಎಂದು ಎಸ್‌ಡಿಎಂಸಿ ಅಧ್ಯಕ್ಷ ರಾಜೇಸಾಬ್ ಸರ್ಕಾವಸ್ ಹೇಳಿದರು.

ತಾಲೂಕಿನ ಚಿಲಝರಿ ಗ್ರಾಮದಲ್ಲಿ ಜರುಗಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ 7ನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಉದ್ದೇಶಿಸಿ ಮಾತನಾಡಿದರು.

ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಶರಣಪ್ಪ ಕಡಬಲಕಟ್ಟಿ ಮಾತನಾಡಿ, ನಮ್ಮೂರ ಶಾಲೆ ದುರಸ್ತಿ ಹಂತದಲ್ಲಿದ್ದು, ಶಾಲಾ ಅಭಿವೃದ್ಧಿಗೆ ಸರ್ಕಾರದಿಂದ ಹಣವನ್ನು ಮಂಜೂರು ಮಾಡಬೇಕು ಎಂದರು.

ಗ್ರಾಮ ಪಂಚಾಯತ್ ಮಾಜಿ ಸದಸ್ಯ ಶಿವಪುತ್ರಪ್ಪ ಕಡಬಲಕಟ್ಟಿ, ಮುಖ್ಯೋಪಾಧ್ಯಾಯರಾದ ಕೆ. ಎಸ್.ಜಾವಾಳ, ಮಹ್ಮದಲಿ ಸರ್ಕಾವಸ್ ಮಾತನಾಡಿದರು. ಶಾಲೆಯ ಅಭಿವೃದ್ಧಿಗೆ ಸಹಕಾರ ನೀಡಿದ ಗಣ್ಯರಿಗೆ ಸನ್ಮಾನ ಮಾಡಲಾಯಿತು. ಮಹದೇವಪ್ಪ ಮಂಡಾಲಿ , ಕರಿಯಪ್ಪ ನರೇಗಲ್, ಮಹ್ಮದ ಅಲಿ ಗೋಡೆಕಾರ, ಮಹಾಂತೇಶ ಕೆಲೂರ, ಸಂತೋಷ ಉಪ್ಪಾರ, ಪರಸಪ್ಪ ಮಾದರ, ಸಣ್ಣಪ್ಪ ಮಾದರ, ಶಿಕ್ಷಕರಾದ ಮಧು, ಪರಶುರಾಮ ಮಾದರ, ಎಚ್. ಎಲ್. ಒಂಟಿ ಸೇರಿದಂತೆ ಅನೇಕರು ಇದ್ದರು. ನಂತರ ಮಕ್ಕಳಿಂದ ಅನೇಕ ರಾಷ್ಟ್ರಭಕ್ತಿ, ಜನಪದ, ಚಲನಚಿತ್ರ ಹಾಡುಗಳಿಗೆ ನೃತ್ಯ, ನಾಟಕ ರೂಪಕಗಳ ಕಾರ್ಯಕ್ರಮ ಜರುಗಿತು.

ಅರ್ಥಶಾಸ್ತ್ರ ಜ್ಞಾನ ಸೂಕ್ಷ್ಮವಾಗಿ ಬಳಸಿ

ಮುಂಡರಗಿ: ಪಟ್ಟಣದ ಶ್ರೀ ಜಗದ್ಗುರು ತೋಂಟದಾರ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಐಕ್ಯೂಎಸಿ ಘಟಕ ಮತ್ತು ಅರ್ಥಶಾಸ್ತ್ರ ವಿಭಾಗದ ಸಹಯೋಗದಲ್ಲಿ ಅರ್ಥಶಾಸ್ತ್ರ ನಿತ್ಯ ಜೀವನದಲ್ಲಿ-ವರ್ಗಕೊಠಡಿಯಿಂದ ಮಾರ್ಕೆಟಿಗೆ ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಕಲಕನಗೌಡ ಪೋಲಿಸ್‌ಪಾಟೀಲ ಮಾತನಾಡಿ, ಸಾಮಜಿಕ ವಿಜ್ಞಾನಗಳ ರಾಣಿಯಂದೇ ಪ್ರಖ್ಯಾತವಾಗಿರುವ ಅರ್ಥಶಾಸ್ತ್ರ ಜ್ಞಾನವು ಪ್ರತಿಯೊಬ್ಬ ನಾಗರಿಕನಿಗೂ ಅವಶ್ಯಕವಾಗಿದ್ದು, ದೈನಂದಿನ ಜೀವನದಲ್ಲಿ ಅದನ್ನು ಅತೀ ಸೂಕ್ಷ್ಮವಾಗಿ ಬಳಸಬೇಕೆಂದು ಹೇಳಿದರು.

ಅಧ್ಯಕ್ಷತೆಯನ್ನು ಪ್ರಾಂಶುಪಾಲೆ ಡಾ. ಉಮಾ ಸಿ. ಕೊಳ್ಳಿ ವಹಿಸಿದ್ದರು. ಕೊಟ್ರಮ್ಮ ಸ್ವಾಗತಿಸಿದರು, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಮಲ್ಲಿಕಾರ್ಜುನ ಬಿ. ಪ್ರಾಸ್ತಾವಿಸಿದರು. ಸಂತೋಷ ಮುರಶಿಳ್ಳಿ ಅವರು ಅತಿಥಿ ಪರಿಚಯಿಸಿದರು. ಆಂತರೀಕ ಗುಣಮಟ್ಟ ಭರವಸ ಕೋಶದ ಐ.ಕ್ಯೂ.ಎ.ಸಿ ಸಂಚಾಲಕಾರದ ಡಾ. ಜಗದೀಶ ಬಿ ಹುಲ್ಲೂರು ಕಾರ್ಯಕ್ರಮದ ಕುರಿತು ಮಾತನಾಡಿದರು. ಎಂ. ಬಿ ಬದನಿಕಾಯಿ, ಡಾ.ಜಗದೀಶ ಹುಲ್ಲೂರ, ಡಾ.ಭಾರತಿ ಜಿ. ಬ್ಯಾಳಿ, ಕಾವೇರಿ ಭೋಲಾ, ಯಮುನ ನಾಯ್ಕ, ಕಾಗನೂರ ಸಂತೋಷ ಇತರರಿದ್ದರು.



ವಾಣಿಜ್ಯ ನಗರಿಯಲ್ಲಿ ಸಂಭ್ರಮದ ಹೋಳಿ | ಯುವಕರಿಂದ ರೇನ್ ಡ್ಯಾನ್ಸ್

ಬಣ್ಣದಲ್ಲಿ ಮಿಂದೆದ್ದ ಜನತೆ

ಹುಬ್ಬಳ್ಳಿ: ರಂಗ ಪಂಚಮಿ ಅಂಗವಾಗಿ ನಗರದ ವಿವಿಧೆಡೆ ಶನಿವಾರ ಹೋಳಿ ಹಬ್ಬವನ್ನು ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು. ಮಕ್ಕಳು, ಯುವಕರೆನ್ನದೇ ಎಲ್ಲ ವಯೋಮಾನದವರೂ ಬಣ್ಣದ ಓಕುಳಿಯಲ್ಲಿ ಮಿಂದೆದ್ದರು. ಯುವಜನರು ರಸ್ತೆ, ಬೀದಿಗಳಲ್ಲಿ ಪರಸ್ಪರ ಬಣ್ಣ ಎರಚಿಕೊಂಡು ಖುಷಿಪಟ್ಟರು. ಹೋಟೆಲ್‌ಗಳು, ಮೈದಾನಗಳಲ್ಲಿಯೂ ಹೋಳಿ ಆಚರಿಸಲಾಯಿತು. ಕೆಲ ವಸತಿ ಸಮುಚ್ಚಯ ಹಾಗೂ ಮನೆಗಳಲ್ಲಿ ಪರಸ್ಪರ ಹೋಳಿ ಆಚರಿಸಿ, ನಂತರ ಸಿಹಿ ಹಂಚಿ ಸಂಭ್ರಮಿಸಿದರು.

ಯುವಕ, ಯುವತಿಯರು, ಮಕ್ಕಳು, ಮಹಿಳೆಯರು ಬಣ್ಣದಾಟದಲ್ಲಿ ತೊಡಗಿದ್ದರು. ಚಿಕ್ಕಮಕ್ಕಳು ಪಿಚಕಾರಿಯಿಂದ ದೊಡ್ಡವರಿಗೆ ಬಣ್ಣ ಎರಚಿ ಸಂಭ್ರಮಪಟ್ಟರು. ರಸ್ತೆಗಳೆಲ್ಲ ಬಣ್ಣಮಯವಾಗಿದ್ದವು. ಬಹುತೇಕ ಓಣಿಗಳಲ್ಲಿ ಚಿಣ್ಣರು ಬಲೂನು, ಪ್ಲಾಸ್ಟಿಕ್ ಕವರ್ ಹಾಗೂ ಪಿಚಕಾರಿಗಳಲ್ಲಿ ಬಣ್ಣದ ನೀರು ತುಂಬಿಕೊಂಡು ಸ್ನೇಹಿತರಿಗೆ, ಬೈಕ್‌ಗಳ ಮೇಲೆ ಹೋಗುವವರ ಮೇಲೆ ಬಣ್ಣ ಎರಚಿದರು.

ನಗರದ ಬಾನಿ ಓಣಿ, ಮೇದಾರ ಓಣಿ, ತೋಳನಕೆರೆ, ವಿದ್ಯಾನಗರ, ಕಮರಿಪೇಟ್, ಭಾರತವೃತ್ತ, ದುರ್ಗದ ಬೈಲ್‌ನಲ್ಲಿ ರೇನ್ ಡ್ಯಾನ್ಸ್ ಹಾಗೂ ಡಿ.ಜೆ. ಅಬ್ಬರಕ್ಕೆ ಯುವಜನತೆ ಕುಣಿದು ಕುಪ್ಪಳಿಸಿದರು. ಬಾನಿ ಓಣಿ ಸೇರಿದಂತೆ ಬಹುತೇಕ ಕಡೆ ಯುವಕ, ಯುವತಿಯರಿಗೆ ಡ್ಯಾನ್ಸ್ ಮಾಡಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. ಹಿಂದೂ ಸಂಘಟನೆ ಮುಖಂಡರು, ಪ್ರಸಿದ್ಧ ಕಲಾವಿದರು, ಜನಪ್ರತಿನಿಧಿಗಳು ಕೂಡಾ ಡಿಜೆ ಹಚ್ಚಿದ ಸ್ಥಳಗಳಿಗೆ ಭೇಟಿ ನೀಡಿ ಯುವಕರ ಹುರುದುಂಬಿಸಿದರು.

ಕೆಲವು ಕಾಲೋನಿಗಳಲ್ಲಿ ಮಕ್ಕಳು ಮನೆ ಮೇಲೆ ನಿಂತು ವಾಹನ ಸವಾರರಿಗೆ, ಪಾದಚಾರಿಗಳಿಗೆ ಬಣ್ಣದ ನೀರು ಎರಚಿದರು. ಯುವಕರ ಗುಂಪು ಬೈಕ್‌ನಲ್ಲಿ ಸಂಚರಿಸಿ ಕೇಕೆ ಹಾಕಿದರೆ, ಇನ್ನೂ ಕೆಲವರು ಹಲಗೆ ಬಾರಿಸುತ್ತಾ ಸಂಭ್ರಮಿಸಿದರು. ಕೆಲವರು ಬೈಕ್ ಮೇಲೆ ಪುನೀತ್ ರಾಜ್‌ಕುಮಾರ್ ಅವರ ಭಿತ್ತಿಚಿತ್ರ ಹಿಡಿದು 'ಪವರ್ ಸ್ಟಾರ್‌ಗೆ ಜಯವಾಗಲಿ' ಎಂದು ಘೋಷಣೆ ಕೂಗುತ್ತಾ ಸಾಗಿದ ಚಿತ್ರಣ ಕಂಡು ಬಂತು.



ಕಾಮದಹನ

ನೇಕಾರನಗರ, ಅಂಚಟಗೇರಿ ಓಣಿ, ದಾಜೀಬಾನ್ ಪೇಟೆ, ಮ್ಯಾದರ ಓಣಿ, ಸಿಂಪಿಗಲ್ಲಿ, ದುರ್ಗದ ಬೈಲ್, ಸ್ಟೇಷನ್ ರಸ್ತೆ, ಕಮರಿಪೇಟೆ, ಚನ್ನಪೇಟೆ, ಘೋಡಕೆ ಓಣಿ, ಅಯೋಧ್ಯಾನಗರ ಹೀಗೆ ನಗರದ 200ಕ್ಕೂ ಹೆಚ್ಚು ಕಡೆಗಳಲ್ಲಿ ಕಾಮಣ್ಣ-ರತಿಯರನ್ನು ಪ್ರತಿಷ್ಠಾಪಿಸಲಾಗಿತ್ತು. ಸಂಜೆ ಮೂರ್ತಿಗಳನ್ನು ಓಣಿಯಲ್ಲಿ ಮೆರವಣಿಗೆ ನಡೆಸಿ, ಕಾಮಣ್ಣನನ್ನು ದಹನ ಮಾಡಿದರು.

ಕಣ್ಗಾವಲು

ಅಹಿತಕರ ಘಟನೆ ನಡೆಯದಂತೆ ಎಚ್ಚರಿಕೆ ವಹಿಸಲು ಪೊಲೀಸ್ ಇಲಾಖೆ ಸೂಕ್ಷ್ಮ ಪ್ರದೇಶಗಳಲ್ಲಿ ಕಣ್ಗಾವಲು ಹಾಕಿತ್ತು. ಸುಮಾರು 2 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ನಿಯೋಜಿಸಲಾಗಿತ್ತು. ಪ್ರಮುಖ ಡಿಜೆ ಹಚ್ಚಿದ ಪ್ರದೇಶ, ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿ ನಿಯೋಜಿಸಲಾಗಿತ್ತು. ಇನ್ನೂ ಕೆಲವು ಪೊಲೀಸ್ ಠಾಣೆಯಲ್ಲಿ ಪೊಲೀಸರು ಬಣ್ಣ ಆಡುವ ಮೂಲಕ ಸಂಭ್ರಮಿಸಿದರು. ತೋಳನಕೆರೆ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಡಿಸಿಪಿ ರವೀಶ್ ಸಿ.ಆರ್. ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಡಳಿತಾತ್ಮಕ ತರಬೇತಿ ಮುಕ್ತಾಯ | ಸಚಿವ ಡಾ.ಸುಧಾಕರ್ ಮಾಹಿತಿ

ಶಿಕ್ಷಣದಲ್ಲಿ ಇ-ಆಡಳಿತ ಜಾರಿ

ಧಾರವಾಡ: ಆಧುನಿಕ ಶಿಕ್ಷಣದಲ್ಲಿ ತಂತ್ರಜ್ಞಾನದ ಪಾತ್ರ ದೊಡ್ಡದಿದೆ. ಕಾಲೇಜಿನಲ್ಲಿ ಡಿಜಿಟಲ್ ಪಠ್ಯಕ್ರಮ ಮತ್ತು ಇ-ಆಡಳಿತ ಜಾರಿಗೆ ಪ್ರಾಂಶುಪಾಲರು ಹೆಚ್ಚಿನ ಆಸಕ್ತಿ ತೋರಿಸುವಂತೆ ಉನ್ನತ ಶಿಕ್ಷಣ ಇಲಾಖೆ ಸಚಿವ ಡಾ.ಎಂ.ಸಿ.ಸುಧಾಕರ್ ಸಲಹೆ ನೀಡಿದರು.

ನಗರದ ಉನ್ನತ ಶಿಕ್ಷಣ ಅಕಾಡೆಮಿಯಲ್ಲಿ ಆಡಳಿತಾತ್ಮಕ ತರಬೇತಿ ಮುಗಿಸಿದ ಸರ್ಕಾರಿ ದರ್ಜೆ ಕಾಲೇಜಿನ ಪ್ರಾಚಾರ್ಯರಿಗೆ ಪ್ರಮಾಣ ಪತ್ರ ವಿತರಿಸಿದ ಅವರು, ಸರ್ಕಾರಿ ಕಾಲೇಜು ಖಾಸಗಿ ಸಂಸ್ಥೆಗಳಿಗೆ ಪೈಪೋಟಿ ನೀಡುವಂತೆ ಹೇಳಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಮ್ಮ ವಿದ್ಯಾರ್ಥಿಗಳು ಆಯ್ಕೆ ಬಹಳ ವಿರಳ. ನಮ್ಮ ಮಕ್ಕಳಿಗೆ ಅನುಕೂಲಕ್ಕೆ ಸಿಬ್ಬಂದಿ ಆಯ್ಕೆ ಆಯೋಗ (ಎಸ್‌ಎಸ್‌ಸಿ) ನಡೆಸುವ ಪರೀಕ್ಷೆತೆರ್ಗಡೆ ಪಠ್ಯದಲ್ಲಿ ಎಲ್ಲ ವಿಷಯ ಅಳವಡಿಸಲು ಚಿಂತನೆ ನಡೆಸಲಾಗಿದೆ ಎಂದರು.

ಕನ್ನಡ ಮಾತೃ ಭಾಷೆ ನಿಜ. ಆದರೆ, ಇಂದಿನ ಯುಗದಲ್ಲಿ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷಾ ಪ್ರಭುತ್ವವೂ ಅವಶ್ಯ. ತರಬೇತಿ ಪಡೆದ ಪ್ರಾಂಶುಪಾಲರು ತಮ್ಮ ಕಾಲೇಜಿನ ವಿದ್ಯಾರ್ಥಿಗಳು ಆಂಗ್ಲ ಭಾಷೆಯಲ್ಲಿ ಸಂವಹನ ನಡೆಸಲು ಪ್ರೇರೇಪಿಸಬೇಕು ಎಂದು ಹೇಳಿದರು.

ಆಡಳಿತ ಜವಾಬ್ದಾರಿ: ಪ್ರಾಂಶುಪಾಲರ ಹುದ್ದೆ ಅತ್ಯಂತ ಜವಾಬ್ದಾರಿಯುತವಾದುದು. ಕಾಲೇಜಿನ ಆಡಳಿತದಲ್ಲಿ ಶಿಸ್ತಿನ ಜೊತೆಗೆ ಪಾರದರ್ಶಕತೆ ಮತ್ತು ದಕ್ಷತೆಯನ್ನು ಕಾಪಾಡಿಕೊಳ್ಳುವುದು ಪ್ರಾಚಾರ್ಯರ ಮೊದಲ ಆದ್ಯತೆಯಾಗಲಿ ಎಂದು ಸಲಹೆ ನೀಡಿದರು.

ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ: ಸರ್ಕಾರಿ ಕಾಲೇಜುಗಳಿಗೆ ಬರುವ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು. ಮೂಲಸೌಕರ್ಯಗಳ ಸದ್ಬಳಸಿಕೊಂಡು ವಿದ್ಯಾರ್ಥಿಗಳ ಉದ್ಯೋಗಾರ್ಹತೆ ಹೆಚ್ಚಿಸಲು ಕ್ರಮ ವಹಿಸಲು ಹೇಳಿದರು.

ಸಮಸ್ಯೆಗಳ ಪರಿಹಾರ: ಕಾಲೇಜು ಮಟ್ಟದಲ್ಲಿ ಎದುರಾಗುವ ಸಣ್ಣಪುಟ್ಟ ಸಮಸ್ಯೆಗಳನ್ನು ಸ್ಥಳೀಯವಾಗಿಯೇ ಬಗೆಹರಿಸುವ ನಾಯಕತ್ವ ಗುಣಗಳು ಬೆಳೆಸಿಕೊಳ್ಳಬೇಕು. ಇಲಾಖೆಯಿಂದ ಅಗತ್ಯ ಎಲ್ಲ ಸಹಕಾರವನ್ನು ನೀಡಲಾಗುವುದು ಎಂದು ಭರವಸೆ ನೀಡಿದರು.

ಉನ್ನತ ಶಿಕ್ಷಣ ಅಕಾಡೆಮಿ ಆಯುಕ್ತೆ ಮಂಜುಶ್ರೀ ಎನ್., ಪಡೆದ ತರಬೇತಿಯ ಕೌಶಲ್ಯ ಬಳಸಿಕೊಂಡು, ವಿದ್ಯಾರ್ಥಿಗಳಿಗೆ ಉತ್ತಮ ಬೋಧನೆ ಮಾಡಬೇಕು. ಮಕ್ಕಳ ಹಾಗೂ ಕಾಲೇಜಿನ ಸರ್ವಾಂಗೀಣ ಬೆಳವಣಿಗೆಗೆ ಶ್ರಮಿಸುವಂತೆ ಕರೆ ನೀಡಿದರು.

ಉನ್ನತ ಶಿಕ್ಷಣ ಇಲಾಖೆ ಹೆಚ್ಚುವರಿ ನಿರ್ದೇಶಕಿ ಡಾ.ಎ.ಎಚ್.ಎಂ. ವಿಜಯಲಕ್ಷ್ಮೀ, ಕವಿವಿ ಕುಲಪತಿ ಡಾ.ಎ.ಎಂ.ಖಾನ್ ಇದ್ದರು. ಶಿಕ್ಷಣ ಅಕಾಡೆಮಿ ನಿರ್ದೇಶಕ ಡಾ. ರಮೇಶ ರಟಗೇರಿ ಸ್ವಾಗತಿಸಿದರು. ಅಕಾಡೆಮಿ ಡೀನ್ ಡಾ.ಅರುಂಧತಿ ವಂದಿಸಿದರು.



> **ಈ ತರಬೇತಿ ಪ್ರಾಚಾರ್ಯರಿಗೆ ಆಡಳಿತಾತ್ಮಕ ಕಾನೂನುಗಳು ಮತ್ತು ಹಣಕಾಸು ನಿಯಮಗಳು, ಅಕಾಡೆಮಿಕ್ ಚಟುವಟಿಕೆಗಳ ಬಗ್ಗೆ ಸ್ಪಷ್ಟ ಚಿತ್ರಣವೂ ನೀಡಲಿದೆ. ಇಲ್ಲಿ ಕಲಿತ ವಿಷಯಗಳನ್ನು ನಿಮ್ಮ ಕಾಲೇಜುಗಳಲ್ಲಿ ಅನ್ವಯಿಸಿ, ಮಾದರಿ ಶಿಕ್ಷಣ ಸಂಸ್ಥೆಗಳನ್ನಾಗಿ ರೂಪಿಸಬೇಕು.**
> ■ ಡಾ. ಎಂ.ಸಿ.ಸುಧಾಕರ್, ಸಚಿವ

ಟ್ರಂಪ್ ಕೈಯಲ್ಲಿದೆ ಭಾರತದ ಆಡಳಿತ

ಧಾರವಾಡ: ಭಾರತದ ಆಡಳಿತ ಪರೋಕ್ಷವಾಗಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೂಚನೆಯಂತೆ ನಡೆಯುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಟೀಕೆ ಮಾಡಿದರು. ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಕುರಿತು ಮಾತನಾಡುವ ಬಿಜೆಪಿಗರು ತಮ್ಮನ್ನು ಟ್ರಂಪ್ ಆಟವಾಡಿಸುವ ಬಗ್ಗೆ ಮೊದಲು ಉತ್ತರ ಕೊಡಲಿ ಎಂದು ವಾಗ್ದಾಳಿ ನಡೆಸಿದರು. ಬಿಜೆಪಿಗರು ಜಾಗತಿಕ ಮಟ್ಟದಲ್ಲಿ ಭಾರತದ ಮಾನ, ಮರ್ಯಾದೆ ಕಳೆಯುತ್ತಿದ್ದಾರೆ. ಹಿಂದೂ-ಮುಸ್ಲಿಂ ಗಲಾಟೆ ಎಬ್ಬಿಸಿ, ತಮ್ಮ ತಪ್ಪುಗಳು ಮರೆಮಾಚುವ ಹುನ್ನಾರ ನಡೆಸಿದ್ದಾಗಿಯೂ ದೂರಿದರು. ಕರ್ನಾಟಕದಲ್ಲಿ ಬಿಜೆಪಿಗರಿಗೆ ಯಾವುದೇ ಕೆಲಸವೂ ಇಲ್ಲ, ಗತಿಯೂ ಇಲ್ಲ. ಇದೇ ಕಾರಣಕ್ಕೆ ಹಿಂದು-ಮುಸ್ಲಿಂ ಮತ್ತು ಅಲ್ಪಸಂಖ್ಯಾತರ ಹೆಸರಲ್ಲಿ ಜಪ ಮಾಡುತ್ತಿದ್ದಾರೆ ಎಂದು ಕಟುವಾಗಿ ಟೀಕಿಸಿದರು. ರಾಜ್ಯದಲ್ಲಿ ಖಂಡಿತವಾಗಿಯೂ ತುಷ್ಟೀಕರಣವೇ ಇಲ್ಲ. ಬಿಜೆಪಿಗರಿಗೆ ಬೇರೆ ಕಾರಣ ಇಲ್ಲ. ಹೀಗಾಗಿ ಸಮಾಜ ಇಬ್ಭಾಗ ಮಾಡುವ ಕೆಲಸ ಮಾಡುತ್ತಿದ್ದಾರೆ ಎಂದು ಡಾ. ಸುಧಾಕರಣ ಆರೋಪಿಸಿದರು. ಪ್ರಸಕ್ತ ಬಜೆಟ್ 4.48 ಲಕ್ಷ ಕೋಟಿ. ಇದರಲ್ಲಿ 1.21 ಲಕ್ಷ ಗ್ಯಾರಂಟಿ ಯೋಜನೆಗೆ ವಿನಿಯೋಗಿಸಲಿದೆ. ಹಿಂದಿನ ಬಿಜೆಪಿ ಸರ್ಕಾರ 2.65 ಲಕ್ಷ ಕೋಟಿ ಸಾಲ ಮಾಡಿಟ್ಟಿದೆ ಎಂದು ದೂರಿದರು. ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಕೊಡುಗೆ ನೀಡದೆ, ಚಂಬು ಕೊಟ್ಟಿದೆ. 2014ಕ್ಕೂ ಮೊದಲು ದೇಶದ ಸಾಲ 53 ಲಕ್ಷ ಕೋಟಿ ಇತ್ತು. ಇದೀಗ 218 ಲಕ್ಷ ಕೋಟಿಗೆ ಏರಿದ್ದು ಹೇಗೆ? ಎಂದು ಪ್ರಶ್ನಿಸಿದರು.

> **ದೇಶದಲ್ಲಿ ಹೊಸ ನಾಯಕತ್ವ ಬರಬೇಕಾದರೆ, ಕಾಲೇಜು ಚುನಾವಣಾ ಪ್ರಕ್ರಿಯೆ ಅಗತ್ಯವಿದೆ. ಈ ಹಿಂದಿನ ಕಾಲೇಜು ನಾಯಕರು, ಇದೀಗ ರಾಷ್ಟ್ರ ಮತ್ತು ರಾಜ್ಯ ನಾಯಕರಾಗಿದ್ದಾರೆ. ಹೀಗಾಗಿ ಯಾವುದೇ ಗದ್ದಲಗಳು ಹಾಗೂ ದೌರ್ಜನ್ಯಗಳಿಗೆ ಆಸ್ಪದ ನೀಡದಂತೆ ಕಾಲೇಜು ಚುನಾವಣೆ ನಡೆಯಬೇಕು.**
> ■ ಡಾ. ಎಂ.ಸಿ.ಸುಧಾಕರ, ಉನ್ನತ ಶಿಕ್ಷಣ ಇಲಾಖೆ ಸಚಿವ

ಕಿರುಸುದ್ದಿ

ಸಂಸತ್ತಿನ ಹಕ್ಕು ಬಾಧ್ಯತೆ ಸಮಿತಿ ಸದಸ್ಯರಾಗಿ ಶೆಟ್ಟರ



ಹುಬ್ಬಳ್ಳಿ: ಬೆಳಗಾವಿ ಲೋಕಸಭಾ ಸದಸ್ಯರು ಹಾಗೂ ಕರ್ನಾಟಕ ರಾಜ್ಯದ ಮಾಜಿ ಮುಖ್ಯ ಮಂತ್ರಿ ಜಗದೀಶ ಶೆಟ್ಟರ ಅವರು ಸಂಸತ್ತಿನ ಹಕ್ಕು ಬಾಧ್ಯತೆ ಸಮಿತಿಯ(Committee of Privilege) ಸದಸ್ಯರಾಗಿ ನೇಮಕಗೊಂಡಿರುತ್ತಾರೆ. ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು 15 ಜನ ಸದಸ್ಯರನ್ನು 18ನೇ ಲೋಕಸಭೆಯ ಅವಧಿಗೆ ಪ್ರಸ್ತಾಪಿತ ಸಮಿತಿಗೆ ಆಯ್ಕೆ ಮಾಡಿದ್ದು, ಸಂಸತ್ತಿನ ಸ್ವಾತಂತ್ರ್ಯತೆಯ ಅಧಿಕಾರ ಮತ್ತು ಘನತೆ ಕಾಪಾಡುವುದು ಈ ಸಮಿತಿಯ ಮುಖ್ಯ ಉದ್ದೇಶವಾಗಿದೆ. ಈ ಸಂಸತ್ತಿನ ಹಕ್ಕು ಬಾಧ್ಯತೆ ಸಮಿತಿಯ ಸದಸ್ಯರಾಗಿ ನೇಮಕ ಮಾಡಿರುವ ಕುರಿತು ಲೋಕಸಭಾ ಸದಸ್ಯರಾದ ಜಗದೀಶ ಶೆಟ್ಟರ ಸಂತಸ ವ್ಯಕ್ತಪಡಿಸಿದ್ದು, ಇದೇ ಸಂದರ್ಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಹಾಗೂ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಧನ್ಯವಾದ ತಿಳಿಸಿದ್ದಾರೆ.

ಕಾರು ಪಲ್ಟಿ: ವೃದ್ಧ ದಂಪತಿ ಸಾವು

ಕೂಡ್ಲಿಗಿ: ತಾಲೂಕಿನ ಅಡವಿ ಸೂರವ್ವನಹಳ್ಳಿ ಕ್ರಾಸ್ ಬಳಿ ಎನ್‌ಎಚ್-50ರಲ್ಲಿ ಕಾರೊಂದು ಉರುಳಿ ಬಿದ್ದು ವೃದ್ಧ ದಂಪತಿ ಮೃತಪಟ್ಟ ಘಟನೆ ಶನಿವಾರ ನಡೆದಿದೆ. ಮೃತರನ್ನು ಬೆಂಗಳೂರಿನ ಸುಬ್ಬಣ್ಣ ಪಾಳ್ಯ ಬಡಾವಣೆ ಪಾಟೀಲ ನಾರಾಯಣಸ್ವಾಮಿ ಲೇಔಟ್‌ನ ನಿವಾಸಿಗಳಾದ ರತ್ನಾ ಬಾಯಿ(65), ಅವರ ಪತಿ ಶ್ರೀನಿವಾಸ್(70) ಎಂದು ಗುರುತಿಸಲಾಗಿದೆ. ಕಾರು ಚಲಾಯಿಸುತ್ತಿದ್ದ ರೂಪೇಶ್ ಮತ್ತು ಅವರ ಪತ್ನಿ ಕವಿತಾ ಬಾಯಿ ಗಾಯಗೊಂಡಿದ್ದಾರೆ. ರೂಪೇಶ್ ಕುಟುಂಬ ಅಂಜನಾದ್ರಿಯ ಆಂಜನೇಯ ಸ್ವಾಮಿ ದರ್ಶನಕ್ಕಾಗಿ ಕಾರಿನಲ್ಲಿ ಬರುತ್ತಿತ್ತು. ಅಡವಿಸೂರವ್ವನಹಳ್ಳಿ ಕ್ರಾಸ್ ಬಳಿ ಬಂದಾಗ ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ಸೇತುವೆ ಪಕ್ಕದ ಗುಂಡಿಗೆ ಬಿದಿದೆ. ರತ್ನ ಬಾಯಿ ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರೆ, ಅವರ ಪತಿ ಶ್ರೀನಿವಾಸ್ ಕೂಡ್ಲಿಗಿ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟರು. ಕವಿತಾಬಾಯಿ ಹಾಗೂ ರೂಪೇಶ್ ಕೂಡ್ಲಿಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಕೂಡ್ಲಿಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಟೆಗೋಡೆಯಲ್ಲಿ ಚಾಲುಕ್ಯರ ಶರಭದ ಉಬ್ಬು ಶಿಲ್ಪ ಪತ್ತೆ

ವಿಜಯಪುರ: ನಗರದ ಪುರಾತನ ಕೋಟೆಯಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಶರಭ ಉಬ್ಬು ಶಿಲ್ಪ ಪತ್ತೆಯಾಗಿದ್ದು, ರಾಷ್ಟ್ರೀಯ ಸಂಶೋಧನಾ ವೇದಿಕೆ ಅಧ್ಯಕ್ಷ ಲಾಯಪ್ಪ ಇಂಗಳೆ ಉಬ್ಬು ಶಿಲ್ಪ ಗುರುತಿಸಿದ್ದು, ವಿಜಯಪುರ ನಗರದ ಕೋಟೆಯು ಕಲ್ಯಾಣ ಚಾಲುಕ್ಯರು ಮತ್ತು ದೇವಗಿರಿ ಯಾದವರು ನಿರ್ಮಿಸಿರುವುದಕ್ಕೆ ಪ್ರಮುಖ ಐತಿಹಾಸಿಕ ದಾಖಲೆಯಾಗಿದೆ ಎಂದು ತಿಳಿಸಿದ್ದಾರೆ.

ಶರಭ ಎಂದರೆ ಹಿಂದೂ ಪುರಾಣಗಳಲ್ಲಿ ವರ್ಣಿಸಲಾದ, ಸಿಂಹದ ಮುಖ ಮತ್ತು ಹಕ್ಕಿಯ ರೆಕ್ಕೆಗಳು ಹಾಗೂ ಎಂಟು ಕಾಲುಗಳನ್ನು ಹೊಂದಿರುವ ಶಕ್ತಿಶಾಲಿ ಪ್ರಾಣಿಯಾಗಿದೆ. ಇದು ಆನೆ ಮತ್ತು ಸಿಂಹಕ್ಕಿಂತ ಅತ್ಯಂತ ಶಕ್ತಿಶಾಲಿ ಎಂದು ಪರಿಗಣಿಸಲ್ಪಟ್ಟಿದೆ. ನರಸಿಂಹನ ಕೋಪವನ್ನು ಶಾಂತಗೊಳಿಸಲು ಶಿವನು ಶರಭನ ಅವತಾರ (ಶರಭೇಶ್ವರ) ತಾಳಿದನು ಎಂದು ಶೈವ ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ.

ಇದು ಒಂದೇ ಜಿಗಿತದಲ್ಲಿ ಬೃಹತ್ ಕಣಿವೆಗಳನ್ನು ಜಿಗಿಯಬಲ್ಲಂತಹ ವೇಗ ಮತ್ತು ಸಾಮರ್ಥ್ಯವನ್ನು ಹೊಂದಿದೆ ಎಂದು ತಿಳಿಸಲಾಗಿದೆ. ಹಿರಣ್ಯಕಶ್ಯಪನನ್ನು ವಧಿಸಿದ ನಂತರ ಉಗ್ರರೂಪಿಯಾಗಿದ್ದ ನರಸಿಂಹನನ್ನು ಪಳಗಿಸಲು ಶಿವನು ಈ ಅವತಾರ ಧರಿಸಿದ್ದು ಶರಭದ ಪೌರಾಣಿಕ ಹಿನ್ನೆಲೆಯಾಗಿದೆ.

ಬೌದ್ಧ ಜಾತಕ ಕಥೆಗಳಲ್ಲಿ, ಶರಭನು ಬುದ್ಧನ ಹಿಂದಿನ ಜನ್ಮದ ಸಂಕೇತವಾಗಿ ಕಾಣಿಸಿಕೊಳ್ಳುತ್ತದೆ. ಇದು ಶಕ್ತಿ ಮತ್ತು



ಕರುಣೆ ಪ್ರತಿನಿಧಿಸುತ್ತದೆ. ಕೆಲವೊಮ್ಮೆ ಇದನ್ನು ಗಂಡಭೇರುಂಡದೊಂದಿಗೆ ಹೋಲಿಸಲಾಗುತ್ತದೆ. ಗಂಡಭೇರುಂಡ ವಿಷ್ಣುವಿನ ಸಂಕೇತವಾದರೆ, ಶರಭವು ಮುಖ್ಯವಾಗಿ ಶಿವನ ಶಕ್ತಿಯ ಸಂಕೇತವಾಗಿದೆ.

ಪ್ರತಿಮಾಶಾಸ್ತ್ರದ ಪ್ರಕಾರ ಶರಭ ಎಂದರೆ ಬೇಟೆಗಾರ ಭಾಗಶಃ ಪ್ರಾಣಿ, ಭಾಗಶಃ ಪಕ್ಷಿ ಮತ್ತು ದೊಡ್ಡ ಕಿರೀಟವನ್ನು ಧರಿಸಿರುವ ಎರಡು ತಲೆಗಳೊಂದಿಗೆ ದೇಹವನ್ನು ಹೊಂದಿದ್ದಾನೆ ಎಂದು ವಿವರಿಸುತ್ತದೆ.

ಇಂತಹ ಅಪರೂಪದ ಐತಿಹಾಸಿಕ, ಪಾರಂಪರಿಕ ಹಿನ್ನೆಲೆ ಹೊಂದಿರುವ ಕಲ್ಯಾಣ ಚಾಲುಕ್ಯರು ಮತ್ತು ದೇವಗಿರಿ ಯಾದವರ ಇತಿಹಾಸ ಸಾರುವ ಶರಭದ ಉಬ್ಬು ಶಿಲ್ಪವು ವಿಜಯಪುರ ಕೋಟೆಯಲ್ಲಿ ಕೆತ್ತಿಸಿರುವುದು ಚಾಲುಕ್ಯರು ಮತ್ತು ಯಾದವರ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿಯಾಗಿದ್ದು, ಈ ಐತಿಹಾಸಿಕ ಶರಭದ ಶಿಲ್ಪ ಇರುವ ಕೋಟೆ ಭಾಗವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಅಧಿಕಾರಿಗಳು ಸಂರಕ್ಷಣೆ ಮಾಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 52ರ ಅಭಿವೃದ್ಧಿಗೆ ಕೇಂದ್ರದಿಂದ ಅನುದಾನ

101.21 ಕೋಟಿ ರೂ. ಮಂಜೂರು: ಕಾಗೇರಿ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಮಲೆನಾಡು ಮತ್ತು ಕರಾವಳಿ ಭಾಗವನ್ನು ಬೆಸೆಯುವ ಪ್ರಮುಖ ರಸ್ತೆಯಾದ ರಾಷ್ಟ್ರೀಯ ಹೆದ್ದಾರಿ 52ರ ವ್ಯಾಪ್ತಿಯಲ್ಲಿ ಬರುವ ಹೊಸಹಳ್ಳಿಯಿಂದ ಯಲ್ಲಾಪುರ ಹಾಗೂ ಮಾಸ್ತಿಕಟ್ಟೆಯಿಂದ ಬಾಳೆಗುಳಿ ವರೆಗಿನ ರಸ್ತೆಗಳ ಸುಧಾರಣೆಗೆ ಕೇಂದ್ರ ಸರ್ಕಾರವು 101.21 ಕೋಟಿ ರೂ.ಗಳ ಬೃಹತ್ ಅನುದಾನವನ್ನು ಬಿಡುಗಡೆ ಮಾಡಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಈ ಯೋಜನೆಯಡಿ ಸುಮಾರು 44.74 ಕಿಮೀ ಉದ್ದದ ರಸ್ತೆಯನ್ನು ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಅಭಿವೃದ್ಧಿಪಡಿಸಲಾಗುತ್ತಿದ್ದು, ಇದರಲ್ಲಿ ರಸ್ತೆಯ ಬಲವರ್ಧನೆ ಮತ್ತು ಅಗತ್ಯವಿರುವ ಕಡೆಗಳಲ್ಲಿ ಸಂಪೂರ್ಣ ಪುನರ್ ನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಜಿಲ್ಲೆಯ ಸಾರಿಗೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತರಲಿರುವ ಈ ಯೋಜನೆಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಜಿಲ್ಲೆಯ ಜನತೆಯ ಪರವಾಗಿ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಈ ಯೋಜನೆಯಲ್ಲಿ ಕೇವಲ ರಸ್ತೆ ಅಭಿವೃದ್ಧಿ ಮಾತ್ರವಲ್ಲದೆ, ಜಿಲ್ಲೆಯ ಭೌಗೋಳಿಕ ಪರಿಸ್ಥಿತಿಗೆ ಅನುಗುಣವಾಗಿ ಕಿಮೀ 393.903 ರಲ್ಲಿ ಕಂಚನಬೈಲು ಬಳಿ ಹಳೆಯದಾದ ಸಣ್ಣ ಸೇತುವೆಯನ್ನು ತೆರವುಗೊಳಿಸಿ 12 ಮೀಟರ್ ಅಗಲದ ಹೊಸ ಸೇತುವೆಯನ್ನು ನಿರ್ಮಿಸಲು ನಿರ್ಧರಿಸಲಾಗಿದೆ. ಜೊತೆಗೆ ಕಿಮೀ 384.628 ರಲ್ಲಿರುವ ಪ್ರಮುಖ ಹೊನ್ನಳ್ಳಿಯ ಸೇತುವೆಯನ್ನು ಆಧುನಿಕ ಪದ್ಧತಿಯಲ್ಲಿ ದುರಸ್ತಿಗೊಳಿಸಲಾಗುವುದು. ಮಳೆಯಿಂದ ರಸ್ತೆ ಹಾನಿಯಾಗದಂತೆ ತಡೆಯಲು 5.7 ಕಿಮೀ ಉದ್ದದ ಸುಸಜ್ಜಿತ ಆರ್‌ಸಿಸಿ ಚರಂಡಿ ವ್ಯವಸ್ಥೆ ಮತ್ತು 4 ಪ್ರಮುಖ ಜಂಕ್ಷನ್‌ಗಳ ಸುಧಾರಣೆಗೆ ಒತ್ತು ನೀಡಲಾಗಿದೆ.

ಈ ಕಾಮಗಾರಿಯನ್ನು ಅತ್ಯಂತ ವೇಗವಾಗಿ ಅಂದರೆ ಮುಂದಿನ 11 ತಿಂಗಳ ಒಳಗೆ ಪೂರ್ಣಗೊಳಿಸಲು ಗುರಿ ನಿಗದಿಪಡಿಸಲಾಗಿದ್ದು, ಕಾಮಗಾರಿ ಮುಗಿದ ನಂತರವೂ ಐದು ವರ್ಷಗಳ ಕಾಲ ಗುತ್ತಿಗೆದಾರರೇ ರಸ್ತೆಯ ನಿರ್ವಹಣೆಯನ್ನು ನೋಡಿಕೊಳ್ಳುವಂತೆ ಕಟ್ಟುನಿಟ್ಟಿನ ನಿಯಮ ರೂಪಿಸಲಾಗಿದೆ. ಜಿಲ್ಲೆಯ ಪ್ರವಾಸೋದ್ಯಮ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಪೂರಕವಾಗಲಿರುವ ಈ ಯೋಜನೆಯು ಮುಂದಿನ ದಿನಗಳಲ್ಲಿ ಉತ್ತರ ಕನ್ನಡದ ಸಂಚಾರ ವ್ಯವಸ್ಥೆಯನ್ನು ಇನ್ನಷ್ಟು ಸುಗಮಗೊಳಿಸಲಿದೆ ಎಂದು ಅವರು ಹೇಳಿದ್ದಾರೆ.

ಸಂಭ್ರಮದ ಉಚ್ಚಾಯಿ ರಥೋತ್ಸವ



ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಆರಾಧ್ಯ ದೈವ, ದಾಸೋಹ ಮೂರ್ತಿ ಶ್ರೀ ಶರಣಬಸವೇಶ್ವರರ 204ನೇ ಮಹಾ ದಾಸೋಹ ಯಾತ್ರಾ ಮಹೋತ್ಸವ ಅಂಗವಾಗಿ ಶನಿವಾರ ಶ್ರೀ ಶರಣಬಸವೇಶ್ವರರ ದೇವಸ್ಥಾನದ ಆವರಣದಲ್ಲಿ ಭಕ್ತರ ಚುರುಕು ಭಾಗವಹಿಸುವಿಕೆಯಲ್ಲಿ ಅದ್ದೂರಿ ಉಚ್ಚಾಯಿ ರಥೋತ್ಸವ ಜರುಗಿತು.

ರಾಜ್ಯ ಸೇರಿದಂತೆ ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ತೆಲಂಗಾಣ ನಗರದ ವಿವಿಧ ಭಾಗಗಳಿಂದ ಬಂದ ಭಕ್ತರು ಪರಂಪರೆಯಂತೆ ಉಚ್ಚಾಯಿ ರಥವನ್ನು ಎಳೆದು ದರ್ಶನ ಮಾಡಿಕೊಂಡು ಭಕ್ತಿ ಪೂರಿತ ಶುಭಾಶಯಗಳನ್ನು ಸಲ್ಲಿಸಿದರು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ,ಶರಣಬಸವ ವಿವಿಯ ಕುಲಾಧಿಪತಿ ಮಾತೋಶ್ರೀ ಡಾ.ದಾಕ್ಷಾಯಿಣಿ ಎಸ್ ಅಪ್ಪ, ಸಂಸ್ಥಾನದ 9ನೇ ಪೀಠಾಧಿಪತಿ ಚಿ.ದೊಡ್ಡಪ್ಪ ಅಪ್ಪ ಅವರ ಸಮ್ಮುಖದಲ್ಲಿ ವಿವಿಧ ಧಾರ್ಮಿಕ ಪೂಜೆಗಳ ಬಳಿಕ ಉಚ್ಚಾಯಿ ರಥೋತ್ಸವ ಜರುಗಿತು.

ಉಚ್ಚಾಯಿ ರಥೋತ್ಸವದಲ್ಲಿ ಶ್ರೀ ಶರಣಬಸವೇಶ್ವರ ಸಂಸ್ಥಾನದ ಕಾರ್ಯದರ್ಶಿ ಬಸವರಾಜ ದೇಶಮುಖ, ಅಲ್ಲಂಪ್ರಭು ದೇಶಮುಖ ಸೇರಿದಂತೆ ಗಣ್ಯರು ಸಾವಿರಾರು ಭಕ್ತಾಧಿಗಳು ಉಚ್ಚಾಯಿಯ ದರ್ಶನ ಪಡೆದು ಪುನೀತರಾದರು.

ಯುಪಿಎಸ್‌ಸಿ: ನಾಲ್ವರು ತೇರ್ಗಡೆ

ಯಾದಗಿರಿ: ಶೈಕ್ಷಣಿಕವಾಗಿ ಸದಾ ಹಿಂದುಳಿದಿದೆ ಎಂಬ ಅಪಖ್ಯಾತಿಗೆ ಒಳಗಾಗಿದ್ದ ಯಾದಗಿರಿ ಜಿಲ್ಲೆಯಿಂದ ಈ ಬಾರಿಯ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸುವ ಪರೀಕ್ಷೆಯಲ್ಲಿ ನಾಲ್ಕು ಜನ ಮೊದಲ ಬಾರಿಗೆ ತೇರ್ಗಡೆ ಹೊಂದುವ ಮೂಲಕ ಇಡಿ ಕರುನಾಡು ಜಿಲ್ಲೆಯತ್ತ ತಿರುಗಿ ನೋಡುವ ಸಾಧನೆ ಮಾಡಿದ್ದಾರೆ.



ಯಾದಗಿರಿ ನಗರದ ಸಂದೀಪ್ ಬಾಡದ (82ನೇ ರ್‍ಯಾಂಕ್), ಶಹಾಪುರದ ಬಸವರಾಜ ಜವಳಿ (664ನೇ ರ್‍ಯಾಂಕ್), ಯಾದಗಿರಿ ನಗರದ ನಿವೇದಿತಾ (469) ಹಾಗೂ ಶಹಾಪುರ ತಾಲೂಕಿನ ಚನ್ನೂರ ಗ್ರಾಮದ ಚಂದ್ರಶೇಖರ ತೆಗ್ಗೆಳ್ಳಿ (664) ಪಡೆದುಕೊಳ್ಳುವ ಮೂಲಗ ಅಮೋಘ ಸಾಧನೆ ಮಾಡಿದ್ದು ಇಡೀ ಕಲ್ಯಾಣ ಕರ್ನಾಟಕ ಭಾಗದಿಂದ ಶ್ಲಾಘನೆ ವ್ಯಕ್ತವಾಗಿದೆ.

ಸಂದೀಪ ಬಾಡದ ಹಾಗೂ ಬಸವರಾಜ ಜವಳಿ ಪಾಲಕರು ಕಿರಾಣಿ ಅಂಗಡಿ ನಡೆಸುತ್ತಿದ್ದಾರೆ. ಮಧ್ಯಮ ವರ್ಗದ ಕುಟುಂಬದಿಂದ ಈ ಇಬ್ಬರು ಸಾಧಕರು ಬಂದ್ದರೆ, ನಿವೇದಿತಾ ತಂದೆ ಆರೋಗ್ಯ ಇಲಾಖೆಯ ನಿವೃತ್ತ ನೌಕರರಾದರೆ, ತಾಯಿ ಪಿಡಿಒ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇನ್ನೂ ಚಂದ್ರಶೇಖರ ಅವರ ತಂದೆ ಕೃಷಿಕರಾಗಿದ್ದಾರೆ.

ಬಸವರಾಜ ಸಿವಿಲ್ ಎಂಜಿನಿಯರಿಂಗ್ ಪದವೀಧರರಾಗಿದ್ದು, ಸತತ 5 ಬಾರಿ ಪರೀಕ್ಷೆ ಎದುರಿಸಿ ಆರನೇ ಬಾರಿಗೆ ತೇರ್ಗಡೆಯಾಗಿದ್ದಾರೆ. ಅದರಂತೆ ನಿವೇದಿತಾ ವೈದ್ಯೆಯಾಗಿದ್ದಾಳೆ. ಸಂದೀಪ ಬೆಂಗಳೂರಿನ ಎಐಟಿಯಲ್ಲಿ ಎಂಜಿನಿಯರಿಂಗ್ ಪದವಿ ಪೂರ್ಣಗೊಳಿಸಿದ್ದಾರೆ. ಚಂದ್ರಶೇಖರ ಸಹ ಇಂಜಿನಿಯರಿಂಗ್ ಪದವಿ ಪೂರ್ಣಗೊಳಿಸಿದ್ದಾರೆ.

ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿಯಲ್ಲಿ ಪ್ರಥಮ

ಗೋಕರ್ಣ: ಇಲ್ಲಿನ ತದಡಿಯ ಧನುಷ್ ಉದಯ ನಾಯ್ಕ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿಯಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದು ತೇರ್ಗಡೆಯಾಗಿ ಸಾಧನೆ ಮಾಡಿದ್ದಾರೆ. ಮಂಗಳೂರಿನ ಮಂಗಳ ಕಾಲೇಜ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜಿನ ಮೆಡಿಕಲ್ ಇಮೇಜಿಂಗ್ ಟೆಕನಾಲೋಜಿ ವಿಭಾಗದ ವಿದ್ಯಾರ್ಥಿಯಾಗಿರುವ ಧನುಷ್ ಬೆಂಗಳೂರಿನ ರಾಜೀವಗಾಂಧಿ ಯುನಿವರ್ಸಿಟಿ ಆಫ್ ಹೆಲ್ತ್ ಸೈನ್ಸಸ್ ವಿಶ್ವವಿದ್ಯಾಲಯಕ್ಕೆ ಪ್ರಥಮ ರ್‍ಯಾಂಕ್ ಪಡೆದುಕೊಂಡಿದ್ದಾನೆ. ಸರಸ್ವತಿ ಮತ್ತು ಉದಯ ದೇವಣ್ಣ ನಾಯ್ಕ ಇವರ ಪುತ್ರನಾಗಿದ್ದು, ತದಡಿ ಸರ್ಕಾರಿ ಪ್ರಾಥಮಿಕ ಶಾಲೆ, ಬೇಲೆಗದ್ದೆ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಣ ಪಡೆದಿದ್ದು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದು ಅಂಕೋಲಾ ಜೆ.ಸಿ.ಕಾಲೇಜಿನಲ್ಲಿ ಪಿ.ಯು.ಸಿ.ಶಿಕ್ಷಣ ಪೂರೈಸಿ ಉನ್ನತ ಸಾಧನೆಗೈದಿದ್ದು ಕೀರ್ತಿ ತಂದಿದ್ದು ಈ ಸಾಧನೆಗೆ ಅನೇಕರು ಹರ್ಷ ವ್ಯಕ್ತಪಡಿಸಿದ್ದಾರೆ



ಅಭಿವೃದ್ಧಿಪರ ಬಜೆಟ್: ಸಚಿವ ಭೋಸರಾಜು

ಕಲಬುರಗಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ರಾಜ್ಯ ಬಜೆಟ್ ಜನಪರ, ಅಭಿವೃದ್ಧಿಪರ ಹಾಗೂ ಆಶಾದಾಯಕ ಬಜೆಟ್ ಆಗಿದ್ದು, ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೇ ಬಜೆಟ್ ಮಂಡಿಸಲಾಗಿದೆ ಎಂದು ಸಚಿವ ಎನ್.ಎಸ್.ಭೋಸರಾಜು ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಾರಿ ದಾಖಲೆ ಪ್ರಮಾಣದ 4.48 ಲಕ್ಷ ಕೋಟಿ ರೂಪಾಯಿ ಬಜೆಟ್ ಮಂಡನೆಯಾಗಿದ್ದು, ಎಲ್ಲಾ ನಿಯಮಗಳನ್ನು ಪಾಲಿಸಿ ದೇಶದಲ್ಲೇ ಉತ್ತಮ ಬಜೆಟ್ ಮಂಡಿಸಲಾಗಿದೆ ಎಂದು ತಿಳಿಸಿದ್ದಾರೆ. ರೈತರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ ಎಂದರು.

ಬಜೆಟ್ ವಿರುದ್ಧ ಬಿಜೆಪಿ ನಡೆಸಿದ ಖಾಲಿ ಚಂಬು ಪ್ರದರ್ಶನಕ್ಕೆ ಪ್ರತಿಕ್ರಿಯಿಸಿದ ಅವರು, ಬಿಜೆಪಿಯವರಿಗೆ ಹೇಳಲು ಅಥವಾ ಮಾಡಲು ಏನೂ ಇಲ್ಲ ಎಂದು ಟೀಕಿಸಿದರು. ರಾಜ್ಯಕ್ಕೆ ಬರಬೇಕಾದ ಸುಮಾರು 10 ಸಾವಿರ ಕೋಟಿ ರೂಪಾಯಿ ಜಿಎಸ್‌ಟಿ ಹಣವನ್ನು ಕೇಂದ್ರ ಸರ್ಕಾರ ಕಡಿತ ಮಾಡಿದೆ ಎಂದು ಆರೋಪಿಸಿ,ರಾಜ್ಯದ ಹಿತದೃಷ್ಟಿಯಿಂದ ಬಿಜೆಪಿ ನಾಯಕರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತಾರೆಯೇ ಎಂದು ಪ್ರಶ್ನಿಸಿದ ಅವರು, ರಾಜ್ಯದ ಯೋಜನೆಗಳಿಗೆ ಕೇಂದ್ರ ಸರ್ಕಾರ ಪ್ರೋತ್ಸಾಹ ನೀಡುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ಮುಖ್ಯಮಂತ್ರಿ ಬದಲಾವಣೆ ಕುರಿತು ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಸಿಎಂ ಆಗಿರುವವರೆಗೆ ಬಜೆಟ್ ಮಂಡಿಸುತ್ತಾರೆ ಎಂದು ಸ್ಪಷ್ಟಪಡಿಸಿದರು. ಈ ಬಗ್ಗೆ ಅನಗತ್ಯ ಚರ್ಚೆ ಬೇಡವೆಂದು ಹೇಳಿದ ಅವರು, ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಇಬ್ಬರೂ ಹೈಕಮಾಂಡ್ ಹೇಳಿದಂತೆ ನಡೆಯುತ್ತೇವೆ ಎಂದು ತಿಳಿಸಿದ್ದಾರೆ ಎಂದರು.



ಸಿದ್ದರಾಮಯ್ಯ ಅವರು ಮಹಾತ್ಮ ಗಾಂಧಿ ಸ್ಥಾನಕ್ಕೆ ಹೋಗಿರುವವರು ಎಂದು ಪ್ರಶಂಸಿಸಿದ ಸಚಿವರು, ಸಿಎಂ ಬದಲಾವಣೆ ಬಗ್ಗೆ ಯಾರು ವೈಯಕ್ತಿಕವಾಗಿ ಮಾತನಾಡಬಾರದು ಎಂದು ಹೇಳಿದರು.

ಬಿಜೆಪಿ ನಾಯಕರು ಆರ್.ಅಶೋಕ್ ಮತ್ತು ವಿಜಯೇಂದ್ರ ಹೇಳಿಕೆಗಳಿಗೂ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಅವರು, ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೇ ಸರ್ಕಾರ ಬೀಳುತ್ತದೆ ಎಂದು ಹೇಳುತ್ತಾ ಬರುತ್ತಿದ್ದಾರೆ ಎಂದು ಟೀಕಿಸಿದರು.

ಸಿದ್ದರಾಮಯ್ಯ ಅವರನ್ನು 'ಸಾಲದ ರಾಮಯ್ಯ' ಎಂದು ಬಿಜೆಪಿ ಟೀಕಿಸುತ್ತಿದೆ.ಆದರೆ ಕಳೆದ 12 ವರ್ಷಗಳಲ್ಲಿ ಕೇಂದ್ರ ಸರ್ಕಾರ ಮಾಡಿದ ಸಾಲ ಎಷ್ಟು ಎಂದು ಪ್ರಶ್ನಿಸಿದ ಅವರು, ದೇಶದಲ್ಲಿ ತಲಾದಾಯದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದ್ದು, ಜಿಎಸ್‌ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ ಎಂದು ಹೇಳಿದರು.

ಬೆಳವಡಿ ಮಲ್ಲಮ್ಮಳಿಗೆ ಸಂಬಂಧಿಸಿದ ಶಿಲಾಶಾಸನ ಪತ್ತೆ

ಬೆಳವಡಿ ಮಲ್ಲಮ್ಮ: ಛತ್ರಪತಿ ಶಿವಾಜಿ ಮಹಾರಾಜರ ಸೈನಿಕರು ಅಟ್ಟಿಸಿಕೊಂಡು ಹೋದ ಗೋವುಗಳನ್ನು ಬಿಡಿಸಿಕೊಂಡು ಬರುತ್ತಿರುವ ಶಿಲಾಶಾಸನ ಪತ್ತೆಯಾಗಿದೆ.

ಸಾಮಾಜಿಕ ಕಾರ್ಯಕರ್ತ ಪ್ರಕಾಶ್ ಅಪ್ಪಣ್ಣ ಹುಂಬಿಯವರು ಮಗಳ ಜೊತೆ ಗ್ರಾಮದ ಹನುಮಂತ ದೇವರಿಗೆ ಹೋದಾಗ 5ನೇ ತರಗತಿಯಲ್ಲಿ ಓದುತ್ತಿರುವ 11 ವರ್ಷದ ಮಗಳು ಲಕ್ಷ್ಮೀ ಹುಂಬಿ ಆ ಶಾಸನವನ್ನು ನೋಡಿ ಈ ಕಲ್ಲಿನಲ್ಲಿ ಬೆಳವಡಿ ಮಲ್ಲಮ್ಮ ಗೋವುಗಳನ್ನು ಬಿಡಿಸಿಕೊಂಡು ಬರುವ ಮೂರ್ತಿಯನ್ನು ಕೆತ್ತಲಾಗಿದೆ ನೋಡು ಎಂದು ತೋರಿಸಿದಾಗ ಊರಿನ ಹಿರಿಯರ ಗಮನಕ್ಕೆ ತರಲಾಗಿದೆ.

ಗ್ರಾಪಂಮಾಜಿಅಧ್ಯಕ್ಷಚಂದ್ರಶೇಖರಯ್ಯ ಕಾರಿಮನಿ, ಸದಸ್ಯ ಬಿ.ಜಿ.ದೇಗಾವಿ ರಾಚಯ್ಯ ಸ್ವಾಮಿಗಳು, ಶಿಕ್ಷಕರಾದ ಎಸ್.ಎಂ.ಕರಿಕಟ್ಟಿ, ಈರಪ್ಪ ಶೀಲವಂತರ, ಪ್ರಕಾಶ ಬಳಿಗಾರ, ಶಂಕ್ರಯ್ಯ ಹಿರೇಮಠ, ಸಂಗಯ್ಯ ಚಿಚಡಿ ಇದ್ದರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

◆**ಕಾರವಾರ:** ಉಪವಿಭಾಗದ ವ್ಯಾಪ್ತಿಯಲ್ಲಿ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಮಾ.8ರಂದು ಬೆಳಿಗ್ಗೆ 9.30 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕೆರವಡಿ ಫೀಡರ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಹಿಂದೂ ಸಂಗಮ


◆**ಭಟ್ಕಳ:** ಪಟ್ಟಣದ ಹಿಂದೂ ಸಮ್ಮೇಳನ ವತಿಯಿಂದ ಭಾನುವಾರ ಸಂಜೆ ನಡೆಯುವ ನಗರ ಹಿಂದೂ ಸಂಗಮ ಕಾರ್ಯಕ್ರಮಕ್ಕೆ ಭಟ್ಕಳ ಪಟ್ಟಣ ಸಜ್ಜಾಗಿದೆ. ಹಿಂದೂ ಸಂಗಮ ಕಾರ್ಯಕ್ರಮಕ್ಕೆ ಮುಖ್ಯ ರಸ್ತೆ ಕೇಸರಿ ಪತಾಕೆ, ಧ್ವಜ ಮತ್ತು ಕಟೌಟ್ ಗಳಿಂದ ರಾರಾಜಿಸುತ್ತಿದೆ. ಮಾ.8ರಂದು ಸಂಜೆ ಪಟ್ಟಣದ ಹಳೇ ತಹಶೀಲ್ದಾರ ಕಚೇರಿ ಹಿಂಬದಿಗಿರುವ ಮೈದಾನದಲ್ಲಿ ಬೃಹತ್ ಹಿಂದೂ ಸಂಗಮ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 3.30 ಗಂಟೆಗೆ ಈ ಪ್ರಯುಕ್ತ ಪಟ್ಟಣದಲ್ಲಿ ಬೃಹತ್ ಶೋಭಾ ಯಾತ್ರೆ ನಡೆಯಲಿದೆ. ಸಂಜೆ 5 ಗಂಟೆಗೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಬಂಟ್ವಾಳ ಮಾಣಿಲದ ಶ್ರೀಧಾಮದ ಶ್ರೀಮೋಹನದಾಸ ಪರಮಹಂಸ ಸ್ವಾಮೀಜಿ ಪಾಲ್ಗೊಳ್ಳಲಿದ್ದಾರೆ. ಮಾಜಿ ಸಂಸದ ಮತ್ತು ಕರುಣ ಬ್ಯಾಂಕ್ ಅಧ್ಯಕ್ಷ ಡಾ. ಅನಂತಕುಮಾರ ಹೆಗಡೆ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಭಟ್ಕಳದ ನಗರ ಹಿಂದೂ ಸಂಗಮ ಕಾರ್ಯಕ್ರಮಕ್ಕೆ ಮಾಜಿ ಸಂಸದ ಅನಂತಕುಮಾರ ಹೆಗಡೆ ಆಗಮಿಸಲಿದ್ದಾರೆ. ಹಿಂದೂ ಸಂಗಮ ಕಾರ್ಯಕ್ರಮಕ್ಕೆ ಅನಂತಕುಮಾರ ಹೆಗಡೆ ದಿಕ್ಸೂಚಿ ಭಾಷಣಕಾರರಾಗಿ ಪಾಲ್ಗೊಳ್ಳುತ್ತಿರುವುದು ವಿಶೇಷವಾಗಿದೆ.

ಮೈಲಾರಲಿಂಗೇಶ್ವರ ಜಾತ್ರೆ

◆**ದಾಂಡೇಲಿ:** ತಾಲೂಕಿನ ಬೇಡರ ಶಿರಗೂರು ಗ್ರಾಮದಲ್ಲಿ ಕಾರಣಿಕ ದೇವರಾದ ಮೈಲಾರಲಿಂಗೇಶ್ವರ ಜಾತ್ರಾ ಮಹೋತ್ಸವವು ಕುರುಗೋಳ ತಾಲೂಕಿನ ಶಿರಗೂರು ಗ್ರಾಮದ ಗೋಡಚ್ಚಣವರ ಸಾನಿಧ್ಯದಲ್ಲಿ ಮಾ.8ರಂದು ನಡೆಯಲಿದೆ ಎಂದು ಮೈಲಾರಲಿಂಗೇಶ್ವರ ದೇವಸ್ಥಾನದ ಆಡಳಿತ ಸಮಿತಿಯ ಅಧ್ಯಕ್ಷ ಗಣಪತಿ ಹನುಮಂತಪ್ಪ ವಾಗ್ಮೋಡ ಹೇಳಿದರು. ಅವರು ನಗರದಲ್ಲಿ ಮಾಧ್ಯಮಕ್ಕೆ ನೀಡಿದ ಮಾಹಿತಿ ನೀಡಿ, ಭಾನುವಾರ ಜಾತ್ರೆ, ಪಲ್ಲಕ್ಕಿ ಉತ್ಸವ, ನಡೆಯಲಿದೆ. ನಂತರ ಸರಪಳಿ ಪವಾಡ, ಶಸ್ತ್ರಪವಾಡ, ಕಾಯಿ ಪವಾಡ ನಡೆಯಲಿದ್ದು, ಈ ಎಲ್ಲಾ ಕಾರ್ಯಕ್ರಮ ಮುಗಿದ ಬಳಿಕ ಮಧ್ಯಾಹ್ನ ಮಹಾಪ್ರಸಾದ ವಿತರಣೆ ನಡೆಯಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ಈ ಕಾರ್ಯಕ್ರಮಯಶಸ್ವಿಗೊಳಿಸುವಂತೆ ಹೇಳಿದರು. ದೇವಸ್ಥಾನದ ಆಡಳಿತ ಸಮಿತಿಯ ಪದಾಧಿಕಾರಿಗಳು ಮಾಧ್ಯಮ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬಜೆಟ್: ಬನವಾಸಿಗೆ ಮತ್ತೆ ವನವಾಸ

◆**ಬನವಾಸಿ:** ಹನ್ನೆರಡು ವರ್ಷಗಳ ಹಿಂದೆ ಅಂದಿನ ಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯ ಅವರು ಘೋಷಣೆ ಮಾಡಿದ ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಅನಾಥವಾದಂತೆ ಆಗಿದೆ. ಅವರು ಸ್ಥಾಪನೆ ಮಾಡಿದ ವರ್ಷ ಬಜೆಟ್‌ನಲ್ಲಿ ಅಂದು ಐದು ಕೋಟಿಯ ಅನುದಾನ ಕೊಟ್ಟಿದ್ದು ಬಿಟ್ಟರೆ, ಆನಂತರ ಅವರ ಎರಡೂ ಬಜೆಟ್‌ಗಳಲ್ಲಿ ಬಿಡಿಗಾಸು ಕೂಡ ಅನುದಾನ ಕೊಡಲಿಲ್ಲ ಎಂದು ಬನವಾಸಿ ನೂತನ ತಾಲೂಕು ಹೋರಾಟ ಸಮಿತಿ ಅಧ್ಯಕ್ಷ ಉದಯ ಕುಮಾರ ಕಾನಳ್ಳಿ, ಗೌರವಾಧ್ಯಕ್ಷ ಸಿ.ಎಫ್.ನಾಯ್ಕ, ಕಾರ್ಯದರ್ಶಿ ವಿಶ್ವನಾಥ ಹಾವೇರಿ ಆರೋಪಿಸಿದರು. ಒಂದು ಭಾರಿ ಐದು ಕೋಟಿ ರೂಪಾಯಿ ಕೊಟ್ಟಿದ್ದು, ಬಿಟ್ಟರೆ ಮತ್ತೇನು ಕೊಡದ ಸಿದ್ದರಾಮಯ್ಯನವರು ಈ ಭಾರಿ ಕೂಡ ಏನೂ ಕೊಡದಿರುವುದು ಸಮಿತಿಯ ಆಕ್ರೋಶಕ್ಕೆ ಕಾರಣವಾಗಿದೆ. ಬನವಾಸಿ ಅಭಿವೃದ್ಧಿ ಪ್ರಾಧಿಕಾರದ ಏನನ್ನೋ ಆಗುತ್ತೆ, ಬನವಾಸಿ ಚಿಣವಣೆ ಬದಲು ಆಗುವುದು ಅಭಿವೃದ್ಧಿ ಕಾಣುತ್ತೆ ಅಂದುಕೊಂಡಿದ್ದೆವು, ಆದರೆ ಇದು ನಾಮಕಾವಸ್ಥೆ ಆಗಿದೆ ಎಂದು ಸಮಿತಿ ಹೇಳಿದೆ. ಕ್ರಿಯಾಶೀಲ ಶಾಸಕರು ಶಿವರಾಮ್ ಹೆಬ್ಬಾರ್ ಎಷ್ಟೇ ಪ್ರಯತ್ನ ಮಾಡಿದರು ಮೇಲ್ನೋಟದಲ್ಲಿ ಸಹಕಾರ ದೊರೆಯದೆ ಹೋಗಿದೆ. ಅಭಿವೃದ್ಧಿ ಕಾಣುವುದು ಹೇಗೆ ಎಂಬ ಪ್ರಶ್ನೆ ಉದ್ಭವ ಆಗಿದೆ. ಈಗಲೂ ಕೂಡ ಕೂಡ್ಲ ವೇಳೆಯಲ್ಲಿ ಬನವಾಸಿ ಪ್ರಾಧಿಕಾರಕ್ಕೆ ಐವತ್ತು ಕೋಟಿ ಬಿಡುಗಡೆ ಮಾಡಿ ಸಿದ್ದರಾಮಯ್ಯ ಸಾಹೇಬ್ರು ಅವರ ಸ್ಥಾಪನೆ ಮಾಡಿದ ಬನವಾಸಿ ಪ್ರಾಧಿಕಾರ ಉಳಿಸಲಿ, ಮರುಜೀವ ನೀಡಲಿ ಎಂದು ಸಮಿತಿ ಆಗ್ರಹಿಸಿದೆ.



ಎಪಿಎಂಸಿ ಕೃಷಿ ಧಾರಣೆ

ತಿರಿಪಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60089	68199
ಬಿಳಿಗೋಟು	26709	39681
ಕೆಂಪುಗೋಟು	28100	37898
ಬೆಟ್ಟೆ	40618	51099
ರಾಶಿ	50898	55109
ಚಾಲಿ	44299	48689



ಮುಂಡಗೋಡ: ಪಟ್ಟಣದ ಆದಿಜಾಂಬವ ಪ್ರೌಢಶಾಲೆಯ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ನಡೆಯಿತು. ಈ ಸಂದರ್ಭದಲ್ಲಿ ಆದಿಜಾಂಬವ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಸ್.ಫಕ್ಕೀರಪ್ಪ, ಡಾ.ನಾಗೇಂದ್ರ ಪಿ., ಮುಖ್ಯ ಶಿಕ್ಷಕ ಎಸ್.ಡಿ.ಮುಡೆಣ್ಣವರ, ಗೋಪಾಲ ನಡಕಿನಮನಿ, ಹನುಮಂತ ಕಟ್ಟಿಮನಿ, ಸಂತೋಷ ಕಟ್ಟಿಮನಿ, ಮಂಜುನಾಥ ಎನ್.ಎಚ್., ಪರಶುರಾಮ ಮಾದರ, ಆರ್.ಬಿ.ಚವ್ಹಾಣ, ಎಮ್.ಎಸ್.ಪಾಟೀಲ, ಎಸ್.ಸಿ.ಪಾಟೀಲ, ಎಸ್.ಎಸ್.ಭದ್ರಶೆಟ್ಟಿ ಪಿ.ಸಿ.ಐನಾಪುರ, ಎಮ್.ಕೆ. ಕೊಂಡೋಜಿ ಇದ್ದರು.

ಇಂದಿನಿಂದ ಕಾಳಮ್ಮದೇವಿ ವರ್ಧಂತಿ ಉತ್ಸವ

◆**ಯಲ್ಲಾಪುರ:** ಪಟ್ಟಣದ ಕಾಳಮ್ಮನಗರದ ದೇವಸ್ಥಾನದಲ್ಲಿ ಕಾಳಮ್ಮದೇವಿ ಹಾಗೂ ಪರಿವಾರ ದೇವರ ವರ್ಧಂತಿ ಉತ್ಸವ ಮಾ.8 ಹಾಗೂ 9ರಂದು ನಡೆಯಲಿದೆ ಎಂದು ದೇವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಉದಯ ನಾಯ್ಕ ಹೇಳಿದರು.

ಅವರು ಕಾಳಮ್ಮ ದೇವಸ್ಥಾನದಲ್ಲಿ ಆಮಂತ್ರಣ ಪತ್ರಿಕೆ ಬಿಡುಗಡೆ ಗೊಳಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಾ. 8ರಂದು ಗಣಪತಿ ಪುಣ್ಯಾಹ, ಮಹಾಸಂಕಲ್ಪ, ಗಣಹವನ ನಡೆಯಲಿದೆ. ಮಾ. 9ರಂದು ನವಚಂಡಿ ಹವನ, ಮಧ್ಯಾಹ್ನ ಸಾರ್ವಜನಿಕ ಅನ್ನ ಸಂತರ್ಪಣೆ ನಡೆಯಲಿದೆ. ಅರ್ಚಕರಾದ ರಾಮಚಂದ್ರ ಭಟ್ಟ ಹಾಗೂ ರಾಮಚಂದ್ರ ಹೆಗಡೆ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯಲಿವೆ ಎಂದರು.

ಸಮಿತಿಯ ಪ್ರಧಾನ ಕಾರ್ಯದರ್ಶಿ ಸಂಜೀವಕುಮಾರ ಹೊಸ್ಕೇರಿ ಮಾತನಾಡಿ, ಉತ್ಸವದ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಮಾ. 8ರಂದು ರಾತ್ರಿ 8ಕ್ಕೆ ಚಿನ್ನು ಮೆಲೊಡೀಸ್ ಇವರಿಂದ ರಸಮಂಜರಿ, ಮಾ. 9ರಂದು ರಾತ್ರಿ 8.30ಕ್ಕೆ ಅನಂತ ಹೆಗಡೆ ದಂತಳಿಗೆ ಸಂಯೋಜನೆಯಲ್ಲಿ ಭೌಮಾಸುರ ಕಾಳಗ-ಪಾರಿಜಾತ ಯಕ್ಷಗಾನ ಪ್ರದರ್ಶನ, ಮಾ. 10ರಂದು ಸಂಜೆ 7ಕ್ಕೆ ಸಂಗೀತ ರಸಮಂಜರಿ ನಡೆಯಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಉಪಾಧ್ಯಕ್ಷ ನವೀನ ನಾಯ್ಕ, ಸದಸ್ಯ ಸಚಿನ ಅಡಿಗೋಣ, ತ್ರಿಶೂಲ ಬಳಗದ ಸದಸ್ಯ ರಮೇಶ ಕಮ್ಮಾರ ಇದ್ದರು.



ಯಲ್ಲಾಪುರ:ಪಟ್ಟಣದ ಕಾಳಮ್ಮನಗರದ ದೇವಸ್ಥಾನದಲ್ಲಿ ಕಾಳಮ್ಮದೇವಿ ಹಾಗೂ ಪರಿವಾರ ದೇವರ ವರ್ಧಂತಿ ಉತ್ಸವದ ಆಮಂತ್ರಣ ಪತ್ರಿಕೆಯನ್ನು ದೇವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಉದಯ ನಾಯ್ಕ ಬಿಡುಗಡೆಗೊಳಿಸಿದರು.ಈ ವೇಳೆ ದೇವಸ್ಥಾನ ಸಮಿತಿ ಉಪಾಧ್ಯಕ್ಷ ನವೀನ ನಾಯ್ಕ, ಸದಸ್ಯ ಸಚಿನ ಅಡಿಗೋಣ, ತ್ರಿಶೂಲ ಬಳಗದ ಸದಸ್ಯ ರಮೇಶ ಕಮ್ಮಾರ ಇದ್ದರು.

ತ್ರೈಮಾಸಿಕ ಕೆಡಿಪಿ ಸಭೆ | ಸದಸ್ಯ ಜಿ.ಎಂ.ಶೆಟ್ಟಿ ಒತ್ತಾಯ

ಬೇಡ್ತಿ ವರದಾ ನದಿ ಜೋಡಣೆಗೆ ಅವಕಾಶ ಸಲ್ಲ

◆**ಅಂಕೋಲಾ:** ಬೇಡ್ತಿ ವರದಾ ನದಿ ಜೋಡಣೆ ಯೋಜನೆ ಜಾರಿಯಾದರೆ ಹೊನ್ನಳ್ಳಿ ಕಿಂಡಿ ಆಣೆಕಟ್ಟಿನ ಎತ್ತರ ಹೆಚ್ಚಿಸುವುದು ಅನಿವಾರ್ಯ ಆಗಲಿದ್ದು, ಇದರಿಂದ ಸುತ್ತಲಿನ ಮುತ್ತಲಿನ ಪಂಚಾಯತ್‌ಗಳ ವ್ಯಾಪ್ತಿಯ ಭೂಪ್ರದೇಶ ಮುಳುಗಡೆ ಆಗಲಿದೆ ಆದ್ದರಿಂದ ಯಾವುದೇ ಕಾರಣಕ್ಕೂ ನದಿ ಜೋಡಣೆ ಯೋಜನೆಗೆ ಅವಕಾಶ ನೀಡಬಾರದು ಎಂದು ಕೆಡಿಪಿ ಸದಸ್ಯ ಜಿ.ಎಂ.ಶೆಟ್ಟಿ ಹೇಳಿದರು.

ತಾಪಂ ಸಭಾಭವನದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದ ಶಾಸಕ ಸತೀಶ ಸೈಲ್ ಅವರಿಗೆ ಮನವಿ ಸಲ್ಲಿಸಿದರು.

ಹೊನ್ನಳ್ಳಿ ಕಿಂಡಿ ಆಣೆಕಟ್ಟು ಮೂಲಕ ರಾಷ್ಟ್ರೀಯ ರಕ್ಷಣಾ ಉದ್ದೇಶಕ್ಕೆ ಕುಡಿಯುವ ನೀರು ಪೂರೈಸುವ ಕಾರಣದಿಂದ ಸಾರ್ವಜನಿಕರು ಆಣೆಕಟ್ಟಿನ ಎತ್ತರ ಕಡಿಮೆ ಮಾಡುವ ಭರವಸೆ ಮೇರೆಗೆ ಕಿಂಡಿ ಆಣೆಕಟ್ಟು ಯೋಜನೆಗೆ ಸಹಕರಿಸಿದ್ದಾರೆ. ಬೇಡ್ತಿ ಮತ್ತು ಶಾಲ್ಮಲಾ ನದಿಗಳಿಂದ ಹೊನ್ನಳ್ಳಿಗೆ ನೀರು ಹರಿದು ಬರುತ್ತಿದ್ದು, ಬೇಡ್ತಿ ವರದಾ ನದಿ ಜೋಡಣೆ ಯೋಜನೆ ಜಾರಿಯಾದರೆ ನೀರಿನ ಪ್ರಮಾಣ ಕಡಿಮೆ ಆಗುವುದರಿಂದ ಹೆಚ್ಚಿನ ನೀರು ಸಂಗ್ರಹಣೆಗೆ ಆಣೆಕಟ್ಟಿನ ಎತ್ತರ ಹೆಚ್ಚಲಿದೆ ಇದರಿಂದ ಸುತ್ತಮುತ್ತಲಿನ ಪಂಚಾಯತಿಗಳ ವ್ಯಾಪ್ತಿಯ ಜನರ ಕೃಷಿಭೂಮಿ, ತೋಟ, ಜಮೀನು ಮುಳುಗಡೆ ಆಗಲಿದೆ ಆದ್ದರಿಂದ ಯಾವುದೇ ಕಾರಣಕ್ಕೂ ನದಿ ಜೋಡಣೆ ಬೇಡ ಎಂದು ಜಿ.ಎಂ.ಶೆಟ್ಟಿ ತಿಳಿಸಿದರು.

ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸಂಸ್ಥೆಯ ಅಂಕೋಲಾ ಘಟಕದ ವತಿಯಿಂದ ಹೆಚ್ಚುವರಿ ಬಸ್‌ಗಳನ್ನು ಬಿಡಬೇಕು ವಾಸರ ಕುದ್ರಗಿ ಸುತ್ತಮುತ್ತಲಿನ ಜನರು ಸರಿಯಾದ ಬಸ್‌ಗಳ ಲಭ್ಯತೆ ಇಲ್ಲದೆ ಸಮಸ್ಯೆ ಎದುರಿಸುತ್ತಿದ್ದಾರೆ.ಈ ಕುರಿತು ಅಂಕೋಲಾ ಘಟಕದವರನ್ನು ಕೇಳಿದರೆ ಸ್ಪಂದಿಸುತ್ತಿಲ್ಲ ಎಂದು ಪ್ರದೀಪ ನಾಯಕ ವಾಸರೆ ಮತ್ತಿತರರು ಆರೋಪಿಸಿದರು.

ನಷ್ಟದಲ್ಲಿ ಇದ್ದ ಸಂಸ್ಥೆ ಇದೀಗ ಲಾಭದತ್ತ ಸಾಗಿದ್ದು ಸರಿಯಾದ ಬಸ್‌ಗಳ ವ್ಯವಸ್ಥೆ ಯಾಕೆ ಮಾಡುತ್ತಿಲ್ಲ ಎಂದು ಶಾಸಕ ಸತೀಶ ಸೈಲ್ ಘಟಕ ವ್ಯವಸ್ಥಾಪಕರಿಗೆ ಪ್ರಶ್ನಿಸಿದ ಶಾಸಕರು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಸೂಚಿಸಿದರು.ಅಂಕೋಲಾದಿಂದ ಗೋಕರ್ಣಕ್ಕೆ ಪೂಜಗೇರಿ ಮಾರ್ಗವಾಗಿ ಗಂಗಾವಳಿ ಸೇತುವೆಯ ಮೂಲಕ ಹಲವಾರು ವಾಹನಗಳು ಸಂಚರಿಸುತ್ತಿದ್ದು, ದೊಡ್ಡ ಖಾಸಗಿ ಬಸ್‌ಗಳು ಓಡಾಡುತ್ತಿವೆ, ಪೂಜಗೇರಿ ಹಳ್ಳದ ಸೇತುವೆ ಮುರಿದು ಬೀಳುವ ಹಂತದಲ್ಲಿದ್ದು, ಅನಾಹುತ ಸಂಭವಿಸುವ ಮೊದಲೇ ಎಚ್ಚೆತ್ತುಕೊಳ್ಳಬೇಕು ಎಂದು ಕೆಡಿಪಿ ಸದಸ್ಯರು ಸಭೆಯ ಗಮನಕ್ಕೆ ತಂದರು. ಈ ಕುರಿತು ಲೋಕೋಪಯೋಗಿ ಇಂಜಿನಿಯರ್ ರಾಮು ಆರ್ಗೇಕರ್ ಪ್ರತಿಕ್ರಿಯಿಸಿ ಈ ಹಿಂದೆ ಟೆಂಡರ್ ಆಗಿದ್ದ ಸೇತುವೆ ಕಾಮಗಾರಿಯನ್ನು ಗುತ್ತಿಗೆದಾರರು ಕೈ ಬಿಟ್ಟಿದ್ದು ಹೊಸ ಟೆಂಡರ್ ಕರೆಯುವುದಾಗಿ ತಿಳಿಸಿದರು.ಗೋಕರ್ಣಕ್ಕೆ ತೆರಳುವ ಪ್ರವಾಸಿಗರ ವಾಹನಗಳು ಅಂಕೋಲಾ ಮಾರುಕಟ್ಟೆಯ ಒಳಗೆ ಬರುತ್ತಿರುವ ಕಾರಣ ಅಪಘಾತಗಳು ಸಂಭವಿಸುತ್ತಿದ್ದು, ವಾಹನಗಳು ಮಾರುಕಟ್ಟೆಯ ಒಳಗೆ ಬರದಂತೆ ಕ್ರಮ ಕೈಗೊಳ್ಳುವ ಅಗತ್ಯತೆ ಇದೆ ಎಂದು ಸಭೆಯಲ್ಲಿ ತಿಳಿಸಲಾಯಿತು.



ಅಧಿಕಾರಿಗಳಿಗೆ ಸೂಚನೆ

ಮಂಜಗುಣಿ ಸೇತುವೆ ಬಳಿ ಸರ್ವಿಸ್ ರಸ್ತೆ ನಿರ್ಮಾಣಕ್ಕೆ ಭೂ ಸ್ವಾಧೀನ ಪ್ರಕ್ರಿಯಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಸಕ ಸತೀಶ ಸೈಲ್ ಸೂಚಿಸಿದರು.

ಮಂಜೂರು ಮಾಡಿಸುವ ಕೆಲಸವಾಗಲಿ

ಪುರಸಭೆ ವ್ಯಾಪ್ತಿಯಲ್ಲಿ ಕೆಲವು ಕಟ್ಟಡ, ಹೋಟೆಲುಗಳ ಹೊಲಸು ನೀರನ್ನು ಚರಂಡಿಗಳಲ್ಲಿ ಬಿಡಲಾಗುತ್ತಿದೆ ಅಧಿಕಾರಿಗಳು ಈ ಕುರಿತು ಚಕಾರ ಎತ್ತುತ್ತಿಲ್ಲ ಏಕೆ? ಚರಂಡಿಗಳಲ್ಲಿ ಹೊಲಸು ನೀರು ಹರಿದು ದುರ್ನಾತ ಬೀರದಂತೆ ಯೋಜನೆಗಳು ಬೇಕಿದ್ದು, ಆ ದಿಶೆಯಲ್ಲಿ ಅಧಿಕಾರಿಗಳು ಕೆಲಸ ಮಾಡಿ ಪ್ರಸ್ತಾವನೆ ಕಳುಹಿಸಿದರೆ ಹಣ ಮಂಜೂರು ಮಾಡಿಸುವ ಕೆಲಸವನ್ನು ತಾವು ಮಾಡಬಹುದು ಎಂದು ಶಾಸಕ ಸತೀಶ ಸೈಲ್ ತಿಳಿಸಿದರು.

ಸೀಬರ್ಡ್ ಸಂತ್ರಸ್ತರಿಗೆ ಪರಿಹಾರ ಚೆಕ್ ವಿತರಣೆ

◆**ಕಾರವಾರ:** ಸೀಬರ್ಡ್ ನೌಕಾನೆಲೆ ಯೋಜನೆಗೆ ಭೂ ಸ್ವಾದೀನಪಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ 18 (1) ಅಡಿಯಲ್ಲಿನ 5 ಪ್ರಕರಣ ಮತ್ತು 28 ಬಿ ಅಡಿಯಲ್ಲಿನ 112 ಪ್ರಕರಣಗಳಿಗೆ ಒಟ್ಟು ರೂ.27.70 ಕೋಟಿಗಳ ಹೆಚ್ಚುವರಿ ಪರಿಹಾರವನ್ನು ಬಿಡುಗಡೆಗೊಳಿಸಿದ್ದು, ಇವುಗಳಲ್ಲಿ ಅಗತ್ಯ ದಾಖಲೆಗಳನ್ನು ಒದಗಿಸಿದ 35 ಪ್ರಕರಣಗಳಲ್ಲಿನ ಫಲಾನುಭವಿಗಳಿಗೆ ರೂ.6.87 ಕೋಟಿ ರೂ. ಪರಿಹಾರವನ್ನು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಶನಿವಾರ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿತರಿಸಿದರು.

ನಂತರ ಮಾತನಾಡಿದ ಅವರು ಸೀಬರ್ಡ್ ನೌಕಾನಲೆ ಯೋಜನೆಗೆ ಭೂ ಸ್ವಾದೀನಪಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಾಕಿ ಪರಿಹಾರದ ಮೊತ್ತವನ್ನು ಪಾವತಿಗೆ ಇರುವ ಸಮಸ್ಯೆಗಳ ಕುರಿತು ಕೇಂದ್ರ ರಕ್ಷಣಾ ಸಚಿವರಿಗೆ ಮನವಿಯನ್ನು ಸಲ್ಲಿಸಿದ್ದು, ಅದರಂತೆ ಇದಕ್ಕಾಗಿ ವಿಶೇಷ ಅಧಿಕಾರಿಯನ್ನು ಸಚಿವರು ನೇಮಕ ಮಾಡಿದ ನಂತರ ಪರಿಹರದ ಮೊತ್ತ ಬಿಡುಗಡೆ ಕಾರ್ಯ ಶೀಘ್ರಗೊಂಡಿದ್ದು, ಇದುವರೆಗೆ ರೂ.35 ಕೋಟಿ ಬಿಡುಗಡೆಗೊಂಡಿದೆ. ಬಾಕಿ ಉಳಿದಿರುವ 215 ಪ್ರಕರಣಗಳಿಗೆ ಬಿಡುಗಡೆಯಗಬೇಕಾದ ರೂ.28.82 ಕೋಟಿ ಮೊತ್ತ ಕೂಡಾ ತ್ವರಿತಗತಿಯಲ್ಲಿ ಬಿಡುಗಡೆಗೊಳ್ಳಲಿದೆ ಎಂದರು.

ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದ ಕೆಲಸಗಳು ಉತ್ತಮವಾಗಿ ನಡೆಯುತ್ತಿದ್ದು, ರಾಷ್ಟ್ರೀಯ ಹೆದ್ದಾರಿ 52ರ ಹೊಸಳ್ಳಿಯಿಂದ ಯಲ್ಲಾಪುರ ಹಾಗೂ ಮಾಸ್ತಿಕಟ್ಟೆಯಿಂದ ಬಾಳೆಗುಳಿ ವರೆಗಿನ ರಸ್ತೆ ಅಭಿವೃದ್ಧಿಗೆ ರೂ.101 ಕೋಟಿ ಅನುದಾನ ಮಂಜೂರಾಗಿದೆ. ಪ್ರಸ್ತುತ ಸೀಬರ್ಡ್ ಸಂತ್ರಸ್ಥರು ತಮಗೆ ದೊರೆತಿರುವ ಪರಿಹಾರದ ಮೊತ್ತವನ್ನು ಉತ್ತಮ ಕಾರ್ಯಗಳಿಗೆ ಬಳಸಿಕೊಳ್ಳುವಂತೆ ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಲಕ್ಷ್ಮೀ ಪ್ರಿಯಾ ಮಾತನಾಡಿ, ಸೀಬರ್ಡ್ ಯೋಜನೆಗಾಗಿ ಒಟ್ಟು 2400 ಎಕರೆ ಖಾಸಗಿ ಜಮೀನನ್ನು ಮತ್ತು 7000 ಎಕರೆ ಅರಣ್ಯ ಜಮೀನನ್ನು ಸ್ವಾಧೀನಪಡಿಸಕೊಳ್ಳಲಾಗಿದ್ದು, ಸಂತ್ರಸ್ಥರಿಗೆ ಪರಿಹಾರ ಪಾವತಿ ಕುರಿತಂತೆ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣ ಮತ್ತು ವಿಶೇಷ ಭೂ ಸ್ವಾಧೀನಾಧಿಕಾರಿ ಕಚೇರಿಯಲ್ಲಿ ದಾಖಲಾದ ಪ್ರಕರಣಗಳಿಗೆ ಹೆಚ್ಚುವರಿ ಪರಿಹಾರ ವಿತರಿಸಲಾಗುತ್ತಿದ್ದು, ಇದುವರೆಗೆ ಒಟ್ಟು 647.58 ಕೋಟಿ ರೂ. ಪರಿಹಾರ ಡಿಫೆನ್ಸ್ ಎಸ್ಟೇಟ್ ಆಫೀಸರ್ ಬೆಂಗಳೂರು ಅವರಿಂದ ಬಿಡುಗಡೆಯಾಗಿದೆ ಎಂದರು. ವಿಧಾನ ಪರಿಷತ್ ಶಾಸಕ ಗಣಪತಿ ಉಳ್ವೇಕರ, ಜಿಪಂ ಸಿಇಓ ಡಾ.ದಿಲೀಷ್ ಶಶಿ, ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಸಹಾಯಕ ಆಯುಕ್ತ ಶ್ರವಣ ಕುಮಾರ್, ತರಬೇತಿ ನಿರತ ಐ.ಎ.ಎಸ್. ಅಧಿಕಾರಿ ಝೂಪಿಶಾನ್ ಹಕ್ ಉಪಸ್ಥಿತರಿದ್ದರು.

ಭೂ ಸ್ವಾದೀನ ಸಂತ್ರಸ್ಥರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಆನ್ ಲೈನ್ ಮೂಲಕ ಪರಿಹಾರದ ಮೊತ್ತವನ್ನು ಜಮೆ ಮಾಡಲಾಯಿತು.





ಭಟ್ಕಳ : ಪಟ್ಟಣದಲ್ಲಿ ಭಾನುವಾರ ಸಂಜೆ ನಡೆಯಲಿರುವ ಹಿಂದೂ ಸಂಗಮ ಕಾರ್ಯಕ್ರಮದ ಪೂರ್ವಭಾವಿಯಾಗಿ ಜನರಲ್ಲಿ ಜಾಗೃತಿ ಮೂಡಿಸಲು ಶನಿವಾರ ಸಂಜೆ ಪಟ್ಟಣದಲ್ಲಿ ಹಿಂದೂ ಕಾರ್ಯಕರ್ತರಿಂದ ಬೈಕ್ ರ‍್ಯಾಲಿ ನಡೆಯಿತು.

6ನೇ ದಿನ ಮುಂದುವರಿದ ಪಾದಯಾತ್ರೆ

◆**ಹಳಿಯಾಳ:** ನೀರಿಗಾಗಿ ಪಾದಯಾತ್ರೆ ಯಡಿ ಕಾಳಿ ನದಿ ಯೋಜನೆ ಜಾರಿಗೆ ಆಗುತ್ತಿರುವ ವಿಳಂಬವನ್ನು ಖಂಡಿಸಿ ಕಬ್ಬು ಬೆಳೆಗಾರರ ಹಿತ ಸಂರಕ್ಷಣಾ ಸಮಿತಿ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ನೇತೃತ್ವದಲ್ಲಿ ನಡೆಯುತ್ತಿರುವ ಪಾದಯಾತ್ರೆ 6ನೇ ದಿನವೂ ವಿವಿಧ ಗ್ರಾಮಗಳಲ್ಲಿ ಮುಂದುವರಿಯಿತು.

ನೀರಿಗಾಗಿ ನಡೆಯುತ್ತಿರುವ ಈ ಪಾದಯಾತ್ರೆಯ ಕೂಗು ತಾಲೂಕಿನಾದ್ಯಂತ ಪ್ರತಿ ಹಳ್ಳಿಗಳಲ್ಲಿ ರೈತ ಕುಟುಂಬಗಳಲ್ಲಿ ಪ್ರಮುಖ ಚರ್ಚೆಯ ವಿಷಯವಾಗಿದ್ದು ಪಾದಯಾತ್ರೆ ಪ್ರವೇಶಿಸಿದ ಪ್ರತೀ ಹಳ್ಳಿಗಳಲ್ಲೂ ಜನರಿಂದ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದ್ದು ತಾಲೂಕಾಡಳಿತ ಎಚ್ಚರ ವಹಿಸ ಬೇಕಾದ ಅನಿವಾರ್ಯತೆ ತಲೆದೋರುತ್ತಿದೆ. 6ನೇ ದಿನದ ಪಾದಯಾತ್ರೆ ಮಲವಡಿ, ಚಿಬ್ಬಲಗೇರಿ, ತೆಗ್ಗಳ್ಳಿ, ಅಲ್ಲೊಳ್ಳಿ, ಖಾಮಡೊಳ್ಳಿ, ಸಿದ್ದಾಪೂರ ಹಾಗೂ ಕುಂಬಾರಕೊಪ್ಪ ಗ್ರಾಮಗಳ ಮೂಲಕ ಸಾಗಿತು. ಪಾದಯಾತ್ರೆ ಸಾಗಿದ ಗ್ರಾಮಗಳಲ್ಲಿ ರೈತರು ಹಾಗೂ ಸ್ಥಳೀಯರು ಪಾದಯಾತ್ರಿಕರನ್ನು ಸ್ವಾಗತಿಸಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಸಂಜೆ ಕುಂಬಾರಕೊಪ್ಪ ಗ್ರಾಮದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯಲ್ಲಿ ಮಾತನಾಡಿದ ಮುಖಂಡರು, ರೈತರ ಕೆರೆ ಬಾಂದಾರಗಳಿಗೆ ನೀರು ತಲುಪುವವರೆಗೆ ಹೋರಾಟ ಮುಂದುವರಿಯಲಿದೆ ಎಂದು ತಿಳಿಸಿದರು. ಸಭೆಯ ಬಳಿಕ ಕುಂಬಾರಕೊಪ್ಪ ಗ್ರಾಮದಲ್ಲಿ ಪಾದಯಾತ್ರಿಕರು ವಾಸ್ತವ್ಯ ಹೂಡಿದರು.



ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯ

◆**ಯಲ್ಲಾಪುರ :** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಮತ್ತು ನೌಕರರ ಬೇಡಿಕೆಗಳನ್ನು ಈಡೇರಿಸುವಲ್ಲಿ ಇಲಾಖೆಯ ಅಧಿಕಾರಿಗಳು ವಿಫಲರಾಗಿದ್ದು, ಅನಿವಾರ್ಯವಾಗಿ ಅನಿರ್ದಿಷ್ಟಾವಧಿ ಮುಷ್ಕರವನ್ನು ಕೈಗೊಳ್ಳುವದಾಗಿ

ವೈದ್ಯಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ, ಹಾಗೂ ತಾಲೂಕಾಸ್ಪತ್ರೆ ವೈದ್ಯಾಧಿಕಾರಿ ಡಾ.ನರೇಂದ್ರ ಪವಾರ ನೇತೃತ್ವದಲ್ಲಿ ತಾಲೂಕಡಳಿತ ಕಚೇರಿಯಲ್ಲಿ ತಹಶೀಲ್ದಾರ್ ಚಂದ್ರ ಶೇಖರ್ ಹೊಸಮನಿ ಹಾಗೂ ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಿದರು. ಆರೋಗ್ಯ ಇಲಾಖೆಯ ಅಧಿಕಾರಿ-ನೌಕರರು ಅನಿರ್ದಿಷ್ಟಾವಧಿಯಾಗಿ ಮಾ.11ರಿಂದ 15 ವರೆಗೆ ಕಪ್ಪುಪಟ್ಟಿ ಧರಿಸಿ ಹೊರರೋಗಿ ಸೇವೆ ನೀಡದೇ ಕೇವಲ ತುರ್ತು ಸೇವೆ ಮಾತ್ರ ಒದಗಿಸುವುದು. ಮಾ.16ರಂದು ಅನಿರ್ದಿಷ್ಟಾವಧಿವರೆಗೆ ಕರ್ತವ್ಯಕ್ಕೆ ಗೈರು ಹಾಜರಾಗಿ ಮುಷ್ಕರ ನಡೆಸಲಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಮುಖ್ಯಸ್ಥರ ಅಧ್ಯಕ್ಷತೆಯಲ್ಲಿ ನಡೆದ ಕೆಲವು ಸಭೆಗಳ ಸಭಾ ನಡವಳಿಗಳನ್ನು ಸಹ ದಾಖಲಿಸದೇ ಇಲಾಖೆಯ ಅಧಿಕಾರಿ-ನೌಕರರ ಸಮಸ್ಯೆ ಬಗೆಹರಿಸುವಲ್ಲಿ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ನಿರ್ಲಕ್ಷ್ಯವಹಿಸುತ್ತಿದ್ದು, ಇಲ್ಲಿಯವರೆಗೆ ಯಾವದೇ ಬೇಡಿಕೆಗಳನ್ನು ಈಡೇರಿಸಿರುವುದಿಲ್ಲ, ನಮ್ಮ ಬೇಡಿಕೆಗಳಾದ ಸರ್ಕಾರಿ ಆಸ್ಪತ್ರೆಗಳಿಗೆ ಕಾಲಕಾಲಕ್ಕೆ ಸಮರ್ಪಕವಾಗಿ ಇಲಾಖೆಯಿಂದ ಔಷಧಿಗಳನ್ನು ಸರಬರಾಜು ಮಾಡುವುದು.



ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರತಿ 3 ವರ್ಷಕ್ಕೊಮ್ಮೆ ತಿದ್ದುಪಡಿ ಮಾಡಲು ಸರ್ಕಾರಿ ಆದೇಶವಿದ್ದಾಗ್ಯೂ ಸಹ ಉಲ್ಲಂಘಿಸಿ 1973ರಿಂದ ಇಲ್ಲಿಯವರೆಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಿರುವುದಿಲ್ಲ, ಈ ಬಗ್ಗೆ ಶೀಘ್ರ ತಿದ್ದುಪಡಿ ಮಾಡುವುದು. ಸುಮಾರು 4 ವರ್ಷಗಳಿಂದ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿಗಾಗಿ ಹಲವಾರು ಮನವಿ ಸಲ್ಲಿಸಿದ್ದರೂ ಇದುವರೆಗೂ ಕಾರ್ಯಗತವಾಗಿಲ್ಲ, ಇಲಾಖೆಯ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಯನ್ನು ಕಾಲ ಕಾಲಕ್ಕೆ ಪ್ರಕಟಿಸುವುದು. ಕೂಡಲೇ ಮುಂಬಡ್ತಿಗಳನ್ನು ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಅಗ್ರಹಿಸಿದ್ದಾರೆ. ಈ ವೇಳೆ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಬೆಂಬಲ ನೀಡುವದಾಗಿ ರಾಜ್ಯಾಧ್ಯಕ್ಷರು ತಿಳಿಸಿದ್ದಾರೆ. ತಾಲೂಕು ನೌಕರರ ಸಂಘದ ಅಧ್ಯಕ್ಷ ಸಂಜೀವ ಕುಮಾರ್ ಹೊಸ್ಕೆರಿ ಹೇಳಿದರು. ತಾಲೂಕಸ್ಪತ್ರೆಯ ವೈದ್ಯೆ ಡಾ. ಸೌಮ್ಯ ಕೆ ವಿ, ಹಾಗೂ ಸಿಬ್ಬಂದಿ, ತಾಲೂಕಿನ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಸಿಬ್ಬಂದಿ ಇದ್ದರು.

ಗ್ರಾಪಂಗಳಲ್ಲಿ ಸ್ವಚ್ಛತೆ ಕೈಗೊಂಡ ಅಧಿಕಾರಿಗಳು

◆**ಹಳಿಯಾಳ:** ತಾಲೂಕಿನ ಗ್ರಾಪಂಗಳಲ್ಲಿ ಈಗ ನೀರಿನ ಮಹತ್ವದ ಅರಿವು ಮೂಡಿಸುವುದರೊಂದಿಗೆ ಸ್ವಚ್ಛತೆ ಕಾಪಾಡಿಕೊಳ್ಳಲು ಅಧಿಕಾರಿ ವರ್ಗವೇ ಕೈಯಲ್ಲಿ ಪೊರಕೆ ಹಾಗೂ ಇತರೆ ಸ್ವಚ್ಛತಾ ಸಲಕರಣೆ ಹಿಡಿದು ಮೈದಾನಕ್ಕಿಳಿದಿದ್ದಾರೆ.

ಇವೆಲ್ಲಕ್ಕೂ ಮೂಲ ಪ್ರೇರಣೆಯಾಗಿ ಹಳಿಯಾಳ ಮತ ಕ್ಷೇತ್ರದ ಹಿರಿಯ ಶಾಸಕ ಆರ್.ವಿ. ದೇಶಪಾಂಡೆಯವರು ಕಳೆದ ಮಾ.4ರಂದು ನಡೆದ ಪ್ರಗತಿ ಪರಿಶೀಲನಾ ಸಭೆಯ ತೀರ್ಮಾನದಂತೆ ತಾಲೂಕಿನ ಎಂಟು ಗ್ರಾಪಂನ ಪರಿಸರದಲ್ಲಿ ಸ್ವಚ್ಛತೆ ಹಾಗೂ ನೀರಿನ ಹೊಂಡಗಳ ಸ್ವಚ್ಛತೆಯೊಂದಿಗೆ ನೀರಿನ ಹೊಂಡದ ಸ್ವಚ್ಛತೆ ಹಾಗೂ ಸುಂದರತೆಗೆ ಒತ್ತು ಕೊಡಲು ಶಾಸಕರು ಪ್ರೇರೇಪಿಸಿದ್ದರಿಂದ ಒಂದೊಂದಾಗಿ ಅಧಿಕಾರಿ ವರ್ಗ ಹಾಗೂ ಸಿಬ್ಬಂದಿಗಳ ಶ್ರಮದಾನದ ಮೂಲಕ ಹೊಸ ಹೊಳಪು ಪಡೆಯಲು ಸಜ್ಜಾಗಿದೆ. ಆ ನಿಟ್ಟಿನಲ್ಲಿ ಈ ತೆರಗಾಂವ್ ಗ್ರಾಪಂನ ಮುಖ್ಯರಸ್ತೆಯ ಪಕ್ಕದ ನೀರಿನ ಹೊಂಡದ ಅಂದ ಹೆಚ್ಚಿಸುವ ನಿಟ್ಟಿನಲ್ಲಿ ತಾಪಂನ ಇಓ ವಿಲಾಸರಾಜ್ ಹಾಗೂ ತೆರಗಾಂವ್ ಗ್ರಾಪಂನ ಪಿಡಿಓ ಅನುಪಮಾ ಬೆನ್ನೂರ ಮೊದಲ ಹೆಜ್ಜೆ ಇಟ್ಟಿದ್ದು ಸಮಾಜಕ್ಕೆ ಸ್ವಚ್ಛತಾ ಅರಿವಿನ ಬಗ್ಗೆ ಉತ್ತಮ ಮಾದರಿಯಾಗಿದೆ.



ಅಧಿಕಾರಿಗಳ ಮನಸ್ಸಿನಿಚ್ಛೆಯಂತೆ ಗ್ರಾಪಂನ ಸಿಬ್ಬಂದಿ, ಆರೋಗ್ಯ ಇಲಾಖೆಯ ಸಿಬ್ಬಂದಿ, ಪ್ರೌಢ ಶಾಲಾ ಸಿಬ್ಬಂದಿ, ಪ್ರಾಥಮಿಕ ಶಾಲಾ ಶಿಕ್ಷಕರು, ಎನ್‌ಆರ್‌ಎಲ್‌ಎಮ್ ಯೋಜನೆಯ ಕಾರ್ಯಕರ್ತರು, ಮಾಜಿ ಚುನಾಯಿತ ಕೆಲ ಸದಸ್ಯರುಗಳು ಭಾಗವಹಿಸಿ, ಒಂದೊಳ್ಳೆ ಕಾರ್ಯಕ್ಕೆ ಮುನ್ನುಡಿ ಇಟ್ಟಿದ್ದು, ಸಾರ್ವಜನಿಕ ವಲಯದಲ್ಲಿ ಪ್ರಶಂಸೆಗೆ ಒಳಗಾಗಿದೆ.

ಹಿಂದೂ ಸಮಾಜೋತ್ಸವದಲ್ಲಿ ಹಾರಿಕಾ ಮಂಜುನಾಥ ಮಾತು

ಸಂಘಟಿತ ಹಿಂದೂ ಮಾತ್ರ ಧರ್ಮ ಉಳಿಸಬಲ್ಲ

◆**ಅಂಕೋಲಾ:** ಹಿಂದು ಧರ್ಮಕ್ಕೆ ಅನ್ಯ ಮತೀಯರಿಗಿಂತ ಹೆಚ್ಚಾಗಿ ಹಿಂದುಗಳಾಗಿ ಹುಟ್ಟಿ ಮಾತೃಧರ್ಮವನ್ನು ವಿರೋಧಿಸುವವರಿಂದಲೇ ಅತಿ ಹೆಚ್ಚು ಆತಂಕ, ಅಪಾಯ ಎದುರಾಗಿದೆ ಎಂದು ಯುವ ವಾಗ್ಮಿ ಹಾರಿಕಾ ಮಂಜುನಾಥ ಎಚ್ಚರಿಸಿದರು.

ಅವರು ಹಿಂದು ಸಮ್ಮೇಳನ ಸಮಿತಿ ಅಂಕೋಲಾ ನಗರ ಮಂಡಲ ವತಿಯಿಂದ ಶುಕ್ರವಾರ ಜೈಹಿಂದ್ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಲಾಗಿದ್ದ ಬೃಹತ್ ಹಿಂದು ಸಮಾಜೋತ್ಸವದಲ್ಲಿ ದಿಕ್ಸೂಚಿ ಭಾಷಣ ಮಾಡಿದರು.

ನಮ್ಮ ದೇಶದ ಮೇಲೆ 1375 ವರ್ಷಗಳಿಂದ ನಿರಂತರ ದಾಳಿ, ಲೂಟಿ ನಡೆದರೂ ಹಿಂದು ಸಂಸ್ಕೃತಿ, ಪರಂಪರೆ ನಾಶಮಾಡಲು ಸಾಧ್ಯವಾಗಲಿಲ್ಲ, ಮೊಘಲರಿಂದ ಬ್ರಿಟೀಷರ ತನಕ ನಮ್ಮ ಮೇಲೆ ನಿರಂತರ ದಾಳಿ ಆಯ್ತು. ನಾವು ಅದನ್ನು ಸಮರ್ಥವಾಗಿ ಮೆಟ್ಟಿ ನಿಂತೆವು. ಇದಕ್ಕೆ ಕಾರಣ ನಮ್ಮ ಹಿರಿಯರು ತಾವು ಪ್ರಾಣವನ್ನಾದರೂ ಬಿಟ್ಟೇವು, ನಮ್ಮ ಧರ್ಮ, ಸಂಸ್ಕೃತಿಯನ್ನು ಬಿಡಲಾರೆವು ಎಂದು ಗಟ್ಟಿಯಾಗಿ ನಿಂತಿದ್ದು ಕಾರಣ. ಇಂತಹ ಅಸೀಮ ಸಂಘಟಿತ ಬಲ ಈಗ ಹಿಂದೂ ಧರ್ಮಕ್ಕೆ ಅಗತ್ಯವಿದೆ ಎಂದು ಅವರು ಹೇಳಿದರು.

ಕಲಿಯುಗದಲ್ಲಿ ಸಂಘಟಿತ ಶಕ್ತಿಯಿಂದ ಮಾತ್ರ ಹಿಂದು ಧರ್ಮ, ದೇಶ ಉಳಿಸಲು ಸಾಧ್ಯ. ಹೀಗಾಗಿ ನಮ್ಮ ದೌರ್ಬಲ್ಯಗಳನ್ನು ಮೆಟ್ಟಿ ನಿಲ್ಲಬೇಕು. ನಮ್ಮ ಜಾತಿ ನಮ್ಮ ಮನೆಯೊಳಗೆ ಸೀಮಿತವಾಗಬೇಕು.

ಹಿಂದುಗಳಿಗೆ ಇಡೀ ಜಗತ್ತಿನಲ್ಲಿ ಇರುವ ಏಕೈಕ ದೇಶ ಭಾರತ. ಹೀಗಾಗಿ ನಮ್ಮ ಸಂಸ್ಕೃತಿ ಪರಂಪರೆಯನ್ನು ಉಳಿಸಬೇಕಾದ ಮತ್ತು ಅದನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸಬೇಕಾದ ಹೊಣೆ ಕೇವಲ ನಮ್ಮದು. ಈ ಅರಿವು ನಮ್ಮಲ್ಲಿ ಬರಬೇಕು. ನಮ್ಮ ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರವನ್ನು ಧಾರೆ ಎರೆದು ದೇಶದ ಆಸ್ತಿಯನ್ನಾಗಿ ಮಾಡಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಕರ್ಕಿ ಸಂಸ್ಥಾನ ಮಠದ ಶ್ರೀ ಸಚ್ಚಿದಾನಂದ ಜ್ಞಾನೇಶ್ವರ ಭಾರತಿ ಮಹಾ ಸ್ವಾಮೀಜಿಗಳು ಮಾತನಾಡಿ, ಹಿಂದುಗಳಾದ ನಾವು ಭವಿಷ್ಯದಲ್ಲೂ ಹಿಂದುಗಳಾಗಿಯೇ ಉಳಿಯಬೇಕಾದರೆ ನಮ್ಮ ಸಂಸ್ಕೃತಿ, ಆಚಾರ- ವಿಚಾರ ಮರೆಯಬಾರದು. ಜಾತಿಯ ಬದಲು ಭಾರತೀಯತೆಯ ಛತ್ರದಡಿ ಒಂದಾಗಿ ಸಮಾಜ ಕಟ್ಟಬೇಕು. ಆಗಲೇ ಭಾರತ ವಿಶ್ವ ಗುರು ಆಗಲು ಸಾಧ್ಯ ಎಂದರು. ಆರೆಸ್ಸೆಸ್ ನೂರು ವರ್ಷಗಳಲ್ಲಿ ಮಾಡಿರುವ ಸಮಾಜಮುಖಿ ಕಾರ್ಯಗಳನ್ನು ಅವರು ಶ್ಲಾಘಿಸಿದರು.ಪೌರ ಕಾರ್ಮಿಕರಾದ ಪ್ರೇಮಾ ರಾಘವೇಂದ್ರ ಶಿರಾಲಿಕರ್ ಮುಖ್ಯ ಅತಿಥಿಯಾಗಿದ್ದರು.ಭರತನಾಟ್ಯದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಪುನೀತ ನಾಯ್ಕ, ಅರ್ಪಿತಾ ಭಟ್ಟ ಯಕ್ಷಗಾನ ಪ್ರದರ್ಶಿಸಿದರು.ಅಭಯ ಮರಬಳ್ಳಿ ಹಾರ್ಮೋನಿಯಂ, ಶಶಿಧರ ಶೇಣ್ವಿ ತಬಲಾದೊಂದಿಗೆ ಧನ್ಯಾ ಶೇಣ್ವಿ ವಯಕ್ತಿಕ ಗೀತೆ ಹಾಡಿದರು. ಹಿಂದೂ ಸಮ್ಮೇಳನ ಸಮಿತಿಯ ಅಧ್ಯಕ್ಷ ನಾಗೇಶ ನಾಯ್ಕ ಸ್ವಾಗತಿಸಿದರು. ಹಿಂದು ಸಮ್ಮೇಳನ ಸಮಿತಿಯ ಗೌರವಾಧ್ಯಕ್ಷ ಸುಭಾಷ ನಾರ್ವೇಕರ ಪ್ರಾಸ್ತಾವಿಕ ಮಾತನಾಡಿದರು. ನಾಗರಾಜ ಶೆಟ್ಟಿ ವಂದಿಸಿದರು. ಮಹೇಶ ಮಹಾಲೆ ವಂದೇ ಮಾತರಂ ಹಾಡಿದರು. ಶಿಕ್ಷಕ ಪ್ರಶಾಂತ ನಾಯಕ ಕಾರ್ಯಕ್ರಮ ನಿರ್ವಹಿಸಿದರು. ಕರ್ಕಿ ಸಂಸ್ಥಾನ ಮಠದ ಶ್ರೀ ಸಚ್ಚಿದಾನಂದ ಜ್ಞಾನೇಶ್ವರ ಭಾರತಿ ಮಹಾ ಸ್ವಾಮೀಜಿಗಳು ರಥದಲ್ಲಿ ವಿರಾಜಮಾನರಾಗಿದ್ದರು.



ಭವ್ಯ ಶೋಭಾಯಾತ್ರೆ

ಶ್ರೀ ಶಾಂತಾದುರ್ಗಾ ದೇವಸ್ಥಾನದಿಂದ ಭವ್ಯ ಶೋಭಾಯಾತ್ರೆ ನಡೆಯಿತು. ಮೆರವಣಿಗೆಯಲ್ಲಿ ಪೂರ್ಣಕುಂಭ ಹೊತ್ತ ಮಹಿಳೆಯರು, ಭಜನಾ ತಂಡಗಳು, ವಾರಕರಿ, ಜನಪದೀಯ ವಾದ್ಯಮೇಳಗಳು ಇದ್ದವು.

ಅಭಿವೃದ್ಧಿಗೆ ಕೇಂದ್ರದಿಂದ ಹಣ ಬಿಡುಗಡೆ ಸ್ವಾಗತಾರ್ಹ: ರೂಪಾಲಿ

◆**ಕಾರವಾರ:** ಸೀಬರ್ಡ ನೌಕಾನೆಲೆ ನಿರಾಶ್ರಿತರಿಗೆ 27.70 ಕೋಟಿ ರೂಪಾಯಿ ಹೆಚ್ಚುವರಿ ಪರಿಹಾರ ಬಿಡುಗಡೆ ಹಾಗೂ ರಾಷ್ಟ್ರೀಯ ಹೆದ್ದಾರಿ (52ರ) ಅಂಕೋಲಾ ಯಲ್ಲಾಪುರ ನಡುವೆ ಸಮಗ್ರ ಅಭಿವೃದ್ಧಿಗೆ 101.21 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದು, ಸ್ವಾಗತಾರ್ಹವಾಗಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಹಾಗೂ ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ತಿಳಿಸಿದ್ದಾರೆ.

ಸೀಬರ್ಡ ನೌಕಾನೆಲೆ ಸಂತ್ರಸ್ಥರಿಗೆ 28 ಬಿ ಅಡಿಯಲ್ಲಿನ 112 ಪ್ರಕರಣಗಳಿಗೆ ಒಟ್ಟೂ 27 ಕೋಟಿ ರೂ.ಗಳ ಹೆಚ್ಚುವರಿ ಪರಿಹಾರ ಬಿಡುಗಡೆಯಾಗಿದೆ. ಇದರಲ್ಲಿ ದಾಖಲೆ ನೀಡಿದ 6.87 ಕೋಟಿ ರೂ. ಪರಿಹಾರವನ್ನು ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಶನಿವಾರ ವಿತರಣೆ ಮಾಡಿದ್ದಾರೆ. ಇದುವರೆಗೆ 35 ಕೋಟಿ ರೂ. ಬಿಡುಗಡೆಯಾಗಿದ್ದು ಬಾಕಿ ಇರುವ 215 ಪ್ರಕರಣಗಳಿಗೆ 28.82 ಕೋಟಿ ರೂ. ಶೀಘ್ರದಲ್ಲಿ ಬಿಡುಗಡೆಯಾಗಲಿದೆ ಎಂದು ಸಂಸದರು ತಿಳಿಸಿದ್ದಾರೆ. ಈ ಹಣ ಬಿಡುಗಡೆಗೆ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ವಿಶೇಷ ಪ್ರಯತ್ನ ನಡೆಸಿದ್ದರು.

ಅದೇ ರೀತಿ ಅಂಕೋಲಾ ಯಲ್ಲಾಪುರ ಹೆದ್ದಾರಿ ಹೊಸಳ್ಳಿಯಿಂದ ಯಲ್ಲಾಪುರ ಹಾಗೂ ಮಾಸ್ತಿಕಟ್ಟೆಯಿಂದ ಬಾಳೆಗುಳಿ ತನಕ ರಸ್ತೆ ಸುಧಾರಣೆಗೆ ಕೇಂದ್ರ ಸರ್ಕಾರ 101.21 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ಈ ಯೋಜನೆಯಡಿ 44.74 ಕಿ.ಮೀ. ರಸ್ತೆಯನ್ನು ಅತ್ಯಾಧುನಿಕ ತಂತ್ರಜ್ಞಾನದಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದು ಸಂಸದರು ತಿಳಿಸಿದ್ದಾರೆ.ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಾರವಾರ ಅಂಕೋಲಾ ಕ್ಷೇತ್ರದಲ್ಲಿ ಪರಿಹಾರ ಹಾಗೂ ಅನುದಾನ ನೀಡುವ ಮೂಲಕ ಅಭಿವೃದ್ಧಿಗೆ ಒತ್ತು ನೀಡಿದೆ. ಈ ಹಣ ಬಿಡುಗಡೆ ಮಾಡಿದ ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ ಸಿಂಗ್, ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಹಾಗೂ ಹಣ ಬಿಡುಗಡೆಗೆ ನಿರಂತರ ಪ್ರಯತ್ನಿಸಿದ ನಮ್ಮ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಶೀಘ್ರ ಪರಿಹಾರ ವಿತರಣೆ

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಸೀಬರ್ಡ ನಿರಾಶ್ರಿತರಿಗೆ ಹೆಚ್ಚುವರಿ ಪರಿಹಾರ ಬಿಡುಗಡೆಯಾಗುತ್ತಿದೆ. ಈ ಹಿಂದೆ ಸಂಸದರಾಗಿದ್ದ ಅನಂತಕುಮಾರ ಹೆಗಡೆ ಅವರ ಪ್ರಯತ್ನದಿಂದ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಕಾರವಾರಕ್ಕೆ ಆಗಮಿಸಿ ಸುಮಾರು 600 ಕೋಟಿ ರೂ.ಗಳಷ್ಟು ಪರಿಹಾರ ವಿತರಣೆ ಮಾಡಲಾಗಿತ್ತು. ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಬಾಕಿ ಉಳಿದ ಪರಿಹಾರವನ್ನೂ ಆದಷ್ಟು ಶೀಘ್ರದಲ್ಲಿ ಬಿಡುಗಡೆಗೆ ಪ್ರಯತ್ನಿಸಿ, ವಿತರಣೆ ಮಾಡಲಿದ್ದಾರೆ ಎಂಬ ಭರವಸೆ ಇದೆ ಎಂದು ರೂಪಾಲಿ ನಾಯ್ಕ ಹೇಳಿದಾರೆ.



ಕಿರುಸುದ್ದಿ



ಹಾನಗಲ್ಲ: ಗುರುಭವನದಲ್ಲಿ ಪರಿವರ್ತನ ಕಲಿಕಾ ಕೇಂದ್ರ ಆಯೋಜಿಸಿದ ತಾಲೂಕಿನ ಅಲದಕಟ್ಟಿ ಹಾಗೂ ಹಾನಗಲ್ಲಿನ ಎರಡು ಕಡೆ ಸೇರಿ ಒಟ್ಟು ಮೂರು ಕಡೆಗಳಲ್ಲಿ ಏಕ ಕಾಲಕ್ಕೆ ಆರಂಭಿಸಿದ ನೂರಕೂ ಅಧಿಕ ಮಹಿಳೆಯರಿಗೆ ಆರೀ ಕಲೆ ತರಬೇತಿಯ ಸಮಾರೋಪ ಹಾಗೂ ಕಲೆಯ ಪ್ರದರ್ಶನದಲ್ಲಿಪುರಸಭೆ ಮಾಜಿ ಅಧ್ಯಕ್ಷೆ ಮಮತಾ ಆರೆಗೊಪ್ಪ ಪಾಲ್ಗೊಂಡಿದರು. ಕಲಿಕಾ ಕೇಂದ್ರದ ಆಡಳಿತಾಧಿಕಾರಿ ಮಾರುತಿ ಶಿಡ್ಲಾಪೂರ, ಗಿರೀಶ ಅಂಬಿಗೇರ, ಆರೀ ಕಲೆ ಶಿಕ್ಷಕಿಯರಾದ ಫರ್ವಿನಾ ಜೇಕ್ಕಿನಕಟ್ಟಿ, ಶೃತಿ ಮರಿಯಣ್ಣನವರ, ಪ್ರಿಯಾ ಗೊಲ್ಲರ ಇದ್ದರು.

ಭೌತಶಾಸ್ತ್ರ ಪರೀಕ್ಷೆ: ಶೇ.98.88ರಷ್ಟು ವಿದ್ಯಾರ್ಥಿಗಳು ಹಾಜರು

ಹಾವೇರಿ: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಆರನೇ ದಿನವಾದ ಶುಕ್ರವಾರ ಜಿಲ್ಲೆಯ 25 ಪರೀಕ್ಷಾ ಕೇಂದ್ರಗಳಲ್ಲಿ ಭೌತಶಾಸ್ತ್ರ ವಿಷಯದ ಪರೀಕ್ಷೆ ಬಹುತೇಕ ಶಾಂತಿಯುತವಾಗಿ ನಡೆಯಿತು. ಭೌತಶಾಸ್ತ್ರ ವಿಷಯದ ಪರೀಕ್ಷೆಗೆ ಒಟ್ಟು 4,202 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದು, ಈ ಪೈಕಿ 4,155 ವಿದ್ಯಾರ್ಥಿಗಳು ಹಾಜರಾಗಿದ್ದರು. 47 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಒಟ್ಟಾರೆ ಭೌತಶಾಸ್ತ್ರ ಪರೀಕ್ಷೆಗೆ ಶೇ.98.88ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಚೇರಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ನುಡಿ ನಮನ

ಹಾವೇರಿ: ತಾಲೂಕಿನ ಹೊಸರಿತ್ತಿಯಲ್ಲಿ ಇತ್ತೀಚೆಗೆ ನಿಧನರಾದ ಪ್ರಾಚಾರ್ಯ ದಿ.ಎಫ್.ಐ.ಶಿಗ್ಲಿ ಅವರ 'ನುಡಿ ನಮನ' ಕಾರ್ಯಕ್ರಮ ಮಾ.8ರಂದು ಬೆಳಗ್ಗೆ 10.30ಕ್ಕೆ ಹೊಸರಿತ್ತಿಯ ಗುದ್ಲೆಪ್ಪ ಹಳ್ಳಿಕೇರಿ ಜನ್ಮಶತಮಾನೋತ್ಸವ ಸ್ಮಾರಕ ಸಭಾಭವನದಲ್ಲಿ ಆಯೋಜಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ಸಮಿತಿ ಹಾಗೂ ಕಾಲೇಜಿನ ಹಳೇಯ ವಿದ್ಯಾರ್ಥಿಗಳ ಸಂಘಟನೆ ವತಿಯಿಂದ ಆಯೋಜಿಸಿರುವ ಈ ನುಡಿ ನಮನ ಕಾರ್ಯಕ್ರಮದಲ್ಲಿ ಕಾಲೇಜಿನ ಆಡಳಿತ ಮಂಡಳಿಯವರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ಕಾಲೇಜಿನ ಹಳೇಯ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬ್ಯಾಡಗಿ ಪುರಸಭೆ: ಆಸ್ತಿ ತೆರಿಗೆ ಶೇ. 3ರಷ್ಟು ಹೆಚ್ಚಳ

ಬ್ಯಾಡಗಿ: ಬ್ಯಾಡಗಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಖಾಲಿ ನಿವೇಶನ, ವಸತಿ, ವಾಣಿಜ್ಯ ಕಟ್ಟಡಗಳಿಗೆ ಹಾಗೂ ಕೈಗಾರಿಗಳಿಗೆ 2025-26ನೇ ಸಾಲಿನ ಆಸ್ತಿ ತೆರಿಗೆ ಮೇಲೆ ಕನಿಷ್ಠ ಶೇ.3ರಷ್ಟು ಆಸ್ತಿ ತೆರಿಗೆಯನ್ನು ಹೆಚ್ಚಿಸಿ 2026-27ನೇ ಸಾಲಿಗೆ ಪರಿಷ್ಕರಿಸಲಾಗಿದೆ. ಆಸ್ತಿ ಮಾಲೀಕರು ಈ ದರದಂತೆ ತೆರಿಗೆ ಪಾವತಿಸಿ ನಗರದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಬ್ಯಾಡಗಿ ಪುರಸಭೆ ಮುಖ್ಯಾಧಿಕಾರಿ ವಿನಯ್ ಕುಮಾರ ಹೊಳೆಯಪ್ಪಗೋಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಮ ಒನ್ ಕೇಂದ್ರ ಸ್ಥಾಪನೆಗೆ ಅರ್ಜಿ ಆಹ್ವಾನ

ಹಾವೇರಿ: ಜಿಲ್ಲೆಯಲ್ಲಿ ಹೊಸದಾಗಿ ಗ್ರೇಡ್-1 ಗ್ರಾಪಂಯಾಗಿ ಮಾರ್ಪಟ್ಟ ಹಲವು ಪಂಚಾಯತಿಗಳಲ್ಲಿ ಹೆಚ್ಚುವರಿಯಾಗಿ ಗ್ರಾಮ ಒನ್ ಕೇಂದ್ರ ಸ್ಥಾಪನೆಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ https//sevasindhuervices.karnataka.gov.in/ dierctApply.do?serviceld+2631+2631ನಲ್ಲಿ ಮಾ.15ರೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳು ಒಂದೇ ಸೂರಿನಡಿ ಒದಗಿಸಲು ಗ್ರಾಪಂ ಮಟ್ಟದಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಮೂಲಕ ಗ್ರಾಮೀಣ ಭಾಗದ ಜನರಿಗೆ ತಮ್ಮ ಸಮೀಪದಲ್ಲಿ ಸರ್ಕಾರದ ಹಲವು ಸೇವೆಗಳು ತಮ್ಮ ಮನೆಯ ಬಾಗಿಲಿಗೆ ತಲುಪುತ್ತಿವೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ನೂತನ ಯೋಜನೆಗಳನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.



ಹಾವೇರಿ: ನಗರದ ರಾಮದೇವರ ದೇವಸ್ಥಾನದ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಹಾವೇರಿ ನಗರಸಭೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶಿಷ್ಟಚೇತನರಿಗೆ ಕಾನೂನು ಅರಿವು ಮತ್ತು ಸೌಲಭ್ಯಗಳ ವಿತರಣಾ ಕಾರ್ಯಕ್ರಮ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಹೆಚ್. ವಿ. ಉದ್ಘಾಟಿಸಿದರು.

ಪ್ರತಿಯೊಬ್ಬರಿಗೂ ಕಾನೂನು ಅರಿವು ಅಗತ್ಯ

ಹಾವೇರಿ: ಕಾನೂನುಗಳ ಮಾಹಿತಿ ಕೊರತೆಯಿಂದ ಅನೇಕ ಅಹಿತಕರ ಘಟನೆಗಳು ನಡೆಯುತ್ತಿದ್ದು, ಹಾಗಾಗಿ ಪ್ರತಿಯೊಬ್ಬರೂ ಕಾನೂನುಗಳ ಬಗ್ಗೆ ಅರಿವು ಹೊಂದಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಹೆಚ್. ವಿ. ಅವರು ಹೇಳಿದರು. ಹಾವೇರಿ ನಗರದ ರಾಮದೇವರ ದೇವಸ್ಥಾನದ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಹಾವೇರಿ ನಗರಸಭೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶಿಷ್ಟಚೇತನರಿಗೆ ಕಾನೂನು ಅರಿವು ಮತ್ತು ಸೌಲಭ್ಯಗಳ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕಾನೂನು ನೆರವು ಕೋರಿ ಬರುವವರಿಗೆ ಸಕಾಲದಲ್ಲಿ ಸಹಾಯ ನೀಡುವುದೇ ಕಾನೂನು ಸೇವೆಗಳ ಪ್ರಾಧಿಕಾರದ ಉದ್ದೇಶ ಎಂದು ಹೇಳಿದರು. ಹಾವೇರಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರು ಎಚ್.ಸಿ. ಸಿದ್ದನಗೌಡ ಮಾತನಾಡಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸಹಾಯಕ ಕಾನೂನು ನೆರವು ಅಭಿರಕ್ಷಣಾ ವಕೀಲ ಎನ್.ಎನ್. ದಿಳ್ಳೆಪ್ಪನವರ ಅವರು ಬಾಲ್ಯ ವಿವಾಹ ನಿಷೇಧ , ವರದಕ್ಷಿಣೆ ನಿಷೇಧ ಕಾಯ್ದೆ ಹಾಗೂ ಪೋಕ್ಸೋ ಕಾಯ್ದೆಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು. ನಗರಸಭೆ ಪೌರಾಯುಕ್ತ ಎಚ್. ಕಾಂತರಾಜು ಮಾತನಾಡಿ, ವಿಶಿಷ್ಟ ಚೇತನರಿಗಾಗಿ ಮೀಸಲಾತಿ ನಿಧಿಯಿಂದ' ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಲ್ಯಾಪ್ ಟಾಪ್ ವಿತರಣೆ ಹಾಗೂ ನಗರಸಭೆಗೆ ಬರುವ ವಿಶಿಷ್ಟ ಚೇತನರಿಗೆ ಅನುಕೂಲವಾಗುವಂತೆ ರೂ.62 ಲಕ್ಷ ವೆಚ್ಚದಲ್ಲಿ ಲಿಫ್ಟ್ ನಿರ್ಮಾಣ ಮಾಡಲಾಗುತ್ತಿದೆ ಎಂದು ತಿಳಿಸಿದರು. ಈ ವೇಳೆ ವಿಶಿಷ್ಟಚೇತನರಿಗೆ ವೀಲ್ ಚೇರಗಳನ್ನು ವಿತರಿಸಲಾಯಿತು.



ಹಾನಗಲ್ಲ: ತಾಲೂಕಿನ ಹುಲಗಿನಹಳ್ಳಿ ಗ್ರಾಮದಲ್ಲಿ ನಡೆದ ಭೂಗ್ಯಾರಂಟಿ ಕಾರ್ಯಕ್ರಮದಡಿ 77 ಕುಟುಂಬಗಳಿಗೆ ಶಾಸಕ ಶ್ರೀನಿವಾಸ ಮಾನೆ ಹಕ್ಕುಪತ್ರ ವಿತರಿಸಿದರು. ಈ ಕಂದಾಯ ಇಲಾಖೆಯ ಅಧಿಕಾರಿಗಳು, ಗ್ರಾಮಸ್ಥರು, ಮುಖಂಡರು ಇದ್ದರು.

ಬಡವರ ಅನುಕೂಲಕ್ಕೆ ಆಯುಷ್ಮಾನ್ ಆರೋಗ್ಯ ಕೇಂದ್ರ: ಬೊಮ್ಮಾಯಿ

ಸವಣೂರು: ಕೇಂದ್ರ ಸರ್ಕಾರದ ಆಯುಷ್ಮಾನ್ ಯೋಜನೆ ಬಡವರಿಗೆ 5 ಲಕ್ಷ ರೂ.ವರೆಗೆ ಚಿಕಿತ್ಸೆ ನೀಡುವ ಪ್ರಮುಖ ಯೋಜನೆಯಾಗಿದ್ದು, ರಾಜ್ಯದಲ್ಲಿ 1.80ಕೋಟಿ ಬಡವರಿಗೆ ಆಯುಷ್ಮಾನ ಕಾರ್ಡ್‌ಗಳಿವೆ. ಗ್ರಾಮೀಣ ಪ್ರದೇಶದ ಬಡವರ ಅನುಕೂಲಕ್ಕಾಗಿ ಹಳ್ಳಿಗಳಲ್ಲಿ ಆಯುಷ್ಮಾನ್ ಆರೋಗ್ಯ ಕೇಂದ್ರ ಪ್ರಾರಂಭಿಸುತ್ತಿದ್ದೇವೆ ಎಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸವಣೂರ ತಾಲೂಕಿನ ನಾಯಿಕೆರೂರ ಮತ್ತು ಹಿರೇಮುಗದೂರ ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಕೇಂದ್ರದ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆಯನ್ನು ನೆರವೇರಿಸಿ, ಮಾತನಾಡಿ, ನಾಯಕೆರೂರಿಗೆ ನನಗೆ ಬಹಳ ನಿಕಟ ಸಂಬಂಧ ಇದೆ. 1989 ರಲ್ಲಿ ಅಜಂಪೀರ್ ಖಾದ್ರಿ ಅವರ ಚುನಾವಣೆ ಮಾಡಲು ನಾನು ಬಂದಿದ್ದೆ. ಆಗ ಎಲ್ಲ ಹಳ್ಳಿಗಳು ಶಿಗ್ಗಾವಿ ಸವಣೂರು ಮತಕ್ಷೇತಕ್ಕೆ ಸೇರಿದ್ದವು. ಇಲ್ಲಿಯ ಹಿರಿಯರ ನಿಕಟವಾದ ಸಂಬಂಧ ಇದೆ. ಹೀಗಾಗಿ ಈ ಊರಿನ ಬಗ್ಗೆ ಬಹಳಷ್ಟು ಅಭಿಮಾನ ಇದೆ ಎಂದು ಹೇಳಿದರು.

ಇಲ್ಲಿ 65ಲಕ್ಷ ರೂ. ಖರ್ಚು ಮಾಡಿ ಆರೋಗ್ಯ ಕೇಂದ್ರ ಪ್ರಾರಂಭಿಸುತ್ತಿದ್ದೇವೆ. ಇಲ್ಲವೈದ್ಯರು, ಒಪಿಡಿ ಎಲ್ಲ ವ್ಯವಸ್ಥೆ ಆಗುತ್ತದೆ. ಒಂದು ವರ್ಷದಲ್ಲಿ ಆಸ್ಪತ್ರೆ ಆರಂಭವಾಗಿ ನಾವೇ ಉದ್ಘಾಟನೆ ಮಾಡುತ್ತೇವೆ ಎಂದು ಹೇಳಿದರು.

ವಿಧಾನಸಭಾ ಉಪಾಧ್ಯಕ್ಷ ರುದ್ರಪ ಲಮಾಣಿಯವರು ಸವಣೂರು ತಾಲೂಕಿನಲ್ಲಿ ರಸ್ತೆಗಳ ಸಂಪರ್ಕ ಆದಷ್ಟು ಬೇಗ ಮಾಡಬೇಕು.



> ಗ್ರಾಪಂ ಕಟ್ಟಡಕ್ಕೆ ನನ್ನ ಸಂಸದರ ನಿಧಿಯಿಂದ 5ಲಕ್ಷ ರೂ. ನೀಡುತ್ತೇನೆ. ಈ ಆರೋಗ್ಯ ಕೇಂದ್ರದ ಸದುಪಯೋಗ ಮಾಡಬೇಕು. ಇಲ್ಲಿ ವೈದ್ಯರು ಮತ್ತು ನರ್ಸ್‌ಗಳನ್ನು ಹಾಕಿಸುವ ಕೆಲಸವನ್ನು ರುದಪ್ಪ ಲಮಾಣಿ ಅವರು ಮಾಡಬೇಕು.
> ■ ಬಸವರಾಜ ಬೊಮ್ಮಾಯಿ, ಸಂಸದ

ಸವಣೂರು ತಾಲೂಕಿನ ರಸ್ತೆಗಳ ಅಭಿವೃದ್ಧಿಗೆ ಕನಿಷ್ಠ100 ಕೋಟಿ ರೂ. ಅಗತ್ಯವಿದೆ. ನನಗೆ ಎಂಟು ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಅದರಲ್ಲಿ ಸವಣೂರಿನಲ್ಲಿ ಹೆಚ್ಚು ರಸ್ತೆಗಳು ಹದಗೆಟ್ಟಿರುವುದರಿಂದ ಇಲ್ಲಿಯೇ ಹೆಚ್ಚಿನ ಅನುದಾನ ನೀಡುತ್ತೇನೆ ಎಂದರು.

ಬಡವರಿಗೆ ಆರೋಗ್ಯ ಸೇವೆ ನಿಲುಕುತ್ತಿಲ್ಲ ಎನ್ನುವ ಕಾರಣಕ್ಕೆ ಅವರಿಗಾಗಿ ಪ್ರಧಾನಿ ನರೇಂದ್ರ ಮೋದಿಯವರು ಈ ಯೋಜನೆ ಮಾಡಿದ್ದಾರೆ. ಇದರ ಜೊತೆಗೆ ಜನೌಷಧಿ ಕೇಂದ್ರವನ್ನು ಪ್ರಾರಂಭ ಮಾಡಿದ್ದಾರೆ. ಬೇರೆ ಔಷಧ ಮಳಿಗೆಗಳಲ್ಲಿ ಔಷಧದ ಬೆಲೆ ನೂರು ರೂ. ಇದ್ದರೆ ಜನೌಷಧಿ ಕೇಂದ್ರಗಳಲ್ಲಿ 20 ರೂ.ಗೆ ಸಿಗುತ್ತದೆ. ರಾಜ್ಯ ಸರ್ಕಾರ ಹಾವೇರಿ ಜಿಲ್ಲಾಸತ್ರೆಯಲ್ಲಿದ್ದ ಜನೌಷಧಿ ಕೇಂದ್ರ ಬಂದ್ ಮಾಡಿಸಿದ್ದಾರೆ ಇದರಿಂದ ಬಡವರಿಗೆ ತೊಂದರೆಯಾಗಿದೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಜನೌಷಧಿ ಕೇಂದ್ರ ಸ್ಥಾಪನೆ ಮಾಡಬೇಕು. ಗ್ರಾಮಗಳ ಅಭಿವೃದ್ಧಿಗೆ ಐದು ಹಂತದ ಸಂಸ್ಥೆಗಳು ಗ್ರಾಪಂ, ತಾಲೂಕು, ಜಿಲ್ಲಾ, ಶಾಸಕರು ಹಾಗೂ ಸಂಸದರು ಐದು ಹಂತದ ಸಂಸ್ಥೆಗಳು ಒಟ್ಟಿಗೆ ಕೆಲಸ ಮಾಡಬೇಕು. 60ತಿಂಗಳಲ್ಲಿ 59 ತಿಂಗಳು ಅಭಿವೃದ್ಧಿ ಕೆಲಸ ಮಾಡಿ ಒಂದು ತಿಂಗಳು ರಾಜಕಾರಣ ಮಾಡೋಣ ಎಂದರು.

ವಿಧಾನ ಸಭಾ ಉಪಾಧ್ಯಕ್ಷ ರುದಪ್ಪ ಲಮಾಣಿ ಹಾಗೂ ಬಿಜೆಪಿ ಅಭ್ಯರ್ಥಿಯಾಗಿದ್ದ ಗವಿಸಿದ್ದಪ್ಪ ಅವರು ಇಬ್ಬರೂ ಸೇರಿಯೇ ಒಂದೇ ವೇದಿಕೆಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ಅಪರೂಪ, ಇದು ಒಳ್ಳೆಯ ವೇದಿಕೆ ಅಭಿವೃದ್ಧಿಯ ವೇದಿಕೆ. ಜನರ ಕಲ್ಯಾಣ ಮಾಡುವ ವೇದಿಕೆ ಎಂದರು.

ಈ ಸಂಧರ್ಭದಲ್ಲಿ ವಿಧಾನಸಭೆಯ ಉಪಸಭಾಧ್ಯಕ್ಷ ರುದ್ರಪ್ಪಲಮಾಣಿ, ಮುಖಂಡರಾದ ಗವಿಸಿದ್ದಪ್ಪ ದ್ಯಾಮಣ್ಣವರ ಸೇರಿದಂತೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ನಂದಿನಿ ಮಾರಾಟ ಮಳಿಗೆ ಉದ್ಘಾಟನೆ

ಹಾವೇರಿ: ನಗರದ ಸಂಗೂರ ಕರಿಯಪ್ಪ ವೃತ್ತದ ಬಳಿ ಇರುವ ಹಾವೇರಿ ಜಿಲ್ಲಾ ಹಾಲು ಒಕ್ಕೂಟದ ಕೇಂದ್ರ ಕಚೇರಿ ಆವರಣದಲ್ಲಿ ನೂತನವಾಗಿ ಪ್ರಾರಂಭಿಸಲಾದ ನಂದಿನಿ ಉತ್ಪನ್ನಗಳ ಮಾರಾಟ ಮಳಿಗೆಯನ್ನು ವಿಧಾನಸಭೆ ಉಪಸಭಾಧ್ಯಕ್ಷ, ಶಾಸಕ ರುದ್ರಪ್ಪ ಲಮಾಣಿ ಶನಿವಾರ ಉದ್ಘಾಟಿಸಿದರು.

ಬಳಿಕ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಹಾವೇರಿ ಜಿಲ್ಲಾ ಹಾಲು ಒಕ್ಕೂಟಕ್ಕೆ ನೂತನ ಆಡಳಿತ ಮಂಡಳಿ ಅಧಿಕಾರಕ್ಕೆ ಬಂದ ಬಳಿಕ ಹಾವೇರಿ ನಗರ ಪ್ರದೇಶದಲ್ಲಿ ಸುಮಾರು ಒಂಭತ್ತು ಮಳಿಗೆ ತೆರೆಯಲಾಗಿದೆ. ಈ ಎಲ್ಲ ಮಳಿಗೆಗಳು ಲಾಭ ದಾಯಕವಾಗಿವೆ. ಗ್ರಾಹಕರೂ ಕೂಡ ನಂದಿನಿ ಉತ್ಪನ್ನಗಳನ್ನೇ ಹೆಚ್ಚಾಗಿ ಇಷ್ಟಪಡುತ್ತಿದ್ದು, ಹೆಚ್ಚಿನ ಉತ್ಪನ್ನಗಳನ್ನು ಖರೀದಿಸುತ್ತಾರೆ. ಜತೆಗೆ ಈ ಸ್ಥಳವೂ ಕೂಡ ಜನದಟ್ಟಣೆ ಹೆಚ್ಚಾಗಿರುವ ಒಳ್ಳೆಯ ಜಾಗದಲ್ಲಿದ್ದು, ನಗರ ಸೇರಿದಂತೆ ಗ್ರಾಮೀಣ ಭಾಗಗಳಿಗೆ ತೆರಳುವ ಸಾರ್ವಜನಿಕರು ತಮ್ಮ ನೆಚ್ಚಿನ ಉತ್ಪನ್ನಗಳನ್ನು ಖರೀದಿ ಮಾಡಿಕೊಂಡು ಹೋಗುತ್ತಾರೆ. ಬರುವ ದಿನಗಳಲ್ಲಿ ಅತ್ಯುತ್ತಮ ಲಾಭವನ್ನು ಈ ಮಳಿಗೆ ತಂದುಕೊಡುವ ವಿಶ್ವಾಸವಿದೆ ಎಂದು ಹೇಳಿದರು.

ಹಾವೇರಿ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಮಂಜನಗೌಡ ಪಾಟೀಲ ಮಳಿಗೆಯಲ್ಲಿ ಪ್ರತಿಷ್ಠಾಪಿಸಿದ ಲಕ್ಷ್ಮೀ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಕೆಸಿಸಿ ಬ್ಯಾಂಕ್

> ಹಾವೇಮುಲ್‌ಗೆ ನೂತನ ಅಧ್ಯಕ್ಷರು ಅಧಿಕಾರಕ್ಕೆ ಬಂದ ನಂತರ ಅರಬಗೊಂಡದಲ್ಲಿರುವ ಮೆಗಾ ಡೇರಿಗೆ ಸಿಎಂ ಸಿದ್ದರಾಮಯ್ಯನವರು 5 ಕೋಟಿ ಅನುದಾನ ನೀಡಿದ್ದಾರೆ. ಹಾವೇಮುಲ್‌ನಲ್ಲಿದ್ದ 8 ಕೋಟಿ ಪೈಕಿ 5 ಕೋಟಿ ಅನುದಾನ ಶುಕ್ರವಾರ ಕೊಟ್ಟಿದ್ದಾರೆ. ಒಟ್ಟಾರೆಯಾಗಿ 10 ಕೋಟಿ ಅನುದಾನ ಸರ್ಕಾರ ಜಿಲ್ಲೆಗೆ ನೀಡಿದ್ದು, ಬರುವ ದಿನಗಳಲ್ಲಿ ಹೆಚ್ಚಿನ ಅನುದಾನ ತಂದು ಶೀಘ್ರದಲ್ಲೇ ಮೆಗಾ ಡೇರಿ ಲೋಕಾರ್ಪಣೆಗೊಳಿಸಲಾಗುವುದು.
> ■ ರುದ್ರಪ್ಪ ಲಮಾಣಿ, ಶಾಸಕರು.

ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಸ್ ಎಫ್ ಎನ್ ಗಾಜೀಗೌಡ್ರ, ತಾಲೂಕಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂ.ಎಂ.ಮೈದೂರ, ಹಾಲು ಒಕ್ಕೂಟದ ನಿರ್ದೇಶಕರಾದ ಉಜ್ಜನಗೌಡ ಮಾವಿನತೋಪ, ಅಶೋಕ ಪಾಟೀಲ, ಚಂದ್ರಪ್ಪ ಜಾಲಗಾರ, ಶಶಿಧರ ಯಲಿಗಾರ, ತಿಪ್ಪಣ್ಣ ಸಾತಣ್ಣನವರ, ಪ್ರಕಾಶ ಬನ್ನಿಹಟ್ಟಿ, ಬಸವೇಶಗೌಡ್ರ ಪಾಟೀಲ, ನಾಮನಿರ್ದೇಶಿತ ಸದಸ್ಯ ಶಂಕರಗೌಡ ಪಾಟೀಲ, ಹಾವೇಮುಲ್ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ ಎಸ್.ಎಂ., ಪ್ರಶಾಂತ ದೊಡ್ಡಮನಿ ಉಪಸ್ಥಿತರಿದ್ದರು.



ಖರೀದಿಸಿದ ವಸ್ತುಗಳಿಗೆ ಕಡ್ಡಾಯವಾಗಿ ರಶೀದಿ ಪಡೆಯಿರಿ: ಈಶ್ವರಪ್ಪ ಬಿ.ಎಸ್.

ಹಾವೇರಿ: ಹಣ ನೀಡಿ ವಸ್ತು ಖರೀದಿಸುವ ಹಾಗೂ ಸೇವೆ ಪಡೆಯುವ ಎಲ್ಲರೂ ಗ್ರಾಹಕರಾಗುತ್ತಾರೆ. ಗ್ರಾಹಕರು ಖರೀದಿಸಿದ ಪ್ರತಿ ವಸ್ತುಗಳಿಗೆ ಕಡ್ಡಾಯವಾಗಿ ರಶೀದಿ ಪಡೆಯಬೇಕು. ಒಂದು ವೇಳೆ ತಾವು ಖರೀದಿಸಿದ ವಸ್ತುಗಳಲ್ಲಿ ನ್ಯೂನ್ಯತೆ ಕಂಡುಬಂದಲ್ಲಿ ಗ್ರಾಹಕರ ವ್ಯಾಜ್ಯಗಳ ಆಯೋಗದಲ್ಲಿ ದೂರು ದಾಖಲಿಸುವ ಮೂಲಕ ಪರಿಹಾರ ಪಡೆದುಕೊಳ್ಳಬಹುದು ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಈಶ್ವರಪ್ಪ ಬಿ.ಎಸ್. ಹೇಳಿದರು.

ಗಾಂಧಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಹಾರ ಮತ್ತು ನಾಗರಿಕರ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಚೈತನ್ಯ ರೂರಲ್ ಡವಲಪ್‌ಮೆಂಟ್ ಸೊಸೈಟಿ ಸಹಯೋಗದಲ್ಲಿ ಆಯೋಜಿಸಲಾದ ಗ್ರಾಹಕ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಾವು ಖರೀದಿಸುವ ವಸ್ತುಗಳಲ್ಲಿ ಗುಣಮಟ್ಟ ಹಾಗೂ ಅಳತೆ, ತೂಕ ನೋಡಿ ಖರೀದಿಸಬೇಕು. ಗ್ರಾಹಕರು ಡಿಜಿಟಲ್ ಹಣಕಾಸು ವ್ಯವಹಾರವನ್ನು ಬಹಳ ಜಾಗರೂಕತೆಯಿಂದ ಮಾಡಬೇಕು. ವಸ್ತುಗಳ ನಿಖರ ಬೆಲೆ, ಗುಣಮಟ್ಟ, ಎಕ್ಸಪೈರಿ ದಿನಾಂಕ ಖಾತ್ರಿ ಪಡಿಸಿಕೊಂಡು ಖರೀದಿಸಬೇಕು. ಯಾವುದೇ ಸೇವೆ ಪಡೆದರೆ ಹಾಗೂ ವಸ್ತು ಖರೀದಿಸಿದರೆ ಕಡ್ಡಾಯವಾಗಿ ರಸೀದಿ ಪಡೆಯಬೇಕು ಎಂದು ಹೇಳಿದರು.

ಆನ್‌ಲೈನ್ ದೂರು: ಇ-ಜಾಗೃತಿ ಪೋರ್ಟಲ್ ಆರಂಭಿಸಲಾಗಿದೆ. ವಸ್ತುಗಳ ಖರೀದಿ ಹಾಗೂ ಸೇವೆಯಲ್ಲಿ ನ್ಯೂನ್ಯತೆಗಳು ಕಂಡುಬಂದಲ್ಲಿ ಆನ್‌ಲೈನ್‌ನಲ್ಲಿ ಸಹ ದೂರು ದಾಖಲಿಸಬಹುದು ಎಂದು ಹೇಳಿದರು.

ವಕೀಲರಾದ ಎಂ.ಬಿ. ಬಸವನಾಯ್ಕರ ಅವರು ಗ್ರಾಹಕ ಕಾಯ್ದೆಗಳ ಬಗ್ಗೆ ಉಪನ್ಯಾಸ ನೀಡಿದರು. ಜಿಲ್ಲಾ ಗ್ರಾಹಕರ ಆಯೋಗದ ಮದಾರಅಲಿ ಕಾಗಿನೆಲೆ ಅವರು ಇ-ಜಾಗೃತಿ ಮೂಲಕ ಪ್ರಕರಣಗಳ ದಾಖಲಿಸುವ ಬಗ್ಗೆ ಮಾಹಿತಿ ನೀಡಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಪ್ರಾಂಶುಪಾಲರಾದ ಡಾ.ಪರ್ಜಾನ್ ಪಠಾಣ ಅಧ್ಯಕ್ಷತೆ ವಹಿಸಿದ್ದರು. ಚೈತನ್ಯ ರೂರಲ್ ಡವಲಪ್ ಮೆಂಟ್ ಸೊಸೈಟಿ ನಿರ್ದೇಶಕ ಮಜೀದ್ ಎಸ್.ಎಚ್. ಇತರರು ಭಾಗವಹಿಸಿದ್ದರು.



ಅಭಿವೃದ್ಧಿ ವಿಚಾರದಲ್ಲಿ ಎಲ್ಲರೂ ಒಮ್ಮತದಿಂದ ಕೈ ಜೋಡಿಸಿ: ಮಾನೆ

ಹಾನಗಲ್ಲ: ಅಭಿವೃದ್ಧಿಯಲ್ಲಿ ರಾಜಕಾರಣ ನುಸುಳಬಾರದು. ಅಭಿವೃದ್ಧಿ ವಿಚಾರ ಬಂದಾಗ ಎಲ್ಲರೂ ಒಮ್ಮತದಿಂದ ಕೈ ಜೋಡಿಸಬೇಕು. ವಿನಾಕಾರಣ ಅಡ್ಡಿಪಡಿಸದೇ ಚುನಾವಣೆಗೆ ರಾಜಕಾರಣ ಸೀಮಿತಗೊಳಿಸಬೇಕು ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.



ತಾಲೂಕಿನ ಬೈಚವಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ 1.65 ಕೋಟಿ ರೂ. ವೆಚ್ಚದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ತಾಲೂಕಿನ ಪ್ರತಿ ಗ್ರಾಮಗಳಿಗೆ 40, 50 ಲಕ್ಷ ರೂ. ಅನುದಾನ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಗೊಳಿಸಲಾಗಿದೆ. ಗ್ರಾಮಗಳ ಒಳಗಿನ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಸಿಸಿ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಗ್ರಾಮೀಣ ಭಾಗದ ಸಂಪರ್ಕ ರಸ್ತೆಗಳನ್ನು ಸಹ ಸುಧಾರಿಸಲು ಗಮನ ನೀಡಲಾಗಿದೆ. ಹಾನಗಲ್ಲ-ತಡಸ ರಾಜ್ಯ ಹೆದ್ದಾರಿಯ ಆಯ್ದ ಭಾಗಗಳಲ್ಲಿ ನವೀಕರಣ ಕಾಮಗಾರಿ ಕೈಗೊಳ್ಳಲು 4.58 ಕೋಟಿ ರೂ. ಅನುದಾನ ದೊರಕಿಸಲಾಗಿದೆ. ಗ್ರಾಮೀಣ ಪ್ರದೇಶದ ಜನತೆ ನೆಮ್ಮದಿಯಿಂದ ಬದುಕು ನಡೆಸಲು ಅಗತ್ಯ ರಸ್ತೆ, ಕುಡಿಯುವ ನೀರು, ವಿದ್ಯುತ್ ಪೂರೈಕೆಗೆ ಕಾಳಜಿ ವಹಿಸಲಾಗಿದೆ ಎಂದು ತಿಳಿಸಿದರು.

ಬೈಚವಳ್ಳಿ ಗ್ರಾಮದಲ್ಲಿ 60 ಲಕ್ಷ ರೂ., ರಾಮತೀರ್ಥ ಹೊಸಕೊಪ್ಪ ಗ್ರಾಮದಲ್ಲಿ 60 ಲಕ್ಷ ರೂ., ಹುಲಗಿನಕೊಪ್ಪ ಗ್ರಾಮದಲ್ಲಿ 25 ಲಕ್ಷ ರೂ., ಚೀರನಹಳ್ಳಿ ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಸಿಸಿರಸ್ತೆ, ಗಟಾರ, ದೇವಸ್ಥಾನ ಜೀರ್ಣೋದ್ಧಾರ ಸೇರಿದಂತೆ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ಕೆಪಿಸಿಸಿ ಸದಸ್ಯರಾದ ಟಾಕನಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಜಮಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ, ಮುಖಂಡರಾದ ರಾಮಚಂದ್ರ ಚಿಕ್ಕೇರಿ, ಮಾರುತಿ ನಾಗನೂರ, ಎಂ.ಪಿ.ಸಾವಿಕೇರಿ, ಶ್ರೀಕಾಂತ ಅರಳೇಶ್ವರ, ಉಮೇಶ ದಾನಪ್ಪನವರ, ಮಹೇಶ ಅಕ್ಕಿವಳ್ಳಿ, ಶಂಭು ಹಳೆಬಂಕಾಪೂರ, ಮಾರ್ಕಂಡೇಯ ಆಲದಕಟ್ಟಿ, ವೀರಭದ್ರಪ್ಪ ಗುಡಗುಡಿ, ಸುಭಾಸ್ ನಾಗನೂರ, ಕೃಷ್ಣಪ್ಪ ಅರಳೇಶ್ವರ, ವಿಠ್ಠಲ್ ಮಾಂಗ್ಲೆಯವರ, ಫಕ್ಕೀರೇಶ ಸಾಲಿ, ಬಸವಣ್ಣೆಪ್ಪ ವಾಲಿಕಾರ, ಶಿವು ಭದ್ರಾವತಿ, ಶೇರ್ ಅಲಿ ಇನಾಂದಾರ ಇದ್ದರು.

ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸೋಣ: ರಾಜಣ್ಣ ಕಳ್ಯಾಳ

ಬ್ಯಾಡಗಿ: ನಾವೆಲ್ಲರೂ ನಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸೋಣ ಮತ್ತು ನಮ್ಮ ಶಾಲೆ ನಮ್ಮ ಹೆಮ್ಮೆ ಎಂಬ ಘೋಷವಾಕ್ಯದೊಂದಿಗೆ ಪ್ರತಿಯೊಬ್ಬರೂ ಶಾಲೆ ಪ್ರಗತಿಗಾಗಿ ಹಾಗೂ ಮಕ್ಕಳ ಹೆಚ್ಚಿನ ದಾಖಲೆಗೆ ಎಲ್ಲರೂ ಪ್ರಯತ್ನಿಸೋಣ ಎಂದು ಪುರಸಭೆಯ ನಾಮ ನಿರ್ದೇಶಕ ಸದಸ್ಯ ಶಿಕ್ಷಣ ಪ್ರೇಮಿ ರಾಜಣ್ಣ ಕಳ್ಯಾಳ ಅಭಿಪ್ರಾಯ ಪಟ್ಟರು.

ಪಟ್ಟಣದ ನಂ1 ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಇಂದು ನಡೆದ ಶಿಕ್ಷಕರ ಮತ್ತು



ಪೋಷಕರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ದಿನದಲ್ಲಿ ಪೋಷಕರು ಖಾಸಗಿ ಶಾಲೆಗಳತ್ತ ಮುಖ ಮಾಡುತ್ತಿದ್ದು, ಇದು ದುರ್ದೈವದ ಸಂಗತಿ. ಸರ್ಕಾರಿ ಶಾಲೆಯಲ್ಲಿ ಪ್ರತಿಯೊಬ್ಬರು ಮಕ್ಕಳನ್ನು ಕಲಿಸಬೇಕು ಸರ್ಕಾರವು ಮಕ್ಕಳೇ ವಿದ್ಯಾಭ್ಯಾಸಕ್ಕೆ ಅನುಕೂಲಕಗೋಸ್ಕರ ಹಲವಾರು ಯೋಜನೆಗಳನ್ನು ತಂದಿದ್ದಾರೆ ಅದನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಎಸ್.ವಿ.ಮೂಲಿಮನಿ ಶಿಕ್ಷಕರು ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಶಾಲೆಯ ವಿದ್ಯಾರ್ಥಿ ಉಮೇಶ್ ಸಂಕಣ್ಣನವರ್ ಇದ್ದರು. ಶಿಕ್ಷಕಿ ಚಟ್ಟಿಯಾರ ನಿರೂಪಿಸಿದರು. ಅಫ್ರಿನ್ ಬಾನು ವಂದಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪಾಲಕರು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

ಆಹಾರ ತಯಾರಿಕೆ, ವಿತರಣೆಯಲ್ಲಿ ಶುಚಿತ್ವ ಕಾಪಾಡಿ

ಬ್ಯಾಡಗಿ: ಪಟ್ಟಣದ ಬೀದಿ ಬದಿ ವ್ಯಾಪಾರಿಗಳು ಚಿಕ್ಕನ್ ಮತ್ತು ಕಬಾಬ್ ಸೆಂಟರ್ ಜ್ಯೂಸ್ ಸೆಂಟರ್, ಟೀ ಅಂಗಡಿ, ಚೈನೀಸ್ ಫಾಸ್ಟಫುಡ್, ಟಿಫನ್ ಸೆಂಟರ್‌ಗಳು ಹಾಗೂ ಬೇಕರಿಗಳಲ್ಲಿ ಇತರೆ ಆಹಾರ ಪದಾರ್ಥಗಳ ಮಾರಾಟಗಾರರಲ್ಲಿ ಆಹಾರ ತಯಾರಿಕೆ ಮತ್ತು ವಿತರಣೆಯಲ್ಲಿ ಶುಚಿತ್ವ ನೈರ್ಮಲ್ಯ, ಗುಣಮಟ್ಟ ಕಾಪಾಡಬೇಕೆಂದು ಜಿಲ್ಲಾ ಆಹಾರ ಪರಿಸರ ಅಧಿಕಾರಿ ಟಿ.ಲಕ್ಷ್ಮಿಕಾಂತ್ ಹೇಳಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಇಂದು ಬೀದಿಬದಿ ವ್ಯಾಪಾರಿಗಳಿಗೆ ಸ್ವಚ್ಛ ಸರ್ವೇಕ್ಷಣ 2026 ಸ್ವಚ್ಛತಾ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಆಹಾರದ ಸುರಕ್ಷತೆ ಮತ್ತು ನೈರ್ಮಲ್ಯಕ್ಕೆ ಬೀದಿಬದಿಯ ಆಹಾರ ವ್ಯಾಪಾರ ವ್ಯಾಪಾರಿಗಳು ಗ್ರಾಹಕರಿಗೆ ಶುಚಿಯಾದ ಮತ್ತು ನೈರ್ಮಲ್ಯಯುತ ಆಹಾರ ಪೂರೈಸಬೇಕು. ವ್ಯಾಪಾರ ಸ್ಥಳದ ಸುತ್ತಮುತ್ತಲಿನ ಕಸವನ್ನು ಸರಿಯಾಗಿ ವಿಲೇವಾರಿ ಮಾಡುವುದು, ಕಸದ ಡಬ್ಬಿಗಳನ್ನು ಬಳಸಬೇಕು. ಪ್ಲಾಸ್ಟಿಕ್ ವಸ್ತುಗಳ ಬಳಕೆ ಕಡಿಮೆಗೊಳಿಸಲು ಪರಿಸರಸ್ನೇಹಿ ಪರ್ಯಾಯಗಳನ್ನು ಅಳವಡಿಸಿಕೊಳ್ಳ ಬೇಕು. ಬೀದಿಬದಿ ವ್ಯಾಪಾರಿಗಳು ವೈಯಕ್ತಿಕ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದರು.

ತಾಲೂಕು ಆಹಾರ ಅಧಿಕಾರಿ ಶಿವಕುಮಾರ್



ಕಾಳೀರ್ ಮಾತನಾಡಿ, ಬೀದಿ ಬದಿ ವ್ಯಾಪಾರಿಗಳು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ನಿಯಮ 2015 ರನ್ವಯ ಆಹಾರದ ತಯಾರಿಕೆ ಮತ್ತು ವಿತರಣೆಯಲ್ಲಿ ಶುಚಿತ್ವ ನೈರ್ಮಲ್ಯ, ಗುಣಮಟ್ಟ ಕಾಪಾಡಿಕೊಳ್ಳಬೇಕು. ಪ್ರತಿ ಬೀದಿ ಬದಿ ವ್ಯಾಪಾರಿಗಳು ಆಹಾರ ಸುರಕ್ಷತೆ ಮತ್ತು ಔಷಧಿ ಆಡಳಿತದಿಂದ ನೋಂದಣಿ ಮಾಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಪುರಸಭೆ ಮುಖ್ಯ ಅಧಿಕಾರಿ ವಿನಯ್ ಕುಮಾರ್ ಹೊಳೆಯಪ್ಪಗೋಳ ಮಾತನಾಡಿದರು.

ತಹಶೀಲ್ದಾರ್ ಚಂದ್ರಶೇಖರ್ ನಾಯಕ್, ತಾಲೂಕು ಆರೋಗ್ಯ ಅಧಿಕಾರಿ ಕಾಂತೇಶ್ ಭಜಂತ್ರಿ, ಆಶ್ರಯ ಸಮಿತಿ ಸದಸ್ಯ ಗಿರೀಶ್ ಇಂಡಿಮಠ ಹಾಗೂ ಪುರಸಭೆಯ ಎಲ್ಲಾ ಸಿಬ್ಬಂದಿ, ಬೀದಿಬದಿ ವ್ಯಾಪಾರಿಗಳು, ಬೇಕರಿಯ ಮಾಲೀಕರು ಹಾಗೂ ಹೋಟೆಲ್ ಮಾಲೀಕರು ಉಪಸ್ಥಿತರಿದ್ದರು.

ಮಾ. 19ಕ್ಕೆ ಸಾಮೂಹಿಕ ವಿವಾಹ

ಶಿಗ್ಗಾವಿ: ತಾಲೂಕಿನ ಹಿರೇಬೆಂಡಿಗೇರಿ ಗ್ರಾಮದ ಹಿರೇಮಠದಲ್ಲಿ ಲೋಕ ಕಲ್ಯಾಣಾರ್ಥವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಯುಗಾದಿ ಪಾಡ್ಯದ ಮಾ. 19 ರ ಗುರುವಾರ ಜಗದ್ಗುರು ರೇಣುಕಾಚಾರ್ಯರ ಧ್ವಜಾರೋಹಣ ಜಗದ್ಗುರು ವಿಶ್ವಾರಾಧ್ಯರ ರಥೋತ್ಸವ ಲಿಂಗೈಕ್ಯ ಶ್ರೀ ಗುರು ಸಿದ್ದೇಶ್ವರ ಸ್ವಾಮಿಗಳ ಪುಣ್ಯಾರಾಧನೆ ಹಾಗೂ ಅಯ್ಯಾಚಾರ ಶಿವ ದೀಕ್ಷೆ ಮತ್ತು 17ನೇ ವರ್ಷದ ಸರ್ವ-ಧರ್ಮ ಸಾಮೂಹಿಕ ವಿವಾಹಗಳು ಜರುಗಲಿವೆ ಎಂದು ಹಿರೇಮಠದ ಪಟ್ಟಾಧ್ಯಕ್ಷ ವಿಶ್ವೇಶ್ವರ ಶಿವಾಚಾರ್ಯ ಶ್ರೀಗಳು ತಿಳಿಸಿದ್ದಾರೆ.

ಶ್ರೀ ವೇದಮೂರ್ತಿ ರೇವಣಸಿದ್ದಯ್ಯ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ವೇದಮೂರ್ತಿ ಮೃತ್ಯುಂಜಯ ಒಡೆಯರ್ ಶ್ರೀಗಳು, ವೇದಮೂರ್ತಿ ಮೃತ್ಯುಂಜಯ ಸ್ವಾಮಿಗಳು ಹಿರೇಮಠ. ವೇದಮೂರ್ತಿ ವೀರಭದ್ರಯ್ಯ ಸ್ವಾಮಿಗಳು ಹಿರೇಮಠ, ಮುಖಂಡರಾದ ಶಿವಾನಂದ ಮ್ಯಾಗೇರಿ, ಮೌಲಾಸಾಬ್ ತಹಶೀಲ್ದಾರ್, ಮಂಜುನಾಥ ಕಾರಡಗಿ, ರಮೇಶ್ ಸಾತಣ್ಣವರ್, ಚನ್ನಪ್ಪ ಕುಂದಗೋಳ, ಬಸವರಾಜ್ ಗುದ್ಲಿ, ಬಸವರಾಜು ಹುಬ್ಬಳ್ಳಿ, ಬಸಪ್ಪ ಬಂಗಿ, ಸಕ್ರಪ್ಪ ಹಣಗಿ, ಬಸವರಾಜ ನಾಗಪ್ಪನವರ್, ಹನುಮಂತಪ್ಪ ಮಂಟೂರ, ಈರಪ್ಪ ಶಾಡಂಬಿ, ನಿಂಗಪ್ಪ ಬಂಗಿ, ಯಲ್ಲಪ್ಪ ಆದ್ರಿಶಪ್ಪನವರ, ದೇವೇಂದ್ರ ಬಡಿಗೇರ, ಈರಪ್ಪ ನಾಗಪ್ಪನವರ ಸೇರಿದಂತೆ ಗ್ರಾಮದ ಮುಖಂಡರು ಹಾಗೂ ಭಕ್ತರು ಪಾಲ್ಗೊಂಡಿದ್ದರು.



ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ ಜಿಲ್ಲೆಗೆ ತರುವ ಪ್ರಯತ್ನ: ಲಮಾಣಿ

ಹಾವೇರಿ: ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ, ಮೆಡಿಕಲ್ ಕಾಲೇಜು ಅಭಿವೃದ್ಧಿಗೆ 670 ಕೋಟಿ ರೂ. ಹಾಗೂ ಉಪಕರಣಗಳನ್ನು ಕೊಡಲಿಕ್ಕೆ 220 ಕೋಟಿ ರೂ.ಅನುದಾನವನ್ನು ಸಿಎಂ ಮೀಸಲಿಟ್ಟಿದ್ದಾರೆ. ಈಗಾಗಲೇ ನಾನೂ ಕೂಡ ಸಿಎಂ ಆಪ್ತ ಕಾರ್ಯದರ್ಶಿಗಳ ಜತೆಗೆ ಚರ್ಚಿಸಿದ್ದು, ಸೋಮವಾರ ಬಂದು ಭೇಟಿ ಮಾಡಲು ತಿಳಿಸಿದ್ದಾರೆಂದು ಶಾಸಕ, ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಹೇಳಿದರು.



ರಾಜ್ಯ ಬಜೆಟ್‌ನಲ್ಲಿ ಹಾವೇರಿ ಜಿಲ್ಲೆಗೆ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ ಘೋಷಣೆಯಾಗದ ಕುರಿತು ನಗರದಲ್ಲಿ ಶನಿವಾರ ಸುದ್ದಿಗಾರರು ಕೇಳಿದ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ಯಾದಗಿರಿ ಮತ್ತು ಕಾರವಾರ ಜಿಲ್ಲೆಗೆ ಎರಡು ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ ಘೋಷಣೆ ಮಾಡಿದ್ದಾರೆ. ಸುಮಾರು 670 ಕೋಟಿ ವಿಶೇಷ ಅನುದಾನವನ್ನು ಸಿಎಂ ಕಾಯ್ದಿರಿಸಿದ್ದಾರೆ. ಹಿಂದೆ ನಾನು ಸಿಎಂ ಜತೆಗೆ ಮಾತನಾಡುವ ಸಂದರ್ಭದಲ್ಲಿ ಸ್ವತಃ ಮುಖ್ಯಮಂತ್ರಿಗಳು ಈ ಬಾರಿ 29 ಸಾವಿರ ಕೋಟಿ ರೂ.ಕೇಂದ್ರ ಸರ್ಕಾರದ ಜಿಎಸ್‌ಟಿ ಏರಿಕೆಯಾಗುತ್ತದೆ. ಅದನ್ನು ಸರಿದೂಗಿಸುವ ಪ್ರಯತ್ನವನ್ನು ಮಾಡಬೇಕಿದೆ ಎಂದು ತಿಳಿಸಿದ್ದರು. ಅದರಂತೆ ಮತ್ತೊಂದು ಸಾರಿ ಈ ಬಗ್ಗೆ ಸಿಎಂ ಬಳಿ ತೆರಳಿ ಚರ್ಚಿಸಿ, ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ ಜಿಲ್ಲೆಗೆ ತರುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಜಿಲ್ಲೆಯ ಬೇರೆ ತಾಲೂಕಿನ ಶಾಸಕರು ಸಾಕಷ್ಟು ಅಭಿವೃದ್ಧಿ ಕೆಲಸ, ಅನುದಾನ ತಂದಿರುವ ಕುರಿತು ಪ್ರತಿಕ್ರಿಯಿಸಿದ ಅವರು, ನಮ್ಮ ಕ್ಷೇತ್ರದಲ್ಲಿ ಬಹುಮುಖ್ಯವಾಗಿ ಹೆಗ್ಗೆರಿ ಕೆರೆ ಸೇರಿದಂತೆ ಎಲ್ಲ ಕೆರೆಗಳನ್ನು ತುಂಬಿಸುವ ಕೆಲಸ ಮಾಡಿದ್ದೇವೆ. ಹಾಗಾಗಿ ಕೆರೆ ತುಂಬಿಸುವ ಯೋಜನೆ ಸದ್ಯಕ್ಕಿಲ್ಲ ಎಂದ ಅವರು, ತುಂಗಭದ್ರಾ ನದಿಗೆ ಚೆಕ್‌ಡ್ಯಾಂ ನಿರ್ಮಾಣಕ್ಕೆ ಈ ಮೊದಲೇ 50 ಕೋಟಿ ಅನುದಾನವನ್ನು ಮೀಸಲಿಟ್ಟಿದೆ ಎಂದರು.

ಕಳೆದ ಬಾರಿ ಒಂದು ಶ್ರಮಿಕ ಶಾಲೆ ಬ್ಯಾಡಗಿಗೆ ಮಂಜೂರಾಗಿತ್ತು, ಈ ಸಲ ಜಿಲ್ಲೆಯ ಎಲ್ಲಾ ಕಡೆಗೂ ಸ್ಥಾಪಿಸುವುದಾಗಿ ಘೋಷಣೆ ಮಾಡಿದ್ದಾರೆ. ಇದರಿಂದಲೂ ಅನುಕೂಲವಾಗುತ್ತದೆ. ಒಟ್ಟಾರೆಯಾಗಿ ಹಾವೇರಿ ಜಿಲ್ಲೆಯ ಅಭಿವೃದ್ಧಿಗೆ ಏನು ಮಾಡಬೇಕು ಅದನ್ನು ಮಾಡುತ್ತಿದ್ದೇವೆ ಎಂದರು.

ಹಾವೇರಿಗೆ ಸಿಲ್ಕ್ ಪಾರ್ಕ್: ಯಾವ ತಾಲೂಕಿಗೆ ಸಿಲ್ಕ್ ಪಾರ್ಕ್ ಕೊಟ್ಟಿದ್ದಾರೆ ಎಂಬುದಕ್ಕೆ ಪ್ರತಿಕ್ರಿಯಿಸಿದ ಅವರು, ಕಳೆದ ಬಾರಿ ಜವಳಿ ಪಾರ್ಕ ಹಾವೇರಿಗೆ ಘೋಷಣೆಯಾಗಿತ್ತು. ಸ್ಥಳಾವಕಾಶದ ಕೊರತೆಯಿಂದ ರಾಣೇಬೆನ್ನೂರು ಹೂಲಿಹಳ್ಳಿ ಕಡೆಗೆ ಹೋಯಿತು. ಈ ಸಲ ಸಿಲ್ಕ್ ಪಾರ್ಕನ್ನು ಹಾವೇರಿಯಲ್ಲಿ ಮಾಡಲು ಮುಂದಾಗಿದ್ದೇವೆ ಎಂದರು.

ಯುಜಿಡಿ ಕಾಮಗಾರಿ: ಕುಡಿಯುವ ನೀರಿನ ಸಮಸ್ಯೆ ಕುರಿತು ಪ್ರತಿಕ್ರಿಯಿಸಿದ ಅವರು, ಈಗಾಗಲೇ ಹೆಗ್ಗೇರಿ ಕೆರೆ, ವರದಾ, ತುಂಗಭದ್ರಾ ನದಿಯಿಂದಲೂ ಕೆರೆಗಳನ್ನು ತುಂಬಿಸಿದ್ದೇವೆ. ಯಾವುದೇ ಕುಡಿಯುವ ನೀರಿನ ಸಮಸ್ಯೆ ಆಗುವುದಿಲ್ಲ. ನನ್ನ ಅವಧಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹಾಗೂ ಯುಜಿಡಿ ಕಾಮಗಾರಿ ಪೂರ್ಣಗೊಳಿಸುತ್ತೇನೆ. ಸುಮಾರು 220 ಕೋಟಿಯಷ್ಟು ಕಾಮಗಾರಿ ನಡೆಯುತ್ತಿದೆ. ಅಮೃತ ಯೋಜನೆಯಡಿ ಕಾಮಗಾರಿ ನಿಧಾನ ಗತಿಯಲ್ಲಿ ನಡೆಯುತ್ತಿದ್ದು, ಕೆಲಸದಲ್ಲಿ ವೇಗ ಹೆಚ್ಚಿಸುವಂತೆ ಸೂಚಿಸಲಾಗುವುದು ಎಂದು ತಿಳಿಸಿದರು.

ಕಿರುಸುದ್ದಿ

ರಸ್ತೆ ಕಾಮಗಾರಿಗೆ ಭೂಮಿಪೂಜೆ ಸಲ್ಲಿಸಿದ ಮೃಣಾಲ್ ಹೆಬ್ಬಾಳ್ಕರ್

• **ಬೆಳಗಾವಿ:** ಗ್ರಾಮೀಣ ಕ್ಷೇತ್ರದ ಫ್ರೀಡಂ ಫೈಟರ್ಸ್ ಕಾಲೋನಿಯಲ್ಲಿ 1.20 ಕೋಟಿ ರೂ. ವೆಚ್ಚದ ರಸ್ತೆ ಮತ್ತು ಫೇವರ್ಸ್ ಅಳವಡಿಕೆಯ ಕಾಮಗಾರಿಗೆ ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳ್ಕರ್ ಹಾಗೂ ಸ್ಥಳೀಯ ಜನಪ್ರತಿನಿಧಿಗಳು ನೇತೃತ್ವದಲ್ಲಿ ಭೂಮಿಪೂಜೆ ಸಲ್ಲಿಸಿವುದರ ಮೂಲಕ ಚಾಲನೆ ನೀಡಿದರು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ವಿಶೇಷ ಪ್ರಯತ್ನದಿಂದಾಗಿ ಅನುದಾನ ಬಿಡುಗಡೆಯಾಗಿದ್ದು, ಕ್ಷೇತ್ರದ ಜನರ ಮೂಲಭೂತ ಸೌಕರ್ಯಗಳಿಗೆ ಆದ್ಯತೆ ನೀಡುವುದು ನನ್ನ ಸಂಕಲ್ಪವಾಗಿದ್ದು, ಈ ನಿಟ್ಟಿನಲ್ಲಿ ಸುಸಜ್ಜಿತ ರಸ್ತೆಗಳ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ ಎಂದು ಮೃಣಾಲ್ ಹೆಬ್ಬಾಳ್ಕರ್ ತಿಳಿಸಿದ್ದಾರೆ. ಈ ವೇಳೆ ಸ್ಥಳೀಯ ಮುಖಂಡರು, ಪಕ್ಷದ ಕಾರ್ಯಕರ್ತರು, ಅಧಿಕಾರಿಗಳು, ಫ್ರೀಡಂ ಫೈಟರ್ಸ್ ಕಾಲೋನಿಯಲ್ಲಿ ನಿವಾಸಿಗಳು ಸೇರಿದಂತೆ ಇತರರು ಇದ್ದರು.

ಲೆದರ್ ಬಾಲ್ ಕ್ರಿಕೆಟ್ ತರಬೇತಿ ಇಂದು

• **ಹಾರೂಗೇರಿ:** ಪಟ್ಟಣದ ಹಾ ವಿ ಮಹಾವಿದ್ಯಾಲಯದ ಆವರಣದಲ್ಲಿರುವ ಅಬಾಜಿ ಕ್ರೀಡಾಂಗಣದಲ್ಲಿ ರಾಯಲ್ ಕ್ರೀಡಾ ಸಂಘದ ವತಿಯಿಂದ ಮಾ.8ರಂದು ಲೆದರ್ ಬಾಲ್ ಕ್ರಿಕೆಟ್ ಬೇಸಿಗೆ ತರಬೇತಿ ಶಿಬಿರ ಆಯೋಜಿಸಲಾಗಿದೆ ಎಂದು ಸಂಘದ ಕಾರ್ಯದರ್ಶಿ ಸಂತೋಷ ತಮದಡ್ಡಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

12, 14, 16, 19 ಹಾಗೂ 25 ವರ್ಷ ವಯಸ್ಸಿನೊಳಗಿನ ವಿಭಾಗಗಳಲ್ಲಿ ಆಟಗಾರರ ಆಯ್ಕೆ ಹಾಗೂ ತರಬೇತಿ ಪ್ರಕ್ರಿಯೆ ನಡೆಯಲಿದೆ. ಕ್ರಿಕೆಟ್ ಕೌಶಲ್ಯಗಳನ್ನು ಬೆಳೆಸುವ ಉದ್ದೇಶದಿಂದ ಈ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಈ ತರಬೇತಿ ಶಿಬಿರವನ್ನು ಶಿಕ್ಷಣ ಪ್ರಸಾರಕ ಮಂಡಳ,ರಾಯಬಾಗದ ಚೇರ್ಮನರಾದ ಬ್ಯಾರಿಸ್ಟರ್ ಅಮರಸಿಂಹಣ್ಣಾ ಪಾಟೀಲರು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯರಾದ ಡಾ.ಸುಮಿತ ಪಾಟೀಲ, ಡಾ.ಗಿರೀಶ ನಾರಗೊಂಡ, ವೈದ್ಯರಾದ ಡಾ.ಪರಮಾನಂದ ಹೊಸಪೇಟೆ, ಪುರಸಭೆಯ ಸರ್ವ ಸದಸ್ಯರು ಹಾಗೂ ಕ್ರೀಡಾ ಪ್ರೋತ್ಸಾಹಕರು ಭಾಗವಹಿಸಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಪ್ರಧಾನಿ ದರೂರ, ಮಲ್ಲಿಕಾರ್ಜುನ ಮುಳ್ಳೂರ, ಹನಮಂತ ಗುಡದಾರ, ಮಹೇಶ ಎಂ.ಕೆ ಉಪಸ್ಥಿತರಿದ್ದರು. ಹೆಚ್ಚಿನ ಮಾಹಿತಿಗಾಗಿ ತರಬೇತುದಾರರಾದ ಪ್ರವೀಣ ಅವರನ್ನು ಮೊಬೈಲ್ 8497829343, 9591319967 ಸಂಪರ್ಕಿಸಬಹುದು.

ವಿದ್ಯುತ್ ವ್ಯತ್ಯಯ ಇಂದು

• **ಬೆಳಗಾವಿ:** ಕ.ವಿ.ಪ್ರ.ನಿ.ನಿ. ವತಿಯಿಂದ 110 ಕೆ.ವ್ಹಿ. ಸುವರ್ಣ ಸೌಧ ಉಪಕೇಂದ್ರದಲ್ಲಿ ನಾಲ್ಕನೇಯ ತ್ರೈಮಾಸಿಕ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಮಾ.8ರಂದು ಬೆಳಿಗ್ಗೆ 9 ಘಂಟೆಯಿಂದ ಸಂಜೆ 4 ಘಂಟೆಯವರೆಗೆ ಉಪಕೇಂದ್ರದಿಂದ ವಿತರಣೆಯಾಗುವ ಕೊಂಡಸಕೊಪ್ಪ, ಹಲಗಾ, ಬಸ್ತವಾಡ, ಶಗನಮಟ್ಟಿ, ಮಾಸ್ತಮರಡಿ, ಬಸರಿಕಟ್ಟಿ, ಶಿಂಧೋಳ್ಳಿ, ಮುತಗಾ, ಶ್ರೀರಾಮ ಕಾಲನಿ, ಸಾರಿಗೆ ನಗರ, ಮಹಾಲಕ್ಷ್ಮೀ ಪುರಂ, ಸಾಯಿ ನಗರ, ಭರತೇಶ ಕಾಲೇಜ, ಶಿಂಧೋಳ್ಳಿ ಕ್ರಾಸ್, ನಿಲಜಿ ಕ್ರಾಸ್, ಕಮಕಾರಟ್ಟಿ, ಬಡೆಕೊಳ್ಳಮಠ, ಕೋಳಿಕೊಪ್ಪ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್ಸೆಟ್ಟಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಹು.ವಿ.ಸ.ಕಂ.ನಿ ಕಾ ಮತ್ತು ಪಾ ಗ್ರಾಮೀಣ ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾನಗರ ಪಾಲಿಕೆಯ ಪರಿಷತ್ ಸಭೆ ನಾಳೆ

• **ಬೆಳಗಾವಿ :** ಇಲ್ಲಿನ ಮಹಾನಗರ ಪಾಲಿಕೆಯ ಪರಿಷತ್ ಸಭೆಯನ್ನು ಮಾ.9 ರಂದು ಬೆಳಿಗ್ಗೆ 11.30 ಗಂಟೆಗೆ ಪರಿಷತ್ ಸಭಾಗೃಹದಲ್ಲಿ ವಿವಿಧ ವಿಷಯಗಳನ್ನು ಚರ್ಚಿಸಲು ಸಭೆ ಕರೆಯಲಾಗಿದೆ. ಎಲ್ಲ ಸದಸ್ಯರುಗಳು ಸಭೆಗೆ ಹಾಜರಿರಲು ಮಹಾನಗರ ಪಾಲಿಕೆಯ ಪರಿಷತ್ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮದ್ಯ ಮಾರಾಟ ನಿಷೇಧ ಇಂದು

• **ಬೆಳಗಾವಿ:** ನಗರದ ಶಹಾಪೂರನಲ್ಲಿ ಸಾರ್ವಜನಿಕರು ರಂಗ ಪಂಚಮಿ ಆಚರಿಸಲಿದ್ದು, ಶಹಾಪೂರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗೃತಾ ಕ್ರಮವಾಗಿ ಮಾ.8 ರಂದು 6 ಗಂಟೆಯಿಂದ ರಾತ್ರಿ 24 ಗಂಟೆಯವರೆಗೆ ಮದ್ಯ ಮಾರಾಟದ ಅಂಗಡಿಗಳು, ಬಾರ್, ರೆಸ್ಟೋರೆಂಟ್ಗಳು, ಕ್ಲಬ್ಗಳು ಹಾಗೂ ದಾಸ್ತಾನು ಡಿಪೋಗಳಿಂದ ಸರಬರಾಜನ್ನು ಬಂದ್ ಮಾಡುವಂತೆ ಬೆಳಗಾವಿ ನಗರ ಪೊಲೀಸ್ ಆಯುಕ್ತರು ಆದೇಶವನ್ನು ಹೊರಡಿಸಿದ್ದಾರೆ.



ಬೆಳಗಾವಿ: ಗ್ರಾಮೀಣ ಕ್ಷೇತ್ರದ ಫ್ರೀಡಂ ಫೈಟರ್ಸ್ ಕಾಲೋನಿಯಲ್ಲಿ 1.20 ಕೋಟಿ ರೂ. ವೆಚ್ಚದ ರಸ್ತೆ ಮತ್ತು ಫೇವರ್ಸ್ ಅಳವಡಿಕೆಯ ಕಾಮಗಾರಿಗೆ ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳ್ಕರ್ ಹಾಗೂ ಸ್ಥಳೀಯ ಜನಪ್ರತಿನಿಧಿಗಳು ನೇತೃತ್ವದಲ್ಲಿ ಭೂಮಿಪೂಜೆ ಸಲ್ಲಿಸಿವುದರ ಮೂಲಕ ಚಾಲನೆ ನೀಡಿದರು.

ಮಕ್ಕಳ ಸಂರಕ್ಷಣೆ ಬಗ್ಗೆ ತಿಳಿವಳಿಕೆ ಅಗತ್ಯ

• **ಅಡಹಳ್ಳಿ:** ಇಂದು ಮಕ್ಕಳ ರಕ್ಷಣೆಗೆ ಅನೇಕ ಕಾನೂನುಗಳಿದ್ದು, ಅಂತಹ ಕಾನೂನುಗಳ ಬಗ್ಗೆ ಅರಿವು ಮೂಡಿಸಿ ಮಕ್ಕಳ ಸಂರಕ್ಷಣೆ ಬಗ್ಗೆ ತಿಳುವಳಿಕೆ ನೀಡುವುದೇ ಕಾನೂನು ಸೇವಾ ಪ್ರಾಧಿಕಾರದ ಉದ್ದೇಶವಾಗಿದೆ ಎಂದು ನ್ಯಾಯವಾದಿ ಶ್ವೇತಾ ಶೇಗಾಂವಿಪಾಟೀಲ ಹೇಳಿದರು.

ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ತಾಲೂಕಾಡಳಿತ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ಸುರಕ್ಷತೆಯ ಬಗ್ಗೆ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನು ಉದ್ಘಾಟಿಸಿ ಮಾತನಾಡಿ, ಇಂದು ಮಕ್ಕಳಿಗೋಸ್ಕರ ಪೋಸ್ಕೋ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಬಾಲ ಕಾರ್ಮಿಕ ನಿಷೇಧ ಕಾಯ್ದೆ ಬಗ್ಗೆ ಇಂದಿನ ಮಕ್ಕಳು ತಿಳಿದುಕೊಳ್ಳಬೇಕು. ಮಕ್ಕಳಿಗೆ ಈ ಕಾನೂನುಗಳ ಬಗ್ಗೆ ಅರಿವನ್ನು ಮೂಡಿಸಲು ಕಾನೂನು ಸೇವಾ ಪ್ರಾಧಿಕಾರ ಪ್ರತಿಯೊಂದು ಪ್ರೌಢ ಶಾಲೆಯಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದರು.

ನ್ಯಾಯವಾದಿ ಸದಾಶಿವ ಮೂಡಶಿ ಇವರು ಮಕ್ಕಳ ಸುರಕ್ಷತೆ ಕುರಿತಾದ ಕಾನೂನುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು. ಮುಖ್ಯ ಶಿಕ್ಷಕ ಆಯ್. ಎಸ್. ಹಂಪಣ್ಣವರ ಮಾತನಾಡಿದರು. ಸಿಆರ್ ಪಿ ಎಸ್.ಕೆ. ಖೋತ ಸೇರಿದಂತೆ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶಿಕ್ಷಕ ಟಿ. ಎಸ್. ಮಾದರ ನಿರೂಪಿಸಿದರು.



ಅಡಹಳ್ಳಿ: ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ತಾಲೂಕಾಡಳಿತ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ಸುರಕ್ಷತೆಯ ಬಗ್ಗೆ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ನಡೆಯಿತು. ನ್ಯಾಯವಾದಿ ಶ್ವೇತಾ ಶೇಗಾಂವಿಪಾಟೀಲ ಸೇರಿದಂತೆ ಇತರರಿದ್ದರು.

ಭೀಮಗಾಯನ ಕಾರ್ಯಕ್ರಮ | ಶಾಸಕ ಆಸೀಫ್ ಸೇಠ್ ಅಭಿಮತ

ಅಂಬೇಡ್ಕರರಿಂದ ಸಾಮಾಜಿಕ ಬದಲಾವಣೆ

• **ಬೆಳಗಾವಿ :** ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕೊಡುಗೆ ಅಪಾರ ಮತ್ತು ಮಹತ್ವದ್ದು. ಅವರು ಭಾರತ ದೇಶದ ಸಾಮಾಜಿಕ, ರಾಜಕೀಯ ಮತ್ತು ಕಾನೂನು ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆ ತಂದ ಮಹಾನ್ ಚಿಂತಕರು ಎಂದು ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಆಸೀಫ್ ಸೇಠ್ ತಿಳಿಸಿದರು.

ಜಿಲ್ಲಾಡಳಿತ, ಮಹಾನಗರ ಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಶ್ರಯದಲ್ಲಿ ಶನಿವಾರ ಡಾ. ಬಿ.ಆರ್.ಅಂಬೇಡ್ಕರ್ ಉದ್ಯಾನವನದಲ್ಲಿ ನಡೆದ ''ಭೀಮಗಾಯನ'' ಕಾರ್ಯಕ್ರಮದಲ್ಲಿ ಮಾತನಾಡಿ, ರಾಷ್ಟ್ರಕ್ಕೆ ಅವರು ನೀಡಿದಂತಹ ಕೊಡುಗೆಗಳನ್ನು ಸ್ಮರಿಸುವ ಉದ್ದೇಶದಿಂದ ಭೀಮ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಬೆಳಗಾವಿ ನಗರಕ್ಕೆ ಭೇಟಿ ನೀಡಿದ್ದಾಗ ಕಂಗ್ರಾಳ ಗಲ್ಲಿಯ ಒಂದು ಮನೆಯಲ್ಲಿ ತಂಗಿದ್ದರು. ಅಂಬೇಡ್ಕರ್ ಭೇಟಿ ನೀಡಿದ ಮನೆಯನ್ನು ಅಭಿವೃದ್ಧಿ ಪಡಿಸಲು ಮತ್ತು ಅಂಬೇಡ್ಕರ್ ಉದ್ಯಾನವನದಲ್ಲಿ ಬಾಬಾಸಾಹೇಬರ ಬೃಹತ್ ಪ್ರತಿಮೆಯನ್ನು ಸ್ಥಾಪಿಸಲು ಕ್ರಮ ವಹಿಸಲಾಗುವುದು ಎಂದರು.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಬೆಳಗಾವಿ ಜಿಲ್ಲೆಗೆ ಹಲವು ಬಾರಿ ಭೇಟಿ ನೀಡಿದ್ದು, ಆ ಭೇಟಿಗಳು ದಲಿತ ಸಮುದಾಯದ ಹಕ್ಕುಗಳು, ಶಿಕ್ಷಣ ಮತ್ತು ಸಾಮಾಜಿಕ ಜಾಗೃತಿ ಕುರಿತು ಮಹತ್ವದ ಪಾತ್ರ ವಹಿಸಿವೆ ಎಂದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪ ನಿರ್ದೇಶಕ ಗುರುನಾಥ ಕಡಬೂರ ಮಾತನಾಡಿ, ಶಿಕ್ಷಣದಿಂದಲೇ ಸಮಾಜದಲ್ಲಿ ಬದಲಾವಣೆ ಸಾಧ್ಯ. ಸಮಾನತೆಯ ಸ್ವಾತಂತ್ರ್ಯ ಮತ್ತು ಸಮುದಾಯದ ಹಕ್ಕುಗಳಿಗೆ ಅಡಿಪಾಯ ಹಾಕಿ, ಮಾನವೀಯ ಮೌಲ್ಯಗಳ ಆಧಾರಿತ ಜೀವನವನ್ನು ನಡೆಸಲು ಪ್ರೇರಣೆಯಾದವರು ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಎಂದರು.



ಇದಕ್ಕೂ ಮುಂಚೆ ಮಹಾನಗರ ಪಾಲಿಕೆ ಉಪ ಆಯುಕ್ತ ಉದಯಕುಮಾರ ತಳವಾರ ಸಂವಿಧಾನ ಪೀಠಿಕೆ ಬೋಧಿಸಿದರು.

ಸಂವಿಧಾನ ಪೀಠಿಕೆ: ಭಾರತದ ಜನತೆಯಾದ ನಾವು, ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ಸಂವಿಧಾನಾತ್ಮಕವಾಗಿ ಸ್ಥಾಪಿಸಿ, ಅದರ ಎಲ್ಲಾ ನಾಗರಿಕರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನು ವಿಚಾರ, ಅಭಿವ್ಯಕ್ತಿ, ನಂಬಿಕೆ, ಭಕ್ತಿ ಮತ್ತು ಆರಾಧನೆಗಳಲ್ಲಿ ಸ್ವಾತಂತ್ರ್ಯವನ್ನು ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆಯನ್ನು ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಏಕತೆ ಹಾಗೂ ಅಖಂಡತೆಯನ್ನು ಖಾತ್ರಿಪಡಿಸುವ ಭ್ರಾತೃತ್ವವನ್ನು ಪ್ರವರ್ಧಮಾನಗೊಳಿಸಲು ಶ್ರದ್ಧಾಪೂರ್ವಕವಾಗಿ ಸಂಕಲ್ಪ ಮಾಡಿ, ನಮ್ಮ ಸಂವಿಧಾನ ರಚನಾ ಸಭೆಯಲ್ಲಿ ಈ 1949ರ ನವೆಂಬರ್ ಮಾಹೆಯ 26ನೇ ದಿನದಂದು, ನಾವಾಗಿ ನಾವೇ ಈ ಸಂವಿಧಾನವನ್ನು ಅಳವಡಿಸಿಕೊಂಡು, ಜಾರಿಗೊಳಿಸಿ, ನಮಗೆ ನಾವೇ ಸಮರ್ಪಿಸಿಕೊಳ್ಳುತ್ತೇವೆ.

ಭೀಮಗಾಯನ ಸಂಗೀತ ಕಾರ್ಯಕ್ರಮ: ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಜೀವನ ಸಾಧನೆ, ಸಮಾನತೆಯ ಹೋರಾಟ, ಅಸ್ಪೃಶ್ಯತೆ ನಿರ್ಮೂಲನೆ, ಸ್ತ್ರೀ ಸಮಾನತೆ ಕುರಿತ ಮತ್ತು ಸಮಾನತೆಯ ಸ್ವರ ಸಂಭ್ರಮ ಭೀಮನ ಆದರ್ಶಗಳನ್ನು ಸ್ವರಗಳಲ್ಲಿ ಜೀವಂತಗೊಳಿಸುವ ಜಾಗೃತಿ, ಆತ್ಮಗೌರವ ಮತ್ತು ಸಮಾನತೆಯ ಸಂಗೀತ ಭೀಮ ಗಾಯನ ಕಾರ್ಯಕ್ರಮ ಸಿದ್ಧಾರ್ಥ ಯುವ ಕ್ರೀಡಾ ಸಾಂಸ್ಕೃತಿಕ ಅಭಿವೃದ್ಧಿ ಸಂಘವು ಭೀಮಗಾಯನ ಪ್ರಸ್ತುತಪಡಿಸಿತು.

ಜಿಪಂ ಸಿಇಒ ರಾಹುಲ್ ಶಿಂಧೆ, ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ, ಜಿಪಂ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ, ಮಹಾನಗರಪಾಲಿಕೆಉಪಆಯುಕ್ತಉದಯಕುಮಾರ ತಳವಾರ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಾಮನಗೌಡ ಕನ್ನೋಳ್ಳಿ, ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಬಸವರಾಜ ರಾಯವ್ವಗೋಳ, ದಲಿತ ಸಂಘಟನೆಗಳ ಮುಖಂಡರಾರ ಮಲ್ಲೇಶ್ ಚೌಗಲಾ, ಕರೆಪ್ಪ ಗುಡ್ಡೆನ್ನವರ, ಸಿದ್ರಾಯಿ ಮೇತ್ರಿ, ಸಮಾಜದ ಗಣ್ಯರು ಇದ್ದರು.

ಪಾಲಕರು, ಮಕ್ಕಳಲ್ಲಿ ಕಾನೂನು ಅರಿವು ಅಗತ್ಯ

• **ಸವದತ್ತಿ:** ಪ್ರೌಢಶಾಲಾ ಹಂತದಲ್ಲಿ ವಿದ್ಯಾರ್ಥಿನಿಯರು ಎದುರಿಸುತ್ತಿರುವ ಲೈಂಗಿಕ ಕಿರುಕುಳ ಮತ್ತು ಹಲವು ರೀತಿಯ ಸಮಸ್ಯೆಗಳನ್ನು ಹೋಗಲಾಡಿಸಲು ಪಾಲಕರು ಮತ್ತು ಮಕ್ಕಳಲ್ಲಿ ಕಾನೂನು ಅರಿವಿನ ಅಗತ್ಯತೆ ಇದೆ ಎಂದು ನ್ಯಾಯವಾದಿ ಎಸ್.ಆರ್. ಪಾಟೀಲ್ ಹೇಳಿದರು.

ತಾಲೂಕಿನ ಕಗದಾಳ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೆಳಗಾವಿ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಪೋಕ್ಸೋ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಬಾಲ ಕಾರ್ಮಿಕ ನಿಷೇಧ ಕಾಯ್ದೆ, ಮಕ್ಕಳ ಸಹಾಯವಾಣಿ, ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶ''ಕುರಿತು ಹಮ್ಮಿಕೊಂಡ ಕಾನೂನು ಅರಿವು'' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಾಲೆಯ ಮುಖ್ಯೋಪಾಧ್ಯಾಯರಾದಆರ್ ಸಿ. ರಾಠೋಡ ಮಾತನಾಡಿ, ಇತ್ತೀಚೆಗೆ ಲೈಂಗಿಕ ಕಿರುಕುಳ, ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿಗಳಿಂದಾಗಿ ಸಮಾಜದ ಸ್ವಾಸ್ಥ್ಯ ಕೆಡುತ್ತಿದ್ದು, ಶಾಲಾ ಮಕ್ಕಳು ಮತ್ತು ಪಾಲಕರು ಈ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಪಡೆಯಲು ಮತ್ತು ಕಿರುಕುಳ ನೀಡುವವರ ಮೇಲೆಕ್ರಮ ಕೈಗೊಳ್ಳಲು ಸರ್ಕಾರ ಜಾರಿಗೆ ತಂದ ಮಕ್ಕಳ ಸಹಾಯವಾಣಿಯನ್ನು ಸಮರ್ಪಕವಾಗಿ ಬಳಕೆ ಮಾಡಿ ದೂರು ಸಲ್ಲಿಸಲು ಕರೆ ನೀಡಿದರು. ಪಾಲಕರೂ ಸಹ ಸಣ್ಣ ವಯಸ್ಸಿನಲ್ಲಿ ಬಾಲ್ಯ ವಿವಾಹದಂತ ಕೆಲಸಕ್ಕೆ ಕೈಹಾಕದಿರಲು ಮತ್ತು ಇಂತಹ ಸಮಸ್ಯೆಗಳ ನಿವಾರಣೆಗೆ ಸ್ಥಳೀಯ ಜನಪ್ರತಿನಿಧಿಗಳು, ಸಾರ್ವಜನಿಕರ ಸಹಕಾರದ ಅಗತ್ಯತೆ ಇದೆ ಎಂದರು.

ಶಿಕ್ಷಕರಾದ ಜೆ.ಕೆ. ಪಾಟೀಲ್ ರವರು ಬಾಲ್ಯ ವಿವಾಹ ನಿಷೇಧ ಕಾಯ್ದೆ ಬಗ್ಗೆ, ಬಿ.ಜಿ. ಪಾಟೀಲ್‌ರವರು ಬಾಲ ಕಾರ್ಮಿಕ ನಿಷೇಧ ಕಾಯ್ದೆ ಬಗ್ಗೆ, ಎಚ್.ಎನ್. ಯಡ್ರಾವಿ ಪೋಕ್ಸೋ ಕಾಯ್ದೆ ಬಗ್ಗೆ, ಬಿ.ಎಚ್. ನದಾಫ ಮಕ್ಕಳ ಸಹಾಯವಾಣಿ ಬಗ್ಗೆ, ಡಿ.ಬಿ. ಕೊಡ್ಲಿ ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶದ ಬಗ್ಗೆ, ವಿವರವಾದ ಮಾಹಿತಿ ನೀಡಿದರು.

ನಂತರ ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮ ಜರುಗಿಸಲಾಯಿತು. ಎಸ್ ಡಿಎಂಸಿ ಉಪಾಧ್ಯಕ್ಷ ಮಾಯಪ್ಪ ರಾ ಜೋತೆನ್ನವರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಆರ್.ಸಿ. ರಾಮದುರ್ಗ, ಅಂಗನವಾಡಿ ಕಾರ್ಯಕರ್ತೆಯರು, ಪಾಲಕರು ಇದ್ದರು. ಶಿಕ್ಷಕರಾದ ಎಸ್.ವ್ಹಿ. ಶೆಟ್ಟರ್ ಸ್ವಾಗತಿಸಿದರು. ಡಿ.ಬಿ. ಕೊಡ್ಲಿ ನಿರೂಪಿಸಿದರು. ಬಸವರಾಜ್ ಜೊತೆನ್ನವರ ವಂದಿಸಿದರು.



ಮಕ್ಕಳ ಸಂರಕ್ಷಣಾ ಕಾನೂನುಗಳ ಕುರಿತು ಜಾಗೃತಿ ಕಾರ್ಯಕ್ರಮ

• **ಮೂಡಲಗಿ :** ಶನಿವಾರ ವಿ.ಬಿ. ಸೋನವಾಲ್ಕರ್ ಮತ್ತು ಬಿ.ವಿ. ಸೋನವಾಲ್ಕರ್ ಶಾಲೆಗಳ ಬೆಳಗಾವಿಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೆಳಗಾವಿಯ ಜಿಲ್ಲಾ ಆಡಳಿತ, ಬೆಳಗಾವಿಯ ಜಿಪಂ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೂಡಲಗಿಯ ಶಿಕ್ಷಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಮಕ್ಕಳ ಸಂರಕ್ಷಣಾ ಕಾನೂನುಗಳ ಕುರಿತು ವಿಶೇಷ ಅರಿವು ಕಾರ್ಯಕ್ರಮ ಆಯೋಜಿಸಲಾಗಿತ್ತು.

ನ್ಯಾಯವಾದಿ ಪ್ರಶಾಂತ ನಿರ್ವಾಣಿ ಮಾತನಾಡಿ, ಪೋಕ್ಸೋ ಕಾಯ್ದೆ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಕುರಿತು ಉಪನ್ಯಾಸ ನೀಡಿ ಚಿಕ್ಕ ವಯಸ್ಸಿನ ಮದುವೆಯ ದುಷ್ಪರಿಣಾಮಗಳು, ಬಾಲಕಾರ್ಮಿಕ ನಿಷೇಧ ಕಾಯ್ದೆ ಶಿಕ್ಷಣದ ಹಕ್ಕು ಮತ್ತು ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆ, ಮಕ್ಕಳ ಸಹಾಯವಾಣಿ 1098 ಆಪತ್ತಿನಲ್ಲಿರುವ ಮಕ್ಕಳು ನೆರವು ಪಡೆಯುವ ವಿಧಾನ, ಗುಡ್ ಟಚ್ ಮತ್ತು ಬ್ಯಾಡ್ ಟಚ್ ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಳ್ಳುವ ಅರಿವು ಇರಬೇಕು ಎಂದರು.

ಶಾಲೆಯ ಮುಖ್ಯೋಪಾಧ್ಯಾಯ ಆರ್. ಆರ್. ಮೇದಗೊಪ್ಪ ಅವರು ಮಕ್ಕಳೊಂದಿಗೆ ಮಕ್ಕಳ ಸಂರಕ್ಷಣಾ ಕಾಯ್ದೆಗಳ ಕುರಿತು ಸಂವಾದ ನಡೆಸಿದರು. ವಿದ್ಯಾರ್ಥಿಗಳ ಸಂದೇಹಗಳಿಗೆ ಪರಿಹಾರ ನೀಡಿದರು. ಶಾಲೆಯ ಆಡಳಿತ ಮಂಡಳಿಯ ಸುನೀತಾ ವೀರಣ್ಣ ಹೊಸುರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮಕ್ಕಳ ಸಂರಕ್ಷಣೆಗೆ ಸಂಬಂಧಿಸಿದ ವಿಶೇಷ ವಿಡಿಯೋ ತುಣುಕುಗಳನ್ನು ಪ್ರದರ್ಶಿಸಿ ವಿದ್ಯಾರ್ಥಿಗಳಲ್ಲಿ ದೃಶ್ಯ ರೂಪದ ಜಾಗೃತಿ ಮೂಡಿಸಲಾಯಿತು.

ಈ ಕಾರ್ಯಕ್ರಮದಲ್ಲಿ ವಿ.ಬಿ. ಸೋನುವಾಲ್ಕರ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮತ್ತು ಬಿ.ವಿ. ಸೋನುವಾಲ್ಕರ್ ಪಬ್ಲಿಕ್ ಸ್ಕೂಲ್‌ನ ಸುಮಾರು 80 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬಿ.ವಿ. ಸೋನುವಾಲ್ಕರ್ ಪಬ್ಲಿಕ್ ಶಾಲೆಯ ಪ್ರಾಚಾರ್ಯ ಜೋಸೆಫ್ ಬೈಲಾ ಸೇರಿದಂತೆ ಉಭಯ ಶಾಲೆಗಳ ಶಿಕ್ಷಕ ವೃಂದ, ಸಿಬ್ಬಂದಿ, ಮಕ್ಕಳು ಉಪಸ್ಥಿತರಿದ್ದರು. ಶ್ರೀದೇವಿ ವಸ್ತ್ರದ ಸ್ವಾಗತಿಸಿ, ಕವಿತಾ ಪಾಟೀಲ ನಿರೂಪಿಸಿ, ಶೇಖರ್ ಹೆಬ್ಬಾಳಿ ವಂದಿಸಿದರು.



ಹಿಂಡಲಗಾ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮ

• **ಬೆಳಗಾವಿ:** ಮಕ್ಕಳ ಉಜ್ವಲ ಭವಿತವ್ಯಕ್ಕೆ ಭದ್ರ ಬುನಾದಿ ಹಾಕುವಲ್ಲಿ ಹಾಗೂ ಅವರಲ್ಲಿ ನೈತಿಕ ಮೌಲ್ಯಗಳನ್ನು ಬಿತ್ತಿ ಸಂಸ್ಕಾರವುಳ್ಳವರನ್ನಾಗಿ ರೂಪಿಸುವಲ್ಲಿ ಪ್ರಾಥಮಿಕ ಶಾಲೆಗಳ ಪಾತ್ರ ಹಿರಿದಾದುದು ಎಂದು ಶಿಕ್ಷಕ ಡಿ.ಜಿ. ಬೇವಿನಕೊಪ್ಪಮಠ ಹೇಳಿದರು.

ಬೆಳಗಾವಿ ತಾಲೂಕು ಹಿಂಡಲಗಾ ಸರಕಾರಿ ಕನ್ನಡ ಮಾಧ್ಯಮ ಶಾಲೆಯಲ್ಲಿ ಏರ್ಪಡಿಸಿದ್ದ ಶಿಕ್ಷಕರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ಹದಿನೈದು ವರುಷಗಳ ಹಿಂದೆ ಈ ಶಾಲೆಯ ವಿದ್ಯಾರ್ಥಿಗಳು ಇಂದು ವಿವಿಧ. ಕ್ಷೇತ್ರಗಳಲ್ಲಿ ಸಾಧಕರಾಗಿ ಬದುಕನ್ನು ಬಂಧುರಗೊಳಿಸಿದ್ದಾರೆ. ಇದು ಶಾಲೆ ಹಾಗೂ ಕಲಿಸಿದ ಗುರುಗಳಿಗೂ ತುಂಬು ಅಭಿಮಾನವೆಂದು ಎಂದರು.

ಬೋಧಿಸಿದ ಗುರುಗಳನ್ನು ನೆನಪಿಸಿ ಸನ್ಮಾನಿಸುತ್ತಿರುವ ಇದು ವಿಶಿಷ್ಟತೆಯಿಂದ ಕೂಡಿದ ಭಾವನಾತ್ಮಕತೆಯಿಂದ ಕೂಡಿದ ಸಮಾರಂಭ ಎಂದು ಸನ್ಮಾನ ಸ್ವೀಕರಿಸಿ ಗುರುಗಳಾದ ಎಸ್. ಜಿ.ಚವಲಗಿ, ಆರ್.ಬಿ.ಗೋಶ್ಯಾನಟ್ಟಿ, ಡಿ.ಬಿ ಪಾಟೀಲ, ಜಿ.ಬಿ.ನಾಯ್ಕರ (ಕುಸುಗಲ್ಲ) ಹಾಗೂ ಜಿ.ಎ.ಶಭಾಷ್ ಖಾನ್ ಮೊದಲಾದವರು ತಮ್ಮ ಸಂತಸ ವ್ಯಕ್ತ ಪಡಿಸಿದರು.

ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿಯಲ್ಲಿರುವ ಐಶ್ವರ್ಯ ಲಾಖೆ, ಸುನಿಲ್ ಹಾಗೂ ವಿವಿಧ ಇಲಾಖೆಯಲ್ಲಿ ಸೇವೆಯಲ್ಲಿರುವ ಹಾಗೂ ಸ್ವಂತ ಉದ್ಯೋಗಗಳಲ್ಲಿ ಬದುಕು ಕಟ್ಟಿಕೊಂಡ ಇನ್ನಿತರ ಹಳೆಯ ವಿದ್ಯಾರ್ಥಿಗಳು ತಮ್ಮ ಮನದ ಮಾತುಗಳನ್ನು ಬಿಚ್ಚಿಟ್ಟರು. ಪ್ರಧಾನ ಗುರು ಎನ್. ಜಿ.ಗಡ್ಲಿಂಗನವರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬಿಂದು ಕುಟ್ರೆ ಕಾರ್ಯಕ್ರಮದ ಸಂಯೋಜನೆಯನ್ನು ಮಾಡಿದ್ದರು.



ಈ ವೇಳೆ ಎಸ್. ಡಿ.ಎಂ.ಸಿ.ಅಧ್ಯಕ್ಷರು, ಸದಸ್ಯರು, ಗಣ್ಯರಾದ ಎಸ್. ಭೀ.ಹೆಬ್ಬಾಳ, ಶಿವಪ್ರಸಾದ ಹಿರೇಮಠ, ಅಖ್ತರುಲಮಾನ ಮುಲ್ಲಾ, ಗುಲಾಬಿ, ಸುನೀಲ್ ಐಶ್ವರ್ಯ, ವಿದ್ಯಾರ್ಥಿಗಳು ಸೇರಿದಂತೆ ಇತರರು ಇದ್ದರು.

ಕುಖ್ಯಾತ ಕಳ್ಳರ ಗ್ಯಾಂಗ್ ಬಂಧನ: 21 ವಾಹನಗಳ ಜಪ್ತಿ

• **ಬೆಳಗಾವಿ:** ಅಂತರರಾಜ್ಯ ಹಾಗೂ ಅಂತರ ಜಿಲ್ಲಾ ಮಟ್ಟದಲ್ಲಿ ವಾಹನ ಕಳ್ಳತನ ನಡೆಸುತ್ತಿದ್ದ ಕುಖ್ಯಾತ ಗ್ಯಾಂಗ್‌ನನ್ನು ಬೆಳಗಾವಿ ಪೊಲೀಸರು ಹೆಡಮುರಿ ಕಟ್ಟಿದ್ದಾರೆ. ಕಳ್ಳರಿಂದ ಸುಮಾರು, 95.50 ಲಕ್ಷ ಮೌಲ್ಯದ 21 ವಾಹನಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಬೆಳಗಾವಿ ತಾಲೂಕಿನ ಮಾರಿಹಾಳ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣ ತನಿಖೆ ನಡೆಸಿದ ಪೊಲೀಸರು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಹಾಗೂ ಮಹಾರಾಷ್ಟ್ರದ ಸಾಂಗ್ಲಿ ಮೂಲದ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ರಾಜ್ಯದ ವಿವಿಧ ನಗರಗಳಿಗೆ ರಾತ್ರಿ ವೇಳೆ ತೆರಳಿ ಮೊದಲು ವಿವಿಧ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿ, ನಂತರ ಅದೇ ವಾಹನಗಳನ್ನು ಬಳಸಿ ವಿವಿಧ ಸ್ಥಳಗಳಲ್ಲಿ ನಿಲ್ಲಿಸಿದ್ದ ನಾಲ್ಕು ಚಕ್ರದ ವಾಹನಗಳನ್ನು ಕಳ್ಳತನ ಮಾಡುತ್ತಿರುವುದಾಗಿ ಕಳ್ಳರು ಬಾಯಿ ಬಿಟ್ಟಿದ್ದಾರೆ. ಕಳ್ಳತನ ಮಾಡಿದ ವಾಹನಗಳನ್ನು ಬೇರೆ ಬೇರೆ ಕಡೆ ಮಾರಾಟ ಮಾಡಿ ವಿಲೇವಾರಿ ಮಾಡಲಾಗುತ್ತಿತ್ತು ಎಂಬುದು ವಿಚಾರಣೆಯಲ್ಲಿ ಬಹಿರಂಗವಾಗಿದೆ. ಪೊಲೀಸರು ಆರೋಪಿಗಳಿಂದ ಒಟ್ಟು 21 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದ ಇನ್ನೂ ಕೆಲ ಆರೋಪಿಗಳ ಪತ್ತೆ ಶೋಧಕಾರ್ಯ ಮುಂದುವರೆಸಿದ್ದೇವೆ ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ. ಈ ವೇಳೆ ಮಾರಿಹಾಳ ಪೊಲೀಸ್ ಠಾಣೆಯ ಸಿಪಿಐ ಐ.ಆರ್. ಪಟ್ಟಣಶೆಟ್ಟಿ, ಪಿಎಸ್ಐ ಮಂಜುನಾಥ ಹುಲಕುಂದ, ಪಿಎಸ್ಐ ಚಂದ್ರಶೇಖರ, ಸಿಸಿಬಿ ವಿಭಾಗದ ಪಿಎಸ್ಐ ಮಂಜುನಾಥ ಭಜಂತ್ರಿ ಹಾಗೂ ಸಿಬ್ಬಂದಿಗಳ ನೇತೃತ್ವದಲ್ಲಿ ಕಾರ್ಯಾಚರಣೆ ಮಾಡಲಾಗಿತ್ತು, ಅವರ ಕಾರ್ಯಕ್ಕೆ ನಗರ ಪೊಲೀಸ್ ಆಯುಕ್ತರು ಮತ್ತು ಡಿಸಿಪಿ ಅವರು ತಂಡವು ಅಭಿನಂದನೆ ಸಲ್ಲಿಸಿದ್ದಾರೆ.



ಮಕ್ಕಳ ರಕ್ಷಣೆಗೆ ಎಲ್ಲರೂ ಸಹಕರಿಸಿ

• **ಚನ್ನಮ್ಮನ ಕಿತ್ತೂರು:** ಪೋಕ್ಸೋ ಕಾಯ್ದೆ ಮಕ್ಕಳಿಗೆ ಪರಿಣಾಮಕಾರಿ ರಕ್ಷಕ, ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳನ್ನು ತಡೆಯುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಈ ನಿಟ್ಟಿನಲ್ಲಿ ಕುಟುಂಬದ ಹಂತದಲ್ಲಿಯೇ ಮಕ್ಕಳಿಗೆ ಸುರಕ್ಷತಾ ಕ್ರಮಗಳ ಬಗ್ಗೆ ಅರಿವು ಮೂಡಿಸುವುದು ಅಗತ್ಯ ಎಂದು ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶೆ ಪರ್ವಾಬೇಗಂ ಸಯ್ಯದ್ ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಪಂ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಬೆಳಗಾವಿ ಸಹಯೋಗದಲ್ಲಿ ಶನಿವಾರ ಪಟ್ಟಣದ ಸರಕಾರಿ ಉರ್ದು ಪ್ರೌಢಶಾಲೆ ನಡೆದ ಪೋಕ್ಸೊ ಕಾಯ್ದೆ ಮತ್ತು ಬಾಲ್ಯ ಕಾರ್ಮಿಕ ನಿಷೇದ ಕಾನುನುಗಳ ಅರಿವು ಮತ್ತು ಮಾಹಿತಿ ಕಾರ್ಯಕ್ರಮದಲ್ಲಿ ಮಾತನಾಡಿ, 18 ವರ್ಷದ ಒಳಗಿನ ಮಕ್ಕಳಲ್ಲಿ ಸರಿ ತಪ್ಪುಗಳ ಬಗ್ಗೆ ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಇರುವುದಿಲ್ಲ ಆದುದರಿಂದ ಚಂಚಲ ಮನಸ್ಥಿತಿಯನ್ನು ಹಿಡಿತದಲ್ಲಿಟ್ಟುಕೊಂಡರೆ ಭವಿಷ್ಯ ಉತ್ತಮವಾಗಿರಲು ಸಾಧ್ಯ ಎಂದರು.



ಬೇರೆಯವರ ಮಕ್ಕಳನ್ನು ತಮ್ಮ ಮಕ್ಕಳಂತೆ ಭಾವಿಸಿದಾಗ ಅವರ ಮೇಲೆ ನಡೆಯುವ ದೌರ್ಜನ್ಯಗಳನ್ನು ಪಡೆಯಲು ಸಾಧ್ಯ. ಪೋಕ್ಸೋ ಅಪರಾಧ ಹಾಗೂ ಅದರ ಪರಿಣಾಮಗಳ ಬಗ್ಗೆ ಕುಟುಂಬ, ಶಾಲಾ ಹಂತದಲ್ಲಿ ಜಾಗೃತಿ ಮೂಡಿದಲ್ಲಿ ಮಕ್ಕಳ ರಕ್ಷಣೆ ಸಾಧ್ಯ, ಮಕ್ಕಳ ರಕ್ಷಣೆಗೆ ಜಾತಿ ಬೇಧವಿಲ್ಲದೆ, ಎಲ್ಲರೂ ಒಗ್ಗಟ್ಟಾಗಿ ತಮ್ಮ ಜವಾಬ್ದಾರಿ ನಿರ್ವಹಿಸಬೇಕು ಎಂದು ಕರೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಚನ್ನಬಸಪ್ಪ ತುಬಾಕದ ಮಾತನಾಡಿ, ಮಕ್ಕಳ ರಕ್ಷಣೆ ಎಂಬುವುದು ಪೋಷಕರು, ಶಿಕ್ಷಕರು ಮಾತ್ರವಲ್ಲ ಮಕ್ಕಳ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿ, ಪ್ರತಿ ಮಕ್ಕಳನ್ನು ನಮ್ಮ ಮಕ್ಕಳಂತೆ ಸಂರಕ್ಷಣೆ ನೀಡಬೇಕು ಮಕ್ಕಳು ಯಾವುದೇ ರೀತಿಯ ಕೌಟುಂಬಿಕ ಸಮಸ್ಯೆಗಳಿಂದ ದೂರವಿರಬೇಕು ಎಂದರು.

ಮಕ್ಕಳಿಂದ ಶಾಲೆ ಬಿಡಿಸುವುದನ್ನು ಪೋಷಕರು ಮಾಡಬಾರದು ಮಕ್ಕಳಿಗೆ ತಿಳಿ ಹೇಳಬೇಕು ಹಾಗೂ ಮುಖ್ಯವಾಗಿ ಸಾಮಾಜಿಕ ಜಾಲತಾಣದಿಂದ ಮಕ್ಕಳನ್ನ ದೂರ ಇಡುವುದು ಪ್ರತಿಯೊಬ್ಬ ಪೋಷಕರು ಕರ್ತವ್ಯ ಎಂದು ತಿಳಿಸಿದರು.

ವಕೀಲರ ಸಂಘದ ಅಧ್ಯಕ್ಷ ಶಿವಾನಂದ ಬೋಗೂರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ ಸ್ವಾತಿ ಕುರಬರ, ಪ.ಪಂ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಎಫ್. ಜಕಾತಿ, ಅಶ್ಪಾಕ ಸುತಗಟ್ಟಿ, ಜೈಲಾನಿ ಸವಣೂರ, ಯುನುಸ್ ಹುಕ್ಕೇರಿ ಮತ್ತು ಎಲ್ಲ ಶಿಕ್ಷಕ ಬಳಗ ಮತ್ತು ಮಕ್ಕಳು ಹಾಜರಿದ್ದರು. ವಿವಿಧ ಶಾಲೆ ಕಾಲೇಜುಗಳಲ್ಲಿ ಕಾನೂನು ಅರಿವು ಕಾರ್ಯಕ್ರಮ ಜರುಗಿದವು.

ಪೊಲೀಸ್ ಇಲಾಖೆಯ ಸೂಚನೆಗಳನ್ನು ಪಾಲಿಸಿ

• **ಸುರೇಬಾನ:** 2018ರಲ್ಲಿಯೇ ಸುರೇಬಾನ ಉಪ ಠಾಣೆ ಮೇಲ್ದರ್ಜೆಗೇರಿಸಿ, ಪೊಲೀಸ್ ಠಾಣೆಯಾಗಿ ಪರಿವರ್ತನೆ ಮಾಡಿಸಿದ್ದೆ ಅದರ ಕಟ್ಟಡ ನಿರ್ಮಾಣ ಸೇರಿದಂತೆ ಕಾರ್ಯಾರಂಭ ಮಾಡಿಸಲು ಮತ್ತೆ ನಾನೇ ಪ್ರಯತ್ನಿಸಬೇಕಾಯಿತು ಎಂದು ವಿಧಾನಸಭೆ ಮುಖ್ಯ ಸಚೇತಕ ಹಾಗೂ ಶಾಸಕ ಅಶೋಕ ಪಟ್ಟಣ ಹೇಳಿದರು.

ಸ್ಥಳೀಯ ಪೊಲೀಸ್ ಠಾಣೆಗೆ ಸುಮಾರು ರೂ.1.80 ಕೋಟಿ ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣಕ್ಕೆ ಶನಿವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಜನತೆ ಇಲಾಖೆಯ ಅಧಿಕಾರಿಗಳ ಪರವಾಗಿ ಮಾತನಾಡುತ್ತೇನೆ ಎಂದು ಭಾವಿಸಬಾರದು. ನಮ್ಮ ಜೀವ ರಕ್ಷಣೆಗೆ ಇಲಾಖೆಯ ಅಧಿಕಾರಿಗಳು ನೀಡುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಮನವಿ ಮಾಡಿದರು.



ಪೊಲೀಸರು ಹೆಲ್ಮೆಟ್ ಹಾಕುವಂತೆ ಸೂಚನೆ ನೀಡಿದಾಗಲೂ ಜನತೆ ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಾಲನೆ ಮಾಡದೇ ಇರುವುದು ಸರಿಯಲ್ಲ, ಕಾನೂನು ಪಾಲನೆಯಿಂದ ನಮ್ಮ ಅಮೂಲ್ಯವಾದ ಜೀವ ರಕ್ಷಣೆಯಾಗುತ್ತದೆ ಎಂದು ಜನತೆ ಅರಿತುಕೊಳ್ಳಬೇಕು ಎಂದರು.

ಬೆಳಗಾವಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಆರ್.ಬಿ. ಬಸರಗಿ ಮಾತನಾಡಿ, ಅಶೋಕ ಪಟ್ಟಣ ಅವರ ಪ್ರಯತ್ನದ ಫಲವಾಗಿ ಸುರೇಬಾನ ಪೊಲೀಸ್ ಠಾಣೆಗೆ ಸಿಬ್ಬಂದಿ ಹಾಗೂ ಕಟ್ಟಡ ನಿರ್ಮಾಣಕ್ಕೆ ಅನುದಾನ ಮಂಜೂರಾಗಿದೆ. ಸುರೇಬಾನ ಸುತ್ತಮುತ್ತಲಿನ ಕ್ಷೇತ್ರದ ಜನತೆಯ ಅನುಕೂಲಕ್ಕಾಗಿ ಶಾಸಕರು ಠಾಣೆಯನ್ನು ಮಂಜೂರು ಮಾಡಿಸಿದ್ದಾರೆ. ನೊಂದವರಿಗೆ ನ್ಯಾಯ ಕೊಡಿಸುವ ಕೆಲಸ ಸ್ಥಳೀಯ ಅಧಿಕಾರಿಗಳಿಂದ ಆಗಬೇಕು. ಇಲಾಖೆ ಜನತೆಯ ಕಷ್ಟಗಳಿಗೆ ಸ್ಪಂದಿಸಿ ತೃಪ್ತಿಕರ ಸೇವೆ ಸಲ್ಲಿಸಲು ಬದ್ಧವಿದೆ. ಸಾರ್ವಜನಿಕರು ಇಲಾಖೆಯಿಂದ ತಿಳಿಸುವ ಸೂಚನೆಗಳನ್ನು ಪಾಲನೆ ಮಾಡಿ, ಸಹಕರಿಸಬೇಕು ಎಂದು ತಿಳಿಸಿದರು.

ಗುತ್ತಿಗೆದಾರರಾದ ಬಿ.ಎಂ. ಪಾಟೀಲ, ತಾಲೂಕಾ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಜಿ.ಬಿ. ರಂಗನಗೌಡ್ರ, ಮುಖಂಡರಾದ ಪರಪ್ಪ ಜಂಗವಾಡ, ಜಿ.ಎಚ್. ಹಣಸಿ, ಸಿದ್ಲಿಂಗಪ್ಪ ಸಿಂಗಾರಗೊಪ್ಪ, ಜಹೂರ ಹಾಜಿ, ಸುರೇಬಾನ ಗ್ರಾಪಂ ಮಾಜಿ ಅಧ್ಯಕ್ಷ ಅಶ್ರುಫ್ ಅಲಿ ಬಂದಗಿ, ರಾಮದುರ್ಗ ಸಿಪಿಐ ವಿನಾಯಕ ಬಡಿಗೇರ, ಸವದತ್ತಿ ಸಿಪಿಐ ಸುರೇಶ ಬೆಂಡೆಗುಂಬಳ, ರಾಮದುರ್ಗ ಪಿಎಸ್ಐ ಸವಿತಾ ಮುನ್ಯಾಳ, ಸುರೇಬಾನ ಪಿಎಸ್ಐ ಗುರುರಾಜ ಕಲಬುರಗಿ ಸೇರಿದಂತೆ ಇತರರಿದ್ದರು.

> ಮುಂದಿನ ದಿನಗಳಲ್ಲಿ ನಾನೇ ಪೊಲೀಸ್ ವಸತಿ ಗೃಹ ನಿರ್ಮಾಣಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುವೆ.
>
> ■ ಅಶೋಕ ಪಟ್ಟಣ, ವಿಧಾನಸಭೆ ಮುಖ್ಯ ಸಚೇತಕ, ಶಾಸಕ

ಕಿರುಸುದ್ದಿ

ಜಾತ್ರೆ, ಉದ್ಘಾಟನೆ

ನೇಸರಗಿ: ಸಮೀಪದ ಮಾಸ್ತಮರ್ಡಿ ಗ್ರಾಮದಲ್ಲಿ ಪ್ರಭುಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ನೂತನ ದ್ವಾರಬಾಗಿಲ ಉದ್ಘಾಟನಾ ಕಾರ್ಯಕ್ರಮವು ಶನಿವಾರ ಅದ್ದೂರಿಯಾಗಿ ಉದ್ಘಾಟನೆಗೊಂಡಿತು. ಪ್ರಭುದೇವರ ಸಂಸ್ಥಾನ ಗದ್ದುಗೆ ಮಠದ ತಪೋಕ್ಷೇತ್ರ ಮಾಸ್ತಮರ್ಡಿ ಪೀಠಾಧೀಶ ಷಟಸ್ಥ ಬ್ರಹ್ಮ ಡಾ.ವೀರಪ್ರಭು ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ವಿವಿಧ ಮಠಾಧೀಶರು ಗ್ರಾಮದ ಹಿರಿಯರು ಹಾಗೂ ದಾನಿಗಳಾದ ಮಲ್ಲಪ್ಪಾ ಮುತ್ತೆಣ್ಣವರ ಹಾಗೂ ಶಕುಂತಲಾ ಮುತ್ತೆಣ್ಣವರ, ಸಿದ್ದಪ್ಪ ಹುರಕನ್ನವರ, ಸಿದಪ್ಪ ಮಿಂಡೋಳಿ, ಶಂಕ್ರಪ್ಪ ಈರಯ್ಯನವರ, ಯಲ್ಲಪ್ಪ ಮುತ್ತೆಣ್ಣವರ, ಯಲಪ್ಪ ನಾಯಕ, ಉದ್ದಪ್ಪ ಕೊಮಾರ, ಪ್ರಕಾಶ ಕೊಮಾರ, ಭೀಮಸಿ ಈರಯ್ಯನವರ, ಕಲ್ಲಪ್ಪ ತೀರಕನ್ನವರ, ಯಲ್ಲಪ್ಪ ಚಿಕ್ಕೊಪ್ಪ, ಸಿದ್ದಮಲಪ್ಪ ತಳವಾರ ಸೇರಿದಂತೆ ಗ್ರಾಮದ ಮುಖಂಡರು, ಸೈನಿಕರು, ಗ್ರಾಮಸ್ಥರು, ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿದ್ದರು.

ಪೂರ್ವಭಾವಿ ಸಭೆ ಇಂದು

ಯರಗಟ್ಟಿ: ಪಟ್ಟಣದ ರಾಜರಾಜೇಶ್ವರಿ ದೇವಿಯ 17ನೇ ಜಾತ್ರಾ ಮಹೋತ್ಸವದ ಅಂಗವಾಗಿ ಮಾ.8ರಂದು ಬೆಳಗ್ಗೆ 10ಕ್ಕೆ ರಾಜರಾಜೇಶ್ವರಿ ಆಶ್ರಮದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ. ಕಾರಣ ಯಾವತ್ತು ಸಕಲ ಸದ್ಭಕ್ತರು ಸಕಾಲಕ್ಕೆ ಸಭೆಗೆ ಹಾಜರಾಗಿ ತಮ್ಮ ಸಲಹೆ ಸೂಚನೆಗಳನ್ನು ನೀಡಲು ಪ್ರಕಟಣೆ ಮೂಲಕ ಗಣಪತಿ ಮಹಾರಾಜರು ತಿಳಿಸಿದ್ದಾರೆ.

ವಿವಿಗಳಲ್ಲಿ ಚುನಾವಣೆ ಸ್ವಾಗತಾರ್ಹ

ಹಾರೂಗೇರಿ: ಸಿದ್ದರಾಮಯ್ಯನವರ ಹದಿನೇಳನೆಯ ಮುಂಗಡ ಪತ್ರ ರಾಜ್ಯಕ್ಕೆ ತಕ್ಷಣವೇ ಹಿತವೆನಿಸಿದರೂ, ದೀರ್ಘಾವಧಿಯಲ್ಲಿ ಸಾಲ ನಿರ್ವಹಣೆ ಮತ್ತು ಉಚಿತ ಕೊಡುಗೆಗಳ ಭಾರ ಆಘಾತವೆನಿಸುವುದು ನಿಶ್ಚಿತ. ಇನ್ನುಳಿದಂತೆ ಕಾಲೇಜು, ವಿಶ್ವವಿದ್ಯಾಲಯಗಳ, ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ಪುನರಾರಂಭ ಪ್ರಜಾಪ್ರಭುತ್ವದ ಗಟ್ಟಿಗೊಳಿಸುವಿಕೆ ಸ್ವಾಗತಾರ್ಹ. ಎಸ್ಸಿ ಎಸ್ಟಿ ಹಾಗೂ ಅಲ್ಪಸಂಖ್ಯಾತ ಆಯದವರು ಪೂರ್ಣ ಸಾಲ ಮರುಪಾವತಿ ಮಾಡಿದವರಿಗೆ ಬಡ್ಡಿಮನ್ನಾ ಎಂಬುದು ಆರೋಗ್ಯಕರ ಆರ್ಥಿಕ ಬೆಳವಣಿಗೆಗೆ ಬಜೆಟ್ ಪೂರಕ. 16 ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಮೊಬೈಲ್ ನಿಷೇಧ ಉತ್ತಮ ಬೆಳವಣಿಗೆ. ಬಜೆಟ್ ಗಾತ್ರವೇನೋ 4.48 ಲಕ್ಷ ಕೋಟಿಗೆ ಏರುವುದರ ಜೊತೆ ಸಾಲದ ಪ್ರಮಾಣ ಸಹ ಏರಿಕೆಯಾದಂತೆಯಲ್ಲದೆ, 45,000 ಕೋಟಿ ಅಬಕಾರಿ ಇಲಾಖೆಯಿಂದ ಆದಾಯ ನಿರೀಕ್ಷಿಸಿದ್ದು, ಸಮಾಜವನ್ನು ನೈತಿಕ ವಿಮುಖಗೊಳಿಸುತ್ತಿರುವುದು ಖೇದಕರ. ಬೆಳಗಾವಿಗೆ ಕೈಗಾರಿಕಾ ಪಾರ್ಕ್ ಮತ್ತು ಅಥಣಿಗೆ ಕೃಷಿ ಕಾಲೇಜು ನೀಡಿದ್ದು ಸಮಾಧಾನಕರ ಎಂದು ಹಾರೂಗೇರಿ ನಿವೃತ್ತ ವಾಣಿಜ್ಯ ಶಾಸ್ತ್ರ ಪ್ರಾಧ್ಯಾಪಕ - ಡಾ.ಚಂದ್ರಶೇಖರ ಗುಡಸಿ ಹೇಳಿದರು.

ದರೋಡೆ: ಆರೋಪಿ ಬಂಧನ

ಬೆಳಗಾವಿ: ಕಬ್ಬು ಕಡಿಯುವ ಕೊಯಿತಾ ತೋರಿಸಿ ಬೈಕ್ ಅಡ್ಡಗಟ್ಟಿ ಹಣದ ಬ್ಯಾಗ್ ಹಾಗೂ ಮೊಬೈಲನ್ನು ದರೋಡೆ ಮಾಡಿಕೊಂಡು ಕಬ್ಬಿನ ಹೊಲದ ಮೂಲಕ ಪರಾರಿಯಾಗಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಶಾಂತು ಚಂದ್ರಕಾಂತ ಆವಳೆಕರ ಎಂಬುವರು 2.81.280ರೂ ಹಣವನ್ನು ಬ್ಯಾಗನಲ್ಲಿ ಇಟ್ಟುಕೊಂಡು ತಮ್ಮ ಬೈಕ್ ಮೇಲೆ ಶಿರಗುಪ್ಪಿ ಗ್ರಾಮದ ಬಳಿಯ ಬಸವನ ಗುಡಿ ಹತ್ತಿರ ಶಿರಗುಪ್ಪಿ ಕಡೆಯಿಂದ ಉಗಾರ ಬಿ.ಕೆ ಕಡೆಗೆ ಬರುವಾಗ ಒಬ್ಬ ವ್ಯಕ್ತಿಯು ನೀಲಿ ಬಣ್ಣದ ಜಾಕೆಟ್ ಹಾಕಿಕೊಂಡು ಕಬ್ಬು ಕಡಿಯುವ ಕೊಯಿತಾ ತೋರಿಸಿ ಹಣ ಹಾಗೂ ಮೊಬೈಲ್ ದರೋಡೆ ಮಾಡಿ ಪರಾರಿಯಾಗಿದ್ದ. ಪ್ರಕಣದ ಕುರಿತು ಕುರಿತು ಮಾಹಿತಿ ಬಂದ ಕೂಡಲೇ ಪೊಲೀಸರು ತಕ್ಷಣ ಕಾರ್ಯಪ್ರವೃತ್ತರಾಗಿ ತಮ್ಮ ಸಿಬ್ಬಂದಿಯೊಂದಿಗೆ ಆರೋಪಿತನಿಗೆ ಬೆನ್ನಟ್ಟಿ ಶಿರಗುಪ್ಪಿ ಗ್ರಾಮದ ಜಮೀನದಲ್ಲಿ ಅಡಗಿ ಕುಳಿತ ದರೋಡೆಕೋರನಾದ ಸಾಗರ ಅಶೋಕ ಸನದಿ (35) ಎಂಬಾತನ್ನು ಘಟನೆ ನಡೆದ 4 ಘಂಟೆಗಳ ಕಾರ್ಯಾಚರಣೆಯಲ್ಲಿ ಹಿಡಿದುಕೊಂಡು ದರೋಡೆ ಮಾಡಿದ 2.81.280ರೂ ಹಣ ಹಾಗೂ ಮೊಬೈಲನ್ನು ವಶಪಡಿಸಿಕೊಳ್ಳಲಾಗಿದೆ. ಈ ಬಗ್ಗೆ ಕಾಗವಾಡ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 68/2026 ಕಲಂ: 309-4- ಬಿಎನ್ಸ್-2023 ನೇದ್ದರಡಿಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನಸುದ್ದಿ

ರುಕ್ಮಾಬಾಯಿ ಕಾಮತ



ಮುರಗೋಡ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತದ ಪ್ರಾಂತ ಸಹ ವ್ಯವಸ್ಥಾ ಪ್ರಮುಖ ಕೃಷ್ಣಾನಂದ ಕಾಮತ ಅವರ ತಾಯಿ ರುಕ್ಮಾಬಾಯಿ ಕಾಮತ (95 ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಬಳಗವನ್ನು ಆಗಲಿದ್ದಾರೆ.



ನೇಸರಗಿ: ಸಮೀಪದ ಮಾಸ್ತಮರ್ಡಿ ಗ್ರಾಮದಲ್ಲಿ ಪ್ರಭುಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ನೂತನ ದ್ವಾರಬಾಗಿಲ ಉದ್ಘಾಟನಾ ಕಾರ್ಯಕ್ರಮವು ಶನಿವಾರ ಅದ್ದೂರಿಯಾಗಿ ಉದ್ಘಾಟನೆಗೊಂಡಿತು. ಪ್ರಭುದೇವರ ಸಂಸ್ಥಾನ ಗದ್ದುಗೆ ಮಠದ ತಪೋಕ್ಷೇತ್ರ ಮಾಸ್ತಮರ್ಡಿ ಪೀಠಾಧೀಶ ಷಟಸ್ಥ ಬ್ರಹ್ಮ ಡಾ.ವೀರಪ್ರಭು ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ವಿವಿಧ ಮಠಾಧೀಶರು ಗ್ರಾಮದ ಹಿರಿಯರು, ದಾನಿಗಳಾದ ಮಲ್ಲಪ್ಪಾ ಮುತ್ತೆಣ್ಣವರ ಸೇರಿದಂತೆ ಇತರರಿದ್ದರು.

ಜನಸಾಮಾನ್ಯರ ನಿರೀಕ್ಷೆ ಹುಸಿಗೊಳಿಸಿದ ಬಜೆಟ್

ಬೆಳಗಾವಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಕರ್ನಾಟಕ ರಾಜ್ಯ ಬಜೆಟ್ ಜನಸಾಮಾನ್ಯರ ನಿರೀಕ್ಷೆಗಳನ್ನು ಪೂರೈಸುವಲ್ಲಿ ವಿಫಲವಾಗಿದೆ. ಮಹಿಳೆಯರು, ಯುವಕರು ಮತ್ತು ಮಧ್ಯಮ ವರ್ಗದ ಕುಟುಂಬಗಳ ಅಭಿವೃದ್ಧಿಗೆ ಸ್ಪಷ್ಟ ಹಾಗೂ ಶಾಶ್ವತ ಯೋಜನೆಗಳು ಈ



ಬಜೆಟ್‌ನಲ್ಲಿ ಕಾಣಿಸುತ್ತಿಲ್ಲ ಎಂದು ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಕಾರ್ಯದರ್ಶಿ ಡಾ. ಸೋನಾಲಿ ಸರ್ನೋಭತ್ ರಾಜ್ಯ ಸರಕಾರದ ವಿರುದ್ಧ ಅಸಮಾಧಾನ ಹೊರ ಹಾಕಿದರು. ರಾಜ್ಯದ ಜನತೆಯ ಮೇಲೆ ಸುಳ್ಳು ಭರವಸೆ, ಗ್ಯಾರಂಟಿಗಳ ವಿಚಾರವಾಗಿ ರಾಜ್ಯದ ಆರ್ಥಿಕತೆಯ ಮೇಲೆ ಸಾಲದ ಹೊರೆ ಹಾಕುವ ಪ್ರಯತ್ನ ಅಷ್ಟೇ ಈ ಬಜೆಟ್‌ನಲ್ಲಿ ಮಾಡಲಾಗಿದೆ. ರಾಜ್ಯದಲ್ಲಿ ಒಂದೇ ಒಂದು ಅಭಿವೃದ್ಧಿ, ಉದ್ಯೋಗ ಸೃಷ್ಟಿ ಕೈಗಾರಿಕಾ ಹೂಡಿಕೆ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿಗೆ ಬೇಕಾದ ದೂರದೃಷ್ಟಿಯ ಯೋಜನೆಗಳು ಕಾಣಿಸದೇ ಇರುವುದೇ ವಿಷಾದಕರ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು. ರಾಜ್ಯದ ಮಹಿಳೆಯರಿಗಾಗಿ ದೊಡ್ಡ ಮಟ್ಟದ ಘೋಷಣೆಮಾಡಿದರು, ಮಹಿಳೆಯರ ಉದ್ಯಮ, ಸ್ವಯಂ ಉದ್ಯೋಗ ಮತ್ತು ಆರ್ಥಿಕ ಸ್ವಾವಲಂಬನೆಗಾಗಿ ಸಮರ್ಪಕ ಕ್ರಮಗಳು ಕೈಗೊಂಡಿಲ್ಲ, ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ, ಮಹಿಳೆಯರು ಹಾಗೂ ಯುವಕರು ನಿರೀಕ್ಷಿತ ಹುಸಿಯಾಗಿದೆ. ರಾಜ್ಯದ ಜನತೆಯ ಅಭಿವೃದ್ಧಿ ಮತ್ತು ಆರ್ಥಿಕ ಶಿಸ್ತನ್ನು ಕಾಪಾಡುವ ಬಜೆಟ್‌ಗಾಗಿ ಬಿಜೆಪಿ ನಿರಂತರವಾಗಿ ಹೋರಾಟ ಮಾಡುತ್ತಿವೆ ಎಂದು ಗಂಭೀರವಾಗಿ ಆರೋಪಿಸಿದರು.



ರಾಯಬಾಗ: ಕೆ.ಎಲ್.ಇ ಸಂಸ್ಥೆಯ ಮಲಗೌಡ ಪಾಟೀಲ ವಾಣಿಜ್ಯ ಮಹಾವಿದ್ಯಾಲಯ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಜರುಗಿದ 2025-26ನೇ ಸಾಲಿನ ಏಕವಲಯ ಪುರುಷ ಹಾಗೂ ಮಹಿಳೆಯರ ಹ್ಯಾಂಡ್ಬಾಲ್ ಪಂದ್ಯಾವಳಿ ಮತ್ತು ವಿಶ್ವವಿದ್ಯಾಲಯ ತಂಡದ ಆಯ್ಕೆ ಪ್ರಕ್ರಿಯೆಯು ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಕಾನೂನು ಅರಿವು ಕಾರ್ಯಕ್ರಮ | ನ್ಯಾ.ಮಡಿವಾಳರ ಸಲಹೆ

ಮಕ್ಕಳಿಗೆ ಕಾನೂನು ಅರಿವು ಅಗತ್ಯ

ಯರಗಟ್ಟಿ: ಸಾಮಾಜಿಕ ಜಾಲತಾಣದ ಪರಿಣಾಮದಿಂದಾಗಿ ಪ್ರಸ್ತುತ ಮಕ್ಕಳ ಮೇಲಿನ ಅಪರಾಧಗಳು ಹೆಚ್ಚುತ್ತಿರುವುದು ಆತಂಕಕಾರಿಯಾಗಿದ್ದು, ಎಲ್ಲ ಮಕ್ಕಳು ಪೋಕ್ಸೋ ಹಾಗೂ ಬಾಲ್ಯವಿವಾಹದ ನಿಷೇಧ ಕಾಯ್ದೆ, ಬಾಲ ಕಾರ್ಮಿಕ ನಿಷೇಧ ಕಾಯ್ದೆಯ ಬಗ್ಗೆ ತಿಳಿದುಕೊಳ್ಳಬೇಕು ಎಂದು ನ್ಯಾಯವಾದಿ ಎಂ. ಎಂ.ಮಡಿವಾಳರ ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೆಳಗಾವಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಗಳ ಕಚೇರಿ ಸಹಯೋಗದಲ್ಲಿ ಶನಿವಾರ ಪಟ್ಟಣದ ಬಸವೇಶ್ವರ ಪ್ರೌಢ ಶಾಲೆಯಲ್ಲಿ ಶಾಲೆಯಲ್ಲಿ ಆಯೋಜಿಸಿದ್ದ ಪ್ರೌಢಶಾಲೆಯ ಹೆಣ್ಣು ಮಕ್ಕಳಿಗೆ ಬಾಲ್ಯ ವಿವಾಹ ನಿಷೇಧ ಹಾಗೂ ಲೈಂಗಿಕ ದೌರ್ಜನ್ಯ ತಡೆಗಟ್ಟುವ ಬಗ್ಗೆ ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಂಗನವಾಡಿ ಮೇಲ್ವಿಚಾರಕಿ ಎಸ್. ಆರ್. ತೆರ್ಲಿ ಮಾತನಾಡಿ, ಸಾಮಾಜಿಕ ಜಾಲತಾಣಗಳ ಆರ್ಕಷಣೆಗೆ ಒಳಗಾಗಿ ಇತ್ತೀಚೆಗೆ ಚಿಕ್ಕ ವಯಸ್ಸಿನ ಮಕ್ಕಳು ಮನೆ ಬಿಟ್ಟು ಹೋಗಿ ಮದುವೆಯಾಗುತ್ತಿರುವುದು ಹಾಗೂ ಇತರೆ ಅಪರಾಧಗಳನ್ನು ಕಾಣುತ್ತಿದ್ದೇವೆ. 2023-24ರಲ್ಲಿ ನಮ್ಮ ಜಿಲ್ಲಾ ವ್ಯಾಪ್ತಿಯಲ್ಲೇ ಹಲವಾರು ಜನ ಬಾಲ ಗರ್ಭಿಣಿಯರಪ್ರಕರಣ ದಾಖಲಾಗಿದ್ದು, ಸಾಮಾಜಿಕ ಜಾಲತಾಣಗಳು ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಕಾನೂನು ನಮ್ಮೆಲ್ಲರಿಗೆ ಹಲವು ಮೂಲಭೂತ ಹಕ್ಕುಗಳನ್ನು, ಸ್ವಾತಂತ್ರ್ಯವನ್ನು ನೀಡಿದೆ. ಆದರ ದುರ್ಬಳಕೆ ಆಗಬಾರದು. ದುರ್ಬಳಕೆಯನ್ನು



ತಡೆಯಲು ಕಾಯ್ದೆಗಳ ರೂಪದಲ್ಲಿ ಕೆಲವು ನಿರ್ಬಂಧಗಳನ್ನು ಹಾಕಲಾಗಿದೆ. ಕಾನೂನಿನ ಕಣ್ಣಿನಲ್ಲಿ ನಾವೆಲ್ಲರೂ ಸಮಾನರು. ಸಂವಿಧಾನದಲ್ಲೂ ಅಡಕವಾಗಿದೆ. ನಮ್ಮ ನೆಲದ ಕಾನೂನು ಸಂವಿಧಾನ, ಇದೇ ನಮ್ಮ ತಳಹದಿ ಮತ್ತು ಬುನಾದಿ, ನಾವೆಲ್ಲರು ನಮ್ಮ ನೆಲದ ಕಾನೂನನ್ನು ಅನುಸರಿಸಬೇಕು. ಕಾನೂನು ಎಂದರೆ ಒಂದು ಸಾಮಾನ್ಯ ಜ್ಞಾನ. ಅದನ್ನು ನಾವೆಲ್ಲರೂ ಅರಿತಿರಬೇಕು ಎಂದರು.

ಪೋಕ್ಸ್ ಹಾಗೂ ಬಾಲ್ಯವಿವಾಹ ನಿಷೇಧ ಕಾಯ್ದೆ, ಬಾಲಕಾರ್ಮಿಕ ನಿಷೇಧ ಕಾಯ್ದೆಗಳ ಬಗ್ಗೆ ಎಲ್ಲ ಮಕ್ಕಳಿಗೆ ಅರಿವು ಇರಬೇಕು. ಗುಡ್ ಟಚ್ ಮತ್ತು ಬ್ಯಾಡ್ ಟಚ್ ಬಗ್ಗೆ ಜ್ಞಾನ ಇರಬೇಕು. ಯಾವುದೋ ಉದ್ದೇಶದಿಂದ ಪುರುಷ/ಗಂಡು ಮಕ್ಕಳು ಹೆಣ್ಣು ಮಕ್ಕಳನ್ನು ಮುಟ್ಟುವುದು, ಸ್ಪರ್ಶಿಸುವುದರ ಕುರಿತು ಜಾಗೃತೆಯಿಂದರಬೇಕು ಎಂದರು.

ಪೋಕ್ಸ್ ಹಾಗೂ ಬಾಲ್ಯ ವಿವಾಹಕಾಯ್ದೆಗಳಡಿಯಲ್ಲಿ ಹೆಣ್ಣು ಮಕ್ಕಳಿಗೆ ಎಲ್ಲ ರೀತಿಯಲ್ಲಿ ರಕ್ಷಣೆ ಇದೆ. ಅದನ್ನು ಸರಿಯಾದ ಕ್ರಮದಲ್ಲಿ ಬಳಸಿಕೊಳ್ಳಬೇಕು. ಶಾಲೆ ತಮ್ಮ ಸುತ್ತಮುತ್ತಲಿನಲ್ಲಿ ಬ್ಯಾಡ್ ಟಚ್‌ನಂತಹ ಪ್ರಕರಣಗಳು ಅಥವಾ ಇಂತಹ ಅನುಭವವಾದರೆ ಶಾಲಾ ಶಿಕ್ಷಕರಿಗೆ ಅಥವಾ ತಂದೆ ತಾಯಿಗೆ ಕೂಡಲೇ ತಿಳಿಸಬೇಕು. ನಿಮ್ಮನ್ನು ರಕ್ಷಣೆ ಮಾಡುವ ಸಂಪೂರ್ಣ ಜವಾಬ್ದಾರಿ ಕಾನೂನು ಕೈಗೊಳುತ್ತದೆ ಎಂದು ಕಿವಿ ಮಾತು ಹೇಳಿದರು.

ಈ ವೇಳೆ ಸಂಸ್ಥೆಯ ಅಧ್ಯಕ್ಷರಾದ ಆರ್. ಜಿ. ದೇವರಡ್ಡಿ, ಉಪಾಧ್ಯಕ್ಷ ಮಂಜುನಾಥ ತಡಸಲೂರ, ಕಾರ್ಯದರ್ಶಿ ಎಸ್. ಬಿ. ಸಿದ್ನಾಳ, ಶಾಲಾ ಪ್ರಧಾನ ಗುರುಗಳಾದ ಬಿ. ಎಸ್. ಆಲದಕಟ್ಟಿ, ಅಂಗವಾಗಿ ಮೇಲ್ವಿಚಾರಕಿ ಎಸ್. ಆರ್. ತೆರ್ಲಿ, ಶಿಕ್ಷಕರಾದ ಎಸ್. ಜೆ. ಸತ್ತಿಗೇರಿ, ಆರ್. ಎಸ್. ಗಾಣಿಗೇರ, ಜಿ. ಆಯ್. ಡಮ್ಮಣಗಿ, ಎನ್. ಎಸ್. ಕಾಂಬಳೆ, ಎಲ್. ಎಸ್. ಹೊನ್ನಪ್ಪಗೋಳ, ಡಿ. ಎಮ್. ಪಾಟೀಲ, ಡಾ. ಕುಮಾರ ದಾಸರ, ಅಂಗನವಾಡಿ ಕಾರ್ಯಕರ್ತೆಯರಾದ ಜಿ. ಆರ್. ದಯನ್ನವರ, ಎಂ. ಎ. ನದಾಫ, ಎಚ್. ಸಿ. ಹುಕ್ಕೇರಿ, ಲಕ್ಷ್ಮೀ ವಂಟಮೂರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬೆಳಗಾವಿಯಲ್ಲಿ ಬೃಹತ್ ಉದ್ಯೋಗ ಮೇಳ

ಬೆಳಗಾವಿ: ಉದ್ಯೋಗಾಕಾಂಕ್ಷಿ ಯುವಕರಿಗೆ ಹೊಸ ಆಶಾಕಿರಣವಾಗಿ ಶಿವಬಸವ ನಗರದ ಎಸ್.ಜಿ. ಬಾಳೇಕುಂದ್ರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜಿಲ್ಲಾಡಳಿತ, ಜಿಪಂ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಬೃಹತ್ ಉದ್ಯೋಗ ಮೇಳ ಜರುಗಿತು. ಈ ಮೇಳದಲ್ಲಿ 104 ಕಂಪನಿಗಳು ಭಾಗವಹಿಸಿ 19 ಸಾವಿರ ಹುದ್ದೆಗಳಿಗೆ ನೇರ ಸಂದರ್ಶನ ನಡೆಸಲಾಯಿತು.

ಉದ್ಯೋಗ ಮೇಳದದಲ್ಲಿ ಬೆಳಗಾವಿ, ಹುಬ್ಬಳ್ಳಿ ಹಾಗೂ ಬೆಂಗಳೂರು ಸೇರಿದಂತೆ ವಿವಿಧ ನಗರಗಳ ಪ್ರತಿಷ್ಠಿತ ಕಂಪನಿಗಳು ಮೇಳದಲ್ಲಿ ಪಾಲ್ಗೊಂಡು ಎಸ್‌ಎಸ್‌ಎಲ್ಸಿ ರಿಂದ ಸ್ನಾತಕೋತ್ತರ ಪದವಿವರೆಗೆ ವಿವಿಧ ಶೈಕ್ಷಣಿಕ ಅರ್ಹತೆಯುಳ್ಳ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ನೀಡಿದವು.

ಕಾರ್ಯಕ್ರಮಕ್ಕೆ ಬಿ.ಆರ್. ಪಟಗುಂದಿ, ರವಿ ಬಂಗಾರಪ್ಪ, ಪ್ರಕಾಶ ದೇಶಪಾಂಡೆ, ಚಿದಾನಂದ, ಯಶವಂತ ಭಾಗ್ಯಶ್ರೀ ಮೇಳಕ್ಕೆ ಚಾಲನೆ ನೀಡಿದರು.

ನಾಗನೂರು ರುದ್ರಾಕ್ಷಿಮಠದ ಅಲ್ಲಮಪ್ರಭು ಶ್ರೀಗಳು ಮಾತನಾಡಿ, ಪ್ರತಿಯೊಬ್ಬರೂ ಮುಂದೆ ಬೇರೆಯವರಿಗೆ ಉದ್ಯೋಗ ನೀಡುವ ಉದ್ಯಮಿಗಳಾಗಬೇಕು. ಮೇಳದಲ್ಲಿ ಸಿಕ್ಕ ಅವಕಾಶವನ್ನು ಪ್ರಾಮಾಣಿಕತೆ, ನಿಷ್ಠೆಯಿಂದ ಬಳಸಿಕೊಂಡರೆ ಭವಿಷ್ಯದಲ್ಲಿ ದೊಡ್ಡ ಸಂಸ್ಥೆಗಳನ್ನು ನಿರ್ಮಿಸಲು ಸಾಧ್ಯ ಎಂದರು.

104 ಕಂಪನಿಗಳಿಂದ 19 ಸಾವಿರ ಉದ್ಯೋಗಾವಕಾಶ

ಉತ್ತರ ಶಾಸಕ ಆಸೀಫ್ ಸೇಠ್ ಮಾತನಾಡಿ, ಉದ್ಯೋಗ ಮೇಳಗಳು ಅನೇಕ ಯುವಕರ ಭವಿಷ್ಯ ಬದಲಾಯಿಸುವ ಸಾಮರ್ಥ್ಯ ಹೊಂದಿವೆ. ಉತ್ತರ ಕ್ಷೇತ್ರದ ಹಲವರು ಐಟಿ ವಿದ್ಯಾಭ್ಯಾಸ ಮಾಡಿರುವ ಯುವಕರು ಉದ್ಯೋಗಕ್ಕಾಗಿ ಇತರ ನಗರಗಳಿಗೆ ತೆರಳುತ್ತಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಬುಡಾದಿಂದ 20 ಎಕರೆ ಜಾಗ ಮಂಜೂರುಗೊಳಿಸಿ ಐಟಿ ಪಾರ್ಕ್ ಸ್ಥಾಪಿಸುವ ಕುರಿತು ಸಚಿವರು, ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗಿದೆ ಎಂದರು.

ಜಿಪಂ ಸಿಇಒ ರಾಹುಲ್ ಶಿಂಧೆ ಮಾತನಾಡಿ, ಅಧಿಕಾರಿಗಳ ಪರಿಶ್ರಮದಿಂದ ಅಲ್ಪ ಸಮಯದಲ್ಲೇ 104 ಕಂಪನಿಗಳು ಈ ಉದ್ಯೋಗ ಮೇಳದಲ್ಲಿ ಭಾಗವಹಿಸಿವೆ. ಆನ್‌ಲೈನ್‌ನಲ್ಲಿ ಸುಮಾರು 8 ಸಾವಿರ ಅರ್ಜಿಗಳು, ನೋಂದಣಿಗಳು ದಾಖಲಾಗಿದ್ದು, ಒಟ್ಟು 19 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ಉದ್ದೇಶದಿಂದ ಈ ಮೇಳ ಆಯೋಜಿಸಲಾಗಿದೆ ಎಂದರು. ಒಟ್ಟಾರೆ ಉದ್ಯೋಗಾಕಾಂಕ್ಷಿಗಳಿಂದ ಉತ್ಸಾಹಭರಿತ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಮೇಳವು ಯುವಕರಿಗೆಉತ್ತಮಉದ್ಯೋಗಾವಕಾಶಗಳ ವೇದಿಕೆಯಾಗಿದ್ದು ಗಮನ ಸೆಳೆದಿತು.



ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ

ಕೊಕಟನೂರ: ಶಿಕ್ಷಕರು ಪ್ರಾಥಮಿಕ ಶಾಲೆಯ ಮಕ್ಕಳಿಂದ ಹಿಡಿದು ಹತ್ತನೇ ತರಗತಿವರೆಗಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ ಉಜ್ವಲ ಭವಿಷ್ಯ ರೂಪಿಸಬೇಕು. ಅಂದಾಗ ಕಾನೂನು ಅರಿವು, ನೇರವಾಗಲು ಸಾಧ್ಯ ಎಂದು 11ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶ ಈರಣ್ಣ ಇ.ಎಸ್ ಹೇಳಿದರು.

ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ತಾಲೂಕಾ ಕಾನೂನು ಸೇವಾ ಸಮಿತಿ, ವಕೀಲರ ಸಂಘ ಅಥಣಿ ಹಾಗೂ ತಾಲೂಕಾ ವಿವಿಧ ಇಲಾಖೆ ಸಹಯೋಗದಲ್ಲಿ ಹೋಳಿ, ಬಾಲ್ಯವಿವಾಹ ಹಾಗೂ ಬಾಲಕಾರ್ಮಿಕ ನಿಷೇಧ ಕಾಯ್ದೆ ಮತ್ತು ಮಕ್ಕಳ ಸುರಕ್ಷತೆ ಬಗ್ಗೆ ಶನಿವಾರ ಹಮ್ಮಿಕೊಂಡ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮದಲ್ಲಿ ಮಾತನಾಡಿ, ಹಳ್ಳಿಯ ಜನರು ತಮ್ಮ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸುವಲ್ಲಿ ಹಿಂದೇಟು ಹಾಕುತ್ತಿರುವದು ಖೇದಕರ ಸಂಗತಿಯಾಗಿದೆ ಎಂದರು.

ಹೆಣ್ಣು ಮಕ್ಕಳು ತಮಗೆ ತಾವೇ ಸೂಕ್ತವಾದ ನಿರ್ಧಾರವನ್ನು ಕೈಗೊಂಡು ಯಾವುದೇ ರೀತಿಯ ಆಕರ್ಷಣಗಳಿಗೆ ಬಲಿಯಾಗದೆ ಶಿಕ್ಷಣದಲ್ಲಿ ಮುಂದೆ ಬಂದು ತಮ್ಮ ಜೀವನವನ್ನು ತಾವೇ ಉತ್ತಮ ಪಡಿಸಿಕೊಳ್ಳಬೇಕು ಎಂದರು.

ವಕೀಲ ಪ್ರವೀಣ ಕಾಂಬಳೆ ಮಾತನಾಡಿ, ಹಳ್ಳಿಯಲ್ಲಿರುವ ಕೆಲವರಿಗೆ ಕಾನೂನುಗಳ ಬಗ್ಗೆ ಮಾಹಿತಿ ಇಲ್ಲದೇ ಇರುವದರಿಂದ ಅವಘಡಗಳು ನಡೆಯುತ್ತವೆ. ಪ್ರತಿಯೊಬ್ಬರೂ ಕಾನೂನುವಿನ ಅರಿವು ಪಡೆದುಕೊಳ್ಳಬೇಕು ಎಂದರು.

ವಕೀಲ ಸುನಿಲ ಪಾಟಣಕರ, ವಕೀಲೆ ಅಕ್ಷತಾ ಶಿಂಗೆ, ಉಪಪ್ರಾಚಾರ್ಯ ಅನಿಲ ಮೇಲಿಕೇರಿ ಮಾತನಾಡಿದರು.

ಈ ವೇಳೆ, ಆಶಾ ಈರಣ್ಣ, ಮೇಲ್ವಿಚಾರಕಿ ಜಿ.ಬಿ ಗಂಗಪ್ಪನವರ, ಧರೆಪ್ಪ ನೇಮಗೌಡ, ಸಂಜಯ ಲಮಾಣಿ, ಹೇಮಾ ಆದೇಪ್ಪನವರ, ಸರಳಾ ಕುಲಕರ್ಣಿ, ಅನಿತಾ ಕಾಂಬಳೆ, ವಕೀಲರಾದ ಪವನ ಶೇಡಬಾಳ, ಪೂಹಾ ಕಂಬಾರ, ರೇಣುಕಾ ದಾಶಾಳ, ಕಿರಣ ನಾಯಿಕ, ಶಿಲ್ಪಾ ನಾಟಕಾರ, ಪ್ರೇಮಾ ನಾಯಿಕ, ಅರ್ಪಿತಾ ದಡ್ಡಿ, ಸಂತೋಷ ಕಳಕೇರಿ, ರಾಜು ಕಾಂಬಳೆ ಇದ್ದರು, ಆರತಿ ಪಾಟೀಲ ಸ್ವಾಗತಿಸಿ, ಅಬ್ದುಲ್ ಹಮೀದ ನಿರೂಪಿಸಿ, ಮೀನಾಕ್ಷಿ ಪಾಟೀಲ ವಂದಿಸಿದರು.



ಮಾ. 9 ರಿಂದ 23ರವರೆಗೆ ದಾಸೋಹ ಜಾತ್ರಾ ಮಹೋತ್ಸವ

ಚಿಕ್ಕೋಡಿ: ಚಿಂಚಣಿಯ ಅಲ್ಲಮಪ್ರಭು ಸಿದ್ದಸಂಸ್ಥಾನ ಮಠದ 2026ನೇ ಸಾಲಿನ ದಾಸೋಹ ಜಾತ್ರಾ ಮಹೋತ್ಸವ ಮಾ. 9 ರಿಂದ ಮಾ. 23ರವರೆಗೆ ನಡೆಯಲಿದ್ದು, ಹೆಚ್ಚಿನ ಭಕ್ತರು ಜಾತ್ರೆಯಲ್ಲಿ ಪಾಲ್ಗೊಳ್ಳಬೇಕು ಎಂದು ಶಾಸಕ ಗಣೇಶ ಹುಕ್ಕೇರಿ ಹೇಳಿದರು.

ತಾಲೂಕಿನ ಚಿಂಚಣಿ ಗ್ರಾಮದ ಸಿದ್ದಸ್ಥಾನಮಠದ ಆವರಣದಲ್ಲಿ ಶನಿವಾರ ದಾಸೋಹ ಮಹೋತ್ಸವದ ಆಮಂತ್ರಣ ಪತ್ರಿಕೆಬಿಡುಗಡೆಗೊಳಿಸಿಮಾತನಾಡಿ, ಪ್ರತಿ ಮೂರು ವರ್ಷಗಳಿಗೊಮ್ಮೆ ನಡೆಯಬೇಕಿದ್ದ ಜಾತ್ರೆ ಈ ಜಾತ್ರೆಯನ್ನು ಅದ್ದೂರಿ, ಅರ್ಥಪೂರ್ಣವಾಗಿಯೂ ಮಾಡುವ ಹೊಣೆಗಾರಿಕೆ ನಮ್ಮೆಲ್ಲರದ್ದಾಗಿದೆ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ ಮಾತನಾಡಿ, ಮಠದ ಉತ್ತರಾಧಿಕಾರಿ ಶಿವಪ್ರಸಾದ ದೇವರು ನೇತೃತ್ವದಲ್ಲಿ 15 ದಿನ ದಾಸೋಹ ಜಾತ್ರೆ ನಡೆಯಲಿದೆ ಎಂದರು.



ಚಿಂಚಣಿ ಸಿದ್ದಸಂಸ್ಥಾನಮಠದ ಶಿವಪ್ರಸಾದ ದೇವರು ಮಾತನಾಡಿ, ಮಾ.9ರಂದು ನಿಡಸೋಸಿಯ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬಸವ ಪುರಾಣ ಪ್ರಾರಂಭವಾಗಲಿದೆ. ಮಾ. 18ರವರೆಗೆ ಬಸವ ಪುರಾಣ ಚಿಂಚಣಿ ಗ್ರಾಮದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಡೆಯಲಿದೆ. ಮಾ. 19ರಂದು ಚಾಂದನಿ ಏರುವುದು, ಅಲ್ಲಮಪ್ರಭು ಜಯಂತಿ ಕಾರಂಜಿಮಠದ ಗುರುಸಿದ್ದ ಶ್ರೀಗಳ ಸಾನ್ನಿಧ್ಯಲ್ಲಿ ಜರುಗುವದು ಎಂದರು. ಮಾ.20ರಂದು ಲಿಂಗದೀಕ್ಷೆ, ಅಯ್ಯಾಚಾರ, ಮಾ. 21ರಂದು ಬಸವ ಪುರಾಣ ಮಂಗಳೋತ್ಸವ, ಮಾ.23ರಂದು ಹೊಂಗಡೋತ್ಸವ, ಮಾ. 23ರಂದು 25 ಸಾವಿರ ಮುತ್ತೈದೆಯರ ಉಡಿ ತುಂಬುವುದು, ಮಹಾಪ್ರಸಾದ ಮೂಲಕ ಜಾತ್ರೆಯು ಸಂಪನ್ನಗೊಳ್ಳುವುದು ಎಂದರು. ಮಹೇಶ ಭಾತೆ, ಪ್ರೋ ಎಸ್ ವೈ ಹಂಜಿ, ಅನಿಲ ಮಾನೆ, ಬಸವರಾಜ ಪಾಟೀಲ, ಅಜೇಯ ಕವಟಗಿಮಠ ಇದ್ದರು.

ಬಿಜೆಪಿ ಕಾರ್ಯಕರ್ತರಿಗೆ ಕಾಂಗ್ರೆಸ್ಸಿನತ್ತ ಒಲವು: ಚರ್ಚೆ

ಯಮಕನಮರಡಿ: ಸ್ಥಳೀಯ ಹೋಬಳಿ ಮಟ್ಟದಕಾಂಗ್ರೆಸ್ ಕಾರ್ಯಕರ್ತರಲ್ಲಿ ಮುಸುಕಿನ ಗುದ್ದಾಟ ಪ್ರಾರಂಭವಾಗಿದ್ದು ಬರುವ ಜಿಪಂ, ಗ್ರಾಪಂ ಚುನಾವಣೆಗಳು ಸಮೀಪಿಸುತ್ತಿದ್ದಂತೆ ಕೆಲ ನೂತನ ನಿಷ್ಠಾವಂತ ಬಿಜೆಪಿ ಕಾರ್ಯಕರ್ತರು ಬಿಜೆಪಿ ಬಿಟ್ಟು ಕಾಂಗ್ರೆಸ್ ಪಕ್ಷವನ್ನು ಸೇರುವರಿದ್ದು, ಈಗಾಗಲೇ ಚರ್ಚೆಗಳು ಪ್ರಾರಂಭವಾಗಿದ್ದು ಅಧಿಕೃತವಾಗಿ ಕೇಳಿ ಬರುತ್ತದೆ. ನೂತನ ಬಿಜೆಪಿ ಮುಖಂಡರು ತಮ್ಮ ಅಪಾರ ಕಾರ್ಯಕರ್ತರೊಂದಿಗೆ ಸಚಿವ ಸತೀಶ ಜಾರಕಿಹೊಳಿ ಅವರನ್ನು ಭೇಟಿ ನೀಡಿ ಕ್ಷೇತ್ರದಲ್ಲಿ ನಡೆದಿರುವ ಕೆಲ ಬದಲಾವಣೆಗಳನ್ನು ಕಾರ್ಯರೂಪಕ್ಕೆ ತರುವುದು ಹಾಗೂ ಈಗಾಗಲೇ ಇರುವ ಕಾಂಗ್ರೆಸ್ ಪಕ್ಷದ ಮುಖಂಡರು ಕಾರ್ಯಕರ್ತರು ಮಾಡುತ್ತಿರುವ ಕಾರ್ಯಗಳಾದ ಸ್ವಂತ ಲಾಭಕ್ಕಾಗಿ ಮಾಡಿಕೊಳ್ಳುತ್ತಿರುವುದು ಬೆಳಕಿಗೆ ಬಂದಿರುತ್ತದೆ. ಇತರೆ ಬಡ ಜನರ ಯೋಜನೆಗಳನ್ನು ಸದ್ದಿಲ್ಲದೆ ತಾವೇ ಕಬಳಿಸುತ್ತಿರುವುದು ಬೆಳಕಿಗೆ ಬಂದಿದ್ದು, ಅಲ್ಲದೆ ಹಿಂದುಳಿದ ಜನರಿಗೆ ತಲುಪಬೇಕಾದ ಸರ್ಕಾರದ ಅನೂಕುಲತೆಗಳನ್ನು ತಾವೇ ಬಳಸಿಕೊಂಡು ರಾಜಕಾರಣ ಮಾಡುತ್ತಿರುವುದನ್ನು ಸಚಿವರ ಗಮನಕ್ಕೆ



ತಂದು ಮುಂದಿನ ದಿನಮಾನಗಳಲ್ಲಿ ಕ್ಷೇತ್ರದಲ್ಲಿ ಹೊಸ ಹೊಸ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಿಸುವ ಕುರಿತು ಅಲ್ಲದೆ ಯಮಕನಮರಡಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಭಿವೃದ್ಧಿ ಕೆಲಸಗಳು ಕನಸಿನ ಕೂಸಾಗಿ ಉಳಿದಿದ್ದನ್ನು ಸಹಿತ ಸಚಿವರ ಗಮನಕ್ಕೆ ತರಲಾಗುವುದೆಂದು ನೂತನವಾಗಿ ಸೇರ್ಪಡೆಯಾಗುವ ಕಾರ್ಯಕರ್ತ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಮಾತನಾಡಿರುವುದು ಬೆಳಕಿಗೆ ಬಂದಿದ್ದು ಇರುತ್ತದೆ. ಈಗಿರುವ ಮುಖಂಡರು ಕಾರ್ಯಕರ್ತರಾಗಲಿ ಕೇವಲ ಸುಳ್ಳಿನ ಸರದಾರರಾಗಿದ್ದು ಇವರು ಸಾರ್ವಜನಿಕರು ಪೋನ ಮಾಡಿದರೆ ಕ್ಯಾರೇ ಎನ್ನುವುದನ್ನು ಕನಸಿನಲ್ಲಿಯೆ ಕಾಣುವುದು ಎಂದು ಸಾರ್ವಜನಿಕರು ಮಾತನಾಡುತ್ತಿದ್ದಾರೆ.

ಮಹಿಳೆಯರಿಗೆ ಬದುಕಿನ ದಾರಿ ತೋರಿದ ಶೃತಿ

ತೆಲಸಂಗ: ಸಮಾಜದಲ್ಲಿ ಮಹಿಳೆಯರು ಸ್ವಾವಲಂಬಿಯಾಗಿ ಬದುಕಬೇಕು. ತಮ್ಮ ಕಾಲಿನ ಮೇಲೆ ನಿಂತು ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂಬ ಉದ್ದೇಶದಿಂದ ಹಲವಾರು ಮಹಿಳೆಯರು ಶ್ರಮಿಸುತ್ತಿದ್ದಾರೆ. ಅಂತಹ ಪ್ರೇರಣಾದಾಯಕ ಮಹಿಳೆಯರಲ್ಲಿ ಅಥಣಿಯ ಶೃತಿ ಜಗದೀಶ ಕಿವಡಿ ಅವರು ಪ್ರಮುಖರಾಗಿದ್ದಾರೆ. ತಮ್ಮ ಪರಿಶ್ರಮ, ಸಾಮಾಜಿಕ ಕಾಳಜಿ ಮತ್ತು ಸೇವಾಭಾವದಿಂದ ಅನೇಕ ಮಹಿಳೆಯರಿಗೆ ಸ್ವ ಉದ್ಯೋಗದ ದಾರಿ ತೋರಿಸಿ ಮಾದರಿಯಾಗಿದ್ದಾರೆ.

ಇಂದಿನ ಸಮಾಜದಲ್ಲಿ ಬಹುಪಾಲು ಮಹಿಳೆಯರು ಓದು ಮುಗಿದ ಬಳಿಕ ಮದುವೆ ಮಾಡಿಕೊಂಡು ಕುಟುಂಬದ ಜವಾಬ್ದಾರಿಗಳಲ್ಲಿ ತೊಡಗಿಕೊಂಡು ಜೀವನ ಸಾಗಿಸುವುದು ಸಾಮಾನ್ಯ. ಆದರೆ ಶೃತಿ ಜಗದೀಶ ಕಿವಡಿ ಅವರು ಈ ಸಾಂಪ್ರದಾಯಿಕ ಕಲ್ಪನೆಗೆ ಮೀರಿದ ದಾರಿಯನ್ನು ಹಿಡಿದು, ಮಹಿಳೆಯರ ಬದುಕನ್ನು ಸ್ವಾವಲಂಬಿಯನ್ನಾಗಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ತಮ್ಮ ವೈಯಕ್ತಿಕ ಜೀವನದ ಜೊತೆಗೆ ಸಮಾಜ ಸೇವೆಯನ್ನೂ ಕೈಗೊಂಡು ಅನೇಕ ಮಹಿಳೆಯರಿಗೆ ಆತ್ಮವಿಶ್ವಾಸ ತುಂಬುತ್ತಿದ್ದಾರೆ.

ಕಳೆದ 10 ವರ್ಷಗಳಿಂದ ಮಹಿಳೆಯರಿಗೆ ವಿವಿಧ ಸ್ವ ಉದ್ಯೋಗ ತರಬೇತಿಗಳನ್ನು ನೀಡುತ್ತಾ ಬರುತ್ತಿದ್ದಾರೆ. ಹೊಲಿಗೆ ತರಬೇತಿ, ಬಳೆ ತಯಾರಿಕೆ, ಕಿವಿಯೋಲೆ ತಯಾರಿಕೆ, ಉಪ್ಪಿನಕಾಯಿ ಮತ್ತು ಹಪ್ಪಳ ತಯಾರಿಕೆ, ಊದುಬತ್ತಿ ನಿರ್ಮಾಣ, ಕುರುಕುಲ ತಿಂಡಿಗಳ ತಯಾರಿಕೆ ಹಾಗೂ ಕಂಪ್ಯೂಟರ್ ತರಬೇತಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಈ ತರಬೇತಿಗಳ ಮೂಲಕ ಅನೇಕ ಮಹಿಳೆಯರು ತಮ್ಮ ಮನೆಯಲ್ಲಿಯೇ ಕುಳಿತು ಸಣ್ಣ ಉದ್ಯಮ ಆರಂಭಿಸಿ ಕುಟುಂಬದ ಆರ್ಥಿಕ ಸ್ಥಿತಿ ಬಲಪಡಿಸುತ್ತಿದ್ದಾರೆ.

ಶೃತಿ ವಿಶೇಷವಾಗಿ ಸಮಾಜದಲ್ಲಿ ತುಳಿತಕ್ಕೊಳಗಾದ, ನೊಂದ, ನಿರ್ಗತಿಕ



ಮಹಿಳೆಯರು ಮನೆಯಲ್ಲಿಯೇ ಕುಳಿತು ಗುಡಿ ಕೈಗಾರಿಕೆಗಳ ಮೂಲಕ ತಮ್ಮ ಕುಟುಂಬ ನಿರ್ವಹಿಸಬಹುದು. ಆದರೆ ಅದಕ್ಕಾಗಿ ಮಾಡುವ ಛಲ, ಆತ್ಮವಿಶ್ವಾಸ ಅಗತ್ಯ. ನಾನು ನನ್ನ ಭವಿಷ್ಯ ಕಟ್ಟಿಕೊಳ್ಳುವುದರ ಜೊತೆಗೆ ಮಹಿಳೆಯರಿಗೆ ತರಬೇತಿ ನೀಡಿ ಸ್ವಾವಲಂಬಿ ಬದುಕಿಗೆ ದಾರಿ ತೋರಿಸುವ ಕೆಲಸ ಮಾಡುತ್ತಿದ್ದೇನೆ. ಕುಟುಂಬ ನಿರ್ವಹಣೆಯ ಜೊತೆಗೆ ಸಮಾಜಸೇವೆ ಮಾಡುವುದು ನನಗೆ ಅಪಾರ ತೃಪ್ತಿ ನೀಡುತ್ತದೆ.

■ ಶೃತಿ ಜಗದೀಶ ಕಿವಡಿ, ಅಥಣಿ

ಬಡ ಮಹಿಳೆಯರನ್ನು ಗುರುತಿಸಿ ಅವರಿಗೆ ಉಚಿತವಾಗಿ ತರಬೇತಿ ನೀಡುತ್ತಿರುವುದು ಅವರ ಸೇವಾಭಾ ಸ್ಪಷ್ಟಪಡಿಸುತ್ತದೆ. ಮಹಿಳೆಯರು ಆತ್ಮನಿರ್ಭರರಾಗಬೇಕು. ತಮ್ಮ ಸಾಮರ್ಥ್ಯ ಅರಿತು ಜೀವನದಲ್ಲಿ ಮುಂದೆ ಬರಬೇಕು ಎಂಬುದು ಅವರ ಉದ್ದೇಶವಾಗಿದೆ. ಮಹಿಳೆಯ ಶಕ್ತಿ ಸಮಾಜದ ಅಭಿವೃದ್ಧಿಗೆ ಬಳಸಿಕೊಳ್ಳಬೇಕೆಂಬ ದೃಷ್ಟಿಯಿಂದ ಶೃತಿ ಅವರು ಮಾಡುತ್ತಿರುವ ಸೇವೆ ಸಮಾಜಕ್ಕೆ ಮಾದರಿಯಾಗಿದೆ. ಅನೇಕ ಮಹಿಳೆಯರಿಗೆ ಆತ್ಮಸ್ಥೈರ್ಯ ತುಂಬಿ ಸ್ವ ಉದ್ಯೋಗದ ಮೂಲಕ ಬದುಕು ಕಟ್ಟಿಕೊಳ್ಳಲು ಪ್ರೇರಣೆ ನೀಡುತ್ತಿರುವ ಶೃತಿ ಜಗದೀಶ ಕಿವಡಿ ಸೇವೆ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ವಿಶೇಷವಾಗಿ ಸ್ಮರಿಸಬೇಕಾದದ್ದು.

ಸಕ್ಕರೆ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ

ಸಂಕೇಶ್ವರ: ಸ್ಥಳೀಯ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ವತಿಯಿಂದ 2026ನೇ ಸಾಲಿಗೆ ''ಅ'' ಹಾಗೂ ''ಬ'' ವರ್ಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸಕ್ಕರೆ ವಿತರಣೆ ಕಾರ್ಯಕ್ರಮಕ್ಕೆ ಕಾರ್ಖಾನೆ ಅಧ್ಯಕ್ಷ ಬಸವರಾಜ ಕಲ್ಲಟ್ಟಿ ಚಾಲನೆ ನೀಡಿದರು.

ಕಾರ್ಖಾನೆ ಆವರಣದಲ್ಲಿ ಪೂಜೆ ನೆರವೇರಿಸುವ ಮೂಲಕ ಸಕ್ಕರೆ ವಿತರಣೆಗೆ ಚಾಲನೆ ನೀಡಿ ಮಾತನಾಡಿ, ಈ ಯೋಜನೆಯಡಿ ಪ್ರತಿ ಸದಸ್ಯರಿಗೆ ಉತ್ತಮ ಗುಣಮಟ್ಟದ ಎಂ-30 ಗ್ರೇಡ್ನ 50 ಕೆ.ಜಿ ಸಕ್ಕರೆಯನ್ನು ಪ್ರತಿ ಕೆ.ಜಿ.ಗೆ 17 ರೂ.ನಂತೆ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದ್ದು, ಸದಸ್ಯರು ತಮ್ಮ ಸಕ್ಕರೆ ಕಾರ್ಡ್‌ಗಳನ್ನು ಹಾಜರುಪಡಿಸಿ ಸಕ್ಕರೆಯನ್ನು ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಖಾನೆ ಉಪಾಧ್ಯಕ್ಷ ಅಶೋಕ ಪಟ್ಟಣಶೆಟ್ಟಿ, ನಿರ್ದೇಶಕರಾದ ಶಿವಪುತ್ರ ಶಿರಕೋಳಿ, ಪ್ರಭುದೇವ ಪಾಟೀಲ, ವ್ಯವಸ್ಥಾಪಕ ನಿರ್ದೇಶಕ ಮಹಾದೇವಸ್ವಾಮಿ ಡಿ.ಎಸ್., ಕಾರ್ಯಾಲಯ ಅಧೀಕ್ಷಕ ಸುಭಾಷ ನಾಶಿಪುಡಿ, ಜನರಲ್ ಅಕೌಂಟೆಂಟ್ ಸಿ.ಬಿ. ಮರೇದಿ, ಮಾರಾಟಾಧಿಕಾರಿ ಡಿ.ಎನ್. ಚೌಗಲಾ, ಸಂರಕ್ಷಣಾಧಿಕಾರಿ ಎಂ.ಬಿ. ಇಂಗಳಿ, ಕ್ಯಾಶಿಯರ್ ಸತೀಶ ಮಗದುಮ್ಮ, ಕಾರ್ಮಿಕ ಕಲ್ಯಾಣಾಧಿಕಾರಿ ಕೆ.ಎಂ. ಪಾಟೀಲ ಸೇರಿದಂತೆ ಕಾರ್ಖಾನೆ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿ, ಕಾರ್ಮಿಕ ವರ್ಗ ಇದ್ದರು.



ಹಳ್ಳೂರ ಶಾಲೆಗೆ ಅತ್ಯುತ್ತಮ ಎಸ್‌ಡಿಎಂಸಿ ಪ್ರಶಸ್ತಿ



ಹಳ್ಳೂರ: ಸ್ಥಳೀಯ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಹಳ್ಳೂರ ಕ್ರಾಸ್ ಶಾಲೆಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮತ್ತು ಸಮಗ್ರ ಶಿಕ್ಷಣ ಕರ್ನಾಟಕ ಇಲಾಖೆಯ ಮಹತ್ವಾಕಾಂಕ್ಷೆಯ ಪುಷ್ಟಿ ಕಾರ್ಯಕ್ರಮದ ಅಡಿಯಲ್ಲಿ 2025-26ನೇ ಸಾಲಿನ ರಾಜ್ಯಮಟ್ಟದ ಅತ್ಯುತ್ತಮ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ) ಎಂದು ಆಯ್ಕೆ ಮಾಡಿದೆ.

ಸರ್ಕಾರದ ಈ ವಿಶೇಷ ಯೋಜನೆಯು ಅಭಿವೃದ್ಧಿಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ಗುರಿ ಹೊಂದಿದೆ. ಶಾಲಾ ಕಟ್ಟಡ, ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯ ನಿರ್ವಹಣೆ, ಶಾಲಾ ಬಿಟ್ಟ ಮಕ್ಕಳನ್ನು ಮರಳಿ ಕರೆತರುವುದು, ವಿದ್ಯಾರ್ಥಿಗಳ ನಿಯಮಿತ ಹಾಜರಾತಿ, ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಹೆಚ್ಚಿಸಲು ಸಮಿತಿ ನೀಡಿದ ಬೆಂಬಲ, ಗ್ರಾಮಸ್ಥರು, ಹಳೆಯ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ದತ್ತಿ, ಶಾಲಾ ಅಭಿವೃದ್ಧಿಗೆ ಬಳಸಿದ ರೀತಿ, ಶಾಲಾ ಅನುದಾನದ ಬಳಕೆ, ಸಭೆಗಳ ನಿಯಮಿತ ನಿರ್ವಹಣೆ ಹಲವು ಅಂಶಗಳನ್ನು ತಾಲೂಕ, ಜಿಲ್ಲಾ, ರಾಜ್ಯಮಟ್ಟದ ಅಧಿಕಾರಿಗಳ ಸಮಿತಿಯು ಪರಿಶೀಲಿಸಿ ಮೂಡಲಗಿ ವಲಯದ ಸ್ಥಳೀಯ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಹಳ್ಳೂರ ಕ್ರಾಸ್ ಶಾಲೆಯನ್ನು ಅತ್ಯುತ್ತಮ ಎಸ್‌ಡಿಎಂಸಿ ಎಂದು ಪ್ರಕಟಿಸಿದೆ.

ಪ್ರಶಸ್ತಿ ಜೊತೆಗೆ ಶಾಲಾ ಅಭಿವೃದ್ಧಿಗಾಗಿ ರೂ.75,000ರೂ.ಗಳ ನಗದು ಬಹುಮಾನವಾಗಿ ಇಲಾಖೆ ಘೋಷಿಸಿರುತ್ತದೆ. ಪುಷ್ಟಿ ಕಾರ್ಯಕ್ರಮದ ಮೂಲಕ ಎಸ್‌ಡಿಎಂಸಿ ಸದಸ್ಯರಲ್ಲಿ ಸ್ಪರ್ಧಾತ್ಮಕ ಮನೋಭಾವ ಮೂಡಿದೆ. ಇದು ಕೇವಲ ಪ್ರಶಸ್ತಿಯಲ್ಲ, ಬದಲಿಗೆ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಸಾರ್ವಜನಿಕರು ಕೈ ಜೋಡಿಸಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಶಾಲೆ ಮುಖ್ಯ ಶಿಕ್ಷಕ ಬಸವರಾಜ ಪಾಟೀಲ್ ತಿಳಿಸಿದರು. ಪ್ರಶಸ್ತಿ ಆಯ್ಕೆಯಲ್ಲಿ ಸಹಕರಿಸಿದ ಉಪ ನಿರ್ದೇಶಕರಿಗೆ, ಡಿವೈಪಿಸಿ ಚಿಕ್ಕೋಡಿ ಇವರಿಗೆ, ಹಾಗೂ ಮೂಡಲಗಿ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಶಾಲೆಯ ಪರವಾಗಿ ಶಾಲೆಯ ಮುಖ್ಯ ಶಿಕ್ಷಕ ಬಸವರಾಜ ಪಾಟೀಲ್, ಸಹ ಶಿಕ್ಷಕರು, ಶಾಲಾ ಅಭಿವೃದ್ಧಿ ಸಮಿತಿ, ಮುಖಂಡರು ಸಂತಸ ವ್ಯಕ್ತ ಪಡಿಸಿದರು.

2026-2027 ರಾಜ್ಯ ಬಜೆಟ್ ನಾವು ಕಂಡಂತೆ

ಅಭಿವೃದ್ಧಿ ಶೂನ್ಯ ಬಜೆಟ್



ಲೋಕಾಪುರ: ಸಿಎಂ ಸಿದ್ದರಾಮಯ್ಯನವರ ಬಜೆಟ್ ಸಾಲದ ಬಜೆಟ್ ಆಗಿದೆ. 1.15 ಲಕ್ಷ ಕೋಟಿ ರೂ.ಸಾಲ ಮಾಡುತ್ತಿದ್ದಾರೆ. ಇದರಿಂದ ಸಾಮಾನ್ಯ ಜನರ ಮೇಲೆ ತೆರಿಗೆ ಹೊರೆ ಹಾಕುತ್ತಾರೆ. ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಯುವ ನಿಧಿ ಯೋಜನೆಗೆ ಸರಿಯಾದ ಅನುದಾನವಿಲ್ಲದೆ ನಿರುದ್ಯೋಗಿ ಯುವಕರಿಗೆ ಅನ್ಯಾಯವಾಗುತ್ತಿದೆ ಎಂದು ಬಿಜೆಪಿ ಮುಖಂಡ ಲೋಕಣ್ಣಾ ಭೀ.ಕತ್ತಿ ಎಂದರು.

ಅಭಿವೃದ್ಧಿಗೆ ಪೂರಕ ಬಜೆಟ್



ಲೋಕಾಪುರ: ಸಿಎಂ ಸಿದ್ದರಾಮಯ್ಯನವರು 17ನೇ ಬಾರಿ ಬಜೆಟ್ ಮಂಡಿಸುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಈ ಬಜೆಟ್ ರಾಜ್ಯದ ಮೂಲ ಸೌಕರ್ಯ, ಅಭಿವೃದ್ಧಿಗೆ ಪೂರಕ. ಜನ ಕಲ್ಯಾಣಕ್ಕೆ ಮತ್ತು ಆರೋಗ್ಯ ಕ್ಷೇತ್ರಕ್ಕೆ ಒತ್ತು ನೀಡಿದ್ದಾರೆ. ವಾರಣಾಸಿ ಮತ್ತು ಮಂತ್ರಾಲಯ ಯಾತ್ರಿ ನಿವಾಸಗಳ ನಿರ್ಮಾಣಕ್ಕೆ ಹಾಗೂ ವೈಷ್ಣವಿದೇವಿ ಯಾತ್ರಿಗಳಿಗೆ ಧನ ಸಹಾಯ ಘೋಷಿಸಿರುವುದು ಸ್ವಾಗತಿಸುತ್ತೇನೆ ಎಂದು ಬಿಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಶಿವಾನಂದ ಉದಪುಡಿ ಎಂದು ತಿಳಿಸಿದರು.

ಕಿರುಸುದ್ದಿ

ಪ್ರೊ.ನಾಗಸುಧಾಗೆ ಪಿಎಚ್‌ಡಿ



ಬಾದಾಮಿ: ಬೆಂಗಳೂರು ಶೇಷಾದ್ರಿಪುರಂ ಸಂಜೆ ಕಾಲೇಜು ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಹಾಗೂ ಮೈಸೂರು ವಿಶ್ವವಿದ್ಯಾಲಯ ವಾಣಿಜ್ಯಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿನಿ ಪ್ರೊ.ನಾಗಸುಧಾ ಆರ್. ಅವರಿಗೆ ಮೈಸೂರು ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. Role of Social Media Marketing and Performance of Women Enterprises – A Study ಎಂಬ ಶೀರ್ಷಿಕೆಯಡಿ ಮಂಡಿಸಿದ ಸಂಶೋಧನಾ ಮಹಾಪ್ರಬಂಧವು ಸಾಮಾಜಿಕ ಮಾಧ್ಯಮ ಮಾರುಕಟ್ಟೆ ತಂತ್ರಗಳ ಪರಿಣಾಮಕಾರಿತ್ವ ಮತ್ತು ಮಹಿಳಾ ಉದ್ಯಮಗಳ ಕಾರ್ಯಕ್ಷಮತೆ ನಡುವಿನ ಸಂಬಂಧವನ್ನು ಆಳವಾದ ವೈಜ್ಞಾನಿಕ ವಿಶ್ಲೇಷಣೆಯ ಮೂಲಕ ಪರಿಶೀಲಿಸಿದೆ. ಈ ಮಹತ್ವದ ಸಂಶೋಧನೆಗೆ ಕೊಶೀಶ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ನ ಗೌರವ ನಿರ್ದೇಶಕರು ಹಾಗೂ ಪ್ರಾಂಶುಪಾಲರಾದ ಡಾ.ಪ್ರಕಾಶ ಬಿ.ನಾಯಕ್ ಅವರ ಮಾರ್ಗದರ್ಶನ ದೊರತಿದೆ. ಡಾ. ನಾಗಸುಧಾ ಆರ್. ಅವರಿಗೆ ಪ್ರಾಂಶುಪಾಲರು, ಆಡಳಿತ ಮಂಡಳಿ, ಸಹುದ್ಯೋಗಿ ಮಿತ್ರರು, ವಿದ್ಯಾರ್ಥಿ ಸಮುದಾಯ ಹರ್ಷ ವ್ಯಕ್ತಪಡಿಸಿ,ಅಭಿನಂದನೆ ಸಲ್ಲಿಸಿದ್ದಾರೆ.

ಸಾಮೂಹಿಕ ವಿವಾಹ: ನೋಂದಣಿ ಮಾಡಿಸಿ

ಜಮಖಂಡಿ: ನಗರದ ಮೈಗೂರು ರಸ್ತೆಯಲ್ಲಿನ ಬೋಧಿಸತ್ವ ಗೌತಮ ಬುದ್ಧ ನಗರ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ ಕಚೇರಿಯಲ್ಲಿ ಸಾಮೂಹಿಕ ವಿವಾಹದ ಕರಪತ್ರ ಬಿಡುಗಡೆ ನಡೆಯಿತು. ಮರೇಗುದ್ದಿ ವಿಜಯಮಹಾಂತ ಮಠದ ಗುರುಮಹಾಂತ ಶ್ರೀಗಳು ಕರಪತ್ರ ಉದ್ಘಾಟಿಸಿದರು. ಪರಶುರಾಮ ಕಾಂಬಳೆ ಮಾತನಾಡಿ, ಎಲ್ಲ ಜಾತಿಯ ಬಡವರಿಗೆ ಅನಕೂಲವಾಗುವ ದೃಷ್ಟಿಯಿಂದ ಬೌದ್ಧ ದಮ್ಮದ ವಿಧಿವಿಧಾನಗಳೊಂದಿಗೆ 21 ಜೋಡಿ ಉಚಿತ ಸರಳ ಸಾಮೂಹಿಕ ವಿವಾಹ ಮಾಡಲು ನಿರ್ಧರಿಸಲಾಗಿದೆ. ಸಾಮೂಹಿಕ ವಿವಾಹಕ್ಕೆ ಮಾರ್ಚ್‌ದಿಂದ ಎಪ್ರಿಲ್ 10ರ ವರೆಗೆ ನಮ್ಮ ಕಚೇರಿಯಲ್ಲಿ ವಧು ವರರ ಹೆಸರನ್ನು ನೋಂದಾಯಿಸಬೇಕು. ಮೇ 5ರಂದು ಸಾಮೂಹಿ ವಿವಾಹ ಏರ್ಪಡಿಸಲಾಗುತ್ತದೆ ನೋಂದಣಿಯಾದ ನಂತರ ಸ್ಥಳವನ್ನು ತಿಳಿಸಲಾಗುವದು ಎಂದರು. ಬಸವರಾಜ ದೊಡಮನಿ, ಅಡಿವೆಪ್ಪ ಮಾದರ, ಸದಾಶಿವ ಐನಾಪೂರ ಇದ್ದರು.

ಅಗ್ನಿ ಅವಘಡ

ಜಮಖಂಡಿ: ನಗರದ ಕೋರ್ಟ್ ರಸ್ತೆಯಲ್ಲಿ ಪರಮ ಸೋಲಾರ ಅಂಗಡಿಯಲ್ಲಿ ವಿದ್ಯುತ್ ಅವಘಡದಿಂದ ಬೆಂಕಿ ಹತ್ತಿ ಅಂಗಡಿಯಲ್ಲಿದ್ದ ಕೆಲವೊಂದಿಷ್ಟು ವಸ್ತುಗಳು ಬೆಂಕಿಗಾಹುತಿಯಾಗಿವೆ ಎಂದು ತಿಳಿದು ಬಂದಿದ್ದು ಅಗ್ನಿಶಾಮಕ ದಳದ ಮತ್ತು ಆರಕ್ಷಕರ ಕಾರ್ಯಕ್ಷಮತೆಯಿಂದ ಅಗ್ನಿ ಶಮನವಾಗಿದೆ. ಸ್ಥಳಕ್ಕೆ ನಗರ ಠಾಣಾಧಿಕಾರಿ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದ್ದಾರೆ.

ಯುವಕ ಆತ್ಮಹತ್ಯೆ

ಜಮಖಂಡಿ: ತಾಲೂಕಿನ ಹುಲ್ಯಾಳ ಗ್ರಾಮ ರಮೇಶ ಬಸಪ್ಪ ಸೋರಗಾವಿ (28 ಯುವಕ ಕೃಷ್ಣಾ ನದಿಯ ಜಂಬಗಿ ಸೇತುವೆಯಿಂದ ಹಾರಿ ಆತ್ಮ ಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಜಂಬಗಿ ಸೇತುವೆ ಮೇಲೆ ಯುವಕನ ದ್ವಿಚಕ್ರವಾಹನ ಮತ್ತು ಮೊಬೈಲ್ ಕಂಡುಬಂದಿದೆ. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅಗ್ನ ಶಾಮಕದಳದಿದ ಶೋಧ ಕಾರ್ಯದಲ್ಲಿ ಯುವಕ ಶವವಾಗಿ ಪತ್ತೆಯಾಗಿದ್ದಾನೆ ಎಂದು ಮೂಲಗಳಿಂದ ತಿಳಿದು ಬಂದಿದೆ.

ಯಲ್ಲಪ್ಪ ಕಲಾದಗಿ ನಿಧನ



ಬೀಳಗಿ: ತಾಲೂಕಿನ ಅರಕೇರಿ ಗ್ರಾಮದ ಯಲ್ಲಪ್ಪ ಮಾನಪ್ಪ ಕಲಾದಗಿ ಉರ್ಫ ಈರಗಾರ (67) ನಿಧನ ಹೊಂದಿದರು. ಮೃತರಿಗೆ ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವಿದೆ.

ಲಕ್ಷ್ಮವ್ವ ಚಂಡಕಿ



ಬೀಳಗಿ: ತಾಲೂಕಿನ ಅರಕೇರಿ ಗ್ರಾಮದ ಶತಾಯುಷಿ ಲಕ್ಷ್ಮವ್ವ ಸಗರಪ್ಪ ಚಂಡಕಿ (104) ನಿಧನ ಹೊಂದಿದರು. ಮೃತರಿಗೆ ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವಿದೆ.



ಬಾಗಲಕೋಟೆ: ಹೋಳಿ ಆಚರಣೆ ಸಮಿತಿ ಅಂಗವಾಗಿ ನಗರದ ಬಸವೇಶ್ವರ ವೃತ್ತದಲ್ಲಿ ಹಮ್ಮಿಕೊಂಡಿದ್ದ ಹೋಳಿ ಉತ್ಸವದ ಎರಡು ದಿನದ ಬಣ್ಣದ ಆಟಕ್ಕೆ ಜಿಲ್ಲಾಧಿಕಾರಿ ಸಂಗಪ್ಪ, ಎಸ್‌ಪಿ ಸಿದ್ಧಾರ್ಥ್ ಗೋಯಲ್ ಹಲಗೆ ಬಾರಿಸುವ ಮೂಲಕ ಚಾಲನೆ ನೀಡಿದರು.

ಶಿಕ್ಷಣ ಇಲಾಖೆಯಿಂದ ಗುಣಮಟ್ಟದ ಶಿಕ್ಷಣ

ಬೀಳಗಿ: ತಾಲೂಕಿನ ಸೊನ್ನ ಗ್ರಾಮದ ಬಾಲಕಿಯರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ನಡೆದ 3ನೇ ಪೋಷಕ–ಶಿಕ್ಷಕರ ಮಹಾಸಭೆ ಹಾಗೂ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಆಚರಿಸಲಾಯಿತು. ಶಿಕ್ಷಣ ಸಂಯೋಜಕ ಕೆ.ಎಸ್.ಗೌಡರ ಉದ್ಘಾಟಿಸಿ ಮಾತನಾಡಿ, ಮಕ್ಕಳ ಪ್ರತಿ ಹಂತದ ಶೈಕ್ಷಣಿಕ ಬೆಳವಣಿಗೆ ಗಮನಿಸಿ ಅವರಿಗೆ ಆಯಾ ಹಂತದಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಚರ್ಚೆ ಮಾಡುವ ವೇದಿಕೆ ಈ ಸಭೆ ಎಂದು ಹೇಳಿದರು. ಬೆಂಗಳೂರಿನ ಪ್ರಯೋಗ ಸಂಸ್ಥೆ ವಿಭಾಗೀಯ ನೋಡಲ್ ಅಧಿಕಾರಿ ಕಾವೇರಿ ಮಾತನಾಡಿ, ಇಂದಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ದೆಸೆಯಲ್ಲಿ ಶಿಕ್ಷಣ ಇಲಾಖೆ ಇಂತಹ ಉತ್ತಮ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದರ ಜೊತೆಗೆ ನಮ್ಮ ಪ್ರಯೋಗ ಸಂಸ್ಥೆ ನೀಡಿರುವ ವಿಜ್ಞಾನದ ಉಪಕರಣಗಳನ್ನು ಬಳಸಿಕೊಂಡು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಈ ಶಾಲೆಯ ಶಿಕ್ಷಕರ ಪ್ರಯತ್ನ ಶ್ಲಾಘನಿಯವಾದುದ್ದು ಎಂದರು. ಮುಖ್ಯಗುರು ಆರ್.ಎನ್.ಉಪ್ಪಾರ ಮಾತನಾಡಿ, ಇಲಾಖೆಯ ಉದ್ದೇಶ ಶಾಲೆಗೆ ದಾಖಲಾದ ಎಲ್ಲ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಬೇಕಾದರೆ, ಶಿಕ್ಷಕರು ಪೋಷಕರೊಂದಿಗೆ ನಾವು ಕೈ ಜೋಡಿಸಬೇಕು ಎಂದರು. ಶಿಕ್ಷಣ ಪ್ರೇಮಿ, ದಾನಿ ಮಂಜುನಾಥ ಮಾದರ ಅವರನ್ನು ಸನ್ಮಾನಿಸಲಾಯಿತು. ಎಸ್‌ಡಿಎಂಸಿ ಪದಾಧಿಕಾರಿಗಳು, ಸಿಆರ್‌ಪಿ ವಿ.ಎಚ್.ಕುರಿಯವರ, ಬಿಆರ್‌ಪಿ ಬಸವರಾಜ ಲಮಾಣಿ, ಶಿಕ್ಷಕಿಯರಾದ ಅನಿತಾ ಹಂಚಾಟೆ, ಬಸಮ್ಮ ವ್ಯಾಪಾರಿ, ಶಿಕ್ಷಕರಾದ ಗುರುರಾಜ ಬೆಳಗಲಿ, ರಮೇಶ ಮಠಪತಿ, ರಾಜು ಚವ್ಹಾಣ, ಚೈತ್ರಾ ವಾಲಿಕಾರ ಮತ್ತಿತರಿದ್ದರು.



ಬೀಳಗಿ: ತಾಲೂಕಿನ ಸೊನ್ನ ಗ್ರಾಮದ ಬಾಲಕಿಯರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ನಡೆದ 3ನೇ ಪೋಷಕ–ಶಿಕ್ಷಕರ ಮಹಾಸಭೆ ಹಾಗೂ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಶಿಕ್ಷಣ ಪ್ರೇಮಿ, ದಾನಿ ಮಂಜುನಾಥ ಮಾದರ ಅವರನ್ನು ಸನ್ಮಾನಿಸಲಾಯಿತು.

ಪರಸ್ಪರ ಬಣ್ಣ ಎರೆಬಾಟ | ಕುಣಿದು ಕುಪ್ಪಳಿಸಿದ ಯುವ ಪಡೆ

ಐತಿಹಾಸಿಕ ಹೋಳಿಗೆ ಅದ್ದೂರಿ ತೆರೆ

ಬಾಗಲಕೋಟೆ: ದೇಶದಲ್ಲಿ ಹೆಚ್ಚು ಪ್ರಸಿದ್ದಿ ಪಡೆದಿರುವ ಬಾಗಲಕೋಟೆಯ ಹೋಳಿ ಹಬ್ಬದ ಬಣ್ಣದಾಟಕ್ಕೆ ಶನಿವಾರ ಅದ್ದೂರಿ ತೆರೆ ಕಂಡಿತು. ಮೂರು ದಿನ ನಡೆದ ಬಣ್ಣದಾಟದಲ್ಲಿ ಮಕ್ಕಳು, ಯುವಕರು, ದೊಡ್ಡವರಾದಿಯಾಗಿ ಎಲ್ಲರೂ ಸಂಭ್ರಮದಿಂದ ಭಾಗಹಿಸಿದ್ದರಿಂದ ಬಣ್ಣದಾಟಕ್ಕೆ ಕಳೆ ಬಂದಿತು.ಇನ್ನೂ ಮೂರು ದಿನಗಳ ಕಾಲವೂ ಯುವಕ, ಯುವತಿಯರ ಮುಖಗಳಂತೂ ಕೆಂಪು,ನೀಲಿ, ಕರಿ ಮುಖಗಳಿಂದ ಕೂಡಿದ್ದವು. ಎಲ್ಲಿ ನೋಡಿದರಲ್ಲೂ ಕಲರ್ ಫುಲ್ ಬಣ್ಣದಾಟ ನಡೆಯಿತು.

ನಗರದಲ್ಲಿ ಮೊದಲ ದಿನ ಕಿಲ್ಲಾ ಹಾಗೂ 2ನೇ ದಿನ ಹಳೆಪೇಟ ಮಡು, ಜೈನ್‌ಪೇಟ, ವೆಂಕಟಪೇಟ ಬಣ್ಣದಾಟ ನಡೆದಿರೆ ಕೊನೆಯ ದಿನ ಹೊಸಪೇಟೆಯ ಓಣಿಯ ಬಣ್ಣದಾಟ ನಡೆಯುವ ಮೂಲಕ ಹೋಳಿ ಹಬ್ಬದ ಬಣ್ಣದಾಟ ಸಮಾಪ್ತಿಗೊಂಡಿತು.

ಮೂರು ದಿನ ನಡೆದ ಬಣ್ಣದಾಟದಲ್ಲಿ ಪ್ರತಿ ಓಣೆಗಳಿಂದ ಈ ಭಾರಿ ಬಣ್ಣದ ಗಾಡಿಗಳನ್ನು ಮಾಡಲಾಗಿತ್ತು. ಬೃಹತ್ ಆಕಾರದ ಬ್ಯಾರಲ್ ಗಳಲ್ಲಿ ಬಣ್ಣದ ನೀರನ್ನು ತುಂಬಿ ಎದುರಿಗೆ ಬರುವವರ ಮುಖಕ್ಕೆ ನೀರನ್ನು ಎರಚಿ ಸಂಭ್ರಮಿಸುವ ಕೂಗು ಕೇಳಿ ಬರುತ್ತಿತ್ತು. ಕೊನೆಯ ದಿನ ಹೊಸಪೇಟೆ ಓಣಿಯ ಬಣ್ಣದಾಟ ಆರಂಭವಾಗಿ ನಂತರ ನಗರದ ಪ್ರತಿ ಓಣಿಗಳಲ್ಲಿ ಸಂಚರಿಸಿ ಪರಸ್ಪರ ಬಣ್ಣ ಎರಚುವುದು ನಡೆಯಿತು.

ರಾರಾಜಿಸಿದ ಮೋದಿ ಪೋಟೋ: ಈ ಭಾರಿ ಬಣ್ಣದ ಗಾಡಿಗಳನ್ನು ತುಂಬಿಕೊಂಡು ಮರವಣಿಗೆ ಹೊರಟ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಭಾವಚಿತ್ರವನ್ನುಹಿಡಿದುಕೊಂಡು ಬಣ್ಣದಲ್ಲಿ ಸಂಭ್ರಮಿಸಿದರು. ಇನ್ನೂ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳರವರ ಭಾವಚಿತ್ರ ಕೂಡ ಮಿಂಚಿತು.





ಮೂರು ದಿನ ನಡೆದ ಬಾಗಲಕೋಟೆ ಬಣ್ಣದಾಟದ ನಿಮಿತ್ತ ಬಾಗಲಕೋಟೆಯ ಕಿರಾಣಿ, ತರಹೇವಾರಿ ಸಾಮಾಗ್ರಿಗಳು, ಬಟ್ಟೆ ಅಂಗಡಿ, ಮೆಣಸಿನಕಾಯಿ ಮಾರ್ಕೆಟ್ ಹೀಗೆ ಎಲ್ಲ ತರಹದ ಶೇ.90ರಷ್ಟು ಅಂಗಡಿಗಳು ಸ್ವಯಂ ಪ್ರೇರಣೆಯಿಂದ ಬಂದ್ ಆಗಿದ್ದವು. ವ್ಯಾಪಾರ ವಹಿವಾಟವಂತೂ ಮೂರು ದಿನ ಸ್ಥಗಿತಗೊಂಡಿತ್ತು. ಅಂಗಡಿ ಮುಗ್ಗಟ್ಟುಗಳನ್ನು ಬಂದ್ ಮಾಡಲು ಯಾರೂ ಒತ್ತಡ ಹೇರದಿದ್ದರೂ ಹೋಳಿ ಹಬ್ಬದಲ್ಲಿ ಭಾಗವಹಿಸುವುದರಿಂದ ಅಂಗಡಿಗಳನ್ನು ಬಂದ್ ಮಾಡಲಾಗಿತ್ತು.

ಭಾರೀ ಭದ್ರತೆ: ಫೆ.19ರಂದು ನಡೆದ ಛತ್ರಪತಿ ಶಿವಾಜಿ ಜಯಂತಿ ಮೆರಣಿಗೆ ಸಂದರ್ಭದಲ್ಲಿ ನಡೆದ ಕಲ್ಲು ತೂರಾಟದಿಂದ ಬಾಗಲಕೋಟೆಯಲ್ಲಿ ಉದ್ವಿಗ್ನಸ್ಥಿತಿ ನಿರ್ಮಾಣವಾಗಿತ್ತು ಆದರೆ ಒಂದು ವಾರ ಮರು ಸ್ಥಿತಿಗೆ ಬರಲು ಪೊಲೀಸರು ಹರಸಾಹಸಪಟ್ಟರು ಆದರೆ ಬಾಗಲಕೋಟೆ ಹೋಳಿ ಹಬ್ಬದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದೇ ಶಾಂತ ರೀತಿಯಿಂದ ನಡೆಯಿತು. ಹೋಳಿ ಹಬ್ಬದ ಅಂಗವಾಗಿ ಅಲ್ಲಲ್ಲಿ ಸಿಸಿ ಕಣ್ಗಾವಲು ಇತ್ತು. ಬಾಗಲಕೋಟೆ ಎಸ್ಪಿ ಸಿದ್ದಾರ್ಥ ಗೋಯಲ್ ನೇತೃತ್ವದಲ್ಲಿ ಭಾರೀ ಪೊಲೀಸ್ ಭದ್ರತೆಯನ್ನು ಕೈಗೊಂಡ ಪರಿಣಾಮ ಹಬ್ಬವು ಅದ್ದೂರಿ ಶಾಂತ ರೀತಿಯಿಂದ ತೆರೆ ಕಂಡಿತು.

ಚರಂತಿಮಠ ವಸ್ತ್ರದ ಫೌಂಡೇಶನ್ ನೇತೃತ್ವದಿಂದ ಸೇವಾ ಕಾರ್ಯ

ಬಾಗಲಕೋಟೆ: ದೇಶದಲ್ಲೆಡೆ ಖ್ಯಾತಿ ಹೊಂದಿರುವ ಬಾಗಲಕೋಟೆ ಹೋಳಿ ಹಬ್ಬದ ಮೂರು ದಿನದ ಬಣ್ಣದಾಟ ಪ್ರೋತ್ಸಾಹ ನೀಡಲು ಚರಂತಿಮಠ ವಸ್ತ್ರದ ಫೌಂಡೇಶನ್ ನೇತೃತ್ವದಲ್ಲಿ ನಗರದ ಹಲವಡೆ ನಡೆಸಿದ ಸೇವಾ ಕಾರ್ಯ ಮೆಚ್ಚುಗೆಗೆ ಪಾತ್ರವಾಯಿತು.

ಫೌಂಡೇಶನ್ ಅಧ್ಯಕ್ಷ ಮಲ್ಲಿಕಾರ್ಜುನ ಚರಂತಿಮಠ ಅವರು ಮೊದಲ ದಿನ ನವನಗರ, ವಿದ್ಯಾಗಿರಿ, ಎರಡನೇ ದಿನ ಹಳಪಟೇಟ, ಜೈನಪೇಟ, ವೆಂಕಟಪೇಟ, ಮೂರನೇ ದಿನ ಹೊಸಪೇಟೆ ಸೇರಿ ಬಣ್ಣದ ಪ್ರದೇಶಗಳಲ್ಲಿ ಹಾಗೂ ಜನ ಸಂದನೀಯ ಪ್ರದೇಶದ ಜಿಲ್ಲಾ ಆಸ್ಪತ್ರೆ ಹತ್ತಿರ, ಬಸವೇಶ್ವರ ವೃತ್ತ, ಇಂಜಿನಿ ಯರಿಂಗ್ ಕಾಲೇಜಿನ ಮೇಲ್ನಾಡ ವೃತ್ತ, ವಲ್ಲಭಭಾಯಿ ಚೌಕ್ ನಲ್ಲಿ ಸಾರ್ವಜನಿಕರಿಗೆ ಊಟ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಬಣ್ಣದಾಟ ಆಡುವ ಯುವಕರು, ಪರ ಸ್ಥಳದ ವೃದ್ದರು, ಮಹಿಳೆಯರು ಪ್ರತಿನಿತ್ಯ ಸಾವಿರಕ್ಕೂ ಜನರಿಗೆ ಈ ಸೇವೆಯಿಂದ ಅನುಕೂಲವಾಯಿತು. ಬಾಗಲಕೋಟೆ ಹೋಳಿ ಹಬ್ಬದ ಸಂದರ್ಭದಲ್ಲಿ ಊಟ, ಕುಡಿಯುವ ನೀರಿನ ಕೊರತೆ ಇರುತ್ತದೆ. ಇದನ್ನು ಮನಗಂಡು ಚರಂತಿಮಠ – ವಸ್ತ್ರದ ಫೌಂಡೇಶನ್ ಅನ್ನ ನೀಡುವ ಸೇವಾ ಕಾರ್ಯ ಚೆನ್ನಾಗಿ ನಡೆಯಿತು. ಮೂರು ದಿನ ಬಾಗಲಕೋಟೆ ನಗರದ ಅಕ್ಷರಶಃ ಸಂಪೂರ್ಣ ಬಂದ್ ಇರುತ್ತದೆ. ಇದರಿಂದ ಸಾಕಷ್ಟು ಪ್ರಯೋಜನವಾಗಿದೆ. ಬಣ್ಣದಾಟವಾಡುವವರು ಸಂತಸ ಪಟ್ಟಿದ್ದಾರೆ ಎಂದು ವಿಜಯ ಸುಲಾಖೆ ಹೋಳಿ ಆಚರಣಾ ಸಮಿತಿ ಮುಖಂಡ ಶಿವು ಮೇಲ್ನಾಡ ತಿಳಿಸಿದರು.

> **ಚರಂತಿಮಠ, ವಸ್ತ್ರದ ಫೌಂಡೇಶನ್ ನೇತೃತ್ವದಲ್ಲಿ ಮಲ್ಲಿಕಾರ್ಜುನ ಚರಂತಿಮಠ ಅವರು ಹೋಳಿ ಹಬ್ಬದ ಸಂದರ್ಭದಲ್ಲಿ ಮಾಡಿದ ಸೇವಾ ಕಾರ್ಯ ಬಹಳಷ್ಟು ಅನುಕೂಲವಾಯಿತು. ಉಚಿತವಾಗಿ ಪ್ರತಿನಿತ್ಯ ಸಾವಿರಕ್ಕೂ ಹೆಚ್ಚು ಜನರಿಗೆ ಫಲಾವು(ಅನ್ನ), ನೀರು ನೀಡಿರುವುದು ನಿಜಕ್ಕೂ ಶ್ಲಾಘನೀಯ.**
> ■ **ಕಳಕಪ್ಪ ಬಾದೋಡಗಿ, ಹೋಳಿ ಆಚರಣಾ ಸಮಿತಿ ಅಧ್ಯಕ್ಷ**



ರಾಜ್ಯ ಬಜೆಟ್ ಖಾಲಿ ಖಾಲಿ: ಹೊಳಬಸು ಬಾಳಶೆಟ್ಟಿ

ಬೀಳಗಿ: ಕೊಡ್ತೀನಿ, ಕೊಡಾಕ್ ಹೇಳ್ತೀನಿ, ಕೊಡುವವರ ಹೆಸರು ಹೇಳ್ತೀನಿ ಅನ್ನುವವರಂತೆ ಕಾಂಗ್ರೆಸ್ ಸರ್ಕಾರದ ಬಜೆಟ್ ಆಗಿರುತ್ತದೆ. ಹೇಳುವುದು ಒಂದು ಮಾಡುವುದು ಇನ್ನೊಂದು ಕಾಂಗ್ರೆಸ್‌ನವರ ಚಾಳಿ ಮುಂದುವರೆದಂತಾಗಿದೆ ಎಂದು ಬೀಳಗಿ ಮಂಡಲ ಭಾರತೀಯ ಜನತಾ ಪಾರ್ಟಿ ಅಧ್ಯಕ್ಷ ಹೊಳಬಸು ಬಾಳಶೆಟ್ಟಿ ಆರೋಪಿಸಿದ್ದಾರೆ.



2013ರಲ್ಲಿ ಸಂಗಮನಾಥನ ಮೇಲೆ ಆಣೆ ಪ್ರಮಾಣ ಮಾಡಿ ಪ್ರತಿ ವರ್ಷ ಹತ್ತು ಸಾವಿರ ಕೋಟಿ ರೂ. ಕೃಷ್ಣ ಪ್ರಾಜೆಕ್ಟ್‌ಗೆ ಕೊಡುತ್ತೇವೆ ಎಂದು ಅಧಿಕಾರಕ್ಕೆ ಬಂದರು. 2018 ರವರೆಗೆ ಮರೆತೇ ಹೋಯಿತು. 2019 ರಿಂದ 2023ರ ವರೆಗೆ ಬಿಜೆಪಿ ಆಡಳಿತದ ಸಂದರ್ಭದಲ್ಲಿ ಒಂದು ಎಕರೆ ನೀರಾವರಿ ಜಮೀನಿಗೆ 24 ಲಕ್ಷ ರೂ., ನೀರಾವರಿ ಅಲ್ಲದ ಜಮೀನಿಗೆ 20 ಲಕ್ಷ ರೂ. ನಿಗದಿ ಮಾಡಿ ಚೆಕ್ ವಿತರಣೆ ಮಾಡುತ್ತಿದ್ದಾಗ ಇದೇ ಕಾಂಗ್ರೆಸ್ ನವರು ಗೇಲಿ ಮಾಡಿದರು.

2023ರಚುನಾವಣೆಯಲ್ಲಿಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ಕೊಟ್ಟರೆ ಒಂದು ಎಕರೆ ನೀರಾವರಿ ಜಮೀನಿಗೆ 50 ಲಕ್ಷ ರೂ., ನೀರಾವರಿ ಅಲ್ಲದ ಜಮೀನಿಗೆ 40 ಲಕ್ಷ ರೂ. ಕೊಡುತ್ತೇವೆ ಎಂದು ಭರವಸೆ ನೀಡಿ, ಪ್ರತಿವರ್ಷ 40,000 ಕೋಟಿ ರೂ. ಕೊಡುತ್ತೇವೆಂದು ಅಧಿಕಾರಕ್ಕೆ ಬಂದರು. ಇಲ್ಲಿಯವರೆಗೆ ಕೊಡಲೇ ಇಲ್ಲ ಎಂದು ಆರೋಪಿಸಿದರು.

2025ರಲ್ಲಿ ವಿಜಯಪುರದ ಕಾರ್ಯಕ್ರಮದಲ್ಲಿ ಯುಕೆಪಿ ಪ್ರಾಜೆಕ್ಟ್ ಚಾಲನೆ ಕೊಟ್ಟಿದ್ದೇವೆ. ಇದು ಆರನೇ ಗ್ಯಾರಂಟಿ ಎಂದರು. ಆಗಲೇ ಇಲ್ಲ.

ಕಳೆದ ವರ್ಷ ಸಚಿವ ಸಂಪುಟದ ವಿಶೇಷ ಸಭೆ ಕರೆದು ಬೆಲೆ ನಿಗದಿ ಮಾಡಿ 18,000 ಕೋಟಿ ರೂ. ಪ್ರತಿ ವರ್ಷ ಕೊಡುತ್ತೇವೆ ಎಂದು ನಂಬಿಸಿದರು. ಆದರೆ ಕೊಡಲೇ ಇಲ್ಲ.

2026ರ ಮಾರ್ಚ್ ಬಜೆಟ್ ನಲ್ಲಿ ಕೊಡಬಹುದೆಂದು ನಿರೀಕ್ಷಿಸಲಾಗಿತ್ತು, ನಿರೀಕ್ಷೆ ಹುಸಿಯಾಯಿತು. ಅಂದರೆ ಸರ್ಕಾರ ಖಾಲಿ ಖಾಲಿ ಭರವಸೆಗಳ ಸರದಾರ, ನಂಬಿಕೆಗಳ ನೇತಾರ ಎನ್ನುತ್ತಲೇ ಕೃಷ್ಣಾ ಸಂತ್ರಸ್ತರಿಗೆ ನಂಬಿಸುತ್ತಿರುವುದನ್ನು ನೋಡಿದರೆ ಸಂತ್ರಸ್ಥರ ಕೈಗೆ ಖಾಲಿ ಚಂಬು ಕೊಡುವುದರಲ್ಲಿ ಯಾವುದೇ ಸಂಶಯವಿಲ್ಲ. ಈ ರೀತಿ ಸುಳ್ಳು ಹೇಳುವವರ ಬೆನ್ನಿಗೆ ನಿಲ್ಲುವುದು ಅಪರಾಧವಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಸಮೃದ್ಧ ಉತ್ತರ ಕರ್ನಾಟಕ ಹಾಳಾದರೇನು, ಬೀಳಾದರೇನು. ಇವರಲ್ಲಿ ಚಿಂತಿಸಲು ಸಮಯವಿಲ್ಲ. ಮನಸ್ಸಿಗೆ ಬಂದಂತೆ ಆಡಳಿತ ನಡೆಸುವಂತಾಗಿದೆ. ಆಡಳಿತ ನಡೆಸಲಿಕ್ಕೆಂದೆ ಸರ್ಕಾರ ನಡೆಸುವುದಾದರೆ ಇದೊಂದು ಗೊತ್ತು ಗುರಿಯಿಲ್ಲದ ಸರ್ಕಾರದಂತಾಗುತ್ತದೆ ಎಂದು ಛೇಡಿಸಿದ್ದಾರೆ.

ಆತ್ಮವಿಶ್ವಾಸದಿಂದ ಸಾಧನೆ ಸಾಧ್ಯ: ಪತ್ರಕರ್ತ ಉತ್ತಂಗಿ

ಮಹಾಲಿಂಗಪುರ: ಜಗತ್ತಿನಲ್ಲಿ ಹುಟ್ಟುವ ಪ್ರತಿ ಮಗು ವಿನಲ್ಲಿ ಆತ್ಮವಿದೆ. ಆತ್ಮದಲ್ಲಿ ಪರಮಾತ್ಮ ನಿದ್ದಾನೆ. ಆತ ಸರ್ವ ಶಕ್ತ ಹಾಗಾಗಿ ಅಸಾಧ್ಯವಾದುದು ಯಾವುದೂ ಇರುವುದಿಲ್ಲ ಎಂಬ ಸ್ವಾಮಿ ವಿವೇಕಾನಂದರ ಮಾತಿನಂತೆ ಪ್ರತಿ ಮಗುವು ಆತ್ಮವಿಶ್ವಾಸದಿಂದ ಏನು ಬೇಕಾದರೂ ಸಾಧಿಸಬಹುದು ಎಂದು ಪತ್ರಕರ್ತ ನಾರನಗೌಡ ಉತ್ತಂಗಿ ಹೇಳಿದರು.

ಸಮೀಪದ ಅಕ್ಕಿಮರಡಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಜರುಗಿದ 10ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ, ತಾಯಂದಿರ ಪಾದ ಪೂಜೆ, ದೀಪದಾನ ಸಮಾರಂಭದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಹುಟ್ಟುವಾಗ ಪ್ರತಿ ಮಗುವೂ ವಿಶ್ವಮಾನವನಾಗಿಯೇ ಹುಟ್ಟುತ್ತದೆ. ಕಾಲಕ್ರಮೇಣ ದುರ್ಬಲವಾಗುತ್ತದೆ ಶಿಕ್ಷಣ ಇದಕ್ಕೆ ಪರಿಹಾರವಾಗಬೇಕು. ಶಿಕ್ಷಣ ಹುಲಿಯ ಹಾಲಿದ್ದಂತೆ ಕುಡಿದವನು ಘರ್ಜಿಸಲೇಬೇಕು ಎಂಬ ಮಾತಿನಂತೆ ಪ್ರತಿ ಮಗುವಿನಲ್ಲಿ ಯೂ ಆದಮ್ಯ ಪೌರುಷ ತುಂಬಿ ದೇಶಕ್ಕಾಗಿ ತುಡಿಯುವ ಮಿಡಿಯುವ ಶಕ್ತಿಯಾಗಬೇಕು, ಪರೀಕ್ಷೆ ಒಂದು ಹಬ್ಬ, ಆನಂದವಾಗಿ ಆಚರಿಸಿ ಎಂದರು.



ಮುಖ್ಯೋಪಾಧ್ಯಾಯ ಎಸ್.ಎಂ. ಸುತಾರ, ಉತ್ತಮ ಫಲಿತಾಂಶದೊಂದಿಗೆ ಗುರುಗಳು, ಹೆತ್ತವರು, ಸಮಾಜದ ಋಣ ತೀರಿಸಿ ಎಂದರು. ಶಿಕ್ಷಕ ಆರ್.ಬಿ.ವಾಸನದ ಮಾತನಾಡಿದರು. 10ನೇ ತರಗತಿ ವಿದ್ಯಾರ್ಥಿಗಳು ತಮ್ಮ ತಾಯಂದಿರ ಪಾದ ಪೂಜೆ ಮಾಡಿ ಆಶೀರ್ವಾದ ಪಡೆದು ಗಮನ ಸೆಳೆದರು. ದೀಪದಹಣ ಸಮಾರಂಭ ಜರುಗಿತು.

ವಿಜಯ ಕರೆನ್ನವರ ಮತ್ತು ಸಂಜನಾ ಲೋಗಾಂವಿ ಇವರಿಗೆ ಆದರ್ಶ ವಿದ್ಯಾರ್ಥಿ ಪ್ರಶಸ್ತಿ ನೀಡಲಾಯಿತು. ವಿದ್ಯೆ ಕಲಿಸಿದ ಗುರುಗಳಿಗೆ ಕಾಣಿಕೆ ನೀಡಿ ಸನ್ಮಾನಿಸಿ ವಿದ್ಯಾರ್ಥಿಗಳು ಕೃತಾರ್ಥರಾದರು. ಗೀತಾ ಮಠದ ಮತ್ತು ಸಂಗಡಿಗರು ಪ್ರಾರ್ಥಿಸಿ ಶಿಕ್ಷಕ ಎ.ಎಂ.ರಾಠೋಡ ಸ್ವಾಗತಿಸಿದರು. ಶಿಕ್ಷಕ ವಿಕ್ರಂ ಬಸನಗೌಡರ ನಿರೂಪಿಸಿದರು. ಎಸ್‌ಡಿಎಂಸಿ ಉಪಾಧ್ಯಕ್ಷ ಕಾಡಪ್ಪ ಕೊಣ್ಣೂರ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ಎಲ್.ಎನ್. ಚನ್ನಾಪುರ, ಎಸ್.ಎಚ್.ಪುರಾಣಿಕ, ಪಿ.ಸಿ.ಪಕೀರಣ್ಣವರ, ಐ.ಎಸ್. ಬಡಿಗೇರ ಇತರರಿದ್ದರು.

ಪಾಲಕರಿಗೆ, ಹಿರಿಯರಿಗೆ ಮಕ್ಕಳು ಗೌರವ ನೀಡಲಿ: ಸುತಾರ

ಹುಲ್ಯಾಳ: ಗುರು ಹಿರಿಯರು ಹಾಗೂ ತಂದೆ–ತಾಯಿಗಳಲ್ಲಿ ಗೌರವ ಹಾಗೂ ಪೂಜ್ಯ ಭಾವನೆ ಹೊಂದಿರುವುದೇ ಉತ್ತಮ ವಿದ್ಯಾರ್ಥಿಗಳ ಲಕ್ಷಣವೆಂದು ಸಾಹಿತಿ ಗುರುನಾಥ ಸುತಾರ ಹೇಳಿದರು.

ಎಸ್‌ಎಂ ಲೋಣಿ ಕಿರಿಯ ಪ್ರಾಥಮಿಕ ಶಾಲೆ ಯೋಗಾಶ್ರಮ ಹುಲ್ಯಾಳದಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮದಲ್ಲಿ ಮಾತನಾಡಿ, ಪಾಲಕರು ಮಕ್ಕಳನ್ನು ಇನ್ನೊಬ್ಬರೊಂದಿಗೆ ಹೋಲಿಕೆ ಮಾಡದೆ ಅವರಲ್ಲಿ ಧೈರ್ಯ ಹಾಗೂ ಪ್ರೇರಣೆ ನೀಡಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿಜಯಪುರದ ಸುಷ್ಮಾ ಲೋಣಿ ಅವರು, ಮಕ್ಕಳಲ್ಲಿ ಅಪ್ರತಿಮ ಪ್ರತಿಭಾ ಶಕ್ತಿ ಹೊರತರುವುದು ಶಿಕ್ಷಕರ ಜವಾಬ್ದಾರಿ. ಮಕ್ಕಳು ಬರಿ ಅಂಕ ಗಳಿಸುವಲ್ಲಿ ಹೆಚ್ಚಿನ ಆಸಕ್ತಿ ತೋರದೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ತಿಳಿಸಿದರು.

ಡಾ.ಎ.ಆರ್.ಬೆಳಗಲಿ ಅಧ್ಯಕ್ಷತೆ ವಹಿಸಿದ್ದರು. ಈರಯ್ಯ ಮಠಪತಿ, ಶಿವಪ್ಪಾ ಸೋರಗಾಂವಿ, ನಿವೃತ್ತ ತಹಶೀಲ್ದಾರ್ ಬಿ.ಎಲ್.ಗೋಟೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯಗುರು ಆರ್.ಡಿ.ಬಡಿಗೇರ, ಶಿಕ್ಷಕಿ ವಿದ್ಯಾ ಕಾಖಂಡಕಿ, ಪಿ.ವಿ.ಗಾರವಾಡಮಠ, ವೀಣಾ ಕೋಲೂರ ಇದ್ದರು.



ಜನಪರ ಬಜೆಟ್: ಬೈರಕದಾರ



ಲೋಕಾಪುರ: ರಾಜ್ಯದ ಸರ್ವರ ಪಾಲಿನ ಕಲ್ಯಾಣದ ಹಾಗೂ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ದೃಷ್ಟಿಕೋನದಲ್ಲಿ ಸಿಎಂ ಸಿದ್ದರಾಮಯ್ಯನವರು ಐತಿಹಾಸಿಕ ಬಜೆಟ್ ನಿರ್ಮಿಸಿದ್ದಾರೆ. ರೈತರ ಕಲ್ಯಾಣ, ಕೈಗಾರಿಕಾ ಪ್ರಗತಿ, ಪ್ರವಾಸೋದ್ಯಮ, ನೀರಾವರಿ, ತೋಟಗಾರಿಕೆ, ಹೈನುಗಾರಿಕೆ, ಪ್ರಾಥಮಿಕ ಹಾಗೂ ಉನ್ನತ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಬಜೆಟ್ ಸಾಕಷ್ಟು ಅನುದಾನ ನೀಡಿ, ಹಿಂದುಳಿದ, ದೀನ ದಲಿತರ ಜನಪರ ಬಜೆಟ್ ಆಗಿದೆ ಎಂದು ಬಾಗಲಕೋಟೆ ಜಿಲ್ಲಾ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಉಪಾಧ್ಯಕ್ಷ ರಫೀಕ್ ಬೈರಕದಾರ ಎಂದು ಹೇಳಿದರು.

ಬಜೆಟ್‌ನಲ್ಲಿ ರೈತರ ಬಗ್ಗೆ ಕಾಳಜಿ ಇಲ್ಲ



ಲೋಕಾಪುರ: ಬಜೆಟ್‌ನಲ್ಲಿ ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಅತಿ ಹೆಚ್ಚು ಈರುಳ್ಳಿ ಬೆಳೆಯುವ ಜಿಲ್ಲೆಗಳಿವೆ. ಈರುಳ್ಳಿ ಸಾಮೂಹಿಕ ಸಂಗ್ರಹಣ ಘಟಕಗಳ ಬಗ್ಗೆ ಬಜೆಟ್‌ನಲ್ಲಿ ಮತ್ತು ಈರುಳ್ಳಿ ಬೀಜವನ್ನು ರೈತ ಸಂಪರ್ಕ ಕೇಂದ್ರದಲ್ಲಿ ಸಬ್ಸಿಡಿ ದರದಲ್ಲಿ ಬಜೆಟ್ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ರೈತರ ಬಗ್ಗೆ ಎಳ್ಳಷ್ಟು ಕಾಳಜಿ ಇಲ್ಲ. ಈ ಬಜೆಟ್ ಆಸಾದಾಯಕವಾಗಿದೆ ಎಂದು ಕರ್ನಾಟಕ ರಾಜ್ಯ ಈರುಳ್ಳಿ ಬೆಳೆಗಾರರ ಸಂಘದ ಬಾಗಲಕೋಟೆ ಜಿಲ್ಲಾಧ್ಯಕ್ಷ ಲೋಕಣ್ಣಾ ಉಳ್ಳಾಗಡ್ಡಿ ಎಂದರು.

ಭರವಸೆ ಹುಸಿಗೊಳಿಸಿದ ಬಜೆಟ್



ಬೀಳಗಿ: ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾಗುವ ಜಮೀನು ಭೂಸ್ವಾಧೀನಕ್ಕೆ ಸರ್ಕಾರ 2026–27ನೇ ಸಾಲಿನ ಬಜೆಟ್‌ನಲ್ಲಿ ರೂ. 18 ಸಾವಿರ ಕೋಟಿ ಒದಗಿಸುವುದಾಗಿ ಭರವಸೆ ನೀಡಿತ್ತು. ಹಣ ಮೀಸಲಿಡದೆ ಭರವಸೆ ಹುಸಿಗೊಳಿಸಿದೆ. ಕಳೆದ 13 ವರ್ಷಗಳಿಂದ ಭೂಸ್ವಾಧೀನ ಪ್ರಕ್ರಿಯೆ ಚಾಲ್ತಿಯಲ್ಲಿರುವುದರಿಂದ ಸಂತ್ರಸ್ತರ ಅತಂತ್ರ ಸ್ಥಿತಿ ಮುಂದುವರೆದು ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಆಗುವುದಿಲ್ಲ. ಆದ್ದರಿಂದ ಅವಳಿ ಜಿಲ್ಲೆಯ ಸಚಿವರು, ಶಾಸಕರು ಭರವಸೆ ನೀಡಿದ ಸರ್ಕಾರಕ್ಕೆ ಪ್ರಶ್ನಿಸಬೇಕು ಎಂದು ಬಾಗಲಕೋಟೆ, ವಿಜಯಪುರ ಅವಳಿ ಜಿಲ್ಲಾ ಮುಳುಗಡೆ ಹಿತರಕ್ಷಣಾ ಸಮಿತಿ ಪ್ರಧಾನ ಕಾರ್ಯದರ್ಶಿ ಪ್ರಕಾಶ ಅಂತರಗೊಂಡ ಆಗ್ರಹಿಸಿದರು.

ಮಹಿಳೆಯರ ಪರ ಬಜೆಟ್



ಬಾದಾಮಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್ ಮಹಿಳೆಯರ ಪರ ಅನೇಕ ಘೋಷಣೆ ಮಾಡಿದ್ದಾರೆ. ಮಹಿಳೆಯರಿಗೆ ಸೀರೆ ಕೊಡುವುದು. ಶ್ರಮಿಕರ ವಸತಿ ನಿಲಯ ಸ್ಥಾಪನೆ, ನೀರಾವರಿ ಯೋಜನೆ, ಯುಕೆಪಿ ಯೋಜನೆ ಅನುಷ್ಠಾನ, ಶಿಕ್ಷಣ, ಆರೋಗ್ಯ, ಉದ್ಯೋಗ ಸೃಷ್ಟಿ ಸೇರಿದಂತೆ ಎಲ್ಲ ವರ್ಗದವರಿಗೆ ಆದ್ಯತೆ ನೀಡಿದ್ದಾರೆ ಎಂದು ಕಾಂಗ್ರೆಸ್ ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ಶೈಲಾ ಚಟ್ಟರಕಿ ತಿಳಿಸಿದ್ದಾರೆ.

ಜನವಿರೋಧಿ ಬಜೆಟ್



ಬಾದಾಮಿ: ರಾಜ್ಯ ಸರ್ಕಾರದ ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿರುವ ರಾಜ್ಯ ಬಜೆಟ್ 2026?27 ಜನವಿರೋಧಿಯಾಗಿದೆ. ಗ್ಯಾರಂಟಿ ಯೋಜನೆಯ ಹೆಸರು ಹೇಳಿ ಸಾಲ ಪ್ರಮಾಣ ಹೆಚ್ಚಳ ಮಾಡಿದ್ದಾರೆ. ಪ್ರತಿ ಕನ್ನಡಿಗನ ಮೇಲೆ ಒಂದು ಲಕ್ಷಕ್ಕೂ ಹೆಚ್ಚು ಸಾಲ ಬರಲಿದೆ. ಇದೊಂದು ಜನವಿರೋಧಿ ಬಜೆಟ್ ಇದಾಗಿದೆ ಎಂದು ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ತಿಳಿಸಿದರು.

ಬಜೆಟ್‌ನಲ್ಲಿ ಬರೀ ಸುಳ್ಳು



ಬಾದಾಮಿ: ಮತಕ್ಷೇತ್ರಕ್ಕೆ ಬಜೆಟ್‌ನಲ್ಲಿ ಚಂಬು ಕೊಟ್ಟಿದ್ದಾರೆ. 2026–27ನೇ ಸಾಲಿನ ರಾಜ್ಯ ಸರ್ಕಾರದ ಬಜೆಟ್ ಶ್ರಮಿಕ ವರ್ಗದ ಕನಿಷ್ಠ ವೇತನ ಮತ್ತು ಉದ್ಯೋಗ ಭದ್ರತೆ ಇಲ್ಲ. ಸಾಲದ ಹೊರೆ ಹೆಚ್ಚಳ. 2.5 ಲಕ್ಷ ಹುದ್ದೆಗಳು ಖಾಲಿಯಿದ್ದು, ಪದವೀಧರರು ಬೀದಿಯಲ್ಲಿದ್ದಾರೆ. ಸರ್ಕಾರಿ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಭರ್ತಿ ಮಾಡದೆ ಕೇವಲ ಸುಳ್ಳು ಹೇಳಿದ್ದರಿ ಎಂದು ಬಿಜೆಪಿ ಮುಖಂಡ ಮಲ್ಲಯ್ಯ ಆರ್. ಮುಪ್ಪಿನನ್ನವರ ಹೇಳಿದ್ದಾರೆ.

4.54 ಲಕ್ಷ ರೂ. ಸಹಕಾರ ಶಿಕ್ಷಣ ನಿಧಿ ವಿತರಣೆ



ಕಮತಗಿ: ಹೊಳೆ ಹುಚ್ಚೇಶ್ವರ ಪತ್ತಿನ ಸಹಕಾರ ಸಂಘ ನಿ.ಅಧ್ಯಕ್ಷ ಮುರಗೇಶ ಐ. ಕಡ್ಲಿಮಟ್ಟಿ 2024–25ನೇ ಸಾಲಿನ ಸಹಕಾರ ಶಿಕ್ಷಣ ನಿಧಿ ರೂ.4,54,163 ರೂ.ಗಳ ಚೆಕ್‌ನ್ನು ಸಹಕಾರ ಯೂನಿಯನ್ ಸಿಇಓ ಅನ್ನಪೂರ್ಣ ಅವರಿಗೆ ನೀಡಿದರು. ಸಂಘದ ನಿರ್ದೇಶಕರಾದ ಕಮಲಪ್ಪ ಸಿ ಕಡ್ಲಿಮಟ್ಟಿ, ರಮೇಶ ಎಸ್.ಜಮಖಂಡಿ, ಮಹಾಂತೇಶ ಎಸ್.ಕಡ್ಲಿಮಟ್ಟಿ, ಗಣೇಶ ಆರ್ ಕ್ಯಾದಿಗ್ಗೇರಿ, ಆಡಳಿತ ಸಲಹೆಗಾರರಾದ ಪಂಪಣ್ಣ ಎಸ್ ಪರಗಿ ಹಾಗೂ ಪ್ರಧಾನ ವ್ಯವಸ್ಥಾಪಕ ಶಿವಶಂಕರ ಬಿ.ಮಾಶೆಟ್ಟಿ, ಉಪ ಪ್ರಧಾನ ವ್ಯವಸ್ಥಾಪಕ ಸದಾಶಿವ ಎಸ್.ಕಡ್ಲಿಮಟ್ಟಿ, ತಾಂತ್ರಿಕ ವಿಭಾಗದ ಮುಖ್ಯಸ್ಥ ಅಯ್ಯನಗೌಡ ಕೆ ಪಾಟೀಲ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕಿರುಸುದ್ದಿ

ಇಂದು ರಂಗಪಂಚಮಿ

ಬಸವನಬಾಗೇವಾಡಿ: ಬಣ್ಣದಲ್ಲಿ ರಾಸಾಯನಿಕ ಇಲ್ಲದೇ ಇರುವ ಬಣ್ಣವನ್ನು ಮಾ.8ರಂದು ನಡೆಯುವ ರಂಗಪಂಚಮಿಗೆ ತರಿಸಿಕೊಳ್ಳಲಾಗುತ್ತದೆ ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಇದೇ ಬಣ್ಣ ಉಪಯೋಗಿಸಿ ಶ್ರೀಮಂತ, ಬಡವ, ಜಾತಿ-ಭೇದ ಮಾಡದೇ ಒಗ್ಗಟ್ಟಿನಿಂದ ಬಣ್ಣದಾಟ ಆಡಿದಲ್ಲಿ ಅಭೂತಪೂರ್ವವಾಗಿ ಊರಿನ ಹೆಸರು ಬರುತ್ತದೆ ಎಂದು ಬಸವ ಸೇವಾ ಸಮಿತಿ ಅಧ್ಯಕ್ಷ ಈರಣ್ಣ ಪಟ್ಟಣಶೆಟ್ಟಿ ಹೇಳಿದರು. ಪಟ್ಟಣದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಗುರುವಾರ ಸಂಜೆ ರಂಗಪಂಚಮಿ ನಿಮಿತ್ತ ಊರಿನ ಎಲ್ಲ ಸಮಾಜದ ಮುಖಂಡರ ಸಮ್ಮುಖದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ಗುರು-ಹಿರಿಯರ ಆಶೀರ್ವಾದದಿಂದ ಬಂದಿರುವ ರಂಗಪಂಚಮಿ ಬಹುದಿನಗಳಿಂದ ನಡೆಯುತ್ತಿದೆ ಬಿದ್ದಿದ್ದು ಗುರು-ಹಿರಿಯರ ಆಶಯದಂತೆ ಎಲ್ಲರೂ ಕೂಡಿ ಆಚರಿಸೋಣ ಎಂದು ಹೇಳಿದರು. ಎಂ.ಜೆ.ಆದಿಗೊಂಡ, ವಿನೋದ ಕಲ್ಲೂರ, ರವಿ ರಾಠೋಡ, ಪರಶುರಾಮ ಜಮಖಂಡಿ, ಡಾ.ಬಸವರಾಜ ಚವ್ಹಾಣ, ಡಾ.ಕರುಣಾಕರ ಚೌಧರಿ, ಜಗದೀಶ ಕೊಟ್ರಶೆಟ್ಟಿ, ಜಗದೇವಿ ಗುಂಡಳ್ಳಿ, ಶಬ್ಬೀರ ಮೇಸ್ತ್ರಿ ಮಾತನಾಡಿದರು. ಸಂಗಣ್ಣ ಕಲ್ಲೂರ, ಬಸವರಾಜ ಹಾರಿವಾಳ, ಶಿವಪುತ್ರ ಕೆಂಭಾವಿ, ಬಸವರಾಜ ಗೊಳಸಂಗಿ, ಬಾಲಚಂದ್ರ ಮುಂಜಾನೆ, ಶೇಖರಗೌಡ ಪಾಟೀಲ, ಗೋಪಾಲ ಅಗರವಾಲ, ಸುರೇಶಗೌಡ ಪಾಟೀಲ, ಶೇಖರ ಗೊಳಸಂಗಿ, ಸಂಕನಗೌಡ ಪಾಟೀಲ, ಸಂಗಮೇಶ ಕಾಳಹಸ್ತೇಶ್ವರಮಠ, ಸಂಗಮೇಶ ಓಲೇಕಾರ, ಡಾ.ಬಸವರಾಜ ಕೋಟಿ, ಉಮೇಶ ಹಾರಿವಾಳ, ಹಣಮಂತ ಕಾಮನಕೇರಿ, ನಾಮದೇವ ಸೂರ್ಯವಂಶಿ, ಮಹಾಂತೇಶ ಹಡಪದ, ರವಿ ಗೊಲ್ಲರ, ಮಹಾದೇವಿ ಬಿರಾದಾರ ಸೇರಿದಂತೆ ಇತರರು ಇದ್ದರು.

ವಾಕಥಾನ್ ಇಂದು

ಮುದ್ದೇಬಿಹಾಳ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ತಾಲೂಕು ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಮಹಿಳಾ ಸದಸ್ಯರು ಮಾ.8ರಂದು ಬಾನುವಾರ ಬೆಳಗ್ಗೆ 6 ಗಂಟೆಗೆ ಹುಡುಕೋ ಬಡಾವಣೆಯ ಮುಖ್ಯದ್ವಾರದ ಚನ್ನಮ್ಮ ವೃತ್ತದಿಂದ ಪ್ರಾರ್ಥನಾ ಶಾಲೆಯವರೆಗೆ ಆರೋಗ್ಯ ಮತ್ತು ನೈರ್ಮಲ್ಯಕ್ಕಾಗಿ ಮಹಿಳೆಯರಲ್ಲಿ ಅರಿವು ಮೂಡಿಸಲು ನಡಿಗೆಯ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ನಾಳೆ ಶಿಶುಕ್ಷು ಮೇಳ


ವಿಜಯಪುರ: ನಗರದ ಲೊಯಿಲಾ ಐಟಿಐ ಆವರಣದಲ್ಲಿ ಪ್ರಧಾನ ಮಂತ್ರಿ ರಾಷ್ಟ್ರೀಯ ಶಿಶುಕ್ಷು ಮೇಳವನ್ನು ಮಾ.9ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಆಯೋಜಿಸಲಾಗಿದೆ. ಐಟಿಐ ಪಾಸಾದ ಅಭ್ಯರ್ಥಿಗಳು ಹಾಗೂ 2026ನೇ ಸಾಲಿನಲ್ಲಿ 2ನೇ ವರ್ಷದಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು ಮತ್ತು ಉದ್ದಿಮೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮೇಳದ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ. ಆಸಕ್ತ ಅಭ್ಯರ್ಥಿಗಳು ನಾಲ್ಕು ಪ್ರತಿಗಳ ರೆಸ್ಯೂಮ್, ಬಯೋಡೇಟಾ, ವಿದ್ಯಾರ್ಹತೆಯ ಎಲ್ಲಾ ದಾಖಲೆಗಳು ಹಾಗೂ ಪಾಸ್‌ಪೋರ್ಟ್ ಸೈಜ್ ಫೋಟೋಗಳೊಂದಿಗೆ ಮೇಳಕ್ಕೆ ಹಾಜರಾಗುವಂತೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ (ಮೊ. 984479370, 9900627197) ಅನ್ನು ಸಂಪರ್ಕಿಸಬಹುದಾಗಿದೆ ಅಥವಾ ಹತ್ತಿರದ ಯಾವುದೇ ಸರ್ಕಾರಿ, ಅನುದಾನಿತ, ಖಾಸಗಿ ಐಟಿಐಗಳನ್ನು ಸಂಪರ್ಕಿಸಬಹುದು ಎಂದು ಸದಾಶಿವ ಹಿಟ್ನಳ್ಳಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬಬಲೇಶ್ವರ ತಿಳಿಸಿದ್ದಾರೆ.

ಭೀಮಗಾಯನ ನಾಳೆ

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಶ್ರಯದಲ್ಲಿ ಮಾ.9ರಂದು ಸಂಜೆ 4 ಗಂಟೆಗೆ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಭೀಮ ಗಾಯನ ಕಾರ್ಯಕ್ರಮ ನಡೆಯಲಿದೆ. ಸಿದ್ಧಾರ್ಥ ಯುವ ಕ್ರೀಡಾ ಸಾಂಸ್ಕೃತಿಕ ಅಭಿವೃದ್ಧಿ ಸಂಘವು ಭೀಮ ಗಾಯನವನ್ನು ಪ್ರಸ್ತುತಪಡಿಸಲಿದ್ದು, ಅಂಬೇಡ್ಕರ್ ಗೀತೆಗಳ ಈ ಮಹೋತ್ಸವಕ್ಕೆ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಕಟಣೆ ತಿಳಿಸಿದೆ.

ಸಮಷ್ಠಿ ಭಾವವಿಲ್ಲದ ಬಜೆಟ್

ಮುದ್ದೇಬಿಹಾಳ: ರಾಜ್ಯ ಸರ್ಕಾರದ 2026-27ನೇ ಸಾಲಿನ ಮುಂಗಡಪತ್ರ ಗಾತ್ರವನ್ನು ಅಂಕಿ ಸಂಖ್ಯೆಯಲ್ಲಿ ಹೆಚ್ಚಿಸಿರುವುದು ಬಿಟ್ಟರೆ ಸಮಾಜದ ಎಲ್ಲಾ ರಂಗಗಳ ಸರ್ವಾಂಗೀಣ ಅಭಿವೃದ್ಧಿ ಕಡೆ ಸೂಕ್ತ ಗಮನಹರಿಸಿಲ್ಲ. ಅನುದಾನ ರಹಿತ ಶಾಲೆಗಳ ಸಮಸ್ಯೆಗೆ ಪರಿಹಾರ ಕೊಡುವದನ್ನು ಮರೆತಂತಿದೆ ಎಂದು ವಿದ್ಯಾ ಭಾರತಿ ಶಾಲೆಗಳ ಜಿಲ್ಲಾ ಅಧ್ಯಕ್ಷ ಪ್ರಭು ಎಸ್.ಕಡಿ ಹೇಳಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಬಹಳಷ್ಟು ಖಾಸಗಿ ಶಾಲೆಗಳು ನಿರ್ವಹಣೆಯ ಆರ್ಥಿಕ ಅಡಚಣೆಯ ಸಮಸ್ಯೆಗಳನ್ನು ಎದುರಿಸುತ್ತಿವೆ. ಅನುದಾನ ನೀಡಿಕೆ ಹಾಗೂ ಮೂಲಭೂತ ಸೌಕರ್ಯ ವಿಸ್ತರಣೆ ಕುರಿತು ಅವುಗಳ ಅನಿಸಿಕೆಯನ್ನು ಪಡೆದು, ಅನುದಾನವನ್ನು ನೀಡದೆ ಸರಕಾರ ನಿರ್ಲಕ್ಷವನ್ನು ಮಾಡುತ್ತಿದೆ. ಸರ್ಕಾರ ಖಾಸಗಿ ಶಾಲೆಗಳ ಮಹತ್ವವನ್ನು ಪರಿಗಣಿಸದೆ ಇರುವುದು ಖೇದಕರ ಎಂದರು.



ಮುದ್ದೇಬಿಹಾಳ: ಶಾಹ ಸೋಘಮಲ್ ಪಿರಾಜಿ ಓಸ್ವಾಲ್ ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು. ನ್ಯಾಯವಾದಿ ಜಯಾ ಸಾಲಿಮಠ, ರವಿ ನಾಲತವಾಡ, ಪ್ರಾಂಶುಪಾಲರಾದ ಡಾ.ಎಚ್.ಎ.ಕಟಗೂರ, ವಾಣಿಜ್ಯ ವಿಭಾಗದ ಮುಖ್ಯಸ್ಥೆ ಪ್ರೊ.ಧನಶ್ರೀ, ಪ್ರೊ.ಹಂಪಣ್ಣವರ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಓದಿನೆಡೆಗೆ ಗಮನಹರಿಸಲಿ

ಸಿಂದಗಿ: ವಿದ್ಯಾರ್ಥಿಗಳಲ್ಲಿ ಕರ, ಉರ, ಶಿರ ಶುದ್ಧವಾಗಬೇಕು. ಸಮಾಜ ನಮಗೆ ಏನು ನೀಡಿದೆ ಎನ್ನುವುದರ ಬದಲು ಸಮಾಜಕ್ಕಾಗಿ ನಾವು ಏನು ಕೊಡುಗೆ ನೀಡಬೇಕಿದ ಎಂಬುದರ ಬಗ್ಗೆ ಅವಲೋಕಿಸಬೇಕು ಎಂದು ಆಲಮೇಲ ವಿರಕ್ತಮಠದ ಜಗದೇವ ಮಲ್ಲಬೊಮ್ಮಯ್ಯ ಶ್ರೀಗಳು ಹೇಳಿದರು. ನಗರದ ರಾಂಪುರ ರಸ್ತೆಯಲ್ಲಿರುವ ಪ್ರೇರಣಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ 10ನೆಯ ತರಗತಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಶುಭಕೋರುವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಎಸೆಸ್ಸೆಲ್ಸಿ ಪರೀಕ್ಷೆಗಳು ಬಂದು ಎಲ್ಲ ಮಕ್ಕಳ ಮೊಬೈಲ್ ಬಿಟ್ಟು ಪುಸ್ತಕ ಹಿಡಿಯಬೇಕು. ಓದಿನೆಡೆಗೆ ಹೆಚ್ಚಿನ ಗಮನ ಹರಿಸಬೇಕು ಎಂದರು. ವಿಜಯಪುರ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಕಾರಿ ಡಾ.ಬಿ.ಜಿ.ಸಜ್ಜನ, ವಿಜಯಪುರದ ಅಂಜುಮನ್ ಬಾಲಕಿಯರ ಪಪೂ ಕಾಲೇಜಿನ ಪ್ರಾಚಾರ್ಯ ಎಂ.ಎ.ಜುಮನಾಳ ಎಂ.ಸಿ.ಸಿಂದಗಿ ಮಾತನಾಡಿ, ವಿದ್ಯಾರ್ಥಿಗಳು ಕಲಿಸಿದ ಗುರು, ಪಾಲನೆ ಮಾಡಿದ ತಂದೆ-ತಾಯಿ ಧರ್ಮ ಗುರುಗಳನ್ನು ಜೀವನದಲ್ಲಿ ಮರೆಯಬಾರದು. ಮಕ್ಕಳು ಪರೀಕ್ಷೆ ಎದುರಿಸಲು ಸ್ಮಾರ್ಟ್ ಯೋಜನೆ ಅಗತ್ಯ. ವಿದ್ಯಾರ್ಥಿಗಳು ಶ್ರಮ ವಹಿಸಿ ವಿದ್ಯಾರ್ಜನೆ ಮಾಡಿ ಬದುಕಿನಲ್ಲಿ ಯಶಸ್ಸುಗಳಿಸಬೇಕೆಂದರು. ಸಿಂದಗಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಹಾಗೂ ಎಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.



ಸಿಂದಗಿ: ನಗರದ ರಾಂಪುರ ರಸ್ತೆಯಲ್ಲಿರುವ ಪ್ರೇರಣಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ 10ನೆಯ ತರಗತಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಶುಭಕೋರುವ ಸಮಾರಂಭ ನಡೆಯಿತು. ಸಂಸ್ಥೆಯ ಅಧ್ಯಕ್ಷ ಆರ್.ಡಿ.ಕುಲಕರ್ಣಿ, ಶಕುಂತಲಾ ಹಿರೇಮಠ ಮಾತನಾಡಿದರು. ಮುಖ್ಯಗುರುಮಾತೆ ಎಸ್.ಐ.ಅಸ್ಕಿ ಸಂಗಮೇಶ ಮಠಪತಿ, ನಂದಕುಮಾರ ಹೊಳ್ಳ, ದ್ರಾಕ್ಷಾಯಿಣಿ ಹುಗ್ಗಿ, ಶ್ರೀನಿವಾಸ ಪಾಟೀಲ ಸೇರಿದಂತೆ ಸಂಸ್ಥೆಯ ನಿರ್ದೇಶಕ ಮಂಡಳಿ, ಬೋಧಕ-ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪಾಲಕರು ಇದ್ದರು.

ವಸತಿ ನಿಲಯಗಳಲ್ಲಿ ವಾಸ್ತವ್ಯ, ವಿವಿಧ ವಿನೂತನ ಕಾರ್ಯಕ್ರಮ ಸಮಾರೋಪ

ಮನೆ ವಾತಾವರಣ ನಿರ್ಮಾಣ: ಡಿಸಿ

ವಿಜಯಪುರ: ವಸತಿ ನಿಲಯಗಳು ಮಕ್ಕಳ ಭವಿಷ್ಯ ರೂಪಿಸುವ ಕಲಿಕಾ ಕೇಂದ್ರಗಳಾಗಿದ್ದು, ಈ ಕೇಂದ್ರಗಳಲ್ಲಿ ಮಕ್ಕಳ ಓದಿಗೆ ಪೂರಕವಾಗಿ ಅವರ ಉತ್ತಮ ವ್ಯಕ್ತಿತ್ವ ರೂಪಿಸಲು ಮನೆಯ ವಾತಾವರಣ ನಿರ್ಮಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಹೇಳಿದರು.

ನಗರದ ಫರ್ಲ್ ಹೋಟೇಲ್ ಹಿಂಭಾಗದ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯದ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಆಶ್ರಯದಲ್ಲಿ ಹಮ್ಮಿಕೊಂಡ 2025-26ನೇ ಸಾಲಿನ ವಸತಿ ನಿಲಯ ವಾಸ್ತವ್ಯ ಹಾಗೂ ವಿವಿಧ ವಿನೂತನ ಕಾರ್ಯಕ್ರಮಗಳ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಅಲ್ಲಿ ಬೇಕಾಗಿರುವ ಪಾಠೋಪಕರಣ, ಕಲಿಕಾ ಸಾಮಗ್ರಿ, ಮನೋಬಲ ಹೆಚ್ಚಿಸುವ ಮಾನಸಿಕ ದೃಢತೆ ಹೊಂದಲು ಒತ್ತಡ ನಿರ್ವಹಣಾ ಕುಶಲಗಳಾಗಿಯೂ, ಆಯಾ ವಸತಿ ನಿಲಯದ ಮಕ್ಕಳ ಆರೋಗ್ಯದ ಕಡೆಗೆ ಗಮನ ನೀಡುತ್ತಿದ್ದು ವೈದ್ಯಕೀಯ ಚಿಕಿತ್ಸೆ ಹಾಗೂ ಅಗತ್ಯ ಔಷಧೋಪಚಾರ ಒದಗಿಸಿಕೊಟ್ಟು ಮಕ್ಕಳಲ್ಲಿ ನಮ್ಮೊಂದಿಗಿದ್ದಾರೆ ಎಂಬ ಮನೋಭಾವ ಹೊಂದುವ ಜೊತೆಗೆ ಮನೆಯಿಂದ ದೂರ ಇರುವ ಭಾವನೆ ತಾಳದೇ ಎಲ್ಲರೊಂದಿಗೂ ಬೆರೆಯುವ ಸದಾವಕಾಶ ಹಾಸ್ಟೆಲ್ ಮೆಂಟರ್ಸ್ ಅವರು ಸ್ವಯಂ ಪ್ರೇರಿತರಾಗಿ ನಿರ್ವಹಿಸುತ್ತಿದ್ದಾರೆ ಎಂದರು. ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುವ, ಜೀವನದಲ್ಲಿ ಹಿಂಜರಿಯುವ ಪ್ರಮೇಯವೇ ಉದ್ಭವಿಸುವುದಿಲ್ಲ, ಹಾಸ್ಟೆಲ್ ಮೆಂಟರ್ಸ್ ಅವರು ಸ್ವಯಂ ಪ್ರೇರಿತರಾಗಿ ಕಾರ್ಯ ನಿರ್ವಹಿಸಿ, ಮಕ್ಕಳ ಸುಂದರ ಕನಸಿಗೆ ಎಳೆವೆಯಲ್ಲಿ ಬಲ ತುಂಬುತ್ತಿದ್ದಾರೆ ಎಂದರು.



> ಈಗಾಗಲೇ ಜಿಲ್ಲಾಮಟ್ಟದ ಅಧಿಕಾರಿಗಳನ್ನು ಹಾಸ್ಟೆಲ್ ಮೆಂಟರ್‌ಗಳಾಗಿ ನೇಮಿಸಲಾಗಿದೆ. ಬಿಡುವು ಮಾಡಿಕೊಂಡು ನಿಯೋಜಿಸಿದ ವಸತಿ ನಿಲಯಗಳಿಗೆ ಆಗಾಗ ತೆರಳಿ, ಮಕ್ಕಳೊಂದಿಗೆ ಬೆರೆತು ಅವರ ಕಲಿಕೆ ಮನೋಸ್ಥೈರ್ಯ ಬೆಳೆಸುವುದರ ಜೊತೆಗೆ ನಿಲಯ ಪಾಲಕರ ಜೊತೆಗೂಡಿ ಹಾಸ್ಟೆಲ್ ಸುಧಾರಣೆ ಮಾಡುತ್ತಿದ್ದಾರೆ.
> ■ ಡಾ.ಆನಂದ ಕೆ. ಜಿಲ್ಲಾಧಿಕಾರಿ

ವಸತಿ ನಿಲಯಗಳಲ್ಲಿ ಮಕ್ಕಳ ಕಲಿಕೆಯ ಬಗ್ಗೆ ಆದ್ಯತೆ, ಜೀವನದ ಸಾರ ಅರ್ಥೈಸಿಕೊಳ್ಳಲಿಕ್ಕೆ ಶಿಕ್ಷಣ ಬಹುಮುಖ್ಯವಾಗಿದೆ. ಮಕ್ಕಳು ಪ್ರಶ್ನೆ ಕೇಳುವ ಮನೋಭಾವ ಹೊಂದಬೇಕು. ಓದಿದ್ದನ್ನು ಸಹಪಾಠಿಗಳೊಂದಿಗೆ ಪರಸ್ಪರ ಚರ್ಚಿಸಬೇಕು. ಆರೋಗ್ಯಕರ ಚರ್ಚೆ ಕಲಿಕೆಗೆ ಪೂರಕವಾಗಿ ಮಾತ್ರವಲ್ಲದೇ ಅದು ಶಾಶ್ವತ ನೆನಪಿಟ್ಟುಕೊಳ್ಳಲು ಸಹಕಾರಿಯಾಗಿದೆ. ಗುಂಪು ಚರ್ಚೆಯಿಂದ ಚರ್ಚಿಸುವ ವಿಷಯ ದೀರ್ಘಾವಧಿ ನೆನಪಿನಲ್ಲಿ ಉಳಿಯುತ್ತದೆ ಎಂದರು.

ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿಜೇತರಿಗೆ ಇದೇ ವೇಳೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಹೇಶ ಪೋತದಾರ ಮಾತನಾಡಿ, ಜಿಲ್ಲಾ ಮಟ್ಟ, ವಿಭಾಗ ಹಾಗೂ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಿಗೆ ಅಭಿನಂದಿಸಿದರು.

ಸಿಂದಗಿ ತಾಲೂಕಿನ ಸಹಾಯಕ ನಿರ್ದೇಶಕಿ ಭವಾನಿ ಪಾಟೀಲ, ಬಸವನಬಾಗೇವಾಡಿ ತಾಲೂಕಿನ ಸಹಾಯಕ ನಿರ್ದೇಶಕಿ ಮಂಜುಳಾ ಹಿರೇಮನಿ, ಸಹಾಯಕ ನಿರ್ದೇಶಕ ಉಮೇಶ ಲಮಾಣಿ, ನಿರಾಶ್ರೀತರ ಪರಿಹಾರ ಕೇಂದ್ರದ ಪದ್ಮಜಾ ಪಾಟೀಲ, ಟಿ.ಬಿ. ಮಂಟೂರ, ಅರವಿಂದ ಲಂಬು, ಕೆ.ಬಿ. ಕೋರೆ, ಲೆಕ್ಕ ಅಧೀಕ್ಷಕ ಎಂ.ಟಿ.ಬಿರಾದಾರ, ಸತೀಶ ಸಜ್ಜನ, ಸದಾನಂದ ಬಡಿಗೇರ ಇದ್ದರು.

12ನೇ ದಿನಕ್ಕೆ ಮುಂದುವರಿದ ಧರಣಿ

ತಾಳಿಕೋಟೆ: ತಾಲೂಕಿನ ಮೇಲೆಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳ ವಿರೋಧಿಸಿ, ತಾಳಿಕೋಟೆ ಪಟ್ಟಣದಲ್ಲಿಯೇ ಪ್ರಜಾಸೌಧ ಕಟ್ಟಡ ನಿರ್ಮಿಸುವಂತೆ ಒತ್ತಾಯಿಸಿ ತಾಳಿಕೋಟೆ ತಾಲ್ಲೂಕು ಹೋರಾಟ ಸಮಿತಿ ವತಿಯಿಂದ ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಸುತ್ತಿರುವ ಅನಿರ್ದಿಷ್ಟಅವಧಿ ಧರಣಿ ಸತ್ಯಾಗ್ರಹವು ಶನಿವಾರ 11ನೇ ದಿನದ ಸತ್ಯಾಗ್ರಹಕ್ಕೆ ವೈದ್ಯರ ಸಂಘ ತಾಳಿಕೋಟೆ, ಔಷಧ ವ್ಯಾಪಾರಸ್ತರ ಸಂಘ, ಲ್ಯಾಬ್ ಟೇಕ್ನಿಶಿಯನ್ ತಾಳಿಕೋಟಿ ಹಾಗೂ ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳ ವತಿಯಿಂದ ಬೆಂಬಲ ನೀಡಿದರು.

ವೈದ್ಯರಸಂಘದಅಧ್ಯಕ್ಷಡಾ.ನಾಲಬಂದ ಮಾತನಾಡಿ, ಈಗಾಗಲೇ ಪ್ರಜಾಸೌಧಕ್ಕೆ ನಿಗದಿ ಪಡಿಸಿರುವ ಸ್ಥಳ ತಾಳಿಕೋಟೆ ಪಟ್ಟಣದಿಂದ ಐದು ಕೀಮೀ ದೂರವಿದ್ದು ಕಾರಣ ವೃದ್ದರಿಗೆ, ಮಹಿಳಿಯರಿಗೆ, ವಿದ್ಯಾರ್ಥಿಗಳಿಗೆ, ಅಂಗವಿಕಲರಿಗೆ, ರೈತಾಪಿ ಜನರಿಗೆ ತುಂಬಾ ಈ ಸ್ಥಳ ಅನಾನುಕೂಲ ವಾಗಿರುವುದರಿಂದ ಪಟ್ಟಣದಲ್ಲಿಯೇ ಪ್ರಜಾಸೌಧ ನಿರ್ಮಾಣ ಮಾಡಬೇಕು ಹಾಗೂ ಈಗ ನಿಗದಿ ಪಡಿಸಿರುವ ಸ್ಥಳ ಕೂಡಲೇ ರದ್ದು ಪಡಿಸಬೇಕು ಎಂದು ಆಗ್ರಹಿಸಿದರು.

ಡಾ.ಪ್ರಭುಗೌಡ ಮಾತನಾಡಿದರು. ಡಾ.ವಿಜಯಕುಮಾರ್ ಕಾರ್ಚಿ, ಡಾ.ಆನಂದ ಭಟ್, ಡಾ.ವಿಜಯಕುಮಾರ ಅಮಲ್ಯಾಳ, ಡಾ.ನಾಗುರ, ಡಾ.ಗಿರೀಶ ಯಾದವಾಡ, ಔಷದ ವ್ಯಾಪಾರಸ್ಥರಸಂಘದ ವಾಸುದೇವ ಹೆಬಸೂರ, ರಾಮನಗೌಡ ಬಾಗೇವಾಡಿ ಪ್ರವೀಣ್ ಪಾಟೀಲ, ಕಾಂತು ಸಜ್ಜನ, ಸಂತೋಷ ಪ್ರಥಮ್ ಶೆಟ್ಟಿ, ಶಿವಲಿಂಗ ಸಾಳಂಕಿ, ಕುಮಾರ ಸುರಪುರ, ಶಾಂತಗೌಡ ಪಾಟೀಲ ಹೊಸಳ್ಳಿ, ಶಂಗು ಶೆಟ್ಟಿ, ಮೈನುದ್ದಿನ್ ಕೊರ್ತಿ, ಸಂಜು ಹಂಚಾಟೆ, ಕಾಶಿನಾಥ ಪಾಟೀಲ, ಸಂಗಯ್ಯ ಮುದ್ನೂರ ಮಠ, ಪುಟ್ಟು ಕುಲಕರ್ಣಿ, ರಾಘವೇಂದ್ರ ಅಗಡಿ, ಬಸವರಾಜ ಬಿರಾದಾರ, ವಿಜಯ್ ಜಮ್ಮಲದಿನ್ನಿ , ಮಲ್ಲಿಕಾರ್ಜುನ ಮಡಿವಾಳರ, ಆರಿಫ್ ಮುರಾಳ, ರಿಯಾಜ್ ಮುಲ್ಲಾ, ಕುಮಾರ ಸುರಪುರ, ಹೋರಾಟ ಸಮಿತಿಯ ಪದಾಧಿಕಾರಿಗಳಾದ, ಹೋರಾಟ ಸಮಿತಿ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ.ಕಟ್ಟಿಮನಿ, ಮೆಹೆಬೂಬ ಚೋರಗಸ್ತಿ , ಪರಶುರಾಮ ತಂಗಡಗಿ ಹಾಜರಿದ್ದರು.



ಮಹಿಳೆ, ಪುರುಷರು ಸಮಾನರು: ಕೋರಿಶೆಟ್ಟಿ

ವಿಜಯಪುರ: ಮಹಿಳೆ ಮತ್ತು ಪುರುಷರು ಸರ್ವ ಸಮಾನರು. ಮಹಿಳೆಯರಿಗೆ ಸಮಾನ ಹಕ್ಕುಗಳು, ನ್ಯಾಯ ಮತ್ತು ಸಮಾನ ಅವಕಾಶಗಳನ್ನು ಒದಗಿಸುವುದರಿಂದ ಮಹಿಳಾ ಸಬಲೀಕರಣ ಸಾಧಿಸಲು ಸಾಧ್ಯವಾಗುತ್ತದೆ ಎಂದು ಮಹಿಳಾ ವಿವಿಯ ಕುಲಪತಿ ಪ್ರೊ. ವಿಜಯಾ ಕೋರಿಶೆಟ್ಟಿ ಹೇಳಿದರು.


ನಗರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ತ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಹಾಗೂ ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗ ಹಾಗೂ ಕ್ರೀಡಾ ನಿರ್ದೇಶನಾಲಯ ಆಶ್ರಯದಲ್ಲಿ ಮಹಿಳಾ ಸಾಂಸ್ಕೃತಿಕ ಹಬ್ಬದ- 2026 ಪ್ರಯುಕ್ತ ಶನಿವಾರ ಬೆಳಗ್ಗೆ ಹಮ್ಮಿಕೊಂಡಿದ್ದ ಮ್ಯಾರಾಥಾನ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಸಮಾಜ ಎಂಬ ರಥಕ್ಕೆ ಮಹಿಳೆ ಮತ್ತು ಪುರುಷರು ಎರಡು ಗಾಲಿಗಳಂತಿದ್ದಾರೆ. ಒಂದು ಗಾಲಿ ಕುಂಠಿತವಾದರೂ ಸಮಾಜ ಹಾಗೂ ದೇಶದ ಪ್ರಗತಿ ಸಾಧ್ಯವಾಗುವುದಿಲ್ಲ, ಆದ್ದರಿಂದ ಹೆಣ್ಣುಮಕ್ಕಳಿಗೆ ಉತ್ತಮ ಮತ್ತು ಉನ್ನತ ಶಿಕ್ಷಣವನ್ನು ನೀಡುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಅತ್ಯಗತ್ಯ ಎಂದರು.

ಕುಲಸಚಿವ ಶಂಕರಗೌಡ ಸೋಮನಾಳ ಮಾತನಾಡಿ, ಮಹಿಳೆ ಅಬಲೆ ಅಲ್ಲ, ಅವಳು ಸಬಲೆ.ಮಹಿಳೆಮನಸ್ಸುಮಾಡಿದರೆಯಾವುದೇ ಕಾರ್ಯವನ್ನೂ ಸಾಧಿಸುವ ಸಾಮರ್ಥ್ಯ ಹೊಂದಿದ್ದಾಳೆ. ಆದರೆ ಆ ಸಾಧನೆಗೆ ಬೇಕಾದ ಪ್ರೋತ್ಸಾಹ ಮತ್ತು ಬೆಂಬಲ ಮನೆಯಲ್ಲಿಯೇ ಆರಂಭವಾಗಬೇಕು. ಮಹಿಳಾ ಸಬಲೀಕರಣ ಮತ್ತು ಅಭಿವೃದ್ಧಿ ಒಂದೇ ನಾಣ್ಯದ ಎರಡು ಮುಖಗಳಂತಿವೆ ಎಂದರು.

ವಿವಿಯ ಸಿಂಡಿಕೇಟ್ ಸದಸ್ಯ ಡಾ.ಶಿವಯೋಗೆಪ್ಪ ಮಾಡ್ಯಾಳ ಮಾತನಾಡಿ, ಸಮಾಜದಲ್ಲಿ ಸಮಾನತೆ ಹಾಗೂ ಮಹಿಳೆಯರ ದೈಹಿಕ ಆರೋಗ್ಯವನ್ನು ಉತ್ತೇಜಿಸಲು ಇಂತಹ ಮ್ಯಾರಥಾನ್ ಕಾರ್ಯಕ್ರಮಗಳು ಅಗತ್ಯ. ಕ್ರೀಡಾ ಚಟುವಟಿಕೆಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುವುದರಿಂದ ಅವರ ದೈಹಿಕ ಶಕ್ತಿ ಮತ್ತು ಮಾನಸಿಕ ದೃಢತೆ ವ್ಯಕ್ತವಾಗುತ್ತದೆ ಎಂದರು.

ಮೌಲ್ಯಮಾಪನ ಕುಲಸಚಿವ ಬಿ.ಎಲ್. ಲಕ್ಕಣ್ಣನವರ ಮಾತನಾಡಿದರು. ಮಹಿಳಾ ವಿವಿಯ ಆರ್ಥಿಕ ಅಧಿಕಾರಿ ರಾಮಣ್ಣ ಅಥಣಿ, ವಿವಿಯ ಸಿಂಡಿಕೇಟ್ ಸದಸ್ಯ ಬಸವರಾಜ ಸೈದಾಪೂರ ಹಾಗೂ ನಾಗೇಂದ್ರ ಬಿರಾದಾರ, ಕೆನರಾ ಬ್ಯಾಂಕ್ ಪ್ರಾದೇಶಿಕ ವ್ಯವಸ್ಥಾಪಕ ಜಮೀರ್ ಎಮ್.ಎಚ್., ತೋರವಿ ಕೆನರಾ ಬ್ಯಾಂಕ್ ಶಾಖೆಯ ಮ್ಯಾನೇಜರ್ ಬುಕ್ಯಾ ವೀರು, ಮಹಿಳಾ ಸಾಂಸ್ಕೃತಿಕ ಹಬ್ಬದ ಸದಸ್ಯ ಸಂಚಾಲಕಿ ಪ್ರೊ.ಲಕ್ಷ್ಮೀದೇವಿ ವೈ., ಪ್ರೊ.ಜಿ.ಜಿ.ರಜಪೂತ, ಪ್ರೊ.ಪಿ.ಜಿ. ತಡಸದ, ಪ್ರೊ.ನಾಮದೇವ ಗೌಡ, ಪ್ರೊ.ಶಾಂತಾದೇವಿ ಟಿ., ಪ್ರೊ.ಸಕ್ಪಾಲ್ ಹೂವಣ್ಣ, ಪ್ರೊ. ಶ್ರೀನಿವಾಸ, ಡಾ.ಜ್ಯೋತಿ ಅವಟಿ, ಪ್ರೊ. ಜ್ಯೋತಿ ಉಪ್ಪಾಧ್ಯೆ, ಪ್ರೊ.ಹಣಮಂತಯ್ಯ ಪೂಜಾರ ಇದ್ದರು.



ಸಮುದಾಯ ಭವನಕ್ಕೆ ಸಾಕಷ್ಟು ಅನುದಾನ: ಶಾಸಕ ಯಶವಂತರಾಯಗೌಡ

ಇಂಡಿ: ಉತ್ತರ ಕರ್ನಾಟಕದ ಅಭಿವೃದ್ಧಿಗೆ 70 ಸಾವಿರ ಕೋಟಿ ರೂ.ಗಳನ್ನು ನೀಡಿ ಈ ನಾಡನ್ನು ಅಭಿವೃದ್ಧಿಯತ್ತ ಸಾಗಿಸಿದ ಕೀರ್ತಿ ಈ ನಾಡಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ತಾಲೂಕಿನ ತಾಂಬಾ ಗ್ರಾಮದ ಮಹಾತ್ಮಾ ಜ್ಯೋತಿಬಾ ಫುಲೆ ಸಮುದಾಯ ಭವನದಕ್ಕೆ ಭುಮಿಪೂಜೆ ನೆರವೇರಿಸಿ ಮಾತನಾಡಿದರು. ನಮ್ಮ ಭಾಗದಲ್ಲಿ ನಿಂಬೆ ಅಭಿವೃದ್ಧಿ ಮಂಡಳಿ ಸ್ಥಾಪಿಸಿದ್ದರಿಂದ ಜಿಐ ಟ್ಯಾಗ್ ಹೊಂದಿದ್ದರಿಂದ ಇಂದು ನಮ್ಮ ಭಾಗದ ಲಿಂಬೆ ದೇಶ ವಿಧೇಶಗಳಿಗೆ ರಫ್ತಾಗುತ್ತಿದೆ. ಇಂದು ಎಲ್ಲ ವರ್ಗದ ಸಣ್ಣ ಸಮುದಾಯಗಳಿಗೆ ಜಾಗವನ್ನು ನೀಡಿ ಸಮುದಾಯ ಭವನಗಳನ್ನು ಕಟ್ಟಿಸಲು ಸಾಕಷ್ಟು ಅನುದಾನ ನೀಡಲಾಗಿದೆ ಎಂದರು.

ಶಾಸಕ ಅಶೋಕ ಮನಗೂಳಿ ಮಾತನಾಡಿ, ಮಾಳಿ ಸಮುದಾಯ ಭವನಕ್ಕೆ 10 ಲಕ್ಷ ರೂ. ಕೊಡಲಾಗಿದೆ. ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಇನ್ನು ಹೆಚ್ಚಿನ ಅನುದಾನ ಕೊಡುವೆ ಎಂದರು.

ಮಾಹಾರಾಷ್ಟ ಸರ್ಕಾರದ ಮಾಜಿ ಸಚಿವ ಸಿದ್ದರಾಮ ಮೇತ್ರೆ ಮಾತನಾಡಿ, ಪ್ರತಿಯೊಂದು ತಾಲೂಕಿನಲ್ಲಿ ಸರ್ಕಾರಿ ಜಾಗ ಹಾಗೂ ಸಮುಧಾಯ ಭವನ ಮತ್ತು ಅಭಿವೃದ್ಧಿ ಮಂಡಳಿ ಸ್ಥಾಪಿಸುವತೆ ಮನವಿ ಮಾಡಲಾಗುವುದು. ಸಮಾಜದವರೆಲ್ಲರು ಒಕ್ಕಟ್ಟಾಗಿ ಇರಬೇಕೆಂದು ಸಮಾಜಕ್ಕೆ ಕರೆ ನೀಡಿದರು.



ಕಾಡಪ್ಪ ಮಾಳಿ ಮಾತನಾಡಿದರು. ಬಂಥನಾಳದ ವೃಷಭಲಿಂಗೇಶ್ವರ ಶಿವಯೋಗಿಗಳು ಸಾನ್ನಿಧ್ಯ ವಹಿಸಿದ್ದರು. ಸಮುದಾಯ ಭವನಕ್ಕೆ ಕಡಿಮೆ ದರದಲ್ಲಿ 2ಎಕರೆ ಜಮೀನನ್ನು ನೀಡಿರುವ ಮಾದೇವ ಮೂಲಿಮನಿ ದಂಪತಿಗೆ ಸನ್ಮಾನಿಸಿದರು. ಎಸ್‌ವಿವಿ ಸಂಘದ ನಿರ್ದೇಶಕರಾದ ಅಪ್ಪಣ್ಣ ಕಲ್ಲೂರ, ಜೆ.ಎಸ್. ಹತ್ತಳ್ಳಿ, ಜವಿವಿ ಸಂಘದ ಕಾರ್ಯದರ್ಶಿ ರವಿಕುಮಾರ ಚವ್ಹಾಣ, ಬಿಜೆಪಿ ಮುಖಂಡ ಜಿ.ವೈ.ಗೊರನಾಳ, ಪಿಕೆಪಿಎಸ್ ಅಧ್ಯಕ್ಷ ಲಕ್ಷ್ಮಣ ಹಿರೇಕುರಬರ, ರಜಾಕ ಚಿಕ್ಕಗಸಿ, ಆರ್.ಜಿ.ದೊಡ್ಡಮನಿ, ಪ್ರಕಾಶ ಮುಂಜಿ, ರಾಚಪ್ಪ ಗಳೇದ, ರಾಜು ಗಂಗನಳ್ಳಿ, ಸಿದ್ದು ಹತ್ತಳ್ಳಿ, ರವಿ ನಡಗಡ್ಡಿ, ಸೋಮಣ್ಣ ಮಾಶ್ಯಾಳ, ಮಾದೇವ ಮೂಲಿಮನಿ, ಶಿಕ್ಷಕ ಬಿ.ಬಿ.ಭರಮಣ್ಣ, ಕೆ.ಕೆ.ಕನ್ನೂರ, ಜಿ.ಎಂ.ಗುಳಗಿ, ಬಿ.ಎಂ.ಭರಮಣ್ಣ ಇದ್ದರು.

ಮಕ್ಕಳ ಅಭಿವೃದ್ಧಿಗೆ ಪ್ರೋತ್ಸಾಹಿಸಿ

ದೇವರಹಿಪ್ಪರಗಿ: ಶಿಕ್ಷಕರು ಮಕ್ಕಳಿಗೆ ಗುಣಾತ್ಮಕ ಶಿಕ್ಷಣದ ಜತೆಗೆ ಸ್ಪರ್ಧಾತ್ಮಕ ಹಾಗೂ ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು ಎಂದು ವಿಜಯಪುರದ ಅನುಗ್ರಹ ಕಣ್ಣಿನ ಆಸ್ಪತ್ರೆಯ ಮುಖ್ಯಸ್ಥರು ಹಾಗೂ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ ಪ್ರಭುಗೌಡ ಲಿಂಗದಳ್ಳಿ (ಚಬನೂರ) ಹೇಳಿದರು.

ಸಮೀಪದ ಜಾಲವಾದ ಗ್ರಾಮದ ಮಹಾಂತಲಿಂಗ ಶಿವಾಚಾರ್ಯ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಹಾಗೂ ವಿದ್ಯಾ ಭಾರತಿ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 22ನೇ ವಾರ್ಷಿಕ ಸ್ನೇಹ ಸಮ್ಮೇಳನ, 5ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪಾಲಕರು ಮಕ್ಕಳ ಶೈಕ್ಷಣಿಕ ಹಾಗೂ ಸರ್ವಾಂಗೀಣ ಅಭಿವೃದ್ಧಿಗೆ ಸಮಯ ಮೀಸಲಿಡಬೇಕು. ಮಕ್ಕಳ ಪ್ರತಿಭೆ ಪ್ರದರ್ಶಿಸಲು, ಸೃಜನಶೀಲತೆ ಉತ್ತೇಜಿಸಲು ಇಂಥ ಕಾರ್ಯಕ್ರಮಗಳು ಸಹಕಾರಿ, ಪ್ರತಿ ಮಗುವಿನಲ್ಲಿ ಒಂದಿಲ್ಲ ಒಂದು ಸುಪ್ತ ಶಕ್ತಿ ಅಡಗಿರುತ್ತದೆ, ಯಾವ ಮಗುವೂ ಕೂಡ ದಡ್ಡರಲ್ಲ ಅದನ್ನು ಹೊರಗಡೆಡುವ ಶಕ್ತಿ ಶಿಕ್ಷಕರಲ್ಲಿದೆ. ಶಿಕ್ಷಣದ ಜೊತೆ ಸಂಸ್ಕಾರ ನೀಡುವಲ್ಲಿ ವಿದ್ಯಾ ಭಾರತಿ ಶಾಲೆ ದಾರಿದೀಪವಾಗಿದೆ ಎಂದರು.



ವಿವಿಧಕ್ಷೇತ್ರದಲ್ಲಿಸಾಧನೆಗೈದಸಾಧಕರಿಗೆಪ್ರಶಸ್ತಿನೀಡಿಗೌರವಿಸಲಾಯಿತು. ಗ್ರಾಪಂ ಉಪಾಧ್ಯಕ್ಷ ಮಾಳಪ್ಪ ಚಿತ್ತಾಪುರ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿ ಅಧ್ಯಕ್ಷ ಮಲ್ಲಯ್ಯ ನಂದಿಕೋಲ, ಬಿಜೆಪಿ ಒಬಿಸಿ ಯುವ ಘಟಕದ ರಾಜ್ಯಾಧ್ಯಕ್ಷ ವಿವೇಕಾನಂದ ಡಬ್ಬಿ, ಸಂಸ್ಥೆಯ ಅಧ್ಯಕ್ಷ ಮಹಾಂತೇಶ ವಡಗೇರಿ, ದೇವರಹಿಪ್ಪರಗಿ ಸರ್ವೋದಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ನಾಗನಗೌಡ ಪಾಟೀಲ, ಮುಖಂಡರಾದ ಜಿ.ಕೆ.ಸಜ್ಜನ್, ಅಂಬಣ್ಣ ಆನೆಗುಂದಿ, ಸುರೇಶ ಸಜ್ಜನ, ಆರ್.ಎಸ್.ಬಿರಾದಾರ, ಶರಣು ತೊರವಿ, ಬಾಳಪ್ಪ ದೇವೂರ, ಭೋಗೇಶ ಜನಗೊಂಡ, ಭೀಮರಾಯ ಹಂಗನಳ್ಳಿ, ಧರ್ಮರಾಜ ಪಾಟೀಲ, ಅಮೀನಸಾಬ್ ಇನಾಮದಾರ, ಖಾದಿರ್ ಮೊಮೀನ, ಮೌನೇಶ್ ಬಡಿಗೇರ, ಶಿಕ್ಷಕರಾದ ವಿದ್ಯಾಧರ ಟಕ್ಕಳಕಿ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶ್ರೀಶೈಲ ಪಾದಯಾತ್ರಿಕರಿಗೆ ಅನ್ನಸಂತರ್ಪಣೆ



ಬಸವನಬಾಗೇವಾಡಿ: ಕೊಲ್ಹಾರ ತಾಲೂಕಿನ ಮುಳವಾಡ ಹಾಗೂ ಕಲಗುರ್ಕಿ ಗ್ರಾಮಗಳಿಂದ ಹೊರಡುವ ಶ್ರೀಶೈಲ ಪಾದಯಾತ್ರಿಕರಿಗೆ ತೆಲಗಿ ರಸ್ತೆಯ ಪವಾಡ ಬಸವೇಶ್ವರ ಗವಿಮಠದಲ್ಲಿ ತೆಗ್ಗಿನಮಠ ಪರಿವಾರದಿಂದ 14ನೇ ವರ್ಷದ ಅನ್ನಸಂತರ್ಪಣೆ ಏರ್ಪಡಿಸಿದರು.

ಸ್ಥಳೀಯ ವಿರಕ್ತಮಠದ ಸಿದ್ದಲಿಂಗಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಮಲ್ಲಯ್ಯನ ಕಂಬಿಗೆ ಸುಮಂಗಲೇಯರಿಂದ ಆರತಿ ಬೆಳಗಿಸಿ ಕಾಯಿ-ಕರ್ಪೂರಗಳಿಂದ ಪೂಜೆಗೈದು ಮಲ್ಲಯ್ಯನ ಭಜನೆ-ಹಾಡುಗಳೊಂದಿಗೆ ಪುಣ್ಯಕ್ಷೇತ್ರ ಶ್ರೀಶೈಲಕ್ಕೆ ಹೊರಡುವ ಭಕ್ತರಿಗೆ ಅನ್ನಸಂತರ್ಪಣೆಗೈದು ಶ್ರೀಶೈಲ ಮಲ್ಲಿಕಾರ್ಜುನನ ಕೃಪೆಗೆ ಪಾತ್ರರಾದರು. ಪಂಚಾಕ್ಷರಿ ಹಿರೇಮಠ, ಬಸಲಿಂಗಯ್ಯ ಮಠಪತಿ ಭಜನೆ ಮಾಡಿದರು, ಶಿವಲಿಂಗಯ್ಯ ತೆಗ್ಗಿನಮಠ, ಸಂಗನಗೌಡ ಚಿಕ್ಕೊಂಡ, ರುದ್ರಮುನಿ ಸಾರಂಗಮಠ, ಮುದಕಯ್ಯ ಕಾಳಹಸ್ತೇಶ್ವರಮಠ, ಅಶೋಕ ಕಲ್ಲೂರ, ಹೊನ್ನಪ್ಪ ಗೊಳಸಂಗಿ, ಡಾ.ಕರಣಾಕರ ಚೌಧರಿ, ಡಾ.ಜಿ.ಎನ್.ಸುಂಕದ, ಡಾ.ಶಿವಾನಂದ ಪಾಟೀಲ, ಸಂಗಮೇಶ ಕಾಳಹಸ್ತೇಶ್ವರಮಠ, ಭೀಮಣ್ಣ ಮಾಲಗಾರ, ಮಲ್ಲಣ್ಣ ಕಿಣಗಿ, ಮಹಾಂತೇಶ ಯಳಮೇಲಿ, ಪಂಚಾಕ್ಷರಿ ಕಾಳಹಸ್ತೇಶ್ವರಮಠ, ಎಚ್.ಬಿ.ಬಾರಿಕಾಯಿ, ರವಿ ಹಿರೇಮಠ, ಕೊಟ್ರೇಶ ಹೆಗಡ್ಯಾಳ, ಸಂಗನಬಸು ಪೂಜಾರಿ, ಬ್ರಹ್ಮಾನಂದ ಕುಂಬಾರ, ಜಯಶ್ರೀ ತೆಗ್ಗಿನಮಠ, ಕವಿತಾ ದುಂಬಾಳಿ, ಲಕ್ಷ್ಮೀ ಜಾಲಗೇರಿ, ಜಯಶ್ರೀ ಪೂಜಾರಿ ಇದ್ದರು.

ಸರ್ಕಾರಿ ಶಾಲೆಗಳಲ್ಲಿ ಅನೇಕ ಸೌಲಭ್ಯ

ಝಳಕಿ: ಖಾಸಗಿ ಶಿಕ್ಷಣ ಕ್ಕಿಂತ ಸರ್ಕಾರಿ ಶಾಲೆಗಳಲ್ಲಿ ಏನು ಕಮ್ಮಿ ಇಲ್ಲ ಎಂದು ಸಿಆರ್‌ಸಿ ಬಾಲಗಾಂವ ಹೇಳಿದರು.

ಸ್ಥಳೀಯ ಜಿಎಚ್‌ಪಿಎಸ್ ಶಾಲೆಯ ಆವರಣದಲ್ಲಿ ನಡೆದ ಪಾಲಕ ಪೋಷಕ - ಶಿಕ್ಷಕರ ಮಹಾಸಭೆಯಲ್ಲಿ ಉದ್ದೇಶಿಸಿ ಮಾತನಾಡಿದ ಅವರು, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿಯು ಒಂದೇಯ ತರಗತಿಯಿಂದ 7ನೇ ತರಗತಿವರಿಗೆ ಇಂಗ್ಲಿಷ್ ಭಾಷೆ ಕಲಿಕೆಯಾಗುತ್ತೆ ಮಕ್ಕಳಿಗೂ ಎಲ್ಲಾ ಸರ್ಕಾರದ ಸವಲತ್ತು ನೀಡಲಾಗುವುದು. ಸರ್ಕಾರಿ ಶಾಲೆಗಳಿಗೆ ನಿಮ್ಮ ಮಕ್ಕಳಿಗೆ ಹೆಸರು ನೋಂದಿಸಿ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಾಗಿರಬೇಕು. ಮಕ್ಕಳಿಗೆ ಒಳ್ಳೆಯ ಶಿಕ್ಷಣ ಜೊತೆ ಸಂಸ್ಕಾರ ಸಂಸ್ಕೃತಿ ಬೆಳಸಿ. ಶಾಲೆ ಜೀವಂತ ದೇವರ ಗುಡಿ ಮಕ್ಕಳೆ ದೇವರು ಮಕ್ಕಳಿಗೆ ಒಳ್ಳೆಯ ಸಂಸ್ಕಾರವುಳ ಮಕ್ಕನ್ನಾಗಿ ಬೆಳಸಿರಿ ಎಂದು ಹೇಳಿದರು.

ರೈತ ಮುಖಂಡ ರಮೇಶ ಕಾಗರ ತಮ್ಮ ಮಗಳ ಹುಟ್ಟು ಹಬ್ಬದ ನಿಮಿತ್ತ ಶಾಲಾ ಮಕ್ಕಳಿಗೆ 500 ನೋಟಬುಕ್, ಪೆನ್ನು ವಿತರಿದರು. ಮುಖ್ಯಗುರು ಎಸ್.ಕೆ.ಸೋನಕಳ್ಳಿ, ಎಸ್ಡಿಎಂಸಿ ಅಧ್ಯಕ್ಷ ನಿಂಬಣ್ಣ ವಾಲಿಕಾರ, ಮಲಕಾರಿ ಕಾಗರ, ಸಿದ್ದು ಸಾಹುಕಾರ ಕಾಪಸೆ, ಅಶೋಕ ಬಿಲ್ಕಾರ, ಮಲ್ಲಿಕಾರ್ಜುನ ಬನಸೋಡೆ, ಪ್ರಕಾಶ ಪಾಟೀಲ, ಚಂದ್ರಶೇಖರ ಪಾಟೀಲ, ಸುಭಾಷ ತಳವಾರ, ಸಿಬ್ಬಂದಿ ಇದ್ದರು.



ಉದ್ಯೋಗ ನೇಮಕಾತಿಯಲ್ಲಿ ಅನ್ಯಾಯ



ಮುದ್ದೇಬಿಹಾಳ: ರಾಜ್ಯ ಸರ್ಕಾರ ತಿದ್ದುಪಡಿ ಮಾಡಲು ಹೊರಟಿರುವ ಒಳ ಮೀಸಲಾತಿಯಿಂದ ಮೂಲ ಮತ್ತು ಅಸ್ಪೃಶ್ಯ ವರ್ಗಕ್ಕೆ ಅನ್ಯಾಯವಾಗುತ್ತದೆ. ಉದ್ಯೋಗ ನೇಮಕಾತಿಯಲ್ಲಿ ನಷ್ಟ ಆಗುತ್ತದೆ ಎಂದು ಪ್ರತಿಭಟಿಸಿ ಮಾದಿಗ ಮತ್ತು ಉಪಜಾತಿಗಳ ಹೋರಾಟ ಸಮಿತಿಯ ಕಾರ್ಯಕರ್ತರು ನಗರದ ಅಂಗಡಿ ಮುಂಗಟ್ಟು ಬಂದ್ ಮಾಡಲಾಯಿತು.

ಮೀಸಲಾತಿ ಅನುಪಾತ ಕಡಿಮೆಯಾಗಿದ್ದರಿಂದ ಉದ್ಯೋಗ ನೇಮಕಾತಿಯಲ್ಲಿ ಅನ್ಯಾಯವಾಗುತ್ತದೆ ಎಂದು ಪ್ರತಿಭಟನಾಕಾರರು ತಹಸಿಲ್ದಾರ್ ಕೀರ್ತಿ ಚಾಲಕ್ ಮೂಲಕ ಮುಖ್ಯಮಂತ್ರಿ ಅವರಿಗೆ ಅವರಿಗೆ ಮನವಿ ಸಲ್ಲಿಸಿದರು. ಮೊದಲಿನಿಂದಲೂ ಮೂಲ ಅಸ್ಪೃಶ್ಯ ವರ್ಗಕ್ಕೆ ಅನ್ಯಾಯವಾಗಿದೆ ಈಗಲೂ ಮೀಸಲಾತಿಯನ್ನು ಹೆಚ್ಚಿಸಿಲ್ಲ, ಬದಲಿಗೆ ಮೀಸಲಾತಿ ಕಡಿಮೆ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಹೋರಾಟಗಾರರು ರಾಜ್ಯ ಸರ್ಕಾರಕ್ಕೆ ನ್ಯಾಯ ಕೊಡುವಂತೆ ಆಗ್ರಹಿಸಿದರು.

ಸಂದರ್ಭದಲ್ಲಿ ಬಾಲಚಂದ್ರ ಹುಲ್ಲೂರು, ದುರ್ಗಪ್ಪ ದೊಡ್ಡಮನಿ, ಮಂಜುನಾಥ್ ಕುಂದರಗಿ, ಭೀಮರಾಯ ಹುಲ್ಲೂರು, ಆನಂದ ಮುದುರ, ಭೀಮರಾಯ ಹುಲ್ಲೂರು, ಆನಂದ ಚಲಮಿ ಮತ್ತು ಅಮರಗೋಳ, ತಿಪ್ಪಣ್ಣ ಕಟ್ಟಿಮನಿ, ಮಾಂತೇಶ ತಮದಡ್ಡಿ ಮಹಾಂತೇಶ ಕಾಳಗಿ, ರವಿ ಬಸರಕೋಡ ಸೇರಿದಂತೆ ನೂರಾರು ಜನ ಭಾಗವಹಿಸಿದ್ದರು.

ಮಕ್ಕಳು ಶೈಕ್ಷಣಿಕವಾಗಿ ಪ್ರಗತಿ ಹೊಂದಲಿ

ಆಲಮೇಲ: ಗ್ರಾಮೀಣ ಭಾಗದ ಬಡ ಜನರ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂದು 30 ವರ್ಷಗಳ ಹಿಂದೆ ಆರಂಭಿಸಿ ಹೆಮ್ಮರವಾಗಿ ಬೆಳೆದಿದೆ ಎಂದು ಸಂಸ್ಥೆಯ ಅಧ್ಯಕ್ಷ ಶಿವುಕುಮಾರ ಗುಂದಗಿ ಹೇಳಿದರು.

ಪಟ್ಟಣದ ಗ್ರಾಮೀಣ ಅಭಿವೃದ್ಧಿ ವಿದ್ಯಾವರ್ಧಕ ಸಂಸ್ಥೆಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜನರ ಸಹಕಾರದಿಂದ ಈ ಮಟ್ಟಕ್ಕೆ ಬೆಳದಿದೆ. ಮಕ್ಕಳು ಶಿಕ್ಷಣದಲ್ಲಿ ಉತ್ತಮ ಸಾಧನೆ ಮಾಡಬೇಕು ಎಂದರೆ ಶಿಕ್ಷರಷ್ಟೆ ಪಾಲಕರ ಜವಾಬ್ದಾರಿ ಮಯುಖ್ಯವಾಗಿದೆ ಎಂದು ಹೇಳಿದರು.

ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೆತ ವಿದ್ಯಾರ್ಥಿಗಳಿಗರ ಪ್ರಶಸ್ತಿ ನೀಡಿ ಗೌರವಿಸಿ ಅಭಿನಂದಿಸಿದರು. ರಾಂಪೂರದ ನಿತ್ಯಾನಂದ ಮಹಾರಾಜರು ಸಾನಿದ್ಯ ವಹಿಸಿದ್ದರು. ಮುಖ್ಯ ಶಿಕ್ಷಕ ಜಿ.ಕೆ.ಅಂಬೂರೆ, ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಸ್.ಆರ್.ಪೂಜಾರ, ಕಾನಿಪ ಅಧ್ಯಕ್ಷ ಅವಧೂತ ಬಂಡಗಾರ, ಪಾಲಕ ಪ್ರತಿನಿಧಿಗಳಾದ ಸೌದಾಗರ, ಮಾಡ್ಯಾಳ ಹಾಗೂ ಶಾಲೆಯ ಶಿಕ್ಷಕ ಸಿಬ್ಬಂದಿ ಇದ್ದರು. ಶಿಕ್ಷಕಿ ಕವಿತಾ ಪಶುಪತಿಮಠ ಸ್ವಾಗತಿಸಿದರು. ರೂಪಾ ಪಾಟೀಲ ನಿರೂಪಿಸಿ ವಂದಿಸಿದರು.



ಕಿರುಸುದ್ದಿ

ರೈತರ ಹಿತ ಕಾಯುವ ಬಜೆಟ್

ಕುಕನೂರ: ದಾಖಲೆಯ ಬಜೆಟ್ ಅನ್ನು ಸಿಎಂ ಸಿದ್ದರಾಮಯ್ಯ 17ನೇ ಭಾರಿಗೆ ಮಂಡಿಸಿದ್ದಾರೆ. ಈ ಬಜೆಟ್‌ನಲ್ಲಿ ನಿರುದ್ಯೋಗ ಯುವಕರಿಗೆ ಉದ್ಯೋಗದ ಭರವಸೆ ಜೊತೆಗೆ ರೈತರ ಹಿತ ಕಾಯುವ ಬಜೆಟ್ಟಾಗಿದೆ ಎಂದು ಯುವ ಮುಖಂಡ ಎಚ್.ವಿಶ್ವನಾಥಗೌಡ ಹೇಳಿದ್ದಾರೆ.

ಆರೋಗ್ಯ ತಪಾಸಣೆ ಉಚಿತ ಶಿಬಿರ ಇಂದು

ಕುಷ್ಟಗಿ: ಪಟ್ಟಣದ ಶ್ರೀವಿಜಯ ಲಕ್ಷ್ಮೀ ಡೆಂಟಲ್ ಮತ್ತು ಪಾಲಿ ಕ್ಲಿನಿಕ್‌ನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಾ.8ರಂದು ಬೆಳಿಗ್ಗೆ 10ರಿಂದ ಸಂಜೆ 4ರ ವರಗೆ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಸಾಮಾನ್ಯ ರೋಗ ತಪಾಸಣೆ ಮತ್ತು ನಿರ್ವಹಣೆ, ಸ್ತ್ರೀ ಸಂಬಂಧಿತ ಆರೋಗ್ಯ ತಪಾಸಣೆ, ಫೈಲ್ಸ್, ಸ್ತನ ಸಂಬಂಧಿಸಿದ, ಹನಿಯಾ ಮತ್ತು ಅಪೆಂಡಿಕ್ಸ್ ಸೇರಿದಂತೆ ಇತರೆ ಕಾಯಿಲೆಗಳ ತಪಾಸಣೆ ಹಾಗೂ ನಿರ್ವಹಣೆ ಕುರಿತು ಮಹಿಳೆಯರಿಗಾಗಿ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ನೋಂದಣಿಗಾಗಿ 9886818585 , 9036109056 ಸಂಪರ್ಕಿಸುವಂತೆ ಡಾ.ಅಕ್ಷತಾ ಎಂ.ಗೊಂಬಾಳ ಹಾಗೂ ಡಾ.ಮಂಜುನಾಥ ಗೊಂಡಬಾಳ ತಿಳಿಸಿದ್ದಾರೆ.

ಬಜೆಟ್‌ನಲ್ಲಿ ನಿರೀಕ್ಷೆಗಳೆಲ್ಲವೂ ಹುಸಿ

ಬಳ್ಳಾರಿ: ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್‌ನಲ್ಲಿ ಯಾವುದೇ ಕೊಡುಗೆಗಳನ್ನು ನೀಡದ ಹಿನ್ನೆಲೆ ಜಿಲ್ಲೆಯ ಜನರು ಬೇಸರ ವ್ಯಕ್ತಪಡಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ವಿಮಾನ ನಿಲ್ದಾಣ, ಜೀನ್ಸ್ ಪಾರ್ಕ್, ಜೀನ್ಸ್ ಹಬ್, ಒಣ ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪನೆ, ತುಂಗಭದ್ರಾ ಜಲಾಶಯಕ್ಕೆ ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಾಣ ಸೇರಿದಂತೆ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಸಾಕಷ್ಟು ನಿರೀಕ್ಷೆಗಳಿದ್ದವು. ಆದರೆ, ಅದ್ಯಾವುದು ಘೋಷಣೆಯಾಗಲಿಲ್ಲ ಎಂದು ಜನರು ಬೇಸರ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯ ಮೂಲಭೂತ ಸೌಲಭ್ಯಗಳಿಗಾಗಿ ವಿಶೇಷ ಯೋಜನೆಗಳನ್ನು ಘೋಷಿಸಿ, ಅನುದಾನ ನೀಡುವ ನಿರೀಕ್ಷೆಗಳಿದ್ದವು. ವಾಣಿಜ್ಯೋದ್ಯಮಿಗಳು ಮತ್ತು ಕೈಗಾರಿಕೋದ್ಯಮಿಗಳ ನಿರೀಕ್ಷೆಗಳೆಲ್ಲಾ ಹುಸಿಯಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿವಿಧ ಚುನಾವಣೆಗಳಲ್ಲಿ ಬಳ್ಳಾರಿ ಜಿಲ್ಲೆಯ ಜನರಿಗೆ ನೀಡಿದ್ದ ಭರವಸೆಗಳು 2026-27ರ ಸಾಲಿನ ಬಜೆಟ್‌ನಲ್ಲಿ ಈಡೇರಿಸುತ್ತಾರೆ ಎನ್ನುವ ಲೆಕ್ಕಾಚಾರಗಳು ಸಾಕಷ್ಟಿದ್ದವು. ಆದರೆ, ಈ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಬಳ್ಳಾರಿ ಜಿಲ್ಲೆಯನ್ನು ಸಂಪೂರ್ಣ ನಿರ್ಲಕ್ಷಿಸಿದ್ದಾರೆ ಎಂದು ಜನರು ಬೇಸರ ವ್ಯಕ್ತಪಡಿಸಿದ್ದಾರೆ.

ವರ್ಲ್ಡ್ ಪ್ಯಾರಾ ಅಥ್ಲೆಟಿಕ್ ಗ್ರ್ಯಾಂಡ್ ಪ್ರಿಕ್ಸ್‌ಗೆ ಶಿವ ಆಯ್ಕೆ

ಸಿಂಧನೂರು: ನ್ಯೂಡೆಲ್ಲಿಯಲ್ಲಿ ಮಾ.14ರವರೆಗೆ ವರ್ಲ್ಡ್ ಪ್ಯಾರಾ ಅಥ್ಲೆಟಿಕ್ ಗ್ರ್ಯಾಂಡ್ ಪ್ರಿಕ್ಸ್‌ಗೆ ಸಿಂಧನೂರಿನ ಸರ್ಕಾರಿ ಪದವಿ ಮಹಾ ವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕ ಶಿವ ಕೆ. ಅವರು, ಈ ಚಾಂಪಿಯನ್ ಶಿಪ್‌ಗೆ ಇಂಟರ್-ನ್ಯಾಷನಲ್ ಟೆಕ್ನಿಕಲ್ ಅಫೀಶಿಯಲ್ ಆಗಿ ಆಯ್ಕೆಯಾಗಿದ್ದಾರೆ ಎಂದು



ಪ್ಯಾರಾ ಒಲಂಪಿಕ್ ಕಮಿಟಿ ಆಫ್ ಇಂಡಿಯಾದಿಂದ ಪತ್ರ ಬಂದಿದೆ ಎಂದು ಕಾಲೇಜಿನ ಪ್ರಾಂಶುಪಾಲ ಪಾಂಡು ತಿಳಿಸಿದರು.ಆಯ್ಕೆಯಾದ ದೈಹಿಕ ಶಿಕ್ಷಕ ಶಿವ ಕೆ. ಅವರಿಗೆ ಕಾಲೇಜು ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷರು, ಸದಸ್ಯರು ಹಾಗೂ ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಅಭಿನಂದನೆ ತಿಳಿಸಿದ್ದಾರೆ.

ಬೈಕ್ ಅಪಘಾತ ಓರ್ವ ಸಾವು

ಸಿಂಧನೂರು: ತಾಲೂಕಿನ ಮುಳ್ಳೂರು ಕ್ರಾಸ್ ಸಮೀಪ ಇಂದು ಬೆಳಿಗ್ಗೆ ಲಿಂಗಸುಗೂರು ತಾಲೂಕಿನ ಪೂಲಬಾವಿ ಗ್ರಾಮದ ಕುಪ್ಪಣ್ಣ ಸಿಂಧನೂರು ನಗರಕ್ಕೆ ಆಗಮಿಸುವಾಗ ಬರುವಾಗ ತನ್ನ ಪಥದ ಬದಲಿಸಿದ ಕಾರಣ ಎದುರಿಗೆ ಬರುತ್ತಿರುವ ಒಮಿನಿ ವಾಹನಕ್ಕೆ ಡಿಕ್ಕಿ ಒಡೆದ ಕಾರಣ ಅಪಘಾತ ಜರುಗಿ ಸ್ಥಳದಲ್ಲೇ ಯುವಕ ಸಾವನ್ನಪ್ಪಿದ್ದಾನೆ.ಒಮಿನಿಯಲ್ಲಿ ತೆಕ್ಕಲಕೋಟೆಯಿಂದ ಆಸತ್ರೆಗೆಂದು ಲಿಂಗಸ್ಗೂರಿಗೆ ಹೊರಟಾಗ ಬೈಕ್ ಅಪಘಾತದಲ್ಲಿ ಸಾವನ್ನಪ್ಪಿದ್ದಾನೆ. ಈ ಒಂದು ಘಟನಾ ಸ್ಥಳಕ್ಕೆ ಸಿಂಧನೂರು ಗ್ರಾಮೀಣ ಸಿಪಿಐ ವಿನಾಯಕ ಹಾಗೂ ಪಿಎಸ್ಐ ಮೌನೇಶ ಭೇಟಿ ನೀಡಿ ಪರಿಶೀಲನೆ ನಡೆಸಿ ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ಕೊಟ್ಟೂರು: ಕೊಟ್ಟೂರು ಎಪಿಎಂಸಿಯಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದ ಕನ್ನಕಟ್ಟಿ ಬಸವರಾಜ್ ಎಂಬುವವರು ಅಕಾಲಿಕವಾಗಿ ಮರಣ ಹೊಂದಿದ ಹಿನ್ನೆಲೆಯಲ್ಲಿ ಕೊಟ್ಟೂರು ಎಪಿಎಂಸಿ ವತಿಯಿಂದ ರೂಪಾಯಿ 25,000ಗಳನ್ನು ಸಂಸ್ಕಾರ ಭತ್ಯೆಯನ್ನಾಗಿ ಪರಿಹಾರವನ್ನು ಕುಟುಂಬದವರಿಗೆ ನೀಡಲಾಯಿತು. ಇಲ್ಲಿನ ಎಪಿಎಂಸಿ ಕಚೇರಿಯಲ್ಲಿ ಎಪಿಎಂಸಿ ಉಪಾಧ್ಯಕ್ಷರಾದ ಎಂ.ಶಿವಣ್ಣ ಅವರು ಪರಿಹಾರದ ಚೆಕ್ಕನ್ನು ವಿತರಿಸಿದರು. ಎಪಿಎಂಸಿ ಸದಸ್ಯರಾದ ಚೆರಬಿ ಕೊಟ್ರೇಶ್, ಎಪಿಎಂಸಿ ಪ್ರಭಾರ ಕಾರ್ಯದರ್ಶಿ ಬಸವರಾಜ್ ಇದ್ದರು.

ಛತ್ರಪತಿ ಶಿವಾಜಿ ಜಯಂತಿ ಆಚರಣೆ

ಮಾನ್ವಿ: ಜಾತಿಮತ ಪಂಥಗಳ ಎಲ್ಲೆ ಮೀರಿ, ತಾಯ್ನಾಡಿನ ರಕ್ಷಣೆ ಮಾಡಲು ಶ್ರಮಿಸಿದ ಮಹಾನ್ ನಾಯಕ ಛತ್ರಪತಿ ಶಿವಾಜಿ ಮಹಾರಾಜರು ಎಂದು ಭಾರತೀಯ ಜನತಾ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಡಾ.ಮಲ್ಲಿಕಾರ್ಜುನ ಬಾಳಿಕಾಯಿ ಹೇಳಿದರು.

ನಗರದ ಧ್ಯಾನ ಮಂದಿರದಲ್ಲಿ ಛತ್ರಪತಿ ಶಿವಾಜಿ ಯುವಸೇನೆ ವತಿಯಿಂದ ಶುಕ್ರವಾರ ಜರುಗಿದ ಛತ್ರಪತಿ ಶಿವಾಜಿ ಮಹಾರಾಜರ 396 ನೇ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಬೇರೆ ಬೇರೆ ದೇಶಗಳ ಆತ್ಮ ಬೇರೆಯದ್ದೇ ಆಗಿದೆ. ಆದರೆ ನಮ್ಮ ಭಾರತದ ಆತ್ಮ ಅದುವೇ 'ಆಧ್ಯಾತ್ಮ' ಅಂತಹ ಪುಣ್ಯಭೂಮಿ ನಮ್ಮದು. ಶಿವಾಜಿ ಮಹಾರಾಜರು ಕೇವಲ ಹೋರಾಟ, ಸಂಘರ್ಷದ ಸಂಕೇತವಲ್ಲ.ಉನ್ನತ ಆಲೋಚನೆಯುಳ್ಳ, ಅಭಿವೃದ್ಧಿ ಶೀಲ, ಮಾತೃಹೃದಯಿ, ಮಹಿಳೆಯರ ಪರ ಚಿಂತಕ ರಾಜರಾಗಿದ್ದರು ಎಂದರು.

ಕಾರ್ಯಕ್ರಮದ ಪೂರ್ವದಲ್ಲಿ ಟಿಎಪಿಎಂಎಸ್ ಆವರಣದಿಂದ ಧ್ಯಾನಮಂದಿರದ ವರೆಗೆ ಸಂಭ್ರಮದಿಂದ ಬೃಹತ್ ಶೋಭಾಯಾತ್ರೆ ನಡೆಯಿತು.

ಕರೆಗುಡ್ಡದ ಮಹಾಂತಲಿಂಗ ಸ್ವಾಮೀಜಿ, ಅಂಕಲಗಿ-ಕುಂದರಗಿಯ ಅಮರಸಿದ್ದೇಶ್ವರ ಮಹಾಸ್ವಾಮಿಗಳು, ಚೀಕಲಪರ್ವಿಯ ಸದಾಶಿವ ಶಿವಯೋಗಿಗಳು, ನವಲಕಲ್ ಬೃಹನ್ಮಠದ ಅಭಿನವ ಸೋಮನಾಥ ಶಿವಾಚಾರ್ಯರು, ಛತ್ರಪತಿ ಶಿವಾಜಿ ಯುವ ಸೇನೆಯ ಅಧ್ಯಕ್ಷ ಬಸನಗೌಡ ವಿ ಆಲ್ದಾಳ ಸೇರಿದಂತೆ ಯುವಕರು, ಮಹಿಳೆಯರು ಸೇರಿದಂತೆ ಸಾವಿರಾರು ಜನರು ಭಾಗವಹಿಸಿದ್ದರು. ಪೊಲೀಸರು ಸೂಕ್ತ ಬಂದೋಬಸ್ತ್ ಒದಗಿಸಿದ್ದರು.



ಮಾನ್ವಿ: ನಗರದ ಧ್ಯಾನ ಮಂದಿರದಲ್ಲಿ ಛತ್ರಪತಿ ಶಿವಾಜಿ ಯುವಸೇನೆ ವತಿಯಿಂದ ಶುಕ್ರವಾರ ಜರುಗಿದ ಛತ್ರಪತಿ ಶಿವಾಜಿ ಮಹಾರಾಜರ 396 ನೇ ಜಯಂತಿ ಕಾರ್ಯಕ್ರಮದಲ್ಲಿ ಭಾರತೀಯ ಜನತಾ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಡಾ.ಮಲ್ಲಿಕಾರ್ಜುನ ಬಾಳಿಕಾಯಿ ಮಾತನಾಡಿದರು.

243.52 ಕೋಟಿ ರೂ. ಬೆಳೆವಿಮೆ ಪರಿಹಾರ ವಿತರಣೆಗೆ ಚಾಲನೆ

ಮಿಲೆಟ್ ಹಬ್ ಮಂಜೂರಿಗೆ ಪ್ರಯತ್ನ

ಕಲಬುರಗಿ: ಸಿಎಂಸಿದ್ದರಾಮಯ್ಯ ಮಂಡಿಸಿರುವ 2026-27ನೇ ಆಯವ್ಯಯದಲ್ಲಿ ರಾಜ್ಯದಲ್ಲಿ ಮಿಲೆಟ್ ಹಬ್ ಸ್ಥಾಪಿಸಲಾಗುವುದುದೆಂದು ಘೋಷಣೆ ಮಾಡಲಾಗಿದೆಯಾದರು 3-4 ಜಿಲ್ಲೆಗಳ ಬೇಡಿಕೆ ಇರುವ ಕಾರಣ ಎಲ್ಲಿ ಅಂತ ಸ್ಪಷ್ಟಪಡಿಸಿಲ್ಲ. ಹೀಗಾಗಿ ಕಲಬುರಗಿ ಜಿಲ್ಲೆಯಿಂದ ಕೃಷಿ ಇಲಾಖೆಯವರು ಬೇಗ ಡಿ.ಪಿ.ಆರ್ ಮಾಡಿ ನೀಲಿ ನಕ್ಷೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಜಿಲ್ಲೆಗೆ ಮಂಜೂರು ಮಾಡಿಸಲು ಸರ್ವ ಪ್ರಯತ್ನ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕೃಷಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಡಾ.ಎಸ್.ಎಂ.ಪಂಡಿತ ರಂಗಮಂದಿರದಲ್ಲಿ ಆಯೋಜಿಸಿದ ಜಿಲ್ಲಾ ಮಟ್ಟದ ಸಿರಿ ಧಾನ್ಯ ಮೇಳ-2026 ಹಾಗೂ ಜಿಲ್ಲೆಯ 2.90 ಲಕ್ಷ ರೈತರಿಗೆ ಬೆಳೆ ವಿಮೆ ಯೋಜನೆಯಡಿ ಮಧ್ಯಂತರ ಪರಿಹಾರ ಹಣ ಡಿ.ಬಿ.ಟಿ ಮೂಲಕ ಬಿಡುಗಡೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ 4.45 ಕೋಟಿ ರೂ. ವೆಚ್ಚದಲ್ಲಿ 9 ಕೃಷಿ ಯಂತ್ರೋಪಕರಣಗಳನ್ನು ಕಡಿಮೆ ಬೆಲೆಯಲ್ಲಿ ಬಾಡಿಗೆ ಪಡೆಯಲು ಕಸ್ಟೋಮರ್ ಹೈರ್ ಸರ್ವಿಸ್ ಸೆಂಟರ್ ತೆರೆಯಲಾಗಿದೆ.197 ಲಕ್ಷ ರೂ. ದಲ್ಲಿ 4 ಡ್ರೋನ್ ಸಿಂಪಡನೆ ಕೇಂದ್ರ ತೆರೆಯಲಾಗಿದೆ. 10 ಕೋಟಿ ರೂ. ವೆಚ್ಚದಲ್ಲಿ ಚಿತ್ತಾಪುರದಲ್ಲಿ ಶೀಥಲಿಕರಣ ಘಟಕ ಅನುಷ್ಠಾನ ಮಾಡಲಾಗುತ್ತಿದೆ. ರೈತರ ಬೇಡಿಕೆ ಹೆಚ್ಚಿರುವ ಕಾರಣ ಇದೇ ವರ್ಷ ಕಲಬುರಗಿಯಲ್ಲಿಯೂ ಇದೆ ಮಾದರಿಯಲ್ಲಿ ತರಕಾರಿ, ಟೊಮಾಟೋಗಳ



> **ಕೃಷಿ ಮತ್ತು ಕಂದಾಯ ಅಧಿಕಾರಿಗಳು ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿದ ಪರಿಣಾಮ ಜಿಲ್ಲೆಯ ರೈತರಿಗೆ ಪ್ರಸಕ್ತ ಸಾಲಿನ ಬೆಳೆವಿಮೆ ಯೋಜನೆಯಡಿ 243 ಕೋಟಿ ರೂ. ಬೆಳೆ ವಿಮೆ ಪರಿಹಾರ ಪಡೆಯಲು ಸಾಧ್ಯವಾಗಿದೆ. ಬೆಳೆ ಕಟಾವು ಆಧಾರದ ಮೇಲೆ ಇದಕ್ಕಿಂತ ಡಬಲ್ ಬರಬಹುದು.**
>
> ■ **ಬಿ.ಆರ್.ಪಾಟೀಲ, ಆಳಂದ ಶಾಸಕ**

ಶೇಖರಣೆಗೆ ಕಲಬುರಗಿಯಲ್ಲಿ ಕೋಲ್ಡ್ ಸ್ಟೋರೇಜ್ ಯೂನಿಟ್ ಸ್ಥಾಪಿಸಲಾಗುವುದು. ಇದಲ್ಲದೆ 7.58 ಕೋಟಿ ರೂ. ವೆಚ್ಚದಲ್ಲಿ 7 ಜಲನಾಯನ ಸಂಸ್ಕರಣ ಘಟಕ ಸ್ಥಾಪಿಸಲಾಗುತ್ತಿದೆ. ಒಟ್ಟಾರೆಯಾಗಿ ಜಿಲ್ಲೆಯನ್ನು ಕೃಷಿ ಹಬ್ ಅಗಿ ಪರಿವರ್ತಿಸಲು ಪೈಲೆಟ್ ರೂಪದಲ್ಲಿ ಇವೆಲ್ಲ ಯೋಜನೆ ಹಾಕಿಕೊಂಡಿದ್ದೇವೆ ಎಂದು ತಿಳಿಸಿದರು.

ಅಫಜಲಪೂರ ಶಾಸಕ ಎಂ.ವೈ.ಪಾಟೀಲ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಮಾತನಾಡಿದರು ಇದಕ್ಕೂ ಮುನ್ನ ಸಚಿವ ಪ್ರಿಯಾಂಕ್ ಖರ್ಗೆ ಅವರು, ಅರ್ಹ ಫಲಾನುಭವಿಗಳಿಗೆ ಕಬ್ಬು ಕಟಾವು ಯಂತ್ರಗಳು ಮತ್ತು ರಿವಾರ್ಡ್ ಯೋಜನೆಯ ಉತ್ಪಾದನಾ ಘಟಕದಡಿ ಕೃಷಿ ಪರಿಕರ ವಿತರಣೆ ಮಾಡಿದರು.

ಎಂಎಲ್ಸಿ ತಿಮ್ಮಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ್, ಕೆ.ಕೆ.ಆರ್.ಟಿ.ಸಿ.ಅಧ್ಯಕ್ಷ ಅರುಣಕುಮಾರ್ ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಚಂದ್ರಿಕಾ ಪರಮೇಶ್ವರ್, ನಿರ್ಮಲಾ, ಮಜಹರ್ ಆಲಂ ಖಾನ್, ಸಿದ್ರಾಮಪ್ಪ ಪಾಟೀಲ ಧಂಗಾಪೂರ,ಡಿಸಿ ಬಿ.ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಎಸ್.ಪಿ.ಅಡ್ಡೂರು ಶ್ರೀನಿವಾಸುಲು, ಸಿ.ಇ.ಓ ಭಂವರ್ ಸಿಂಗ್ ಮೀನಾ, ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟಿ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಕೃಷಿ ಉಪನಿರ್ದೇಶಕಿ ಅನುಸುಯಾ ಹೂಗಾರ ಸೇರಿದಂತೆ ಕೃಷಿ ಇಲಾಖೆಯ ಅಧಿಕಾರಿಗಳು, ರೈತಾಪಿ ಜನರು ಭಾಗವಹಿಸಿದ್ದರು. ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಸ್ವಾಗತಿಸಿ ವಂದಿಸಿದರು.

ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮ

ಕೊಪ್ಪಳ: ತಾಲೂಕು ಆಡಳಿತ, ತಾಲೂಕು ಪಂಚಾಯತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನೆ, ಕೊಪ್ಪಳ ಇವರ ಸಹಯೋಗದೊಂದಿಗೆ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಅಂಗವಾಗಿ ಶುಕ್ರವಾರ ಇರಕಲ್ಲಗಡ ಗ್ರಾಪಂನಲ್ಲಿ ಹಮ್ಮಿಕೊಂಡಿದ್ದ ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮ ನಡೆಯಿತು.

ಈ ಕಾರ್ಯಕ್ರಮದಲ್ಲಿ ನಾಡಕಛೇರಿ ಉಪತಹಶೀಲ್ದಾರ್ ಮೈನುದ್ದೀನ್ ನಾಗನೂರು ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಪಿಡಿಒ ಪರಮೇಶ್ವರಯ್ಯ ಹಾಗೂ ಇತರ ಮುಖ್ಯ ಅತಿಥಿಗಳು ಸೇರಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು.

ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಿವಶರಣಪ್ಪ ಗದ್ದಿ ಅವರು ಪ್ರಸ್ತಾವಿಕವಾಗಿ ಮಾತನಾಡಿ, ಹೆಣ್ಣು ಮಕ್ಕಳ ಭ್ರೂಣ ಹತ್ಯೆ ನಿಷೇಧಿಸಬೇಕು ಹಾಗೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರಾಶಸ್ತ್ರ ನೀಡಬೇಕು. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಬೇಟಿ ಬಚಾವೋ ಬೇಟಿ ಪಡವೂ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಹೆಣ್ಣು ಮಕ್ಕಳ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದ್ದು, ಬಾಲ್ಯ ವಿವಾಹ ನಡೆಯದಂತೆನೋಡಿಕೊಳ್ಳಬೇಕು. ಮದುವೆ ಆಯೋಜಕರು, ಧಾರ್ಮಿಕ ಮುಖಂಡರು, ಸಾಮೂಹಿಕ ಅಥವಾ ಸರಳ ಮದುವೆಯ ಸಂದರ್ಭದಲ್ಲಿ ಕಡ್ಡಾಯವಾಗಿ ವಧು ವರರ ವಯಸ್ಸಿನ ಬಗ್ಗೆ ದೃಢೀಕರಣ ಪಡೆದು ಇಲಾಖೆಯಿಂದ ಅನುಮತಿ ಪಡೆಯಬೇಕು ಹಾಗೂ ಕಾಯ್ದೆಯಡಿ ಸಂಘ ನೋಂದಣಿ ಮತ್ತು ನವೀಕರಣವು ಕಡ್ಡಾಯವಾಗಿದೆ ಎಂದು ತಿಳಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಮಾಜ ಕಾರ್ಯಕರ್ತೆ ಪ್ರತಿಭಾ ಅವರು ಪೋಸ್ಕೋ ಕಾಯ್ದೆ ಕುರಿತು ವಿವರವಾಗಿ ಮಾಹಿತಿ ನೀಡಿದರು. ವೀರಬಸಪ್ಪ ಪಟ್ಟಣಶೆಟ್ರು ಹಾಗೂ ಶರಣಪ್ಪ ಸಿಂಗನಾಳ ಅವರು ಮಕ್ಕಳ ಸಹಾಯವಾಣಿ 1098 ಹಾಗೂ ತುರ್ತು ಸೇವೆ ಸಹಾಯವಾಣಿ 112 ಬಗ್ಗೆ ತಿಳಿಸಿದರು.

ವಲಯ ಮೇಲ್ವಿಚಾರಕಿ ಮಂಜುಳ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಧಾರ್ಮಿಕ ಮುಖಂಡರು ಹಾಗೂ ಗ್ರಾಮಸ್ಥರು, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಸಿಬ್ಬಂದಿ ಉಪಸ್ಥಿತರಿದ್ದರು.



ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಿರಿ

ಯಲಬುರ್ಗಾ: ವಿದ್ಯಾರ್ಥಿಗಳು ಕೇವಲ ಪಾಸಾದರೆ ಸಾಲದು ಅತೀ ಹೆಚ್ಚು ಅಂಕಗಳನ್ನು ಪಡೆದುಕೊಂಡು ಜೀವನ ರೂಪಿಸಿಕೊಳ್ಳಬೇಕು ಎಂದುಜಿಲ್ಲಾಹಿಂದುಳಿದವರ್ಗ ಕಲ್ಯಾಣಾಧಿಕಾರಿ ನಾಗಮಣಿ ಹೇಳಿದರು.

ಪಟ್ಟಣದ ಬಿಸಿಎಂ ಕಚೇರಿ ಸಭಾಂಗಣದಲ್ಲಿ ಶನಿವಾರ ಡಿ.ದೇವರಾಜ ಅರಸು ಮೆಟ್ರಿಕ್ ವರ್ಗ ಬಾಲಕರ, ಬಾಲಕಿಯರ ವಸತಿ ನಿಲಯಗಳ ಹಾಗೂ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಸಹಯೋಗದಲ್ಲಿ ನಡೆದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಸುಧಾರಣಾ ಪೂರ್ವ ವಿಶೇಷ 4ದಿನಗಳ ತರಬೇತಿ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪರೀಕ್ಷೆ ಭಯವನ್ನು ದುರವಿಟ್ಟು ಆತ್ಮವಿಶ್ವಾಸ ಧೈರ್ಯದಿಂದ ಬರೆಯುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದರು.

ನಮ್ಮ ಇಲಾಖಾಧಿಕಾರಿ ಶಿವಶಂಕರ ಕರಡಕಲ್ ಅವರು ವಿದ್ಯಾರ್ಥಿಗಳ ಹಿತಾದೃಷ್ಠಿ ಇಟ್ಟುಕೊಂಡು ಎಸ್ಸೆಸ್ಸೆಲ್ಸಿ ಫಲಿತಾಂಶ ಜಿಲ್ಲೆಯಲ್ಲಿ ಉತ್ತಮವಾಗಿ ಬರಲಿ ಎನ್ನುವ ಕಳಕಳಿ ಕಾಳಜಿಯಿಂದ ನುರಿತ ವಿಷಯವಾರು ಶಿಕ್ಷಕರಿಂದ ಇಂತಹ ಕಾರ್ಯಾಗಾರವನ್ನು ಆಯೋಜಿಸಿರುವುದು ಸಂತಸ ತಂದಿದೆ. ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು. ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶಿವಶಂಕರ ಕರಡಕಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಸುಧಾರಣೆಗಾಗಿ ಕುಕನೂರು, ಯಲಬುರ್ಗಾ ಸೇರಿದಂತೆ ಒಟ್ಟು 15 ಬಿಸಿಎಂ ವಸತಿ ನಿಲಯಗಳಲ್ಲಿ ಸುಮಾರು 220ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ 4ದಿನಗಳವರೆಗೆ ಎಸ್ಸೆಸ್ಸೆಲ್ಸಿ ಕಾರ್ಯಾಗಾರವನ್ನು ಈ ತಾಲೂಕು ಹಾಗೂ ಗಂಗಾವತಿ ತಾಲೂಕಿನಲ್ಲಿ ಆಯೋಜಿಸಲಾಗಿದೆ ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಂಡು ಉತ್ತಮ ಫಲಿತಾಂಶವನ್ನು ಪಡೆದು ಇಲಾಖೆಗೆ ಕೀರ್ತಿ ತರಬೇಕು ಎಂದರು.

ಕುಕನೂರು ತಾಪಂ ಇಒ ಸಂತೋಷ ಪಾಟೀಲ ಬಿರಾದಾರ, ಶಿಕ್ಷಕ ಶರಣಪ್ಪ ಕುಂಬಾರ ಮಾತನಾಡಿದರು. ಯಲಬುರ್ಗಾ ತಾಪಂ ಇಒ ನೀಲಗಂಗಾ ಬಬಲಾದಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ ಈ ಸಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 95ಕ್ಕೂ ಹೆಚ್ಚು ಫಲಿತಾಂಶ ಪಡೆದರೆ ಅಂತಹ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟ್ಯಾಪ್ ವಿತರಿಸುವುದಾಗಿ ಭರವಸೆ ನೀಡಿದರು.

ಶಿಕ್ಷಕರಾದ ಆರ್.ಬಿ.ಅಬ್ಬಿಗೇರಿ, ನಿರುಪಾದಿ ಕಟ್ಟನಿ, ವಿರುಪಾಕ್ಷಪ್ಪ ಕುರಿ, ಅಮರೇಶ ಸಿದ್ದಾಪುರ ಇತರರಿದ್ದರು.



ಶರಣಬಸವೇಶ್ವರ ರಥೋತ್ಸವ ಇಂದು

ಕುಕನೂರು: ತಾಲೂಕಿನ ಕೋನಾಪೂರ ಗ್ರಾಮದ ಶ್ರೀಶರಣಬಸವೇಶ್ವರ ಮಹಾರಥೋತ್ಸವ ಫೆ.8ರಂದು ಸಂಜೆ ಅಪಾರ ಭಕ್ತ ಸಮೂಹ ಜರುಗಲಿದೆ.

ಜಾತ್ರಾ ಮಹೋತ್ಸವ ಪ್ರಯುಕ್ತ ಶನಿವಾರ ಗ್ರಾಮದಲ್ಲಿ ಮಹಿಳೆಯರಿಂದ ಕುಂಭಮೇಳ ಜರುಗಿತು. ಗ್ರಾಮದ ಕಲಾವಿದರ ಡೊಳ್ಳು ಮಜಲು ಸಾಥ್ ನೀಡಿದರು. ಅನ್ನಸಂತರ್ಪಣೆ ಸಹ ಜರುಗಿತು.

ಭಾನುವಾರ ಬೆಳಗ್ಗೆ ರಥೋತ್ಸವ ಪ್ರಯುಕ್ತ ನಾನಾ ಧಾರ್ಮಿಕ ಹಾಗೂ ಪೂಜಾ ಕಾರ್ಯಕ್ರಮ ಜರುಗಲಿವೆ. ಸಂಜೆ ಅಪಾರ ಭಕ್ತ ಸಮೂಹ ಮಧ್ಯೆ ರಥೋತ್ಸವ ಜರುಗಲಿದೆ. ತಾಲೂಕಿನ ಕೋನಾಪೂರ ಗ್ರಾಮ ಡೊಳ್ಳು ಕಲಾವಿದರ ತವರೇ ಎಂದು ಹೆಸರು. ಈ ಗ್ರಾಮದಲ್ಲಿ ಡೊಳ್ಳು ಬಾರಿಸುವಲ್ಲಿ ಕಲಾವಿದರ ಅತ್ಯಂತ ಪ್ರವೀಣತೆ ಸಾಧಿಸಿದ್ದಾರೆ. ಯಾವುದೇ ಗ್ರಾಮದ ಕಾರ್ಯಕ್ರಮವಿರಲಿ ಕೋನಾಪೂರ ಡೊಳ್ಳು ಮೇಳದವರನ್ನು ಕರೆಯಿಸುತ್ತಾರೆ. ಹಿಂದೆ ಚಿಕೇನಕೊಪ್ಪ, ಬಳಗಾನೂರಿನ ಲಿಂ. ಚನ್ನವೀರಶರಣರು ಈ ಗ್ರಾಮದಲ್ಲಿ ಬಂದು ಪೂಜಾನುಷ್ಠಾನ ಆಚರಿಸಿದ್ದರು. ಈ ಗ್ರಾಮದ ಮೇಲೆ ಅವರ ಕೃಪಾಕಟಾಕ್ಷ ಸದಾ ಇತ್ತು. ಅಂದು ಅವರು ಪೂಜೆ ಸಲ್ಲಿಸಿ ಆಶೀರ್ವಾದ ಮಾಡಿದ ನಂತರ ಗ್ರಾಮದಲ್ಲಿ ಶರಣಬಸವೇಶ್ವರ ಜಾತ್ರಾ ಮಹೋತ್ಸವವನ್ನು ಆಚರಣೆ ಮಾಡುತ್ತಾ ಗ್ರಾಮಸ್ಥರು ಬಂದಿದ್ದಾರೆ. 2018ರಲ್ಲಿ ನೂತನ ರಥ ಸಹ ನಿರ್ಮಿಸಿದ್ದಾರೆ.



ಕೋನಾಪೂರ ಗ್ರಾಮ ಸದ್ಧರ್ಮದ ಡೊಳ್ಳು ಬಾರಿಸುವ ಗ್ರಾಮವೇಂದೇ ಪ್ರಸಿದ್ಧಿ ಆಗಿದ್ದು, ಈ ಗ್ರಾಮದ ಜಾತ್ರಾ ಮಹೋತ್ಸವ ಕಣ್ತುಂಬಿಕೊಳ್ಳಲು ಜನರ ಕಾತರದಲ್ಲಿದ್ದಾರೆ. ಶನಿವಾರ ಕೋನಾಪೂರ ಗ್ರಾಮದಲ್ಲಿ ಹರಗಿನಡೋಣಿಯ ಸಿದ್ದಲಿಂಗೇಶ್ವರ ಸ್ವಾಮೀಜಿ ಭೇಟಿ ನೀಡಿ ಭಕ್ತರಿಗೆ ಆಶೀರ್ವಾದ ನೀಡಿದ್ದರು.

ಇಂದಿನಿಂದ 'ಶಿವಸಂಚಾರ ನಾಟಕೋತ್ಸವ'

ಕುಷ್ಟಗಿ: ಪಟ್ಟಣದ ಸಮೃದ್ಧಿ ವಿವಿಧೋದ್ದೇಶಗಳ ಅಭಿವೃದ್ಧಿ ಸೇವಾ ಸಂಸ್ಥೆಯ ವತಿಯಿಂದ ಮಾ.8, 9ಮತ್ತು 10ರಂದು ಮೂರು ದಿನಗಳ ಕಾಲ 'ಶಿವಸಂಚಾರ ನಾಟಕೋತ್ಸವ'ವನ್ನು ಆಯೋಜಿಸಲಾಗಿದೆ. ಪ್ರತಿದಿನ ಸಂಜೆ 7 ಗಂಟೆಗೆ ಪಟ್ಟಣದ ಬಸ್ ನಿಲ್ದಾಣದ ಪಕ್ಕದಲ್ಲಿರುವ ಹಸನಸಾಬ ದೋಟಿಹಾಳ ಅವರ ಬಯಲು ಜಾಗದಲ್ಲಿ ನಾಟಕಗಳ ಪ್ರದರ್ಶನ ನಡೆಯಲಿದೆ ಎಂದು ಸಮೃದ್ಧಿ ಸಂಸ್ಥೆಯ ಕಾರ್ಯದರ್ಶಿ ನಬಿಸಾಬ ಕುಷ್ಟಗಿ ಹೇಳಿದರು.

ಪಟ್ಟಣದ ಹಳೆ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲಿ ಮಾತನಾಡಿದ ಅವರು, ನಾಡಿನ ಶಿವಶರಣರ ಜೀವನ ಹಾಗೂ ವೈಚಾರಿಕತೆಯ ಸಂದೇಶಗಳನ್ನು ಸಾರುವ ಉದ್ದೇಶದಿಂದ ಸಾಣೇಹಳ್ಳಿಯ 'ಶಿವ ಸಂಚಾರ' ತಂಡದಿಂದ ಈ ನಾಟಕೋತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಮೂರು ದಿನಗಳ ನಾಟಕಗಳ ಪ್ರದರ್ಶನ ಉಚಿತವಾಗಿದ್ದು, ಪಟ್ಟಣದ ಹಾಗೂ ತಾಲೂಕಿನ ಎಲ್ಲಾ ಜನರು ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಭಾಗವಹಿಸಿ ಈ ನಾಟಕೋತ್ಸವವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಮಾ.8ರಂದು ಸಂಜೆ 7 ಗಂಟೆಗೆ ನಾಟಕೋತ್ಸವದ ಉದ್ಘಾಟನಾ ಸಮಾರಂಭ ನಡೆಯಲಿದೆ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು (ತರಳಬಾಳು ಜಗದ್ಗುರು ಶಾಖಾಮಠ, ಸಾಣೇಹಳ್ಳಿ) ಹಾಗೂ ಕರಿಬಸವ ಶಿವಾಚಾರ್ಯ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದು,ಬೆಂಗಳೂರಿನ ಶರಣ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷರು ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಡಾ.ಸಿ.ಸೋಮಶೇಖರ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಎಚ್.ಪಾಟೀಲ ಅಧ್ಯಕ್ಷತೆ ವಹಿಸಲಿದ್ದು, ಕೆ.ಶರಣಪ್ಪ ವಕೀಲ, ಮಾಜಿ ಶಾಸಕ ಹಸನಸಾಬ ದೋಟಿಹಾಳ, ಅಮರೇಗೌಡ ಪಾಟೀಲ ಬಯ್ಯಾಪುರ, ವಿವಿಧ ಜಿಲ್ಲಾ ಕಸಾಪ ಅಧ್ಯಕ್ಷರು ಮತ್ತು ಸದಸ್ಯರು ಇತರರು ಭಾಗವಹಿಸಲಿದ್ದಾರೆ.

ಸಾಹಿತಿಗಳಾದ ಎಚ್.ವೈ.ಈಟಿ, ಅಮರೇಗೌಡ ಪಾಟೀಲ ಜಾಲಿಹಾಳ, ಕಾ.ಸ.ಸದಸ್ಯ ಬಸವರಾಜ ಎನ್.ಪಾಟೀಲ, ಹನುಮಂತಪ್ಪ ಬಿಜಕಲ್ ಕಂದಕೂರು ಇತರರಿದ್ದರು.

ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾದದ್ದು: ಸಿದ್ದರಾಮ ಸ್ವಾಮಿ

ಶ್ರೀರಾಮನಗರ: ಸಮಾಜದಲ್ಲಿ ಶಿಕ್ಷಣ ವೃತ್ತಿಗೆ ಬಹಳ ಗೌರವವಿದ್ದು, ಶಿಕ್ಷಕರ ವೃತ್ತಿ ಅತ್ಯಂತ ಶೇಷ್ಠವಾದದ್ದು ಎಂದು ಎಂ.ಎಸ್.ಎಂ.ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಎಚ್.ಎಂ.ಸಿದ್ದರಾಮ ಸ್ವಾಮಿ ಹೇಳಿದರು.

ಶ್ರೀರಾಮನಗರ ಸಮೀಪದ ಮರಳಿಯ ರುದ್ರೇಶ್ವರ ಎಸ್.ಎಂ.ಬಿ.ಎಸ್. ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣದಲ್ಲಿ ಶುಕ್ರವಾರದಂದು ಹಮ್ಮಿಕೊಳ್ಳಲಾಗಿದ್ದ ಬಿ.ಇಡಿ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳಿಂದ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಸ್ವಾಗತ ಸಮಾರಂಭ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

2015-16 ಸಾಲಿನಲ್ಲಿ ಎಸ್ ಎಂಬಿಎಸ್ ಶಿಕ್ಷಣ ಮಹಾವಿದ್ಯಾಲಯದ ಬಿ.ಇಡಿ ಕೋರ್ಸ್ ಪ್ರಾರಂಭಗೊಂಡಿದೆ. ಅಲ್ಲಿಂದ ಇಲ್ಲಿಯವರೆಗೆ ಸಂಸ್ಥೆಗೆ ಉತ್ತಮ ಫಲಿತಾಂಶ ತಂದಿರುವ ಪ್ರಶಿಕ್ಷಣಾರ್ಥಿಗಳ ಸಾಧನೆ ಸಂತಸ ತಂದಿದೆ ಎಂದರು.



ಎಂಎಸ್‌ಎಂಎಸ್ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಿದ ಬಡತನ ಹಿನ್ನಲೆಯ ಮಕ್ಕಳು ಇಂದು ಅನೇಕ ಕಡೆಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಸಂಸ್ಥೆ ನಿಮ್ಮದು, ನೀವೂ ಪಾಲುದಾರರಾಗಿದ್ದು, ಎಲ್ಲರೂ ಅಭಿವೃದ್ಧಿಗೆ ಶ್ರಮಿಸಿ ಎಂದು ಶುಭಕೋರಿದರು.

ಎಂಎಸ್‌ಎಂಎಸ್ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಎಚ್.ಎಂ.ಬಸವರಾಜ ಸ್ವಾಮಿ ಮಾತನಾಡಿ, ಸಂಸ್ಥೆಯೂ ವಿಶ್ವವಿದ್ಯಾಲಯ ಮಟ್ಟದಲ್ಲಿ ಉನ್ನತ ಸ್ಥಾನ ಪಡೆದಿದ್ದು, ಅನೇಕರು ಸರ್ಕಾರಿ ಹುದ್ದೆಯಲ್ಲಿದ್ದು. ಸಂಸ್ಥೆಯಿಂದ ಉತ್ತಮ ಶಿಕ್ಷಕರನ್ನು ಸಮಾಜಕ್ಕೆ ನೀಡಿದೆ. ನುರಿತ ಶಿಕ್ಷಕರಿಂದ ಗುಣಮಟ್ಟದ ಶಿಕ್ಷಣ ನೀಡಲು ತಯಾರಿಯಾಗಿದ್ದು, ಅದರ ಸದುಪಯೋಗ ಪಡೆದುಕೊಳ್ಳಿ ಎಂದರು.

ಶಿಕ್ಷಕ ವೃತ್ತಿ ಗೌರವದಿಂದ ಕೂಡಿದ್ದು, ನಿಮ್ಮ ಆಯ್ಕೆ ಶ್ರೇಷ್ಠವಾದದ್ದು, ತಿದ್ದು ತೀಡಲು ಒಳ್ಳೆಯ ವೃತ್ತಿಯಾಗಿದೆ. ಸಂಸ್ಥೆಯೂ ನಿಮಗೆ ಎಲ್ಲರೀತಿಯಿಂದಲೂ ಸಹಕಾರ ನೀಡಲು ಮುಂದೆಯಿದೆ. ಕೋರ್ಸ್ ಮುಗಿದ ನಂತರವೂ ನಿಮ್ಮೊಂದಿಗೆ ಸಂಸ್ಥೆ ಇರುತ್ತದೆ. ಟಿಇಟಿಗೆ ಉಪನ್ಯಾಸಕರ ಸಹಕಾರವಿರುತ್ತದೆ. ಎಲ್ಲಾ ವಿಚಾರದಲ್ಲಿ ಸಂಸ್ಥೆ ಬದ್ಧವಾಗಿರುತ್ತದೆ ಎಂದು ಭರವಸೆ ನೀಡಿದರು.

ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾದ ಎಚ್.ಎಂ. ಸ್ವಾತಿ ಬಸವರಾಜ ಸ್ವಾಮಿ, ಎಂ.ಎಸ್.ಎಂ.ಎಸ್.ಪಿಯು ಹಾಗೂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಮಲ್ಲಿಕಾರ್ಜುನ, ಉಪನ್ಯಾಸಕರಾದ ಅಂಬರೀಶ್ ಕೆ., ಸುಮಂಗಲ, ಸಂಸ್ಥೆಯ ಮ್ಯಾನೇಜರ್ ಶಂಕರ್ ಗೌಡ ಪಾಟೀಲ್, ಎಸ್‌ಎಂಬಿಎಸ್ ಶಿಕ್ಷಣ ಮಹಾವಿದ್ಯಾಲಯದ ಬಿ.ಇಡಿ ಪ್ರಾಂಶುಪಾಲರಾದ ಹುಸೇನ್ ಪೀರ್, ಕೆಆರ್‌ಜಿಎಸ್ ಪ್ರೌಢಶಾಲೆಯ ಮುಖ್ಯಶಿಕ್ಷಕರಾದ ಮೌನೇಶ್ ಬಡಿಗೇರಿ, ವಿದ್ಯಾರ್ಥಿಗಳಾದ ಜಯಶ್ರೀ, ರಾಧಿಕಾ, ಅರುಣ್ ಕುಮಾರ್, ಸಚೀನ್ ಎಂ, ಭಾಗ್ಯಶ್ರೀ ಮಾತನಾಡಿದರು.

ಎಂಎಸ್‌ಎಂಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾದ ಹೆಚ್.ಎಂ.ಪಾರ್ವತಿ, ಆಡಳಿತಾಧಿಕಾರಿಗಳಾದ ಹೆಚ್.ಎಂ. ವಿರೂಪಾಕ್ಷಯ್ಯ ಸ್ವಾಮಿ, ಎಂ.ಎಸ್.ಎಂ.ಎಸ್ ಕಾನೂನು ವಿದ್ಯಾಲಯದ ಶಿಲ್ಪಾ ಬಿರಾದರ್, ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರಾದ ಅಬ್ದುಲ್ ಖಾದರ್ ಜಿಲಾನಿ ಸೇರಿದಂತೆ ಶಿಕ್ಷಣ ಸಂಸ್ಥೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳಿದ್ದರು.

ಕಣ್ಣುಗಳ ಬಗ್ಗೆ ಎಲ್ಲರೂ ಹೆಚ್ಚು ಜಾಗ್ರತೆ ವಹಿಸಿ: ದೊಡ್ಡಯ್ಯ

ಯಲಬುರ್ಗಾ: ಪ್ರತಿಯೊಬ್ಬರು ಕಣ್ಣುಗಳ ಬಗ್ಗೆ ಹೆಚ್ಚು ಗಮನಹರಿಸಬೇಕು ಇಲ್ಲದಿದ್ದರೆ ಜೀವತದ ಕೊನೆಯವರೆಗೊ ನರಕಯಾತನೆ ಅನುಭವಿಸಬೇಕಾಗುತ್ತದೆ ಹೀಗಾಗಿ ಕಣ್ಣುಗಳ ಬಗ್ಗೆ ಯಾರು ಉದಾಸೀನ ಮಾಡದಂತೆ ಎಚ್ಚರವಹಿಸಬೇಕು ಎಂದು ಸ್ಥಳೀಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ದೊಡ್ಡಯ್ಯ ಗುರುವಿನ್ ಹೇಳಿದರು.

ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಹಾಗೂ ಎಂ.ಎಂ.ಜೋಶಿ ನೇತ್ರ ವಿಜ್ಞಾನ ಸಂಸ್ಥೆ ಕೊಪ್ಪಳ ಇವರ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಮನುಷ್ಯನಿಗೆ ಕಣ್ಣುಗಳು ಬಹುಮುಖ್ಯ ಪ್ರತಿವರ್ಷ ಕಣ್ಣಿನ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಕಣ್ಣುಗಳನ್ನು ರಕ್ಷಿಸಿಕೊಳ್ಳುವತ್ತ ಎಲ್ಲರೂ ಮುಂದಾಗಬೇಕು ಎಂದರು.

ಬಡಜನರ ಆರೋಗ್ಯ ಹಿತದೃಷ್ಠಿಯಿಂದ ಇಂತಹ ಶಿಬಿರಗಳನ್ನು ಪತ್ತಿನ ಎಲ್ಲಸರ್ವ ಸದಸ್ಯರು ಸೇರಿ ಈ ಶಿಬಿರವನ್ನು ಆಯೋಜಿಸಿದ್ದೇವೆ.ಇದರಿಂದ ಬಡವರ ಪಾಲಿಗಿತೀ ಶಿಬಿರ ಆಶಾಕಿರಣವಾಗಿದೆ ಎಂದು ಹೇಳಿದರು.



ಡಾ.ಶಿವನಗೌಡ ದಾನರಡ್ಡಿ ಹಾಗೂ ಪಪಂ ಮಾಜಿ ಸದಸ್ಯ ವಸಂತ ಭಾವಿಮನಿ ಮಾತನಾಡಿ, ಇನ್ನೂ ಆರ್ಥಿಕವಾಗಿ ಹಿಂದುಳಿದ ಕಡು ಬಡವರ ಕಣ್ಣುಗಳ ಹಿತರಕ್ಷಣೆಗಾಗಿ ಈ ಕೃಷಿ ಪತ್ತಿನ ಸಹಕಾರ ಸಂಘ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರಗಳನ್ನು ಆಯೋಜಿಸಿರುವುದು ಸಮಾಜಮುಖಿ ಕಾರ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ 105 ಜನರ ಕಣ್ಣುಗಳನ್ನು ತಪಾಸಣೆ ಮಾಡಿ ಅವರುಗಳ ಪೈಕಿ ಪೊರೆ ಹೊಂದಿದ 40 ಜನರನ್ನು ಶಸ್ತ್ರ ಚಿಕಿತ್ಸೆಗೆ ಕೊಪ್ಪಳದ ಎಂ.ಎಂ.ಜೋಶಿ ನೇತ್ರ ವಿಜ್ಞಾನ ಸಂಸ್ಥೆ ಕಣ್ಣಿನ ಆಸ್ಪತ್ರೆಗೆ ಶಿಫಾರಸ್ಸು ಮಾಡಲಾಯಿತು.

ಪ್ರಾ.ಕೃ.ಪ.ಸ.ಸಂ.ನಿ ಉಪಾಧ್ಯಕ್ಷೆ ರೇಣುಕಾ ಫ ಉಪ್ಪಾರ, ಎಂ.ಎಂ.ಜೋಶಿ ನೇತ್ರ ವಿಜ್ಞಾನ ಸಂಸ್ಥೆಯ ಬಸಯ್ಯ ಹಿರೇಮಠ, ಕೀರ್ತಿ, ಭಾಗ್ಯಲಕ್ಷ್ಮೀ, ಅಶ್ವಿನಿ, ಪಪಂ ಮಾಜಿ ಅಧ್ಯಕ್ಷರಾದ ಅಂದಯ್ಯ ಕಳ್ಳಿಮಠ, ಅಮರೇಶ ಹುಬ್ಬಳ್ಳಿ, ಜಿಲ್ಲಾ ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಬಸವರಾಜ ಗೌರಾ, ಕುಕನೂರ ಪಪಂ ಮಜಿ ಅಧ್ಯಕ್ಷ ಶಂಭು ಜೋಳದ, ಫಕೀರಪ್ಪ ಉಪ್ಪಾರ, ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಬಸವರಾಜಗೌಡ ಪೊಲೀಸ್ ಪಾಟೀಲ್ ಹಾಗೂ ಪ್ರಾ.ಕೃ.ಪ.ಸ.ಸಂಘದ ಸರ್ವ ನಿರ್ದೇಶಕರು ಇದ್ದರು.

ಕಿರುಸುದ್ದಿ

ಕೆಕೆಆರ್‌ಡಿಬಿ ಅನುದಾನದಲ್ಲಿ ಸ್ಪಷ್ಟತೆ ಇಲ್ಲ



ಕುರುಗೋಡು: ರಾಜ್ಯ ಬಜೆಟ್‌ನಲ್ಲಿ ಉರ್ದು ಶಾಲೆಗಳ ಅಭಿವೃದ್ಧಿಗೆ 400 ಕೋಟಿ ಅನುದಾನ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಭಾಗ್ಯ, ಕೆಕೆಆರ್‌ಡಿಬಿ ಅನುದಾನದ ಸ್ಪಷ್ಟತೆ ಇಲ್ಲ, ಬಳ್ಳಾರಿ ವಿಮಾನ ನಿಲ್ದಾಣದ ಪ್ರಸ್ತಾಪ ಇಲ್ಲ, ಹೊಸ ತಾಲೂಕು ಕೇಂದ್ರಗಳಿಗೆ ಮೂಲಸೌಲಭ್ಯ ಒದಗಿಸಿಲ್ಲ, ಕೃಷಿಗೆ ಹೆಚ್ಚು ಒತ್ತು ಕೊಟ್ಟಿಲ್ಲ ಎಂದು ಬಿಜೆಪಿ ಮಂಡಲ ಅಧ್ಯಕ್ಷ ಮದಿರೆ ಕುಮಾರಸ್ವಾಮಿ ಹೇಳಿದ್ದಾರೆ.

ರಾಷ್ಟ್ರೀಯ ಸಾಹಿತ್ಯ ಶ್ರೀ ಪ್ರಶಸ್ತಿಗೆ ಡಾ.ಗೋವಿಂದ ಭಾಜನ



ಸಿರುಗುಪ್ಪ: ಇಲ್ಲಿನ ನೇತ್ರ ಕಲಾ ಸಂಘವು ಕೊಡಮಾಡುವ ರಾಷ್ಟ್ರೀಯ ಸಾಹಿತ್ಯ ಶ್ರೀ ಪ್ರಶಸ್ತಿಗೆ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಹಿರಿಯ ಸಹಾಯಕ ಪ್ರಾಧ್ಯಾಪಕ ಡಾ.ಗೋವಿಂದ ಅವರು ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ಬಳ್ಳಾರಿಯ ಜೋಳದರಾಶಿ ದೊಡ್ಡನಗೌಡರ ರಂಗ ಮಂದಿರದಲ್ಲಿ ಮಾ.8ರಂದು ಜರುಗುವ ರಾಷ್ಟ್ರ ಮತ್ತು ರಾಜ್ಯಮಟ್ಟದ ಪ್ರಶಸ್ತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಪ್ರಶಸ್ತಿ ಆಯ್ಕೆ ಮಾಡಿದ ಸಂಘದ ಪದಾಧಿಕಾರಿಗಳಿಗೆ ಡಾ.ಗೋವಿಂದ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

ಕೆಚ್ಚಿನ ಬಂಡಿ ಯುವಕರಿಂದ ಸ್ವಚ್ಛತಾ ಜಾಗೃತಿ



ಹಗರಿಬೊಮ್ಮನಹಳ್ಳಿ: ತಾಲೂಕಿನ ಕೆಚ್ಚಿನಬಂಡಿ ಗ್ರಾಮದ ಯುವಕ ಸಂಘ ಮತ್ತು ಗ್ರಾಮಸ್ಥರಿಂದ ಸ್ವಚ್ಛತೆಯ ಅಭಿಯಾನದ ಮೂಲಕ ಅರಿವು ಮೂಡಿಸಲಾಯಿತು. ಗುರುವಾರ ಕೆಚ್ಚಿನ ಬಂಡಿ ಗ್ರಾಮದ ಜನರು ಹಲವು ಸಾಂಕ್ರಾಮಿಕ ರೋಗಗಳನ್ನು ತಡೆಯಲು ಆರೋಗ್ಯಕರ ಜೀವನಕ್ಕೆ ಸ್ವಚ್ಛತೆ ಅಗತ್ಯ ಎಂದು ಜಾಗೃತಿ ಮೂಡಿಸಿದರು. ಎಲ್ಲಾ ಅಂಗಡಿಯ ಮಾಲೀಕರು ಕಸವನ್ನು ಎಲ್ಲೆಂದರಲ್ಲಿ ಎಸೆಯದೇ ಅಂಗಡಿ ಮುಂಗಟ್ಟುಗಳ ಬಳಿ ಕಸದ ಬುಟ್ಟಿಗಳನ್ನು ಇರಿಸಿಕೊಳ್ಳುವಂತೆ ಗ್ರಾಪಂ ಕಸ ವಿಲೇವಾರಿ ವಾಹನಕ್ಕೆ ಕಸವನ್ನು ಹಾಕಬೇಕೆಂದು ಮನವಿ ಪತ್ರದ ಮುಖಾಂತರ ಗ್ರಾಮದ ಜನತೆಯಲ್ಲಿ ಯುವ ಸಮಿತಿಯ ವತಿಯಿಂದ ಜಾಗೃತಿ ಮೂಡಿಸಲಾಯಿತು. ಯುವ ಸಮಿತಿ ಮುಖಂಡರಾದ ನಾಗರಾಜ, ವಿಶ್ವ ವೀರೇಶ್, ಉಲ್ಲಾಸ, ಬಿ.ರವಿ, ಸಿ.ಪ್ರವೀಣ್ ಸೇರಿದಂತೆ ಗ್ರಾಮಸ್ಥರಾದ ಮಂಜುನಾಥ ಕೋಡಿಹಳ್ಳಿ, ವಿ.ಅಶೋಕ್, ಅಲಬೂರು ಸಂತೋಷ ಸೇರಿದಂತೆ ಇತರರಿದ್ದರು.

ಅಕ್ಷರ ಕಲರವ ಪುಸ್ತಕ ಬಿಡುಗಡೆ



ಹೂವಿನಹಡಗಲಿ: ಶಾಲಾ ಹಂತದಲ್ಲಿ ಪುಸ್ತಕಗಳನ್ನು ಹೊರತರುವ ಪ್ರಯತ್ನ, ಸಂಚಿಕೆ ಈ ಸಂಸ್ಥೆಯ ಶೈಕ್ಷಣಿಕ ಪ್ರಗತಿಗೆ ಸಾಕ್ಷಿಯಾಗಿದೆ ಎಂದು ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ರಫಿ ಅಹಮ್ಮದ್ ಖವಾಸ ಹೇಳಿದರು.

ತಾಲೂಕಿನ ಹೊಳಲು ಸೇಂಟ್ ಥಾಮಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಮಕ್ಕಳ ಬೀಳ್ಕೊಡುಗೆ, ಸರಸ್ವತಿ ಪೂಜಾ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅಕ್ಷರ ಕಲರವ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು. ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಂ.ಪಿ. ಎಂ.ಶಿವಪ್ರಕಾಶ ಮಾತನಾಡಿ, ಯಾವ ಶಾಲೆಯಲ್ಲಿ ಉತ್ತಮ ಶಿಕ್ಷಕರಿರುತ್ತಾರೋ ಅಂತಹ ಶಾಲೆಯು ಉತ್ತಮ ಫಲಿತಾಂಶ ಪಡೆಯುವಲ್ಲಿ ಯಶಸ್ವಿಯಾಗುತ್ತದೆ ಎಂದರು. ಸಂಸ್ಥೆಯ ಅಧ್ಯಕ್ಷೆ ಶ್ವೇತಾ ಹಾವನೂರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು, ಸಂಸ್ಥೆಯ ಕಾರ್ಯದರ್ಶಿ ಕುಮಾರ ಹಾವನೂರು, ರಾಣೆಬೆನ್ನೂರು ಜಿ.ಪಿರಾಜರತ್ನಂ ಟ್ರಸ್ಟ್‌ನ ಅಧ್ಯಕ್ಷೆ ಪರಿಮಳ ನಾಗರಾಜ, ಕಾರ್ಯದರ್ಶಿ ನಾಗರಾಜ ಗವಿಯಪ್ಪನವರ್, ಶಾಲಾ ಮುಖ್ಯ ಶಿಕ್ಷಕ ರವಿಕುಮಾರ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ವಿನೂತ ಹಿರೇಮಠ ಮತ್ತು ಗುಳ್ಳನಗೌಡ ನಿರ್ವಹಿಸಿದರು.



ಗಾದಿಗನೂರು: ಹೊಸಪೇಟೆ ತಾಲೂಕು ಸುಕ್ಷೇತ್ರ ಶ್ರೀಜಡೆಸಿದ್ಧ ಶಿವಯೋಗಾಶ್ರಮ ಮಠ ಕಾಕಬಾಳುನಿಂದ 13ನೇ ವರ್ಷದ ಪಾದಯಾತ್ರೆ, ಆರಂಭಗೊಂಡಿತು. ಸುಮಾರು 200 ಪಾದಯಾತ್ರೆಗಳು ಶ್ರೀಶೈಲ ಶ್ರೀಭ್ರಮರಾಂಭ ಮಲ್ಲಿಕಾರ್ಜುನ ದರ್ಶನಕ್ಕೆ ಹೊರಟರು.

ದೊಡ್ಡಬಸವೇಶ್ವರ ಜಾತ್ರೆ: ಖರೀದಿ ಭರಾಟೆ

ಕುರುಗೋಡು: ಪಟ್ಟಣ ಶ್ರೀದೊಡ್ಡಬಸವೇಶ್ವರ, ಗಡಿಭಾಗದ ಗುಳ್ಯಂ, ತಾಲೂಕಿನ ಶರಣ ಬಸವೇಶ್ವರ ಜಾತ್ರೆಯ ಎಚ್.ವೀರಾಪುರ. ಸೇರಿದಂತ ಸಂಜೆಯಾದರೆ ಜಾತ್ರೆಯಲ್ಲಿ ನಾರಿಯರು ಬಳೆ ಸದ್ದು ಬಳೆ ಅಂಗಡಿಗಳು ಮಕ್ಕಳ ಆಟಿಕೆ ಸಾಮಾನುಗಳು, ಕಡ್ಲೆ ಮಂಡಾಳು, ದಿನಸಿ ಅಂಗಡಿ, ಮನೆಯ ಅಗತ್ಯ ವಸ್ತುಗಳ ಮಾರಾಟದ ಅಂಗಡಿಗಳಲ್ಲಿ ವ್ಯಾಪಾರ ಭರ್ಜರಿಯಾಗಿ ನಡೆದಿದೆ.

ಪಟ್ಟಣ ಗ್ರಾಮೀಣ ಸ್ಥಳೀಯ ಜನರು ಮತ್ತು ಕುರುಗೋಡು ಪಟ್ಟಣದ ವ್ಯಾಪ್ತಿಯ ಹಳ್ಳಿಗಳ ಜನರು ಜಾತ್ರೆಯಲ್ಲಿ ಇಷ್ಟದ ವಸ್ತುಗಳನ್ನು ಕೊಂಡುಕೊಳ್ಳಲು ಪಟ್ಟಣದಲ್ಲಿ ಜಮಾಯಿಸುತ್ತಿದ್ದಾರೆ. ಜಾತ್ರೆ ವ್ಯಾಪಾರ ವಹಿವಾಟಿನಲ್ಲಿ ಹೆಣ್ಣುಮಕ್ಕಳದೆ ಕಾರುಬಾರು ಜೋರಾಗಿ ನಡೆದಿದ್ದು, ಬಳೆ ಅಂಗಡಿಗಳು, ಹೆಣ್ಣುಮಕ್ಕಳ ಇತರೆ ಅಗತ್ಯ ವಸ್ತುಗಳ ಖರೀದಿ ಜೋರಾಗಿ ನಡೆಯುತ್ತಿದೆ. ದೊಡ್ಡಬಸವೇಶ್ವರ ದೇವಸ್ಥಾನದ ಮುಂಭಾಗದ ಮುಷ್ಟಗಟ್ಟೆ ರಸ್ತೆಯ ಜೋಡಿ ರಸ್ತೆಯಲ್ಲಿ ನಾಲ್ಕು ಸಾಲಿನಲ್ಲಿ ಹಾಕಿರುವ ಬಳೆ ಅಂಗಡಿಗಳು ಹೆಣ್ಣುಮಕ್ಕಳಿಂದ ಗಿಜಿಗುಡುತ್ತಿವೆ. ಮಕ್ಕಳ ಆಟಿಕೆ ಸಾಮಾನುಗಳ ಅಂಗಡಿಗಳ ಮುಂದೆ ಮಕ್ಕಳು ತಮ್ಮ ಪೋಷಕರಿಂದ ಆಟಿಕೆ ಸಾಮಾನುಗಳನ್ನು ಕೊಡಿಸಿಕೊಳ್ಳಲು ಮುಗಿಬಿದ್ದಿರುವುದು ಕಂಡುಬರುತ್ತದೆ. ಸಂಜೆ ಹೊತ್ತು ಜಾತ್ರೆಯಲ್ಲಿ ವ್ಯಾಪಾರ ಮಾಡಲು ಸುತ್ತಲಿನ ಹಳ್ಳಿಗಳಿಂದ ಬೈಕುಗಳಲ್ಲಿ, ಆಟೋಗಳಲ್ಲಿ, ರೈತಾಪಿ ವರ್ಗದವರು ಎತ್ತಿನ ಬಂಡಿಗಳು, ಟ್ರ್ಯಾಕ್ಟರ್‌ಗಳಲ್ಲಿ ಪಟ್ಟಣಕ್ಕೆ ಬರುತ್ತಿದ್ದಾರೆ. ವ್ಯಾಪಾರದ ಜನ ದಟ್ಟನೆಯಲ್ಲಿ ಅಂಗಡಿ ವ್ಯಾಪಾರಿಗಳು ದುಡಿಮೆ ಮಾಡಿಕೊಳ್ಳುತ್ತಿದ್ದಾರೆ.



ಕುರುಗೋಡು: ಪಟ್ಟಣ ಶ್ರೀದೊಡ್ಡಬಸವೇಶ್ವರ, ಗಡಿಭಾಗದ ಗುಳ್ಯಂ, ತಾಲೂಕಿನ ಶರಣ ಬಸವೇಶ್ವರ ಜಾತ್ರೆಯ ಎಚ್. ವೀರಾಪುರ. ಸೇರಿದಂತ ಸಂಜೆಯಾದರೆ ಜಾತ್ರೆಯಲ್ಲಿ ನಾರಿಯರು ಬಳೆ ಸದ್ದು ಬಳೆ ಅಂಗಡಿಗಳು ಮಕ್ಕಳ ಆಟಿಕೆ ಸಾಮಾನುಗಳು, ಕಡ್ಲೆಮಂಡಾಳು, ದಿನಸಿ ಅಂಗಡಿ, ಮನೆಯ ಅಗತ್ಯ ವಸ್ತುಗಳ ಮಾರಾಟದ ಅಂಗಡಿಗಳಲ್ಲಿ ವ್ಯಾಪಾರ ಭರ್ಜರಿಯಾಗಿ ನಡೆದಿದೆ.

ಬಾಲ್ಯ ವಿವಾಹ ಮುಕ್ತಿ ರಥಕ್ಕೆ ಸಂಸದ ಈ.ತುಕಾರಾಮ್ ಚಾಲನೆ

ಬಾಲ್ಯ ವಿವಾಹ ತಡೆಗೆ ಕೈಜೋಡಿಸಿ

ಬಳ್ಳಾರಿ: ಬಾಲ್ಯ ವಿವಾಹವು ಶಿಕ್ಷಾರ್ಹ ಅಪರಾಧವಾಗಿದ್ದು, ಇದರಿಂದ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಹಾಗಾಗಿ ಬಾಲ್ಯವಿವಾಹ ತಡೆಗಟ್ಟಲು ಎಲ್ಲರ ಪಾತ್ರ ಬಹು ಮುಖ್ಯವಾಗಿದೆ ಎಂದು ಸಂಸದ ಈ.ತುಕಾರಾಮ್ ಹೇಳಿದರು.

'ಬಾಲ್ಯವಿವಾಹ ಮುಕ್ತ ಭಾರತ' 100 ದಿನಗಳ ಅಭಿಯಾನದ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಸಹಾಯವಾಣಿ 1098/112 ಹಾಗೂ ರೀಚ್ ಸಂಸ್ಥೆ ಆಶ್ರಯದಲ್ಲಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಹಮ್ಮಿಕೊಂಡಿದ್ದ ಬಾಲ್ಯವಿವಾಹ ಮುಕ್ತಿ ರಥ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು.

ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಮಾತನಾಡಿ, 18 ವರ್ಷದೊಳಗಿನ ಹೆಣ್ಣು ಮಕ್ಕಳಲ್ಲಿ ದೈಹಿಕ, ಮಾನಸಿಕ ಹಾಗೂ ಶಾರೀರಿಕ ಬೆಳವಣಿಗೆಯು ತೀವ್ರವಾಗಿರುತ್ತದೆ. ಮಕ್ಕಳ ಬಾಲ್ಯವು ಅತ್ಯಮೂಲ್ಯವಾದದ್ದು. ಮಕ್ಕಳು ಅವರ ಹಕ್ಕುಗಳನ್ನು ಆನಂದಿಸಬೇಕಾದ ಸಮಯದಲ್ಲಿ ಸೂಕ್ತ ವಾತಾವರಣ ನಿರ್ಮಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ರೀಚ್ ಸಂಸ್ಥೆಯ ಕಾರ್ಯದರ್ಶಿ ಜಿ.ಎನ್.ಸಿಂಹ ಮಾತನಾಡಿ, 2024 ನ.27ರಂದು ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಸಚಿವಾಲಯವು 'ಬಾಲ್ಯ ವಿವಾಹ ಮುಕ್ತ ಭಾರತ' ಎಂಬ ಅಭಿಯಾನವನ್ನು ಪ್ರಾರಂಭಿಸಿದ್ದು, ಇದರಿಂದ ಬಾಲ್ಯ ವಿವಾಹಗಳ ಸಂಖ್ಯೆ ಕಡಿಮೆಯಾಗುತ್ತಾ ಬಂದಿದೆ. 2030ಕ್ಕೆ ಬಾಲ್ಯ ವಿವಾಹ ಮುಕ್ತ ಸಮಾಜ ನಿರ್ಮಾಣ ಮಾಡಬೇಕು. ಬಾಲ್ಯ ವಿವಾಹ ಕುರಿತು ನಗರ ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ಅರಿವು ಮೂಡಿಸಬೇಕು ಎಂಬ ಮುಖ್ಯ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಅಧಿಕಾರಿಗಳು, ಮಕ್ಕಳು, ಸಾರ್ವಜನಿಕರು ಪ್ರತಿಯೊಬ್ಬರು ಸೇರಿ ಬಾಲ್ಯ ವಿವಾಹ ಮುಕ್ತ ಮಾಡುವಲ್ಲಿ ಕೈಜೋಡಿಸಬೇಕು.



> **ಬಾಲ್ಯವಿವಾಹವನ್ನು ನೆರವೇರಿಸಿದ, ಪ್ರೋತ್ಸಾಹಿಸಿದ ಮತ್ತು ಪಾಲ್ಗೊಂಡವರಿಗೂ ಸಹ ಜೈಲು ಶಿಕ್ಷೆ ಜೊತೆಗೆ ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದ್ದು, ಯಾರು ಸಹ ಬಾಲ್ಯ ವಿವಾಹಗಳಲ್ಲಿ ಭಾಗವಹಿಸಬಾರದು ಮತ್ತು ಯಾವುದೇ ರೀತಿಯ ಬಾಲ್ಯವಿವಾಹಗಳಿಗೆ ಅವಕಾಶ ನೀಡಬಾರದು.**
> ■ ಡಾ.ಸುಮನ್ ಡಿ ಪೆನ್ನೇಕರ್, ಎಸ್ಪಿ

ಬಾಲ್ಯ ವಿವಾಹ ಮುಕ್ತಿ ರಥ ವಾಹನವು ಬಳ್ಳಾರಿ ಆಯ್ದ ತಾಲ್ಲೂಕು ಮತ್ತು ಹಳ್ಳಿಗಳಲ್ಲಿ ಸಂಚರಿಸಲಿದ್ದು, ಸುಮಾರು 30 ರಿಂದ 50 ಹಳ್ಳಿಗಳಲ್ಲಿ ಜಾಗೃತಿ ಮೂಡಿಸಲಿದೆ ಎಂದರು.

ಬಳಿಕ ಗಣ್ಯರು 'ಬಾಲ್ಯ ವಿವಾಹ ನಿಷೇಧಿಸಿದೆ, ಎಚ್ಚರ' ಎಂಬ ಭಿತ್ತಿಪತ್ರ ಬಿಡುಗಡೆ ಮಾಡಿದರು. ಇದಕ್ಕೂ ಮುನ್ನ ಬಾಲ್ಯ ವಿವಾಹ ನಿಷೇಧ ಕುರಿತ ಪ್ರತಿಜ್ಞೆ ಬೋಧಿಸಲಾಯಿತು.

ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಜಿಪಂ ಸಿಇಒ ಮಹಮ್ಮದ್ ಹ್ಯಾರಿಸ್ ಸುಮೈರ್, ಎಡಿಸಿ ಮಹಮ್ಮದ್ ಝುಬೇರ್ ಎನ್., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ.ಎಂ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, 100ಕ್ಕೂ ಹೆಚ್ಚು ವಿದ್ಯಾರ್ಥಿಗಳು, ರೀಚ್ ಸಂಸ್ಥೆಯ ಸಿಬ್ಬಂದಿ ಇದ್ದರು.

ಸಾಮೂಹಿಕ ವಿವಾಹ ಭಾಗ್ಯವಂತರ ಮದುವೆ

ವಿಜಯನಗರ: ಸಾಮೂಹಿಕ ವಿವಾಹ ಬಡವರ ಮದುವೆಯಲ್ಲ, ಅದು ಭಾಗ್ಯವಂತರ ಮದುವೆ ಎಂದು ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್ ಹೇಳಿದರು.

ಕರ್ನಾಟಕ ನಾಗರಿಕ ಹಿತಾ ರಕ್ಷಣಾ ಸೇವಾ ಟ್ರಸ್ಟ್ ರಜತ ಮಹೋತ್ಸವದ ಅಂಗವಾಗಿ ಹೊಸಪೇಟೆಯ ಆರ್‌ಟಿಒ ಕಚೇರಿ ಸಮೀಪದ ಆಂಜನೇಯ ದೇವಸ್ಥಾನದಲ್ಲಿ ಏರ್ಪಡಿಸಿದ್ದ ಉಚಿತ ಸಾಮೂಹಿಕ ರಜತ ಮಹೋತ್ಸವದಲ್ಲಿ ನವ ವಧು- ವರರನ್ನು ಆಶೀರ್ವದಿಸಿ ಮಾತನಾಡಿದರು.

ಸಾಮೂಹಿಕ ವಿವಾಹಗಳಿಂದ ದುಂದುವೆಚ್ಚಕ್ಕೆ ಕಡಿವಾಣ ಬೀಳಲಿದೆ. ಮಕ್ಕಳ ಮದುವೆಗಾಗಿ ಪೋಷಕರು ಸಾಲ ಮಾಡುವುದೂ ತಪ್ಪಲಿದೆ. ಸರಳ ಹಾಗೂ ಸಾಮೂಹಿಕ ವಿವಾಹಗಳು ಆದರ್ಶ ಸಮಾಜಕ್ಕೆ ಬುನಾದಿಯಾಗಲಿದೆ ಎಂದು ಹೇಳಿದರು.

ಹುಡಾ ಅಧ್ಯಕ್ಷ ಎಚ್.ಎನ್.ಎಫ್. ಇಮಾಮ್ ನಿಯಾಜಿ ಮಾತನಾಡಿ, ಕರ್ನಾಟಕ ನಾಗರಿಕ ಹಿತಾ ರಕ್ಷಣಾ ಸೇವಾ ಟ್ರಸ್ಟ್ ಕೆಲ ವರ್ಷಗಳಿಂದ ನಿರಂತರವಾಗಿ ಸಾಮೂಹಿಕ ವಿವಾಹ ಕಾರ್ಯಕ್ರಮ ನಿರ್ವಹಿಸುವ ಮೂಲಕ ಸಾವಿರಾರ ಜೋಡಿಗಳ ಹೊಸ ಜೀವನಕ್ಕೆ ನಾಂದಿ ಹಾಡಿದೆ. ಟ್ರಸ್ಟ್‌ನ ಎಲ್ಲ ಸದಸ್ಯರು ತಮ್ಮ ಮನೆಯ ಕಾರ್ಯಕ್ರಮ ಎಂಬಂತೆ ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವುದು ಇತರರಿಗೆ ಮಾದರಿಯಾಗಿದೆ ಎಂದು ಮೆಚ್ಚುಗೆ ಸೂಚಿಸಿದರು.

ಇದಕ್ಕೂ ಮುನ್ನ ಕಾರ್ಯಕ್ರಮಕ್ಕೆ ಆಗಮಿಸಿದ್ದ ಶಾಸಕ ಎಚ್.ಆರ್.ಗವಿಯ್ಯಪ್ಪ ನವ ದಂಪತಿಗಳನ್ನು ಆಶೀರ್ವದಿಸಿ, ಬೇರೊಂದು ಕಾರ್ಯಕ್ರಮದ ನಿಮಿತ್ತ ನಿರ್ಗಮಿಸಿದರು. ಹೊಸಪೇಟೆಯ ಕೊಟ್ಟೂರುಸ್ವಾಮಿ ಮಠದ ಜ.ಬಸವಲಿಂಗ ಸ್ವಾಮೀಜಿ, ಪೂರ್ಣಾನಂದ ಮಾತಂಗ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಟ್ರಸ್ಟ್‌ನ ರಾಜ್ಯ ಅಧ್ಯಕ್ಷ ಕಾಸಿಟ್ಟಿ ಉಮಾಪತಿ ಅಧ್ಯಕ್ಷತೆ ವಹಿಸಿದ್ದರು. ನಗರಸಭೆ ಆಯುಕ್ತ ಎರಗುಡಿ ಶಿವಕುಮಾರ್, ನಗರಸಭೆ ಉಪಾಧ್ಯಕ್ಷ ಜೀವರತ್ನಂ, ಸ್ಥಾಯಿ ಸಮಿತಿ ಅಧ್ಯಕ್ಷ ಸರವಣನ್, ಜಿಲ್ಲಾ ಗ್ಯಾರೆಂಟಿ ಸಮಿತಿ ಅಧ್ಯಕ್ಷ ಕುರಿ ಶಿವುಮೂರ್ತಿ, ನಗರಸಭೆ ಸದಸ್ಯ ತಾರಳ್ಳಿ ಜಂಬುನಾಥ, ಬಿಜೆಪಿ ಮಂಡಲ ಅಧ್ಯಕ್ಷ ಶಂಕರ್ ಮೇಟಿ, ಗುಜ್ಜಲ್ ಗಣೇಶ್, ಚಂದ್ರು ದೇವಲಾಪುರ, ಗುಜ್ಜಲ್ ಉಮೇಶ್, ಗೌಳಿ ರುದ್ರಪ್ಪ, ಉಮಾದೇವಿ, ಅನುರಾಧ, ಮರಿ ಕಣಿಮಪ್ಪ ವೇದಿಕೆ ಮೇಲೆ ಉಪಸ್ಥಿತರಿದ್ದರು.



ರಂಗಭೂಮಿ ಕಲೆ ಉಳಿಸಿ: ಮರಿ ರಾಮಣ್ಣ

ಹಗರಿಬೊಮ್ಮನಹಳ್ಳಿ: ಇಂದಿನ ಆಧುನಿಕ ಜಗತ್ತಿನಲ್ಲಿ ಮೊಬೈಲ್ ವಾಟ್ಸ್ಆ್ಯಪ್, ಫೇಸ್ ಬುಕ್, ಇನ್ಸ್ಟಾಗ್ರಾಮ್ ಇತರ ಸಾಮಾಜಿಕ ಜಾಲತಾಣಗಳಲ್ಲಿ ಹರಿ ಬಿಡುವ ರೀಲ್ಸ್ ಹಾವಳಿ ಮಧ್ಯೆ ಗ್ರಾಮೀಣ ಭಾಗದಲ್ಲಿ ಅಲ್ಲೊಂದು ಇಲ್ಲೊಂದು ಇಂತಹ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ನಾಟಕಗಳು ಪ್ರದರ್ಶನಗೊಳ್ಳುತ್ತಿವೆ ಎಂದು ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ತಿಳಿಸಿದರು.

ತಾಲೂಕಿನ ಚಿಲಗೋಡು ಗ್ರಾಮದಲ್ಲಿ ಉಚಿತವಾಗಿ ರಕ್ತ ರಾತ್ರಿ ಪೌರಾಣಿಕ ನಾಟಕವನ್ನು ಪ್ರದರ್ಶಿಸಲಾಯಿತು.ಈ ನಾಟಕ ಪ್ರದರ್ಶನ ಮುನ್ನ ಉದ್ಘಾಟಿಸಿ ಮಾತನಾಡಿದರು.

ರಂಗಭೂಮಿ ಕಲೆ ನಮ್ಮ ದೇಶದ ಪುರಾತನ ಕಾಲದಿಂದಲೂ ಬಂದಿರುವುದಾಗಿದೆ ರಂಗಭೂಮಿ ಕಲೆಯನ್ನು ಕಲಾವಿದರನ್ನು ಪ್ರೋತ್ಸಾಹಿಸುವ ಕೆಲಸವಾಗಬೇಕಿದೆ ಎಂದರು.

ಗ್ಯಾರಂಟಿ ಅನುಷ್ಠಾನದ ಜಿಲ್ಲಾ ಅಧ್ಯಕ್ಷ ಕುರಿ ಶಿವಮೂರ್ತಿ ಮಾತನಾಡಿ, ಹಿಂದಿನ ಕಾಲದಲ್ಲಿ ಸಿನಿಮಾಗಳು ಅಷ್ಟೇನೂ ಇರಲಿಲ್ಲ ಧಾರಾವಾಹಿಗಳು ಮೊಬೈಲ್ ಇವು ಯಾವು ಇರಲಿಲ್ಲ.ಹೆಚ್ಚಾಗಿ ನಾಟಕಗಳು ಇರುತಿದ್ದವು. ಆಧ್ಯಾತ್ಮಕ ಮನೋಭಾವ ನಾಡಿನ ಕಲೆ ಸಂಸ್ಕೃತಿ ಪರಂಪರೆ ಬಿಂಬಿಸುವ ಜೊತೆಗೆ ಮನೋರಂಜನೆಯನ್ನು ಉಂಟು ಮಾಡುತ್ತಿದ್ದವು. ಇಂತಹ ರಂಗಕಲೆಯನ್ನು ಉಳಿಸಿಕೊಂಡು ಹೋಗಬೇಕಿದೆ ಎಂದರು.

ಕೊಟ್ಟೂರಿನ ವಿಟಿಎಸ್ ತಿಪ್ಪೇಸ್ವಾಮಿ ವೆಂಕಟೇಶ್ ಮಾತನಾಡಿ, ವೇಗದ ಜಗತ್ತಿನಲ್ಲಿ ಕೆಲಸ ಕಾರ್ಯಗಳ ಒತ್ತಡಗಳ ಮಧ್ಯೆ ಗ್ರಾಮೀಣ ಭಾಗದಲ್ಲಿ ಕಲೆ ಸಾಹಿತ್ಯ ರಂಗಕಲೆ ನಾಟಕಗಳು ಜಾತ್ರೆ ಹಬ್ಬ ಉತ್ಸವಗಳಲ್ಲಿ ನಾಟಕ ಬಯಲಾಟ ಪ್ರದರ್ಶನ ಮಾಡುವವರನ್ನು ಜನರನ್ನು ರಂಜಿಸುವ ಜೊತೆಗೆ ರಂಗ ಕಲೆ ಮತ್ತು ಕಲಾವಿದರನ್ನು ಉಳಿಸಿ, ಬೆಳೆಸಿ ಎಂದರು.

ಬ್ಲ್ಯಾಕ್ ಕಾಂಗ್ರೆಸ್ ಅಧ್ಯಕ್ಷ ಕೋರಿ ಗೋಣಿ ಬಸಪ್ಪ ರಕ್ತರಾತ್ರಿ ನಾಟ ಭೀಮನ ಪಾತ್ರದಲ್ಲಿ ನೋಡುಗರ ಗಮನ ಸೆಳೆದರು. ಚಿಲಗೋಡು ಗ್ರಾಮದ ಮುಖಂಡರು ಕಲಾವಿದರು ಗ್ರಾಮಸ್ಥರು ಇದ್ದರು.



ಬೇಡಿಕೆ ಈಡೇರದಿದ್ದರೆ ಅನಿರ್ದಿಷ್ಟಾವಧಿ ಮುಷ್ಕರ

ಹೂವಿನಹಡಗಲಿ: ಪಟ್ಟಣದ ತಾಲೂಕು ಕಚೇರಿಯಲ್ಲಿ ತಾಲೂಕು ಆರೋಗ್ಯ ಅಧಿಕಾರಿ ಡಾ.ನವೀನ್ ಅವರ ನೇತೃತ್ವದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಹಾಗೂ ನೌಕರರ ಬೇಡಿಕೆಗಳನ್ನು ಈಡೇರಿಸುವಲ್ಲಿ ವಿಫಲರಾಗಿದ್ದು, ಅನಿವಾರ್ಯವಾಗಿ ಅನಿರ್ದಿಷ್ಟಾವಧಿ ಮುಷ್ಕರವನ್ನು ಕೈಗೊಳ್ಳುವ ಕುರಿತು ತಹಶೀಲ್ದಾರ್ ಕೆ.ಎಂ.ಗುರುಬಸವರಾಜ ಅವರಿಗೆ ಮನವಿ ಸಲ್ಲಿಸಲಾಯಿತು.

ತಾಲೂಕು ಆರೋಗ್ಯಾಧಿಕಾರಿ ಡಾ.ನವೀನ್ ಮಾತನಾಡಿ, ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಿಗೆ ಕಾಲಕಾಲಕ್ಕೆ ಸಮರ್ಪಕವಾಗಿ ಇಲಾಖೆಯಿಂದ ಔಷಧಿಗಳನ್ನು ಸರಬರಾಜು ಮಾಡುವುದು. ಇತ್ತೀಚೆಗಿನ ದಿನಗಳಲ್ಲಿ ಔಷಧಿ ಸರಬರಾಜು ಮಾಡುವುದರಲ್ಲಿ ಸಂಸ್ಥೆಯು ಸಂಪೂರ್ಣ ವಿಫಲವಾಗಿರುವ ಕಾರಣ ರೋಗಿಗಳಿಗೆ ಸರಿಯಾದ ಸಮಯದಲ್ಲಿ ಔಷದೋಪಚಾರ ದೊರೆಯದೇ ಪರದಾಡುವಂತಾಗಿದೆ. ಇದರ ಬಗ್ಗೆ, ಸಾಕಷ್ಟು ಬಾರಿ ಸಂಘವು ಮನವಿ ಮಾಡಿದರೂ ಸರಿಪಡಿಸಿಲ್ಲ.

ಇದರಿಂದ ವೈದ್ಯರು ಮತ್ತು ಸಿಬ್ಬಂದಿಗಳ ಮೇಲೆ ಒತ್ತಡ ಹೆಚ್ಚಾಗುತ್ತಿದ್ದು, ರೋಗಿಗಳ ಜೊತೆ ಮೌಖಿಕ ಸಂಘರ್ಷಗಳಿಗೆ ಎಡೆ ಮಾಡಿಕೊಟ್ಟಿದೆ. ರೋಗಿಗಳಿಗೆ ಸಮರ್ಪಕ ಔಷಧೋಪಚಾರವನ್ನು ಮಾಡುವುದು ತುಂಬಾ ಕಷ್ಟವಾಗಿದ್ದು ಈ ಸಮಸ್ಯೆ ಬಗೆಹರಿಸಬೇಕು ಸೇರಿದಂತೆ ಇತರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.



ತಾಲೂಕು ಆರೋಗ್ಯಕಾರಿ ಡಾ.ಅಶೋಕ್, ಎನ್‌ಎಚ್‌ಎಂ ಸಂಘದ ತಾಲೂಕು ಘಟಕದ ಕಾರ್ಯದರ್ಶಿ ಬೀರಬ್ಬಿ ಮಹೇಶ್, ಸಿಎಚ್‌ಒ ಸಂಘದ ಜಿಲ್ಲಾ ಅಧ್ಯಕ್ಷ ಮಧು, ಫಾರ್ಮಸಿ ಅಧಿಕಾರಿಗಳ ಸಂಘದ ಅಧ್ಯಕ್ಷ ವೈ.ಶಿವಕುಮಾರ್, ಲ್ಯಾಬ್ ಟೆಕ್ನಾಲಜಿ ಸಂಘದ ಅಧ್ಯಕ್ಷ ಬಸಯ್ಯ, ಪಿಎಚ್‌ಸಿಒ ಸಂಘದ ಸವಿತಾ, ಮಂಜುಳಾ, ನೇತ್ರಾವತಿ, ಸರಿತಾ, ಡಿ ಗ್ರೂಪ್ ಸಂಘದ ಜಂಗ್ಲಿಸಾಬ್, ಲಿಪಿಕಾ, ಮಿನಿಸ್ಟ್ರಿಯಲ್ ನೌಕರರ ಸಂಘದ ಹಿರಿಯರಾದ ರತ್ನಾಕರ್, ನೌಕರರ ಸಂಘದ ಪದಾಧಿಕಾರಿಗಳಾದ ನಂಜುಂಡಪ್ಪ, ಶಿವಪ್ಪ, ವಿ.ಬಸವರಾಜ ಇತರರಿದ್ದರು.

ಶಾರ್ಟ್ ಸರ್ಕ್ಯೂಟ್‌ನಿಂದ ಅಗ್ನಿ ಅವಘಡ: ಪರಿಹಾರ ವಿತರಣೆ

ಕೊಟ್ಟೂರು: ಸಮೀಪದ ಹ್ಯಾಳ್ಯಾ ಗ್ರಾಮದಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಅಗ್ನಿ ಅವಘಡ ಸಂಭವಿಸಿದ್ದು, 18 ಜನ ರೈತರ ಕಣಗಳಲ್ಲಿ ಸಂಗ್ರಹಿಸಿದ್ದ ಮೇವಿನ ಬಣವೆಗಳು, ಹಾಗೂ ಕೆಲ ರೈತರ ತಂಬಾಕು ಹಾಗೂ ಮೆಕ್ಕೆಜೋಳ ಬೆಂಕಿಗೆ ಆಹುತಿಯಾಗಿದ್ದು, ರೈತರಿಗೆ ಲಕ್ಷಾಂತರ ರೂ.ಗಳು ನಷ್ಟವಾಗಿದ್ದು, ಇಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ಅವರು ಗ್ರಾಮಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ನಷ್ಟ ಅನುಭವಿಸಿದ ರೈತರ ಕುಟುಂಬಗಳಿಗೆ ಸಾಂತ್ವನ ಹೇಳಿದರು.

ನಷ್ಟ ಅನುಭವಿಸಿದ ರೈತರಿಗೆ ಶಾಸಕರು ಮತ್ತು ಮಾಜಿ ಜಿಪಂ ಸದಸ್ಯರಾದ ಎಂಎಂಜೆ ಹರ್ಷವರ್ಧನ ಅವರು ವೈಯಕ್ತಿಕ ಪರಿಹಾರ ವಿತರಿಸಿದರು.

ಬಳಿಕ ಮಾತನಾಡಿದ ಶಾಸಕ ನಷ್ಟ ಅನುಭವಿಸಿದ ರೈತರಿಗೆ ಸರ್ಕಾರದಿಂದ ದೊರಕುವ ಪರಿಹಾರವನ್ನು ದೊರಕಿಸಿಕೊಡಲಾಗುವುದು ಎಂದು ತಿಳಿಸಿದರು.

ಜೆಡಿಎಸ್ ಜಿಲ್ಲಾಧ್ಯಕ್ಷರಾದ ಬಾದಾಮಿ ಮೃತ್ಯುಂಜಯ ತಹಶಿಲ್ದಾರ್ ಜಿ.ಕೆ.ಅಮರೇಶ್, ತಾಪಂ ಇಒ ಆನಂದ್ ಕುಮಾರ್, ಸದ್ದಾಂ, ಹ್ಯಾಳ್ಯ ಗ್ರಾಮದ ಪ್ರಮುಖರಾದ ಬಸವರಾಜ್ ಕೋನಾಪುರ್, ಚಿಕ್ಕೀರಪ್ಪ ಸಂಪನ್ನ, ಬಸವರಾಜ್ ವೀರಯ್ಯ, ಕೆ.ಎಸ್.ನಾಗರಾಜ್ ಗೌಡ ಗ್ರಾಮಸ್ಥರು, ರೈತರು ಉಪಸ್ಥಿತರಿದ್ದರು.



ಇಬ್ಬರು ಎಂಎಲ್‌ಎ, ಜಿಲ್ಲಾಧಿಕಾರಿ, ಎಸ್ಪಿ, ಡಿಸಿಎಫ್

ನೂತನ ಜಿಲ್ಲೆಯಲ್ಲಿ ಮಹಿಳಾ ಅಧಿಕಾರಿಗಳದ್ದೇ ಹವಾ

▸ ವೀರೇಂದ್ರ, ನಾಗಲದಿನ್ನಿ

ದಿಗಂತ ವಿಶೇಷ

ವಿಜಯನಗರ: ದಶಕದ ಹಿಂದಕ್ಕೆ ಸರಿದರೆ ಅಖಂಡ ಬಳ್ಳಾರಿ ಜಿಲ್ಲೆಯ ಪಶ್ಚಿಮ ತಾಲೂಕುಗಳ ಆಡಳಿತದಲ್ಲಿ ಮಹಿಳಾ ಅಧಿಕಾರಿಗಳ ಸಂಖ್ಯೆ ವಿರಳವಾಗಿತ್ತು. ಆದರೀಗ ನೂತನ ವಿಜಯನಗರ ಜಿಲ್ಲೆಯ ಪ್ರಮುಖ ಹುದ್ದೆಗಳಲ್ಲಿ ಮಹಿಳಾ ಖದರ್ ಕಂಡು ಬಂದಿದ್ದು, ಜಿಲ್ಲೆ ಸ್ತ್ರೀ ಸಮಾನತೆ ಸಾರುತ್ತಿದೆ.

ಜಿಲ್ಲೆಯ ಹಲವು ಇಲಾಖೆಗಳ ವಿವಿಧ ಹುದ್ದೆಗಳಲ್ಲಿ ಮಹಿಳಾ ಅಧಿಕಾರಿಗಳಿದ್ದು, ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುವ ಮೂಲಕ ಮಹಿಳಾ ಶಕ್ತಿ ಪ್ರದರ್ಶಿಸುತ್ತಿದ್ದಾರೆ.

ಜಿಲ್ಲಾಧಿಕಾರಿ, ಎಸ್ಪಿ, ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆರ್‌ಡಬ್ಲ್ಯುಎಸ್, 3 ತಾಲೂಕುಗಳಲ್ಲಿ ಮಹಿಳೆಯರೇ ತಾಲೂಕು ದಂಡಾಧಿಕಾರಿಗಳಾಗಿದ್ದಾರೆ. ಜಿಲ್ಲೆಯ ಆಡಳಿತದಲ್ಲಿ ಈ ಹಿಂದೆ ಇಷ್ಟೊಂದು ಸಂಖ್ಯೆಯಲ್ಲಿ ಮಹಿಳಾ ಅಧಿಕಾರಿಗಳು ಇರಲಿಲ್ಲ. ನೂತನ ಜಿಲ್ಲೆಯಾದ ಬಳಿಕ ಮಹಿಳಾ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜಿಲ್ಲೆಗೆ ಬರುತ್ತಿರುವುದು ಗಮನಾರ್ಹ. ವಿಶ್ವವಿಖ್ಯಾತ ಹಂಪಿ ಉತ್ಸವ, ಲಕ್ಷಾಂತರ ಭಕ್ತರು ಸೇರುವ ಮೈಲಾರ ಕಾರ್ಣಿಕ, ಕೊಟ್ಟೂರೇಶ್ವರ ಜಾತ್ರೆಗಳನ್ನು ಅಚ್ಚುಕಟ್ಟಾಗಿ ಯಶಸ್ವಿಗೊಳಿಸುವ ಮೂಲಕ ಮಹಿಳಾ ಅಧಿಕಾರಿಗಳ ಮೇಲಿನ ಸಾರ್ವಜನಿಕರ ಅಭಿಮಾನ ಮತ್ತಷ್ಟು ವೃದ್ಧಿಸುವಂತೆ ಮಾಡಿದ್ದಾರೆ.



ಯಾರ್‍ಯಾರು ಯಾವ ಹುದ್ದೆಯಲ್ಲಿದ್ದಾರೆ?: ಡಿಸಿ ಕವಿತಾ ಎಸ್.ಮನ್ನಿಕೇರಿ, ಎಸ್ಪಿ ಜಾಹ್ನವಿ ಎಸ್ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಅನುಪಮ, ಆರ್‌ಡಬ್ಲ್ಯುಎಸ್ ಇಇ ದೀಪಾ ಅವರು ಕೆಲವೇ ತಿಂಗಳ ಹಿಂದಷ್ಟೇ ಅಧಿಕಾರ ವಹಿಸಿಕೊಂಡಿದ್ದಾರೆ. ಈ ಮೂಲಕ ಆಯಾ ಇಲಾಖೆಯ ಜಿಲ್ಲಾ ಮಟ್ಟದ ಪ್ರಥಮ ಮಹಿಳಾ ಅಧಿಕಾರಿಗಳು ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ. ಅವರೊಂದಿಗೆ ಹೊಸಪೇಟೆ ತಹಶೀಲ್ದಾರ್ ಶೃತಿ ಎಂ.ಎಂ., ಕೂಡ್ಲಿಗಿ ತಹಸೀಲ್ದಾರ್ ವಿ.ಕೆ.ನೇತ್ರಾವತಿ ಹಾಗೂ ಹಗರಿಬೊಮ್ಮನಹಳ್ಳಿ ತಹಸೀಲ್ದಾರ್ ಆರ್.ಕವಿತಾ, ಡಿಸಿ ಕಚೇರಿಯ ತಹಸೀಲ್ದಾರ್ ಪ್ರಿಯದರ್ಶಿನಿ, ಶೃತಿ, ಮೇಘನಾ, ಎಚ್‌ಬಿ ಹಳ್ಳಿಯಲ್ಲಿ ಅಬಕಾರಿ ಮಮತಾ ರಾಣಿ, ಸಮಾಜ ಕಲ್ಯಾಣ ಇಲಾಖೆ ತಾಲೂಕು ಅಧಿಕಾರಿ ಶಾಹೀದಾ ಅಹಮ್ಮದಿ, ಕೌಲ್ಯಾಭಿವೃದ್ಧಿ ಇಲಾಖೆ ಲಕ್ಷ್ಮೀ, ಬಿಸಿಎಂ ಜಿಲ್ಲಾ ಅಧಿಕಾರಿ ಶಶಿಕಲಾ, ಸಿಡಿಪಿಒ ಸಿಂಧು ಅಂಗಡಿ ಆಡಳಿತ ನಿರ್ವಹಿಸುತ್ತಿದ್ದಾರೆ

ಅದರಂತೆ ಪೊಲೀಸ್ ಇಲಾಖೆಯಲ್ಲೂ ಹೊಸಪೇಟೆ ಗ್ರಾಮೀಣ, ಮರಿಯಮ್ಮನಹಳ್ಳಿ, ಕೊಟ್ಟೂರು, ಚಿಗಟೇರಿ, ಹರಪನಹಳ್ಳಿ ಪೊಲೀಸ್ ಠಾಣೆಯಲ್ಲಿ ತಲಾ ಒಬ್ಬರು ಮಹಿಳಾ ಪಿಎಸ್‌ಐ ಕರ್ತವ್ಯ ನಿರ್ವಹಿಸುತ್ತಿದ್ದು, ಸಾರ್ವಜನಿಕರ ಸುರಕ್ಷತೆಯಲ್ಲಿ ತೊಡಗಿದ್ದಾರೆ. ಜಿಲ್ಲೆಯ 20ಕ್ಕೂ ಹೆಚ್ಚು ಗ್ರಾಪಂಗಳಲ್ಲಿ ಅಭಿವೃದ್ಧಿ ಅಧಿಕಾರಿಗಳಾಗಿ ಗ್ರಾಮೀಣ ಭಾಗದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಪ್ರೇರಣೆಯೂ ಹೌದು: ಅಖಂಡ ಬಳ್ಳಾರಿ ಜಿಲ್ಲೆಯ ಅಂಕಿ- ಅಂಶಗಳ ಪ್ರಕಾರ ಪಶ್ಚಿಮ ತಾಲೂಕುಗಳಲ್ಲಿ ಸಾಕ್ಷರತೆ ಪ್ರಮಾಣ ಹಿಂದೆ ಇದೆ. ಮಹಿಳಾ ಸಾಕ್ಷರತೆ ಪ್ರಮಾಣ ಇನ್ನೂ ಕಡಿಮೆ. ಆದರೆ, ಜಿಲ್ಲೆಯ ಪ್ರಮುಖ ಹುದ್ದೆಗಳನ್ನು ಮಹಿಳೆಯರೇ ಅಲಂಕರಿಸಿದ್ದರಿಂದ ಜಿಲ್ಲೆಯ ಹೆಣ್ಣು ಮಕ್ಕಳಲ್ಲಿ ನಾವು ಇದೇ ರೀತಿ ಅಧಿಕಾರಿಯಾಗಬೇಕೆಂಬ ಕನಸು ಚಿಗುರೊಡೆದಿದೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಒಲವು ತೋರುತ್ತಾರೆ. ಹೀಗಾಗಿ ಜಿಲ್ಲೆಯ ಆಯಕಟ್ಟಿನ ಹುದ್ದೆಗಳಲ್ಲಿರುವ ಮಹಿಳಾ ಅಧಿಕಾರಿಗಳು ಜಿಲ್ಲೆಯ ಹೆಣ್ಣು ಮಕ್ಕಳಿಗೆ ಪ್ರೇರಣೆಯೂ ಆಗುತ್ತಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.

> **ಜಿಲ್ಲೆಯ ಇಬ್ಬರು ಮಹಿಳಾ ಶಾಸಕಿಯರು**
> **2023ರಲ್ಲಿ ನಡೆದ ಸಾರ್ವತ್ರಿ ವಿಧಾನಸಭಾ ಚುನಾವಣೆಯಲ್ಲಿ ಹರಪನಹಳ್ಳಿ ಕ್ಷೇತ್ರದ ಸ್ವತಂತ್ರ ಅಭ್ಯರ್ಥಿಯಾಗಿ ಎಂ.ಪಿ.ಲತಾ ಮಲ್ಲಿಕಾರ್ಜುನ ಗೆದ್ದು ಬೀಗಿದ್ದರೆ, ಇ.ತುಕಾರಾಂ ಅವರು ಲೋಕಸಭೆ ಚುನಾವಣೆಯಲ್ಲಿ ಗೆದ್ದು ಲೋಕಸಭೆ ಪ್ರವೇಶಿಸಿದ್ದರಿಂದ ತೆರವಾದ ಕ್ಷೇತ್ರದಲ್ಲಿ ಅವರ ಪತ್ನಿ ಅನ್ನಪೂರ್ಣ ಜಯಬೇರಿ ಬಾರಿಸಿದ್ದಾರೆ. ಅನ್ನಪೂರ್ಣ ಅವರ ತವರು ಹೊಸಪೇಟೆ ತಾಲೂಕಿನ ಕಮಲಾಪುರವೇ ಆಗಿರುವುದರಿಂದ ಜಿಲ್ಲೆಯ ಇಬ್ಬರು ನಾರಿಮಣಿಗಳು ಜಿಲ್ಲೆಯ ಪರ ಧ್ವನಿ ಎತ್ತುತ್ತಿದ್ದಾರೆ ಎಂಬುದು ವಿಶೇಷ.**

ಶಿಕ್ಷಕರಾದ ವೀರಣ್ಣ, ವಿಠ್ಠಲ್‌ಗೆ ಸನ್ಮಾನ



ಹುಣಸಗಿ: ತಾಲೂಕಿನ ಗೆದ್ದಲಮರಿ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ವೀರಣ್ಣ ಬೆಳ್ಳಬ್ಬಿ ಅವರಿಗೆ ಇತ್ತೀಚೆಗೆ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದ ವಿದ್ಯಾರತ್ನ ಪ್ರಶಸ್ತಿ ನೀಡಿ ಗೌರವಿಸಿದ ಹಿನ್ನೆಲೆ, ತಾಲೂಕಿನ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ವತಿಯಿಂದ ಹುಣಸಗಿ ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ವೀರಣ್ಣ ಬೆಳ್ಳಬ್ಬಿ ಹಾಗೂ ನೂತನ ತಾಲೂಕಿನ ಎಸ್ಸಿ ಎಸ್ಟಿ ನೌಕರರ ಸಂಘದ ತಾಲೂಕ ಅಧ್ಯಕ್ಷರಾಗಿ ಆಯ್ಕೆಯಾದ ದೈಹಿಕ ಶಿಕ್ಷಕ ವಿಠ್ಠಲ್ ಚವ್ಹಾಣ ಅವರನ್ನು ಸನ್ಮಾನಿಸಲಾಯಿತು.

ಹಲವಾರು ಶಿಕ್ಷಕರು ಮಾತನಾಡಿ, ವೀರಣ್ಣ ಬೆಳ್ಳಬ್ಬಿ ಅವರ ಶಿಕ್ಷಣ ಸೇವೆ ಹಾಗೂ ಶಾಲೆಯ ಅಭಿವೃದ್ಧಿಗೆ ನೀಡಿರುವ ಕೊಡುಗೆಗಳನ್ನು ಪ್ರಶಂಸಿಸಿದರು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಒದಗಿಸುವಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು. ನಂತರ ಸನ್ಮಾನ ಸ್ವೀಕರಿಸಿದ ವೀರಣ್ಣ ಬೆಳ್ಳಬ್ಬಿ ಮಾತನಾಡಿದರು. ಮುಖ್ಯ ಶಿಕ್ಷಕ ವಿಠಲ್‌ಚವ್ಹಾಣ, ಶರಣಗೌಡ ಬನಾಳ, ಬಸನಗೌಡ ಬಿರಾದಾರ, ಬಸವರಾಜ ಬೆಳ್ಳಿ, ಬಸನಗೌಡ ವಠಾರ, ನಾಗನಗೌಡ ಪಾಟೀಲ್, ಲಾಲಪ್ಪ ನಾಯ್ಕ, ಸಣ್ಣೆಕೆಪ್ಪ ಪೂಜಾರಿ, ಭೀಮರಾಯ, ಬಸವರಾಜ ಮಂಟೆ ಇತರರಿದ್ದರು. ಪರಮಣ್ಣ ಸ್ವಾಗತಿಸಿದರು, ತಿಪ್ಪಣ್ಣ ಹರ್ನಾಳ ವಂದಿಸಿದರು, ನಾಗನಗೌಡ ಪಾಟೀಲ ನಿರೂಪಿಸಿದರು.